
ಲಂಕೇಶ್


ಜುಲೈ 21, 2010 ರೂ. 12/-

ದೇಶಕಾಲ
ಯಾವುದು
ವಾಗ್ವಾದ?
ಯಾವುದು
ಭಾವಾವೇಶ?



ರತ್ನಮ್ಮನ
ರಗಳೆ





ಪ್ರೀತಿಗಾಗಿ ಪೀಠತ್ಯಾಗ



ಅದಿರು ಲಫ್ಡಾ
ಅಶೋಕನಿಗೆಷ್ಟು
ಆಮದಾನಿ?


ನೆಲಮಂಗಲ
ಬೆತ್ತನಗೆರೆ ಮಂಜ
ಬಾಂಬ್ ತಂದ

ಾಂಗ್ರೆಸ್‌ನಲ್ಲಿ ಅಧ್ಯಕ್ಷಗಿರಿಗೆ ಗುದ್ದಾಟ



ಂಗಾರದ ಮೋಹದಲ್ಲಿ ಪುನೀತ್?

ಅಧಿಕಾರಸ್ಥ ಸತ್ಯಗಳು ಮತ್ತು ಜಂಗಮ ಸತ್ಯಗಳು




ವಿಶ್ವದ ಸಮಕಾಲೀನ ರಾಜಕಾರಣದ ಸಾಕ್ಷಿಪ್ರಜ್ಞೆಯಾಗಿರುವ ನೋಮ್ ಚಾಮ್‌ಸ್ಕಿ ಇತ್ತೀಚೆಗೆ ಫ್ರಾನ್ಸ್ ಪ್ರವಾಸಕ್ಕೆ ಹೋಗಿದ್ದರು. ಆದರೆ ಫ್ರಾನ್ಸ್‌ನ ಪ್ರಧಾನ ಧಾರೆ ಮಾಧ್ಯಮಗಳು ನೋಮ್ ಚಾಮ್‌ಸ್ಕಿಯವರ ಪ್ರವಾಸ ಹಾಗೂ ಭಾಷಣಗಳನ್ನು ಹೆಚ್ಚೂಕಡಿಮೆ ಬಾಯ್ಕಾಟ್ ಮಾಡಿಬಿಟ್ಟಿದ್ದವು. ಹಲವು ಕಡೆ ಅವರ ವಿರುದ್ಧ ಪ್ರತಿಭಟನೆಗಳೂ ನಡೆದವು. ಪ್ರಪಂಚದ ಪ್ರಗತಿಪರ ಜನತೆ ಮತ್ತು ಬುದ್ಧಿಜೀವಿಗಳು ಆರಾಧಿಸುವ ನೋಮ್ ಚಾಮ್‌ಸ್ಕಿಯನ್ನು ಫ್ರೆಂಚ್ ಬುದ್ಧಿಜೀವಿಗಳು ಏಕೆ ಬಹಿಷ್ಕರಿಸಿದರು?

ಅದಕ್ಕೆ ಕಾರಣವನ್ನು ವಿವರಿಸುತ್ತಾ ದಯಾನಾ ಎಂಬ ಫ್ರೆಂಚ್ ಬುದ್ಧಿಜೀವಿ ಹಲವು ಕಾರಣಗಳನ್ನು ನೀಡುತ್ತಾರೆ. ಫ್ರೆಂಚ್ ಬುದ್ಧಿಜೀವಿಗಳು ಸತ್ಯಸಂಗತಿಗಳಿಗಿಂತ ಹೆಚ್ಚಾಗಿ ಅಮೂರ್ತ ಆಲೋಚನೆಗೆ ಒತ್ತುಕೊಡುವವರು. ಆದರೆ ಈ ಚಾಮ್‌ಸ್ಕಿ ಒಂದು ವಾಕ್ಯ ಬರೆದರೂ ಅದರಲ್ಲಿ ನಿರ್ದಿಷ್ಟ ಸ್ವರೂಪದ ಫ್ಯಾಕ್ಟ್‌ಗಳಿರುತ್ತವೆ. ಹೀಗೆ ಕ್ಷುಲ್ಲಕವಾದ ಫ್ಯಾಕ್ಟ್‌ಗಳಿಗೇ ಒತ್ತುಕೊಡುವವರನ್ನು ಫ್ರೆಂಚರು ಬುದ್ಧಿಜೀವಿಗಳೆಂದೇ ಪರಿಗಣಿಸುವುದಿಲ್ಲ. ಅಲ್ಲದೆ ಫ್ರೆಂಚರ ಕೈಯಲ್ಲಿ ಬುದ್ಧಿಜೀವಿ ಎಂದು ಹೊಗಳಿಸಿಕೊಳ್ಳಬೇಕೆಂದರೆ ಏನಿಲ್ಲವೆಂದರೂ ಬರಹದಲ್ಲಿ ಕನಿಷ್ಠ ಶೇ.50ರಷ್ಟು ಭಾಗವಾದರೂ ಅರ್ಥವಾಗದ ಭಾಷೆಯಲ್ಲಿರಬೇಕು. ಆದರೆ ನೋಮ್ ಚಾಮ್‌ಸ್ಕಿ ಬರೆದದ್ದೆಲ್ಲಾ ಎಲ್ಲರಿಗೂ ಅರ್ಥವಾಗಿಬಿಡುತ್ತದೆ. ಹೀಗಾಗಿ ಫ್ರಾನ್ಸಿನ ಪ್ರಧಾನ ಧಾರೆ ಬುದ್ಧಿಜೀವಿಗಳು ಚೋಮ್‌ಸ್ಕಿಯನ್ನು ಗಮನಾರ್ಹ ಬುದ್ಧಿಜೀವಿಯೆಂದು ಒಪ್ಪಿಕೊಳ್ಳುವುದು ಸಾಧ್ಯವಾಗಲಿಲ್ಲ ಎಂದು ಆಕೆ ವಿಡಂಬನಾತ್ಮಕವಾಗಿ ಟೀಕೆ ಮಾಡುತ್ತಾಳೆ.

ಆದರೆ ಫ್ರಾನ್ಸ್ ಚಾಮ್‌ಸ್ಕಿಯನ್ನು ಒಪ್ಪಿಕೊಳ್ಳದಿರಲು ಪ್ರಧಾನ ಕಾರಣ ಅವರು ತಮ್ಮ ಭಾಷಣ ಮತ್ತು ಬರಹಗಳಲ್ಲಿ ಪ್ಯಾಲೆಸ್ತೀನ್ ಮೇಲೆ ಯೆಹೂದಿ ದುರಭಿಮಾನಿಗಳು ಇಸ್ರೇಲಿ ಸರ್ಕಾರದ ಮೂಲಕ ಮಾಡುತ್ತಿರುವ ಆಕ್ರಮಣಗಳನ್ನು ತೀವ್ರವಾಗಿ ಖಂಡಿಸುತ್ತಲೇ ಹೋದದ್ದು. ಎರಡನೇ ಮಹಾಯುದ್ಧದಲ್ಲಿ ಯೆಹೂದಿಗಳ ಮೇಲೆ ನಾಜಿ ಜರ್ಮನಿ ಕಂಡುಕೇಳರಿಯದ ಹತ್ಯಾಕಾಂಡ ನಡೆಸಿತು. ಮಹಾಯುದ್ಧದಲ್ಲಿ ಜರ್ಮನಿ ಸೋತ ನಂತರ ನಾಜಿಗಳ ವಿರುದ್ಧ ನಡೆದ ನ್ಯೂರಂಬರ್ಗ್ ವಿಚಾರಣೆಯಲ್ಲಿ ನಾಜಿಗಳಿಗೆ ಶಿಕ್ಷೆ ವಿಧಿಸಲಾಯಿತು. ಯೆಹೂದಿಗಳ ವಿರುದ್ಧ ನಾಜಿಗಳ 'ಯೆಹೂದಿ ವಿರೋಧಿ ಮಾತ್ಸರ್ಯ'ದ ಪ್ರಚಾರವೇ (ಆಂಟಿ ಸೆಮಿಟಿಸಂ) ಈ ಭೀಕರ ಹತ್ಯಾಕಾಂಡಕ್ಕೆ ಕಾರಣವೆಂಬ ಸತ್ಯವನ್ನು ಎಲ್ಲರೂ ಒಪ್ಪಿಕೊಂಡರು. ಹೀಗಾಗಿ ಅಲ್ಲಿಂದಾಚೆಗೆ ಫ್ರಾನ್ಸನ್ನು ಒಳಗೊಂಡಂತೆ ಹಲವಾರು ಯೂರೋಪ್ ದೇಶಗಳು ನ್ಯುರಂಬರ್ಗ್ ವಿಚಾರಣೆಯನ್ನಾಗಲೀ, ಯೆಹೂದಿಗಳ ಬಗ್ಗೆ ಜನಾಂಗೀಯ ವಿಮರ್ಶೆಯನ್ನಾಗಲೀ ಮಾಡುವುದನ್ನು ಶಿಕ್ಷಾರ್ಹ ಅಪರಾಧವನ್ನಾಗಿಸಿತು. ಪರಿಣಾಮವಾಗಿ ಆಚರಣೆಯಲ್ಲಿ ಫ್ರಾನ್ಸಿನ ನಾಗರಿಕತ್ವಕ್ಕೆ, ಜಾತ್ಯತೀತತೆಗೆ ಯೆಹೂದಿಗಳನ್ನು ವಿಮರ್ಶೆ ಮಾಡದಿರುವುದು ಒಂದು ಪ್ರಮುಖ ಪೂರ್ವ ಶರತ್ತೇ ಆಗಿಬಿಟ್ಟಿತು. ಹೀಗಾಗಿ ನೋಮ್ ಚಾಮ್‌ಸ್ಕಿ ತಮ್ಮ ಭಾಷಣಗಳಲ್ಲಿ ಪ್ಯಾಲೆಸ್ತೀನರ ವಿರುದ್ಧ ಇಸ್ರೇಲಿ ಸರ್ಕಾರ ನಡೆಸುತ್ತಿರುವ ಅತ್ಯಾಚಾರಗಳನ್ನು, ಹತ್ಯಾಕಾಂಡಗಳನ್ನು ತೀವ್ರವಾಗಿ ಟೀಕಿಸುತ್ತಿದ್ದದ್ದು ಫ್ರಾನ್ಸಿನ ಸ್ಥಾಪಿತ ಹಿತಾಸಕ್ತಿಗಳಿಗೆ ಅರಗಿಸಿಕೊಳ್ಳಲಾಗಲಿಲ್ಲ. ಇದೇ ನೋಮ್ ಚಾಮ್‌ಸ್ಕಿಯವರ ಬಗ್ಗೆ ಫ್ರಾನ್ಸ್ ತೋರಿದ ನಿರ್ಲಕ್ಷ್ಯಕ್ಕೆ ಪ್ರಧಾನ ಕಾರಣ ಎಂದು ದಯಾನ ಬರೆಯುತ್ತಾರೆ.





ಚಾರ್ವಾಕ
▸ ಶಿವಸುಂದರ್

ಯೆಹೂದಿಗಳ ಮೇಲೆ ನಾಜಿ ಜರ್ಮನಿ ನಡೆಸಿದ ಹತ್ಯಾಕಾಂಡವನ್ನೇನೂ ಚಾಮ್‌ಸ್ಕಿ ಸಮರ್ಥಿಸಿರಲಿಲ್ಲ, ಅವರನ್ನು ಬಲ್ಲವರು, ಓದಿದವರು ಹಾಗೆ ಊಹಿಸಲೂ ಸಾಧ್ಯವಿಲ್ಲ. ಆದರೆ ಇತಿಹಾಸದಲ್ಲಿ ಯಾರೂ ಎದುರಿಸದ ಘನಘೋರ ಹತ್ಯಾಕಾಂಡಕ್ಕೆ ಗುರಿಯಾದ ಒಂದು ಜನಾಂಗ ಅದೇ ರೀತಿಯ ಹತ್ಯಾಕಾಂಡವನ್ನು, ಅಮೆರಿಕದ ಬೆಂಬಲದೊಂದಿಗೆ ನಡೆಸುತ್ತಿರುವ ಭೀಕರ ಅನ್ಯಾಯ ಮತ್ತು ವಂಚನೆಯ ಬಗ್ಗೆ ಚೋಮ್‌ಸ್ಕಿ ತೀವ್ರ ವಿಷಾದವನ್ನು ವ್ಯಕ್ತಪಡಿಸಿದ್ದರು. ಹೀಗಾಗಿ ಅದರ ವಿರುದ್ಧ ಫ್ರಾನ್ಸ್ ಇನ್ನೂ ಎತ್ತರದ ದನಿ ಎತ್ತುವ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದರು. ಆದರೆ ಫ್ರಾನ್ಸ್ ಇದನ್ನು ತಾವು ಅತ್ಯಂತ ಮೂಲಭೂತವೆಂದು ನಂಬಿಕೊಂಡು ಬಂದಿರುವ ಮತ್ತು ಫ್ರೆಂಚ್ ಪ್ರಭುತ್ವ ಅದನ್ನು ಶಾಸನದ ಮೂಲಕ ಅಧಿಕೃತಗೊಳಿಸಿರುವ "ನ್ಯಾಯ"ಕ್ಕೆ ವಿರುದ್ಧವಾಗಿದೆಯೆಂದು ಭಾವಿಸಿ ಚೋಮ್‌ಸ್ಕಿಯನ್ನು ಯೆಹೂದಿ ವಿರೋಧಿ ನಾಜಿ ಎಂದೆಲ್ಲಾ ತೆಗಳಿತು. ತಿರಸ್ಕರಿಸಿತು.

ನ್ಯುರಂಬರ್ಗ್ ವಿಚಾರಣೆಯ ವೇಳೆಯಲ್ಲಿ ಯೆಹೂದಿಗಳು ಬಲಿಪಶುಗಳು, ನಿಜ. ಆದರೆ 2010ರಲ್ಲಿ- ಪ್ಯಾಲೆಸ್ತೀನ್ ಸಂದರ್ಭದಲ್ಲಿ -ಯೆಹೂದಿಗಳೇ ಪ್ಯಾಲೆಸ್ತೀನರನ್ನು ಬಲಿಹಾಕುತ್ತಿರುವ ನವನಾಜಿಗಳು. ಎರಡನೆ ಪ್ರಪಂಚ ಯುದ್ಧ ಮುಗಿದ ನಂತರದ ಕಳೆದ 65 ವರ್ಷಗಳಲ್ಲಿ ಇತಿಹಾಸದಲ್ಲಿ ಸಾಕಷ್ಟು ನಡೆದುಹೋಗಿದೆ. ಸತ್ಯಗಳು ಬದಲಾಗಿವೆ. ಅದಕ್ಕೆ ತಕ್ಕಂತೆ ನ್ಯಾಯದೇವತೆಯ ಎದುರು ನಿಂತವರ ಸ್ಥಾನಗಳು ಬದಲಾಗಿವೆ. ನ್ಯಾಯಾಧೀಶನೇ ಅಪರಾಧಿಯ ಸ್ಥಾನದಲ್ಲಿದ್ದಾನೆ. ಆರೋಪಿ ಹಾಗೂ ಸಾಕ್ಷಿಗಳ ಸ್ಥಾನವೂ ಅದಲುಬದಲಾಗಿದೆ. ಆದರೆ ಬದಲಾದ ಸತ್ಯಕ್ಕೆ ತಕ್ಕಂತೆ ನ್ಯಾಯವೂ ಬದಲಾಗಬೇಕಲ್ಲವೇ? ಆದರೆ ಶಾಸನ ಬಲದಿಂದ ಅಧಿಕಾರಸ್ಥವಾದ ಸತ್ಯ ಜಂಗಮತ್ವವನ್ನು ಕಳೆದುಕೊಂಡು ಸ್ಥಾವರವಾದಾಗ ನ್ಯಾಯವೇ ಅಪರಾಧಿಯಾಗಿ ಸತ್ಯ ಸುಳ್ಳು ಸಾಕ್ಷಿ ನುಡಿಯುತ್ತದೆ! ಫ್ರಾನ್ಸಿನಲ್ಲಿ ಈಗ ನಡೆಯುತ್ತಿರುವುದು ಇದೆ.

ಗತಿಶೀಲವಾದ ಸತ್ಯವನ್ನು ಶಾಸನದ ಶಿಲುಬೆಗೆ ಏರಿಸಿದ ಎಲ್ಲಾ ದೇಶಗಳಲ್ಲೂ ನಡೆಯುತ್ತಿರುವುದು ಇದೆ. ನಿರ್ದಿಷ್ಟ ಐತಿಹಾಸಿಕ ಸಂದರ್ಭವೊಂದರಲ್ಲಿ ಶಾಸನ ಬಲ ಪಡೆದ ಸತ್ಯ ಮತ್ತು ನ್ಯಾಯಗಳು ನಿಜಕ್ಕೂ ನ್ಯಾಯದಾನ ಮಾಡಿರುತ್ತವೆ. ಆದರೆ ಪ್ರಭುತ್ವ ಮಧ್ಯಪ್ರವೇಶ ಮಾಡಿ ಸತ್ಯ ಮತ್ತು ನ್ಯಾಯಗಳ ಸತ್ವವನ್ನು ಅದರ ದೇಹದಿಂದ ಬೇರ್ಪಡಿಸುತ್ತದೆ. ಹೀಗೆ ಸತ್ವವನ್ನು ಕಳೆದುಕೊಂಡ ಕಳೇಬರವನ್ನು ಶಾಸನ ಬದ್ಧ ಮಾಡುತ್ತದೆ.

ಇದನ್ನು ಕೇವಲ ಪ್ರಭುತ್ವ ಮಾತ್ರವಲ್ಲ, ಆಯಾ ದೇಶಗಳ ಪ್ರತಿಷ್ಠಿತರೂ ಮತ್ತು ನವಕುಲೀನರೂ ಮಾಡುತ್ತಿರುತ್ತಾರೆ. ಆಯಾ ದೇಶಗಳಲ್ಲಿ ಪ್ರಗತಿಪರತೆ ಮತ್ತು ಪ್ರತಿಗಾಮಿತನಗಳ ಬಗ್ಗೆ ಪ್ರಚಲಿತದಲ್ಲಿರುವ ಪ್ರಧಾನ ಧಾರೆ ನಂಬಿಕೆಗಳೂ ಸಹ ಹೆಚ್ಚೂಕಡಿಮೆ ಪ್ರಭುತ್ವ ಶಾಸನಗಳಷ್ಟೇ ಬಲವುಳ್ಳದ್ದು ಮತ್ತು ಅಧಿಕಾರ ಉಳ್ಳದ್ದು. ಹೀಗಾಗಿ ಪ್ರಧಾನ ಧಾರೆ ಪ್ರಚುರಪಡಿಸುವ ವ್ಯವಸ್ಥಿತ ಸತ್ಯ ಮತ್ತು ನ್ಯಾಯಗಳೂ ಸಹ ಅದರ ಕಳೇಬರಗಳಷ್ಟೇ ಆಗಿರುತ್ತವೆ.

ಹೀಗಾಗಿಯೇ ಚಲನಶೀಲವಾದ ಸತ್ಯದ ಅನ್ವೇಷಣೆ ಸದಾ ಅಧಿಕಾರದೊಡನೆ ಸಂಘರ್ಷ ಹೊಂದಿರುತ್ತದೆ. ಆ ಅಧಿಕಾರ ರಾಜಕೀಯ ಕೇಂದ್ರದ್ದಾಗಿರಬಹುದು ಅಥವಾ ಸಾಂಸ್ಕೃತಿಕ ಕೇಂದ್ರದ್ದಾಗಿರಬಹುದು. ಹೀಗಾಗಿಯೇ ಈ ಸತತ ಸಂಘರ್ಷಕ್ಕೆ ತೆರೆದುಕೊಂಡ ಮತ್ತು ಬದಲಾಗುತ್ತಿರುವ ಸಂದರ್ಭವನ್ನು, ಸತ್ಯ ಮತ್ತು ನ್ಯಾಯದ ಜಂಗಮತ್ವವನ್ನು ಅರ್ಥಮಾಡಿಕೊಂಡಿರುವವರು ಮಾತ್ರ ಸದಾ ನ್ಯಾಯವಾದಿಗಳು, ಸತ್ಯದ ಪರರೂ ಆಗಿರಲು ಸಾಧ್ಯ. ಈ ಸಂಘರ್ಷದ ಸನ್ನಿವೇಶಕ್ಕೆ ಎದುರಾಗದೆ ಕೇವಲ ಪ್ರಜ್ಞೆಯ ಮಟ್ಟದಲ್ಲೆ ಅಮೂರ್ತವಾಗಿ ನ್ಯಾಯ ಮತ್ತು ಸತ್ಯದ ಪರವಾಗಿರುವವರು ಸಮಕಾಲೀನ ಸನ್ನಿವೇಶಕ್ಕೆ ಎದುರಾದಾಗ ಯಾವುದರ ಪರ ನಿಲ್ಲುತ್ತಾರೆ ಎಂಬುದನ್ನು ಊಹಿಸುವುದು ಕಷ್ಟ.

ಶೋಷಕ ವ್ಯವಸ್ಥೆಯ ವಿರುದ್ಧ ಬಂಡಾಯ ಹೂಡುವ ಕ್ರಾಂತಿಕಾರಿ ವ್ಯವಸ್ಥೆಯನ್ನು ಮಣಿಸಲು ಒಂದು ಸಂಘಟನೆಯನ್ನೂ ಕಟ್ಟಿಕೊಳ್ಳುತ್ತಾರೆ. ಒಂದು ವ್ಯವಸ್ಥಿತ ಅನ್ಯಾಯದ ವಿರುದ್ಧ ವ್ಯವಸ್ಥಿತ ಸಂಘಟನೆ ಇಲ್ಲದೆ ಬದಲಾವಣೆಯೂ ಕಷ್ಟವೇ. ಆದರೆ ಅಂಥಾ ಒಂದು ಸಂಘಟನೆ ಅಥವಾ ಬದಲಾವಣೆಯ ವ್ಯವಸ್ಥೆ ಬದಲಾಗುತ್ತಿರುವ ಸತ್ಯಗಳಿಗೆ ತಕ್ಕಂತೆ ತನ್ನನ್ನು ರೂಪಾಂತರಗೊಳಿಸಿಕೊಳ್ಳದಿದ್ದರೆ ಅದರೊಳಗೂ ಪ್ರಧಾನ ಧಾರೆ ಮತ್ತು ಸತ್ಯಕ್ಕೆ ಸಮೀಪವಾದ ಧಾರೆಗಳು ರೂಪುಗೊಳ್ಳುತ್ತವೆ. ಹೀಗಾಗಿ ಬಂಡುಕೋರತನ ಮತ್ತೊಮ್ಮೆ ಒಳಗೂ ಹೊರಗೂ ಪರೀಕ್ಷೆಗೆ ಒಳಪಡುತ್ತದೆ. ಶೋಷಕ ವ್ಯವಸ್ಥೆಯ ವಿರುದ್ಧ ನ್ಯಾಯದ ವ್ಯವಸ್ಥೆಗೆ ಬಂದು ನಿರಾಳವಾಗಿಬಿಟ್ಟವರಿಗೆ ಮತ್ತೊಮ್ಮೆ ಬಂಡುಕೋರರಾಗುವುದೇ ಸುಸ್ತೆನಿಸಬಹುದು. ಒಳಗಿನ ಈ ಬಂಡುಕೋರತನವೇ ದ್ರೋಹವೆಂದೂ ಪರಿಗಣಿಸಲ್ಪಡಬಹುದು. ಹೀಗಾಗಿ ನ್ಯಾಯದ ವಕ್ತಾರರೇ ಅನ್ಯಾಯದ ನಾಯಕರೂ ಆಗಿಬಿಡಬಹುದು. ಇಂಥಾ ಹಲವಾರು ಪ್ರಕರಣಗಳು ಪ್ರಪಂಚದ ಬಂಡುಕೋರರ, ಕಮ್ಯುನಿಸ್ಟರ, ಕ್ರಾಂತಿಕಾರಿಗಳ ಇತಿಹಾಸದಲ್ಲಿ ಜಗತ್ತಿಗೇ ಗೊತ್ತಾಗುವಂತೆ ಆಗಿಹೋಗಿದೆ. ಅದನ್ನೇ ಕೆಲವರು ಅಂಥಾ ಕ್ರಾಂತಿಕಾರಿಗಳನ್ನು ಹೀಗಳೆಯಲೂ ಬಳಸಿಕೊಳ್ಳುತ್ತಾರೆ. ಆದರೆ ಜಂಗಮ ಸತ್ಯದ ದರ್ಶನವಾಗುವುದಕ್ಕೆ ಶಾರ್ಟ್ ಕಟ್‌ಗಳಾಗಲಿಲ್ಲ.

ಸತ್ಯಗಳು ಬದಲಾಗುವಂತೆ ಅಸತ್ಯ ಮತ್ತು ಅನ್ಯಾಯಗಳ ಸ್ವರೂಪವೂ ಬದಲಾಗುತ್ತಿರುತ್ತದೆ. ಅದರ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಹರೆಗಳೂ ಬದಲಾಗುತ್ತಿರುತ್ತದೆ. ಅದರಲ್ಲೂ ಭಾರತದಂಥ ಸಂಕೀರ್ಣ ಸಮಾಜದಲ್ಲಿ ನ್ಯಾಯಪರತೆಯೆನ್ನುವುದು ಸತ್ಯಪರತೆಯೆನ್ನುವುದೂ ಅನ್ಯಾಯ ಮತ್ತು ಅಸತ್ಯದೊಂದಿಗೆ ನಿರಂತರ ಸಂಘರ್ಷವನ್ನು ಕೇಳುತ್ತದೆ. ಸಂಘರ್ಷದ ಅಗ್ನಿ ಪರೀಕ್ಷೆಯಲ್ಲಿ ನ್ಯಾಯಪರತೆ ಮತ್ತು ಸತ್ಯಪರತೆಗಳು ನಿರಂತರವಾಗಿ ಪುಟಗೊಳ್ಳುತ್ತಲೇ ಇರಬೇಕು. ಇಲ್ಲವಾದಲ್ಲಿ ನಮಗೇ ಗೊತ್ತಿಲ್ಲದಂತೆ ಪ್ರಧಾನ ಧಾರೆಯಲ್ಲಿ ಕೊಚ್ಚಿಕೊಂಡು ಹೋಗಿಬಿಟ್ಟಿರುತ್ತೇವೆ. ●

ಸರ್ಕಾರಿ ಕಂಪನಿಗಳ ನಷ್ಟದ ಬಗ್ಗೆ ನಿಮಗೆ ಕಾಳಜಿ ಬಂದದ್ದು ಯಾವಾಗಿನಿಂದ?

"ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಹೆಚ್ಚು ಮಾಡದೆ ಸರ್ಕಾರಕ್ಕೆ ಬೇರೇ ದಾರಿಯೇ ಇರಲಿಲ್ಲ, ಬಹಳ ದಿನಗಳ ಹಿಂದೆಯೇ ಈ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿತ್ತು, ಇಲ್ಲದಿದ್ದರೆ ಸರ್ಕಾರಿ ಸ್ವಾಮ್ಯದ ಕಂಪನಿಗಳು ತೀವ್ರ ನಷ್ಟಕ್ಕೆ ಗುರಿಯಾಗುತ್ತಿದ್ದವು."

- ರಾಹುಲ್ ಬಜಾಜ್

ಇರುವ ಚಳವಳಿಗಳನ್ನು ದಮನ ಮಾಡುವುದು, ಇಲ್ಲದ ಚಳವಳಿಗಳನ್ನು ನೆನಪಿಸಿಕೊಳ್ಳುವುದು!!


"ಈಗ ಜೆಪಿ ಮಾದರಿ ಚಳವಳಿಗಳು ಸಾಧ್ಯವಿಲ್ಲ, ಜನ ಸರ್ಕಾರಕ್ಕೆ ಪಾಠ ಕಲಿಸಲು ಚುನಾವಣೆ ಬರುವತನಕ ಕಾಯುತ್ತಾರೆ."

- ರವಿಶಂಕರ್ ಪ್ರಸಾದ್, ಬಿಜೆಪಿ ನಾಯಕ

ನೋ ಕಾಮೆಂಟ್ಸ್

"ಒಂದು ಏರ್‌ಪೋರ್ಟ್ ಕಟ್ಟಲು 10,000 ಕೋಟಿ ರೂ. ಆಗುತ್ತದೆ. ಇದೇ ಅಕ್ಟೋಬರ್‌ನಲ್ಲಿ ದೆಹಲಿಯಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ಗೆ 40,000 ಕೋಟಿ ಖರ್ಚಾಗುತ್ತಿದೆ. ಸ್ಪೆಕ್ಟ್ರಮ್ ಸ್ಕ್ಯಾಮಿನಲ್ಲಿ ಏನಿಲ್ಲವೆಂದರೂ 60,000 ಕೋಟಿ ರೂ.ಗಳನ್ನು ಸರ್ಕಾರ ಬಿಟ್ಟುಕೊಟ್ಟಿದೆ. ಕಳೆದ ಬಜೆಟ್ಟಿನಲ್ಲಿ ಕೇವಲ ಮೂರು ಬಾಬತ್ತುಗಳಲ್ಲೇ ಏನಿಲ್ಲವೆಂದರೂ 5 ಲಕ್ಷ ಕೋಟಿ ರೂಪಾಯಿಯಷ್ಟು ರಿಯಾಯತಿಗಳನ್ನು ಸರ್ಕಾರ ದೊಡ್ಡ ಕಾರ್ಪೊರೇಟ್ ಉದ್ದಿಮೆಗಳಿಗೆ ನೀಡಿದೆ. ಆದರೆ ಬಿಪಿಎಲ್, ಎಪಿಎಲ್ ಎಂಬ ಭೇದಭಾವವಿಲ್ಲದೆ ಈ ದೇಶದ ಎಲ್ಲಾ ಬಡವರಿಗೂ ಆಹಾರ ಭದ್ರತೆಯ ಖಾತರಿ ನೀಡಲು ಸರ್ಕಾರಕ್ಕೆ ಹೆಚ್ಚುವರಿಯಾಗಿ ತಗುಲುವುದು ಕೇವಲ 45,000 ಕೋಟಿ ರೂ. ಮಾತ್ರ. ಆದರೆ ಈ ಬಾಬತ್ತಿಗೆ ಮಾತ್ರ ಸರ್ಕಾರದ ಬಳಿ ಹಣವಿರುವುದಿಲ್ಲ!"

- ಪಿ. ಸಾಯಿನಾಥ್




"ಅವರು ಖಂಡಿತಾ ಅಕ್ರಮ ಗಣಿಗಾರಿಕೆಯ ತನಿಖೆಯನ್ನು ಮುಂದುವರೆಯಲು ಬಿಡುವುದಿಲ್ಲ, ನನಗೆ ಸಮಯವಿರುವುದು ಸ್ವಲ್ಪ, ಅದರೊಳಗೆ ನಾನು ಎರಡು ವರದಿಗಳನ್ನು ಪೂರ್ಣಗೊಳಿಸಬೇಕು. ಅವರು ಲೋಕಾಯುಕ್ತ ಸಂಸ್ಥೆಯನ್ನು ಅಂಗವಿಹೀನಗೊಳಿಸಿದ್ದಾರೆ. ಲೋಕಾಯುಕ್ತರ ಮೂಲಕ ತಮ್ಮ ಕಷ್ಟಗಳಿಗೆ ಪರಿಹಾರ ಪಡೆದುಕೊಳ್ಳಬಹುದಾದ ಜನರ ಹಕ್ಕಿಗೆ ಕತ್ತರಿ ಹಾಕಿದ್ದಾರೆ. ನಾನು ಸಹನೆಯ ತುಟ್ಟತುದಿಯನ್ನು ಮುಟ್ಟಿದ್ದೇನೆ."

- ಲೋಕಾಯುಕ್ತ ಸಂತೋಷ್ ಹೆಗ್ಡೆ (ತೆಹೆಲ್ಕಾದಲ್ಲಿ)

"ಭಾರತದ ಚಲನಚಿತ್ರೋದ್ಯಮ ಕೇವಲ ಡಿವಿಡಿಗಳ ಮೂಲಕ ಆಗುವ ಪೈರಸಿಯನ್ನು ಮಾತ್ರ ಗಮನಕ್ಕೆ ತೆಗೆದುಕೊಳ್ಳುತ್ತದೆ. ಆದರೆ ಕ್ಯಾಮ್‌ಕಾರ್ಡ್ ಮತ್ತು ಇಂಟರ್‌ನೆಟ್ ಪೈರಸಿಯ ಬಗ್ಗೆ ಈ ಉದ್ಯಮ ತಲೆಯನ್ನೇ ಕೆಡಿಸಿಕೊಂಡಿಲ್ಲ, ವಾಸ್ತವವಾಗಿ ಆನ್‌ಲೈನ್ ಪೈರಸಿಯಲ್ಲಿ ಭಾರತಕ್ಕೆ ಪ್ರಪಂಚದಲ್ಲೇ 8ನೇ ಸ್ಥಾನವಿದೆ. ನಾವು ನಡೆಸಿದ ಹತ್ತು ವಾರಗಳ ಸರ್ವೇಯಲ್ಲಿ ತಿಳಿದುಬಂದ ಸಂಗತಿಯೆಂದರೆ ಯಾವುದೇ ಹೊಸ ಹಿಂದಿ ಚಿತ್ರ ಬಿಡುಗಡೆಯಾದ ಎರಡೇ ದಿನಗಳಲ್ಲಿ ಆನ್‌ಲೈನ್ ಲಭ್ಯವಿರುತ್ತದೆ. ಉದಾಹರಣೆಗೆ 'ಕಮೀನೆ' ಚಿತ್ರ ಬಿಡುಗಡೆಯಾದ ಮೊದಲ ವಾರದಲ್ಲಿ ಏನಿಲ್ಲವೆಂದರೂ 3 ಲಕ್ಷ ಬಾರಿ ಡೌನ್‌ಲೋಡ್ ಆಗಿತ್ತು."

- ರಾಜೀವ್ ದಲಾಲ್, ಬಾಲಿವುಡ್-ಹಾಲಿವುಡ್ ಜಂಟಿ ಸಮಿತಿ ಸದಸ್ಯ



"ನೋಡಿ, ಸಭಾಧ್ಯಕ್ಷರೇ, ನಾನು ಸತ್ಯವನ್ನೇ ಹೇಳುತ್ತೇನೆ. ನಾನು ಸಿಕ್ಸಾಪಟ್ಟೆ ಶಾರ್ಟ್ ಟೆಂಪರ್ಡ್ ಮ್ಯಾನ್. ಸಹನೆಗೂ ನನಗೂ ಎಣ್ಣೆ-ಸೀಗೆಕಾಯಿ ಇದ್ದಂತೆ. ಟೆಂಪರ್ ಕಳೆದುಕೊಂಡಾಗ ನಾನು ಆಡುವ ಮಾತುಗಳು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದು. ಆದ್ದರಿಂದ ಸಾಗರದಷ್ಟು ಸಹನೆ ಇರುವ ನೀವೇ ಸಭಾಧ್ಯಕ್ಷರಾಗುವುದು ಒಳಿತು."

- ರಾಮಚಂದ್ರಗೌಡ

"ರಾಜ್ಯದಲ್ಲಿ 2001ರ ಜನಗಣತಿಯ ಪ್ರಕಾರ ಪ್ರತಿ ಸಾವಿರ ಪುರುಷರಿಗೆ ಕೇವಲ 946 ಮಹಿಳೆಯರಿದ್ದಾರೆ."

- ವರದಿ

"ನಾನು ಸನ್ಯಾಸಿನಿಯಾಗಿದ್ದರೂ ನನಗೆ ಅನಾಥಪ್ರಜ್ಞೆ ಕಾಡುತ್ತಿತ್ತು. ನಾನು ಅನಾಥೆಯಾಗಿ ಬಂದೆ. ಅನಾಥೆಯಾಗಿಯೇ ಇರಬೇಕಾ ಅಂಥಾ ಹಿಂಸೆ ಆಗುತ್ತಿತ್ತು, ಅದಕ್ಕೆ ನನ್ನ ಬಗ್ಗೆ ಅಕ್ಕರೆ ತೋರುತ್ತಾ ಸಾಂತ್ವನ ಹೇಳುತ್ತಿದ್ದ ಚೇತನ್‌ನನ್ನು ಮದುವೆಯಾದೆ."

- ನಿವೇದಿತಾ

ನಂಬಿದ್ರೆನಂಬಿ ಬಿಟ್ರೆಬಿಡಿ

"ನಾನು ಪ್ರಧಾನ ಮಂತ್ರಿಯಾದರೆ ಪಾಕಿಸ್ತಾನ ಎದುರಿಸುತ್ತಿರುವ ಭಯೋತ್ಪಾದನೆ ಸಮಸ್ಯೆಯನ್ನು 90 ದಿನಗಳಲ್ಲಿ ಬಗೆಹರಿಸುತ್ತೇನೆ."

-ಇಮ್ರಾನ್ ಖಾನ್

ಏಕೆಂದರೆ ಮಂತ್ರಿ ಪದವಿ ಬೇಕಲ್ಲ!

"ಸಭಾಪತಿಯಾದರೂ ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಿಲ್ಲ, ಆದರೆ ಬಿಜೆಪಿ ಸದಸ್ಯ ಎಂಬುವುದನ್ನು ಮರೆತು ಈ ಸ್ಥಾನದ ಜವಾಬ್ದಾರಿಯನು ನಿಭಾಯಿಸುವೆ."

-ಡಿ.ಹೆಚ್. ಶಂಕರಮೂರ್ತಿ


ಮನುಷ್ಯತ್ವಕ್ಕೆ ಮುಳುವಾದ ಮೂಲಭೂತವಾದ



ಕಂಡಹಾಗೆ

■ ಗೌರಿ ಲಂಕೇಶ್
editorlankesh@gmail.com

ಯಾವುದೇ ಮೂಲಭೂತವಾದ ಎಷ್ಟು ಅಮಾನ ುವಾಗಿರುತ್ತದೆ ಎಂಬುದಕ್ಕೆ ಇತ್ತೀಚಿನ ಎರಡು ಘಟನೆ ಸಾಕ್ಷಿಯಾಗಿವೆ. ಮೊದಲನೆಯ ಘಟನೆ ನಡೆದದ್ದು ು ಕೇರಳದಲ್ಲಿ, ಎರ್ನಾಕುಲಂ ಕಾಲೇಜಿನ ಅಧ್ಯಾಪಕ ಜೋಸೆಫ್ ಎಂಬುವವರು ಪರೀಕ್ಷಾ ಪತ್ರಿಕೆಯಲ್ಲಿ 'ಮೊಹಮ್ಮದ್' ಎಂಬ ನ್ನು ಉಪಯೋಗಿಸಿದ್ದರು. ಆದರೆ ೇಸೆಫ್‌ರು ಪೈಗಂಬರರ ಹೆಸರನ್ನು ಂತಲೇ ಪ್ರಶ್ನಪತ್ರಿಕೆಯಲ್ಲಿ ಉಪ ೀಗಿಸಿ ತಮ್ಮ ಧರ್ಮಕ್ಕೆ ಅವಮಾನ ಿದ್ದಾರೆಂದು ಕೆಲ ಮುಸಲ್ಮಾನರು ಟಿಸಿದ್ದರು. ಇದನ್ನು ಗಂಭೀರವಾಗಿ ಗಣಿಸಿದ ಕಾಲೇಜಿನ ಆಡಳಿತ ಡಳಿ (ಅದು ಕ್ರಿಶ್ಚಿಯನ್ ದವರಿಗೆ ಸೇರಿರುವ ಕಾಲೇಜು) ೇಸೆಫ್ ಅವರನ್ನು ಶಿಕ್ಷೆ ರೂಪದಲ್ಲಿ ಒಂದು ವರ್ಷ ನತ್ತಿನಲ್ಲಿಟ್ಟಿತು. ಇದೆಲ್ಲ ನಡೆದದ್ದು ಮೂರು ತಿಂಗಳ . ಜೋಸೆಫ್ ಅವರಿಗೆ ಕಾಲೇಜು ಶಿಕ್ಷೆ ನೀಡಿದ್ದನ್ನು ಿ ತೃಪ್ತರಾದ ಮುಸಲ್ಮಾನ ಸಮುದಾಯದ ನಾಯಕರು ಪ್ರಕರಣವನ್ನು ಅಲ್ಲಿಗೇ ಅಂತ್ಯಗೊಳಿಸಿ ಅದರಿಂದಾಗಿ ನ ಧಾರ್ಮಿಕ ಸಮುದಾಯಗಳ ನಡುವೆ ದ್ವೇಷ, ವ ಬೆಳೆಯದಂತೆ ಎಚ್ಚರ ವಹಿಸಿದ್ದರು.



ಆದರೆ ಕೇರಳದಲ್ಲಿ ಇತ್ತೀಚೆಗೆ ್ಯನಿಸ್ಟರು ಮತ್ತು ೂತ್ವವಾದಿಗಳು ತಮ್ಮ ನಡುವಿನ ಮತ್ತು ಇತರೆ ಭಿಪ್ರಾಯಗಳನ್ನು ಚರ್ಚೆ ಯಲ್ಲೋ, ನದಿಯಲ್ಲೋ ಇತ್ಯರ್ಥಗೊಳಿಸಿ ದೆ ಪರಸ್ಪರರ ವಿರುದ್ಧ ದೈಹಿಕ ಮಾಡುವ ಮಟ್ಟಕ್ಕೆ ಗಿದ್ದಾರೆ. ಅದೀಗ ಎಂತಹ ಭೀಕರ ನ್ನು ತಲುಪಿದೆ ಎಂದರೆ ೂ ಕಡೆಯವರು ಫುಟ್‌ಬಾಲ್ ಲ್ಲಿ ಗೋಲ್ ಸಾಧಿಸುವಂತೆ ಇಷ್ಟು ಜನರನ್ನು ಿದ್ದೇವೆ" ಎಂದು, ಅಥವಾ ವರು ಇಷ್ಟು ಜನ ಮಾಗಿದ್ದಾರೆ. ಇನ್ನೂ ಹಲವ ರನ್ನು ರೆ ಎರಡೂ ಕಡೆ ಾಗುತ್ತದೆ" ಎಂಬ ರಕ್ತಸಿಕ್ತ ಾರದ ಮಟ್ಟಕ್ಕೆ ಬಂದು ನಿಂತಿದೆ. ಕ ವಾತಾವರಣದಲ್ಲಿ ಮನುಷ್ಯತ್ವಕ್ಕೆ, ವೀಯತೆಗೆ ಯಾವ ಬೆಲೆ ದೆ.

ಷ್ಟೇ ಅಲ್ಲ, ಎಡಪಂಥೀಯ ಮತ್ತು ಹಿಂದೂತ್ವವಾದಿ ಥೀಯರಲ್ಲದೆ ಮುಸಲ್ಮಾನ ಮೂಲಭೂತವಾದಿಗಳೂ ತಮ್ಮ ವಿರೋಧಿಗಳ ಮೇಲೆ ಹಲ್ಲೆ ಕೊಲೆ ಯತ್ನಗಳಲ್ಲಿ ಮಾಗುತ್ತಿದ್ದಾರೆ. ಅಂತಹ ಒಂದು ಕೃತ್ಯವೇ ಮೊನ್ನೆ ಅಧ್ಯಾಪಕ ಜೋಸೆಫ್ ಮೇಲೆ ನಡೆದಿರುವ ಹಲ್ಲೆ.

ಕಳೆದ ಭಾನುವಾರ ಬೆಳಗ್ಗೆ ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಿ ಜೋಸೆಫ್ ಅವರು ಹೊರಗೆ ಬರುತ್ತಿದ್ದಾಗ ಅವರ ಮೇಲೆ ದಾಳಿ ಮಾಡಿದ ಐದಾರು ಮುಸಲ್ಮಾನರು ಅವರ ಬಲ ಹಸ್ತವನ್ನೇ ಕತ್ತರಿಸಿ ಹಾಕಿದ್ದಾರೆ. ಅಂದರೆ, ಜೋಸೆಫ್ ಅವರು ಯಾವ ಹಸ್ತ ಉಪಯೋಗಿಸಿ ಆ ಪ್ರಶ್ನಪತ್ರಿಕೆಯನ್ನು ತಯಾರಿಸಿದ್ದರೋ ಅದೇ ಹಸ್ತವನ್ನು ತುಂಡರಿಸುವ ಮೂಲಕ ತಮ್ಮ ಸೇಡನ್ನು ತೀರಿಸಿಕೊಂಡಿದ್ದಾರೆ ದುಷ್ಕರ್ಮಿಗಳು.

ಕೇರಳದ ಮಾಧ್ಯಮಗಳಲ್ಲಿ ವರದಿಯಾಗಿರುವ ಪ್ರಕಾರ ಜೋಸೆಫ್ ಮೇಲೆ ದಾಳಿ ಮಾಡಿದವರು ಮುಸ ಲ್ಮಾನರು ಇತ್ತೀಚೆಗೆ ಸ್ಥಾಪಿಸಿಕೊಂಡಿರುವ ಪಾಪುಲರ್ ಫ್ರಂಡ್ ಆಫ್ ಇಂಡಿಯಾ (ಪಿಎಫ್‌ಐ) ಎಂಬ ಸಂಘಟನೆಯ ಸದಸ್ಯರು. ಇದರ ಸತ್ಯಾಸತ್ಯತೆಯನ್ನು ಅರಿ ಯಲು ನಾನು ಪಿಎಫ್‌ಐ ಸಂಘಟನೆಯಲ್ಲಿ ಪ್ರಮುಖರಾದ ಕೇರಳ ವಕೀಲರೊಬ್ಬರಿಗೆ ಫೋನ್ ಮಾಡಿದೆ. ಆದರೆ ಅವರು ನನ್ನ ಕರೆಯನ್ನು ಸ್ವೀಕರಿಸಲೂ ಇಲ್ಲ, ವಾಪಸ್ ಕರೆ ಮಾಡಲೂ ಇಲ್ಲ.



ಅದೇನೇ ಇರಲಿ, ಇಲ್ಲಿ ಸ್ಪಷ್ಟವಾಗಿ ಹೇಳುತ್ತಿರುವುದು ಏನೆಂದರೆ ಈ ಕೃತ್ಯದ ಹಿಂದೆ ಯಾರೇ ಇರಲಿ, ಯಾವ ಸಂಘಟನೆಯೇ ಇರಲಿ, ಇದು ನಿಸ್ಸಂಶಯವಾಗಿ ಎಲ್ಲರೂ ಖಂಡಿಸಲೇಬೇಕಾದಂತಹ ಹಲ್ಲೆ. ಈಗಾಗಲೇ ಕೇರಳ ಹಲವಾರು ಮುಸಲ್ಮಾನ್ ಸಂಘಟನೆಗಳು ಈ ಕೃತ್ಯವನ್ನು ಖಂಡಿಸಿವೆಯಲ್ಲದೆ, ಜೋಸೆಫ್ ಅವರ ಹಸ್ತವನ್ನು ಅವರ ಕೈಯಿಗೆ ಜೋಡಿಸಲು ವೈದ್ಯರು 16 ಗಂಟೆಗಳ ಕಾಲ ಸೆಣೆಸಾಡುತ್ತಿದ್ದಾಗ ಜೋಸೆಫ್ ಅವರಿಗೆ ರಕ್ತದಾನ ಮಾಡಿದ್ದು ಅದೇ ಕೇರಳ ರಾಜ್ಯದ ಕೆಲ ಮುಸಲ್ಮಾನ ಯುವಕರು.

ಇಂತಹ ಬರ್ಬರ ಹಲ್ಲೆಯ ನಡುವೆಯೂ ಹಲವರು ತಮ್ಮ ಆಳದಲ್ಲಿನ ಮಾನವೀಯತೆಯನ್ನು ಉಳಿಸಿಕೊಂಡಿರುತ್ತಾರೆ ಎಂಬುದಕ್ಕೆ ಹಲ್ಲೆಗೊಳಗಾದ ಜೋಸೆಫ್ ಅವರ ಕುಟುಂಬವೇ ಒಂದು ಉತ್ತಮ ಉದಾಹರಣೆ. ಜೋಸೆಫ್‌ರ 81 ವರ್ಷ ವಯಸ್ಸಿನ ತಾಯಿ, ಸಹೋದರಿ ಮೇರಿ ಸ್ಟೆಲ್ಲಾ ಮತ್ತು ಕುಟುಂಬದ ಇತರರು "ಈ ಕೃತ್ಯ ನಡೆಸಿರುವವರ ವಿರುದ್ಧ ನಾವು ಯಾವ ಆಕ್ರೋಶವನ್ನೂ ಹೊಂದಿಲ್ಲ, ಅವರನ್ನು ನಾವು ಈಗಾಗಲೇ ಕ್ಷಮಿಸಿದ್ದೇವೆ. ಮಾತ್ರವಲ್ಲ ಈ ಹಲ್ಲೆಯ ನಂತರವಾದರೂ ಕ್ರಿಶ್ಚಿಯನ್ನರು ಮತ್ತು ಮುಸಲ್ಮಾನರ ನಡುವೆ ಆರೋಗ್ಯಪೂರ್ಣ ಚರ್ಚೆಗಳು ನಡೆದ ಸ್ನೇಹ ಮತ್ತು ಸೌಹಾರ್ದ ಸ್ಥಾಪನೆಯಾಗಲಿ" ಎಂಬ ಆಶೆಯನ್ನು ವ್ಯಕ್ತಪಡಿಸಿದ್ದಾರೆ. ಅದರಲ್ಲೂ ನನ್ ಮೇರಿ ಸ್ಟೆಲ್ಲಾ ಅವರು: "ನಾವೆಲ್ಲ ಒಂದೇ ದೇವರ ಮಕ್ಕಳಾಗಿದ್ದು ಅಂತಿಮವಾಗಿ ನಾವೆಲ್ಲ ಆತನಲ್ಲಿಗೇ ಹಿಂದಿರುಗಬೇಕು. ನಾವು ಈ ಭೂಮಿ ಮೇಲೆ ಯಾತ್ರಿಕರಷ್ಟೇ. ಆದ್ದರಿಂದ ಎಲ್ಲರೂ ಶಾಂತಿ, ಸ್ನೇಹ, ಸೌಹಾರ್ದ ಮತ್ತು ಸಹೋದರತ್ವದಿಂದ ಜೀವಿಸೋಣ" ಎಂದಿದ್ದಾರೆ.

ತಮ್ಮ ಧರ್ಮಕ್ಕೆ ಅವಮಾನವಾಗಿದೆ ಎಂದು ಅಧ್ಯಾಪಕರೊಬ್ಬರ ಕೈ ಕತ್ತರಿಸುವ ಧರ್ಮಾಂಧತೆ, ತನ್ನ ಸಹೋದರನ ಮೇಲೆಯೇ ಹಲ್ಲೆಯಾಗಿದ್ದರೂ "ಇದು ತಪ್ಪು, ಜೊತೆಯಾಗಿ ನೆಮ್ಮದಿಯಿಂದ ಜೀವಿಸೋಣ" ಎನ್ನುವ ಧರ್ಮನಿಷ್ಠೆ-ಎಂತಹ ವ್ಯತ್ಯಾಸ ನೋಡಿ....

ಭಯೋತ್ಪಾದನೆ ಎಂದರೆ ಮುಸಲ್ಮಾನರು, ಮುಸಲ್ಮಾನರೆಲ್ಲ ಭಯೋತ್ಪಾದಕರು ಎಂದೆಲ್ಲ ಅಸಂಬದ್ಧವಾಗಿ ಅರಚಾಡಿ ಹಿಂದೂ ಮತ್ತು ಮುಸಲ್ಮಾನ ಸಮುದಾಯಗಳ ನಡುವೆ ಬೆಂಕಿಹಚ್ಚಿ ತನ್ನ ಹಿಂದೂತ್ವ ಅಜೆಂಡಾವನ್ನು ಸಾಧಿಸಲು ಸದಾ ಹೊಂಚು ಹಾಕುವ ಆರೆಸ್ಸೆಸ್ ಈಗ ತಾನೇ ಭಯೋತ್ಪಾದನಾ ಸಂಘಟನೆ ಎಂಬ ಆರೋಪವನ್ನು ಎದುರಿಸುತ್ತಿದೆ.

ಈಗಾಗಲೇ ಹೈದರಾಬಾದಿನ ಮಸೀದಿ ಯಲ್ಲಿ, ಕಾನ್ಪುರ್, ಮಾಲೇಗಾಂವ್, ಅಜ್ಮೀರ್ ಇತ್ಯಾದಿ ಕಡೆಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟಗಳ ಹಿಂದೆ ಹಿಂದೂ ಉಗ್ರಗಾಮಿಗಳ ಕೈವಾಡ ಇದೆ ಎಂದೂ, ಅವರಿಗೆಲ್ಲ ಆರೆಸ್ಸೆಸ್ ಮೂಲಸ್ಫೂರ್ತಿಧಾಮ ಎಂದೂ ಬಯಲಾಗಿರುವುದರಿಂದ ಆರೆಸ್ಸೆಸ್ ನಾಯಕರು ಕಂಗಾಲಾಗಿದ್ದಾರೆ. ಭಾರತದ ಹಲವೆಡೆ ಬಾಂಬ್‌ಗಳನ್ನು ಸ್ಫೋಟಿಸಿ ಹಲವಾರು ಜನರನ್ನು ಕೊಂದಿರುವ ಹಿಂದೂ ಭಯೋತ್ಪಾದಕರಿಗೂ, ತಮ್ಮ ಸಂಘಟನೆಗೂ ನೇರ ಸಂಬಂಧವಿರುವುದು ಸಾಬೀತಾದರೆ ತಮ್ಮ "ದೇಶಪ್ರೇಮಿ", "ದೇಶಭಕ್ತ" ಮುಖವಾಡಗಳೆಲ್ಲ ಕಳಚಿ ಬೀಳುತ್ತದೆಂದು ಅವರಿಗೆ ಚೆನ್ನಾಗಿ ಗೊತ್ತಿದೆ.

ಈಗ ಹಿಂದೂ ಭಯೋತ್ಪಾದನೆಯ ತನಿಖೆಯು ಆರೆಸ್ಸೆಸಿನ ಹಿರಿಯ ನಾಯಕರ ವಿಚಾರಣೆಯ ಹಂತಕ್ಕೆ ಬಂದಿರುವುದರಿಂದ ಮೊನ್ನೆ ಮಂಗಳವಾರ ರಾತ್ರಿ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿ ಮನೆಯಲ್ಲಿ ಒಂದು ಗಂಭೀರ ಚರ್ಚೆ ನಡೆದಿದೆ. ಅದು ಸಾಲದೆಂಬಂತೆ ಅದರ ಮಾರನೆ ದಿನ ದೆಹಲಿಯ ಝಂಡೆವಾಲಾದಲ್ಲಿರುವ ಆರೆಸ್ಸೆಸ್ ಮುಖ್ಯ ಕಚೇರಿಯಲ್ಲೂ ಮತ್ತೊಂದು ಚರ್ಚೆ ಸಭೆ ನಡೆದಿದೆ. ಈ ಸಭೆಗಳಲ್ಲಿ ಆರೆಸ್ಸೆಸ್ ನಾಯಕರು ಮಾತ್ರವಲ್ಲ, ಬಿಜೆಪಿಯ ಹಿರಿಯ ನಾಯಕರಾದ ಅರುಣ್ ಜೈಟ್ಲಿ ಅನಂತ್ ಕುಮಾರ್ ಮತ್ತು ರಾಜನಾಥ್ ಸಿಂಗ್ ಕೂಡ ಭಾಗವಹಿಸಿದ್ದಾರೆ.

ಇತ್ತೀಚೆಗೆ ಸಿಬಿಐ ಅಧಿಕಾರಿಗಳು ಉತ್ತರಪ್ರದೇಶದ ಆರೆಸ್ಸೆಸ್ ನಾಯಕರನ್ನು ವಿಚಾರಿಸಿದ್ದರಿಂದ ಈಗ ಇವರೆಲ್ಲರಲ್ಲಿ ಆತಂಕ ಮೂಡಿದೆ. ಈ ವಿಚಾರಣೆ ಏನಾದರೂ ಆರೆಸ್ಸೆಸ್ಸಿನ ಪ್ರಮುಖ ನಾಯಕರ ಬುಡಕ್ಕೇ ಬಂದು ನಿಂತರೆ ಅವರ ಹುಟ್ಟಡಿದಂತೆಯೇ.

ಆದರೆ ಆರೆಸ್ಸೆಸ್ ಹಿಂದೂ ಉಗ್ರವಾದಿ ಸಂಘಟನೆ ಎಂಬ ಆರೋಪದಿಂದ ಹಿಂದೊಮ್ಮೆ ಜಾರಿಕೊಂಡಂತೆ ಈಗಲೂ ಜಾರಿಕೊಳ್ಳಬಹುದು. ಯಾಕೆಂದರೆ ಮಹಾತ್ಮ ಗಾಂಧಿಯವರ ಕೊಲೆ ಸಂಚಿನಲ್ಲಿ ಆರೆಸ್ಸೆಸ್ ಕೂಡ ಭಾಗಿಯಾಗಿತ್ತು ಎಂಬ ಆರೋಪ ಅಂದು ಮಾಡಲಾಗಿತ್ತಲ್ಲದೆ, ಆರೆಸ್ಸೆಸ್‌ನ ಅಂದಿನ ನಾಯಕ ಗೋಲ್ವಾಲ್ಕರ್‌ನನ್ನೂ ಬಂಧಿಸಲಾಗಿತ್ತು. ಆದರೆ ಗಾಂಧಿಯನ್ನು ಕೊಂದಿದ್ದ ನಾಥೂರಾಮ್ ಗೋಡ್ಸೆ ತನ್ನ ಕೃತ್ಯಕ್ಕೂ, ಆರೆಸ್ಸೆಸ್ಸಿಗೂ ಸಂಬಂಧವಿಲ್ಲ ಎಂದು ಘೋಷಿಸಿದ್ದರಿಂದ ಆಗ ಆರೆಸ್ಸೆಸ್ ಅನ್ನು ಗಾಂಧಿ ಹತ್ಯಾರೋಪದಿಂದ ಮುಕ್ತಗೊಳಿಸಲಾಗಿತ್ತು. ಆದರೆ ಈ ಬಾರಿ ಅಜ್ಮೀರ್ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಆರೆಸ್ಸೆಸ್‌ನ ಪ್ರಚಾರಕರಾದ ದೇವೇಂದರ್ ಗುಪ್ತ ಮತ್ತು ಲೋಕೇಶ್ ಶರ್ಮ ಎಂಬಿಬ್ಬರು ತಮ್ಮ ಈ ಭಯೋತ್ಪಾದಕ ಕೃತ್ಯಗಳಿಗೂ ಆರೆಸ್ಸೆಸ್ ನಾಯಕರಿಗೂ ಸಂಬಂಧವೇ ಇಲ್ಲ ಎಂದು ಹೇಳದಿದ್ದರೆ?!

ಮಾಡಿದ್ದುಣ್ಣೋ ಮಾರಾಯ ಎಂಬ ಗಾದೆ ಮಾತು ನೆನಪಾಗುತ್ತದಲ್ಲವೆ....

ಪಾರ್ವತೀಶರ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ

ಲಂಕೇಶ್' ಬಳಗದ ಪ್ರಮುಖರಾದ ಪಾರ್ವತೀಶ ಬರೆದಿರುವ ಎರಡು ಪುಸ್ತಕಗಳು ಇದೇ ಭಾನುವಾರ ಬಿಡುಗಡೆಯಾಗುತ್ತಿವೆ. ಮೂಲತಃ ಕನಕಪುರ ತಾಲ್ಲೂಕಿನವರಾದ ಪಾರ್ವತೀಶ ಅವರ ಹೊಸ ಪುಸ್ತಕಗಳು ಅಲ್ಲಿಯೇ ಬಿಡುಗಡೆಯಾಗುತ್ತಿರುವುದು ಸಂತೋಷದ ಸಂಗತಿ.

ಎಲ್ಲರಿಗೂ ಸ್ವಾಗತ


ಗೌರಿ



ಕಾಮೆಂಟರಿ

(ಚಾಣಕ್ಯ ಪ್ರಕಾಶನ ಬಿಜಾಪುರ)

ಡಾ. ಕಾಂತರಾಜ್‌ರಿಂದ, ಕನಕ ಆಸ್ಪತ್ರೆ, ಕನಕಪುರ



ಬಿಡಿ ಚಿತ್ರಗಳು

(ಚಾರು ಪ್ರಕಾಶನ, ಬೆಂಗಳೂರು)

ಡಾ. ಬಂಜಗೆರೆ ಜಯಪ್ರಕಾಶರಿಂದ, ಹಾರೋಹಳ್ಳಿ

ಮುಖ್ಯ ಅತಿಥಿ : ಎಂ.ಡಿ. ವಿಜಯ್‌ದೇವ್
ಅಧ್ಯಕ್ಷತೆ : ಮರಳವಾಡಿ ಉಮಾಶಂಕರ್ ಅಧ್ಯಕ್ಷರು, ಕರ್ನಾಟಕ ಸಂಘ, ಕನಕಪುರ

ಜುಲೈ 11, 2010, ಭಾನುವಾರ
ಸಂಜೆ 5-00 ಗಂಟೆ
ಸ್ಥಳ : ರೋಟರಿ ಭವನ, ಕನಕಪುರ

ಕೃಷ್ಣಪ್ಪ ಎಂಬ ಪುಣ್ಯಕೋಟಿ

ಇತ್ತೀಚೆಗೆ ನಾಗಮಂಗಲದಲ್ಲಿ ಜನಪರ ರಾಜಕಾರಣಿ ಹೆಚ್.ಟಿ. ಕೃಷ್ಣಪ್ಪನವರಿಗೆ ಅಭಿನಂದನಾ ಸಮಾರಂಭ ನಡೆಯಿತು. ಸಮಾರಂಭದ ಪ್ರಮುಖ ರೂವಾರಿಯಾದ ನಮ್ಮ ಬಿ.ಚಂದ್ರೇಗೌಡರು ಅದರ ಸುತ್ತ ಒಂದು ಹಾಸ್ಯ ಮತ್ತು ವಿಷಾದಭರಿತ ಲಘು ಲೇಖನವನ್ನು ಬರೆದಿದ್ದಾರೆ.

ಹೆಚ್.ಟಿ. ಕೃಷ್ಣಪ್ಪನವರು ಲಂಕೇಶ್ ಮೆಚ್ಚಿದ ರಾಜಕಾರಣಿ.ಅದರೂತುಂಬ ಉದಾರತನ ಮತ್ತು ಸೋಮಾರಿ ತನ ಮೈಗೂಡಿಸಿಕೊಂಡವರಿಂದ ಯಾವುದೇ ಮಹತ್ತರ ಸಾಧನೆಯಾಗುವುದಿಲ್ಲ ಎಂದು ಲಂಕೇಶರು ಹೇಳುತ್ತಿದ್ದರು. ಗೋವಿನ ಗೀತೆಯಂತಿರುವ ಕೃಷ್ಣಪ್ಪನವರ ಮೇಲೆ ಮತಿಗೆಟ್ಟ ರಾಜಕಾರಣಿಗಳ ಪ್ರಹಾರಗಳು ಜಾಸ್ತಿಯಾದಂತೆ ಅವರು ಬದಿಗೆ ಸರಿದು ಮೌನವಾಗತೊಡಗಿದರು. ಅವರ ನಂತರದ ರಾಜಕಾರಣಿಗಳಿಗೆ ಅವರೇನೆಂದು ಅರ್ಥವೇ ಆಗಲಿಲ್ಲ, ಮೌಲ್ಯಗಳು ಪತನವಾದಾಗಲೇ ಅವುಗಳ ಮಹತ್ವ ಅರಿವಾಗುವುದು. ನನ್ನ ವಾರಿಗೆಯ ಕೆಲವರು ಇದ್ದಕ್ಕಿದ್ದಂತೆ ಕೃಷ್ಣಪ್ಪನವರನ್ನು ಕುರಿತು ಮಾತನಾಡತೊಡಗಿದರು. ಅವರ ಬಗ್ಗೆ ಒಂದು ಅಭಿನಂದನಾ ಗ್ರಂಥ ತಂದರೆ ಹೇಗೆ ಎಂದು ನಾಗತಿಹಳ್ಳಿ ಚಂದ್ರಶೇಖರ ಸಲಹೆ ಕೊಟ್ಟ. ಅದರಂತೆ ಮಂಡ್ಯದಲ್ಲಿ ಎಚ್.ಎಲ್. ಕೇಶವಮೂರ್ತಿಯವರ ನೇತೃತ್ವದಲ್ಲಿ ಒಂದು ಪತ್ರಿಕಾಗೋಷ್ಠಿ ಕರೆದು ಹೇಳಿಕೆ ಕೊಟ್ಟು, ಆನಂತರ ಸಂಬಂಧಪಟ್ಟ ಪತ್ರ ತಯಾರಿಸಿ ಕೃಷ್ಣಪ್ಪನವರನ್ನು ತೀರ ಹತ್ತಿರದಿಂದ ಬಲ್ಲವರ ಹೆಸರು ಕೇಳಿದೆವು. ಅದಕ್ಕೆ ಕೃಷ್ಣಪ್ಪನವರು ಕೊಟ್ಟ ಪಟ್ಟಿ ಬಹಳ ದೊಡ್ಡದಿತ್ತು, ಕಾಗೋಡು, ಬಂಗಾರಿ, ಕೋಣಂದೂರಿನಿಂದ ಹಿಡಿದು ಬೆಳಗಾವಿಯವರೆಗೂ, ಅತ್ತ ಬೀದರಿನಿಂದ ಗುಂಡ್ಲುಪೇಟೆವರೆಗೂ ಅವರ ಜೊತೆಗಾರರಿದ್ದರು.

ಅವರಲ್ಲಿ ಕೆಲವರಿಗೆ ಸಂಬಂಧಪಟ್ಟ ಪತ್ರ ಹಾಕಿ ಕಾಯುತ್ತ ಕುಳಿತರೆ ಯಾರಿಂದಲೂ ಉತ್ತರ ಬರಲಿಲ್ಲ, ಎರಡು ಬಾರಿ ಸಿಕ್ಕ ಕಾಗೋಡು ಮತ್ತು ಕೋಣಂದೂರ್‌ರಿಗೆ ಒತ್ತಾಯಿಸಿದರೂ ಯಾರೂ ಬರೆಯಲಿಲ್ಲ, ಇನ್ನು ವಿದ್ವಾಂಸರ ಪೈಕಿ ಕಾಳೇಗೌಡ ನಾಗವಾರರು ಒಂದು ವರ್ಷ ಸಮಯ ತೆಗೆದುಕೊಂಡರೂ ಒಂದು ಸಾಲನ್ನೂ ಬರೆದು ಕಳಿಸಲಿಲ್ಲ, ಹಾ.ಕೇ. ರಾಜೇಗೌಡರೂ ಹಾಗೇ ಮಾಡಿದರು. ಇವರನ್ನೆಲ್ಲ ಬಿಟ್ಟುಬಿಡೋಣ ಎಂದರೆ ಕೃಷ್ಣಪ್ಪನವರಿಗೆ ಅವರ ಅಭಿಪ್ರಾಯ ಓದಿಕೊಳ್ಳುವ ಕುತೂಹಲ ಬೇರೆ ಇತ್ತು, ಇನ್ನು ಎಲ್ಲಾ ಸಂದರ್ಭದಲ್ಲೂ ಅವರ ಜೊತೆಯಲ್ಲಿದ್ದ ಏಕವಚನದ ಗೆಳೆಯ ಶ್ರೀಕಂಠಯ್ಯ ಮತ್ತು ಚಂದ್ರೇಗೌಡರೂ ಇದ್ದರು. ಸಾಯುವ ಕಡೆಗಳಿಗೆಯಲ್ಲಿ ಚಂದ್ರೇಗೌಡ ಬಿಜೆಪಿಗೆ ಹೋಗಿದ್ದರಿಂದ ಅವರ ಅಭಿ ಪ್ರಾಯದ ಅಗತ್ಯವಿಲ್ಲ ಎಂದಿದ್ದಕ್ಕೆ ಕೃಷ್ಣಪ್ಪನವರು ಸಮ್ಮತಿಸಿ ಸುಮ್ಮನಾದರು.

ಇದೆಲ್ಲಕ್ಕಿಂತ ಮುಖ್ಯವಾಗಿ ಕೃಷ್ಣಪ್ಪನವರಿಗೆ ಒಂದು ಅಭಿನಂದನಾ ಗ್ರಂಥವೇ ಬೇಕಿರಲಿಲ್ಲ, ಅದು ಬೇಕಾಗಿದ್ದುದು ನಮಗೆ. ಆದ್ದರಿಂದ ಅವರ ಕಾಲದ ರಾಜಕಾರಣಿಗಳ ತಂಟೆಗೆ ಹೋಗದೆ ಅವರ ಜೊತೆ ತಾಲ್ಲೂಕಿನಲ್ಲಿ ರಾಜಕಾರಣ ಮಾಡಿದ್ದ ಕೆಲವು ಜನರನ್ನು ಮಾತನಾಡಿಸಿ ದಾಖಲಿಸಿದರೆ ಹೇಗೆ ಅನ್ನಿಸಿತು. ವಿದ್ವಾಂಸರ ಜಡ ಪ್ರಬಂಧಕ್ಕಿಂತ ಇದೇ ಸರಿಯೆಂದು ಪ್ರಾಮಾಣಿಕವಾಗಿ ಬದುಕುತ್ತಿರುವ ಕೃಷ್ಣಪ್ಪನವರ ಒಡನಾಡಿಗಳನ್ನು ಮಾತನಾಡಿಸುತ್ತ ಹೋದಂತೆ. ನಮ್ಮ ಕೆಲಸಕ್ಕೆ ಸ್ಫೂರ್ತಿ ಸಿಗತೊಡಗಿತು. ನಮಗೆ ಈವರೆಗೆ ಕಂಡಿದ್ದಕ್ಕಿಂತ ಕೃಷ್ಣಪ್ಪ ಬೇರೆಯಾಗಿ ಕಾಣತೊಡಗಿದರು. ಜನಾಭಿಪ್ರಾಯವನ್ನೆ ಸಂಗ್ರಹಿಸಿ ಹೇಳುವುದಾದರೆ ಅವರೆಂದೂ ಅಪರಾಧಿಗಳ ಪರವಾಗಿ ಪೊಲೀಸ್ ಠಾಣೆಗೆ ಫೋನ್ ಮಾಡಲು ಹೋಗಿಲ್ಲ, ಅವರನ್ನು ನಚ್ಚಿ ಅವರದೇ ಪಾರ್ಟಿಯವರು ತಪ್ಪು ಮಾಡಿದರೂ ಪೊಲೀಸರಿಗೆ ಹೇಳಿ ಸಹಾಯ ಮಾಡಿಲ್ಲ, ಕೃಷ್ಣಪ್ಪನವರಿಗೆ ಚುನಾವಣೆಯಲ್ಲಿ ಸಹಾಯ ಮಾಡಿದೆ ಎಂಬ ಕಾರಣಕ್ಕೆ ತಪ್ಪು ಮಾಡಿ ಸಹಾಯ ಕೋರಿದಾಗಲೂ ಅವರಿಂದ ಸಿಕ್ಕ ಪ್ರತಿಕ್ರಿಯೆ ಮೌನ. ತಮ್ಮ ನಾಯಕನಿಂದ ತಮ್ಮ ಕೃತ್ಯಗಳಿಗೆ ಬೆಂಬಲವಿಲ್ಲ ಎಂದರಿತ ಕೆಲವರು ಅನಿವಾರ್ಯವಾಗಿ ಅವರಿಗೇ ಹೊಂದಿಕೊಳ್ಳಬೇಕಾಯ್ತು. ಸ್ವತಃ ವಕೀಲರಾದ ಕೃಷ್ಣಪ್ಪನವರು ಗಲಾಟೆಗಳನ್ನು ಪಂಚಾಯ್ತಿ ಮಾಡಿ ಬಗೆಹರಿಸುತ್ತಿದ್ದರಿಂದ ಪೊಲೀಸ್ ಠಾಣೆ ಮತ್ತು ಕೋರ್ಟಿಗೆ ಕೆಲಸವೇ ಇರಲಿಲ್ಲ, ಭ್ರಷ್ಟ ಅಧಿಕಾರಿಗಳನ್ನು ಕರೆದು "ನೀವು ಇಲ್ಲೇ ಇರೋದಾದ್ರೆ ಸರಿಯಾಗಿರಬೇಕು. ಇರಕ್ಕೆ ಸಾಧ್ಯವಿಲ್ಲ ಅನ್ನೋದಾದ್ರೆ ನೀವೆಲ್ಲಿ ಗೋಗ್ತಿರಿ ಹೇಳಿ ಅಲ್ಲಿಗೆ ವರ್ಗ ಮಾಡುಸ್ತಿನಿ" ಎನ್ನುತ್ತಿದ್ದರು. ಇಡೀ ತಾಲೂಕಿನ ಸರ್ಕಾರಿ ಜನ ಮತ್ತು ಉಪಾಧ್ಯಾಯ ವರ್ಗ ನಮಗೊಬ್ಬ ಶಾಸಕನಿದ್ದಾನೆ ಎಂಬ ಅಳುಕಿಲ್ಲದೆ ನಿರ್ಭೀತಿಯಿಂದ ತಮ್ಮ ಕರ್ತವ್ಯ ಮಾಡುತ್ತಿದ್ದರು.

ಸ್ವತಃ ಕೃಷ್ಣಪ್ಪನವರೆ ಐಬಿಗೆ ಬಂದಾಗ ಅಲ್ಲಿನ ರೂಮುಗಳಲ್ಲಿ ಸೇರಿಕೊಂಡವರನ್ನು ಎಬ್ಬಿಸಿ ತೊಂದರೆ ಕೊಡುವುದು ಬೇಡವೆಂದು ಊರಿಗೆ ಹೋಗಿಬಿಡುತ್ತಿದ್ದರು. ಮೇಟಿ ಎಷ್ಟೇ ಒತ್ತಾಯಿಸಿದರೂ "ಪಾಪ ಅವುರಿಗ್ಯಾಕೆ ತೊಂದ್ರೆ ಕೊಡದು" ಎಂದು ಹೋಗುತ್ತಿದ್ದರಂತೆ. ಇದು ಕೃಷ್ಣಪ್ಪನವರ ಸಹಜವಾದ ನಡವಳಿಕೆ. ಆದರೆ ಇಂತದ್ದನ್ನೂ ಕೇಳಿ ಅಚ್ಚರಿಪಡುವ ಸಂದರ್ಭದಲ್ಲಿ ನಾವಿದ್ದೇವೆ.

ಇವೆಲ್ಲಾ ಆದನಂತರ ಕೃಷ್ಣಪ್ಪನವರ ಸಮಕಾಲೀನವರನ್ನು ಮಾತನಾಡಿಸಲು ಹೊರಟೆ. ಮಂಡ್ಯದ ಗಾಂಧೀಭವನದ ಎದುರು ಮಾದೇಗೌಡರು ಕುಳಿತಿದ್ದರು. ಅವರ ಪಕ್ಕ ಹೋಗಿ ಕುಳಿತ ನಾನು ಕೃಷ್ಣಪ್ಪನವರ ಬಗ್ಗೆ ಅವರ ಅಭಿಪ್ರಾಯ ಕೇಳಿದೆ. "ಕಿಷ್ಣಪ್ಪ ಇಲ್ಲೆ ಲಾಯರಾಗಿದ್ದ, ನಾನೂ ಅವುನೂ ತಾಲ್ಲೊಕ್ ಬೋರ್ಡ್ ಮುಖಾಂತರ ರಾಜಕೀಯಕ್ಕೆ ಬಂದೊ. ಕಿಷ್ಣಪ್ಪ ನಾಟಕದಲ್ಲಿ ಪಾರ್ಟು ಮಾಡ್ತನೆ. ಪದ ಹೇಳ್ತನೆ. ಮಾತ್ರ ವಳ್ಳೆ ಮನ್ಸ" ಎಂದವರು, ಮಂಡ್ಯದ ಜನರನ್ನು ಅಸಹನೆ ಯಿಂದ ನೋಡತೊಡಗಿದರು.

ಆಗಿನ ಕಾಂಗ್ರೆಸ್ ನಡವಳಿಕೆಯಿಂದ ರೋಸಿದ್ದ ಅವರು ಪಕ್ಕಕ್ಕೆ ಬಂದು ಕೂತ ನನ್ನನ್ನೂ ಕೂಡ ತಿರುಗಿ ನೋಡಲಿಲ್ಲ, ಆದರೆ ಕೃಷ್ಣಪ್ಪನವರ ಬಗ್ಗೆ ಮೂರೇ ಮಾತಿನಲ್ಲಿ ಚೆನ್ನಾಗಿ ಹೇಳಿ ದ್ದರು. ಯಾರನ್ನೆ ಮಾತನಾಡಿಸಿದರೂ ಮಾದೇಗೌಡರ ಮೂರು ವಾಕ್ಯದ ಸುತ್ತವೇ ಇರುತ್ತಿದ್ದವು.

ಎಂ.ಪಿ. ಪ್ರಕಾಶ್, ಸಿದ್ಧರಾಮಯ್ಯ ಇಬ್ರಾಹಿಂ, ಸಿಂಧ್ಯಾ ಇವರನ್ನೆಲ್ಲಾ ಮಾತನಾಡಿಸಿದ ನಂತರ ದೇವೇಗೌಡರ ಅಭಿಪ್ರಾಯ ವಿಲ್ಲದೆ ಈ ಅಭಿನಂದನಾ ಗ್ರಂಥ ಪೂರ್ಣವಾಗಲಾರದು ಅನ್ನಿಸಿ, ಅವರನ್ನು ಕೇಳಲು ಗೆಳೆಯ ಶ್ರೀನಿವಾಸ್ ಜೊತೆ ಹೋದೆ. "ಹೆಚ್.ಟಿ. ಕೃಷ್ಣಪ್ಪನವರ ಅಭಿನಂದನ ಗ್ರಂಥ ತರ್ತಾಯಿದ್ದಿವಿ ಸಾರ್. ಅವರ ಬಗ್ಗೆ ಹೇಳಿ" ಎಂದೆ. "ಅವರಿನ್ನೂ ಇದ್ದಾರಾ?" ಎಂದು ಕೇಳಿದರು. ಇದೇನು ಅಹಂಕಾರದ ಮಾತೋ ಅಥವಾ ನಿಜಕ್ಕೂ ಗೌಡರಿಗೆ ಮರೆವಿನ ಸಮಸ್ಯೆ ಅಮರಿದೆಯೇ ಎಂಬುದು ತಿಳಿಯಲಿಲ್ಲ. ಆದರೂ ಕೃಷ್ಣಪ್ಪನವರ ಬಗ್ಗೆ ಅವರಲ್ಲಿ ಒಳ್ಳೆ ಅಭಿಪ್ರಾಯವಿರಲಿಲ್ಲ. ಇರಲು ಸಾಧ್ಯವೂ ಇರಲಿಲ್ಲ. "ಕೃಷ್ಣಪ್ಪನವರ ಆರೋಗ್ಯ ತುಂಬಾ ಚೆನ್ನಾಗಿದೆ ಸಾರ್. ಡ್ರಿಂಕ್ ಮಾಡ್ತರೆ, ಚೈನ್ ಸ್ಮೋಕರ್" ಎಂದೆ. ಕೈಗೆ ಬ್ಯಾಂಡೇಜ್ ಸುತ್ತಿಸಿಕೊಳ್ಳುತ್ತಿದ್ದ ಗೌಡರು "ಆರೋಗ್ಯ ಚೆನ್ನಾಗಿರಬೇಕು ಅನ್ನೋದಾದ್ರೆ ಹಿಂದಿನ ಜನ್ಮದಲ್ಲಿ ಪಡಕೊಂಡು ಬಂದಿರಬೇಕು" ಅಂದರು. ಅವರಿಗೆ ನಮಸ್ಕಾರ ಹಾಕಿ ಹೊರಬಂದ ನಂತರ, ಇವರ ಮಗನಂತಿರುವ ಶಿವರಾಮೇಗೌಡನನ್ನು ಕೇಳಬೇಕಲ್ಲಾ ಅನ್ನಿಸಿತು. ಆ ಕೂಡಲೇ ಆತನ ಮನೆ ಬಳಿಗೆ ಹೋದೆವು. ಅದು ಮನೆಯಲ್ಲ ಅರಮನೆ ಅನ್ನಿಸಿತು. ಒಂದುಕ್ಷಣ ದಂಗುಬಡಿದೆ. ನಂತರ ನನ್ನ ಅಚ್ಚರಿಯನ್ನು ತೋರಗೊಡದೆ "ಕೃಷ್ಣಪ್ಪಾರ ಮ್ಯಾಲೆ ಪುಸ್ತಕ ತತ್ತಾಯಿದ್ದಿವಿ. ಒಂದತ್ತದನ್ನೈದು ಸಾಲು ಬರಕೊಡ್ತಿಯಾ?" ಎಂದೆ.

ಅದೊಂದು ರೀತಿ ನಕ್ಕ ಶಿವರಾಮ "ಹದಿನೈದು ಸಾಲ್ಬೆ? ಮುಗ್ಧ ಸೋಮಾರಿ, ಕ್ಯಲಸಕ್ಕೆ ಬಾರದೋನು. ಇಷ್ಟೆಯಪ್ಪ ಕೃಷ್ಣಪ್ಪನ ವಿಷಯ. ನೀನು ಹದಿನೈದು ಸಾಲು ಬರಕೊಡು ಅಂತಿ" ಎಂದು ಹಾಸ್ಯಮಯವಾಗಿ ನಕ್ಕ, ಹುಚ್ಚರ ನಗುವನ್ನು ಉತ್ತೇಜಿಸುವಂತೆ ನಾನೂ ಅವನೊಡನೆ ನಕ್ಕು ಹೊರಬರುವಾಗ, "ನನ್ನ ಮ್ಯಾಲ್ಯಾವಾಗ ಪುಸ್ತಕ ತತ್ತಿರೀ?" ಎಂದ. "ನಿನಿಗೂ ಅರವತ್ತೊರ್ಸಾಗ್ಲಿರು" ಎನ್ನುವಾಗ ನಾಗಮಂಗಲದ ಮಕ್ಬುಲ್ ಅಹಮದ್ ಹೇಳಿದ್ದ ಮಾತು ಜ್ಞಾಪಕಕ್ಕೆ ಬಂತು. "ಕಿಷ್ಣಪ್ಪಾರಿಗೆ ವಿರೋಧ ಮಾಡೋರೆ ಇಲ್ಲ ಶಾರ್. ಇದ್ದಿದ್ರೆ ಅವುರುದು ತಲೆ ಸರಿಯಿಲ್ಲ" ಎಂದು ಮಕ್ಬುಲ್ ಹೇಳಿದ್ದ, ಆ ಪೈಕಿ ನನಗೆ ಸಿಕ್ಕಿದವರು ಇಬ್ಬರೇ ಇಬ್ಬರು!

ನಂತರ ಪುಸ್ತಕ ಬಿಡುಗಡೆ ಕಾರ್ಯಕ್ರಮ ಹತ್ತಿರ ಬಂದಂತೆ ಮಂಡ್ಯ ಜಿಲ್ಲೆಯವರೇ ಆದ ವಿದೇಶಾಂಗ ಸಚಿವ ಎಸ್ಸೆಂ ಕೃಷ್ಣರ ಅಭಿಪ್ರಾಯ ಈ ಗ್ರಂಥಕ್ಕೆ ಸೇರಲೇಬೇಕೆಂದು ಕೆಲವರು ಹಠ ಹಿಡಿದ ಪ್ರಯುಕ್ತ ದೆಹಲಿ ಮತ್ತು ಬೆಂಗಳೂರಿಗೆ ಪತ್ರ ಬರೆದು ಸಾಕಾಯ್ತು, ಕಡೆಗೆ ಕೃಷ್ಣರೇ ಬೆಂಗಳೂರಿಗೆ ಬರುತ್ತಾರೆಂದು ಗೊತ್ತಾಗಿ ಅವರ ಮನೆ ಬಾಗಿಲಲ್ಲಿ ಜಮಾಯಿಸಿಕೊಂಡೆವು. ಅದರ ಸ್ಥಾನಿಕ ಸಹಾಯಕರು ಒಳಬಿಟ್ಟರು. ಕೃಷ್ಣರಿಗೆ ಅಭಿಪ್ರಾಯ ಕೇಳಿದ್ದಲ್ಲದೆ ಕಾರ್ಯಕ್ರಮಕ್ಕೂ ಬರಲು ಬೇಡಿಕೊಂಡೆವು. "ನಿಮ್ಮ ಕಾರ್ಯಕ್ರಮದ ದಿನ



ನಾಟಕದಲ್ಲಿ ಕೃಷ್ಣಪ್ಪ, ಬಿ.ಚಂದ್ರೇಗೌಡ ಮತ್ತು ನಾಗತಿಹಳ್ಳಿ ಚಂದ್ರಶೇಖರ್

ಅದಾವುದೋ ದೇಶದಲ್ಲಿರುತ್ತೇನೆ" ಎಂದು ತಪ್ಪಿಸಿಕೊಂಡ ಕೃಷ್ಣ ಹೆಚ್.ಟಿ. ಕೃಷ್ಣಪ್ಪನವರ ಬಗ್ಗೆ ದೆಹಲಿಯಿಂದಲೇ ಬರೆದು ಪೋಸ್ಟು ಮಾಡುತ್ತೇನೆಂದರು. ಸ್ಥಾನಿಕ ಸೇವಕರು ಏನು ಬರೆಸಿಕೊಡಬೇಕೆಂಬ ಮಾಹಿತಿಯನ್ನು ಪಡೆದು ಸುಮ್ಮನಾದರು. ಇಂತಹ ಮೂರ್ಖರ ಉದಾಸೀನವನ್ನು ಗ್ರಹಿಸದ ನಾವು, ಒಂದು ತಿಂಗಳು ಕೃಷ್ಣನ ಅಭಿಪ್ರಾಯಕ್ಕಾಗಿ ಕಾಯ್ದು ಕಡೆಗೆ ಪುಸ್ತಕ ಪ್ರಕಟಿಸಿದೆವು. ಅಷ್ಟಕ್ಕೂ ಕೃಷ್ಣ ಎಂತಹ ರಾಜಕಾರಣಿ ಎಂಬುದನ್ನು ಕೃಷ್ಣಪ್ಪ ತಮ್ಮ ಸಂದರ್ಶನದಲ್ಲೇ ಹೇಳಿದ್ದಾರೆ.

ಗ್ರಂಥ ಬಿಡುಗಡೆ ಅದ್ದೂರಿಯಾಗಿಯೇ ನಡೆಯಬೇಕೆಂದು ಅದಕ್ಕಾಗಿ ಆದಿ ಚುಂಚನಗಿರಿಸ್ವಾಮಿ ಮತ್ತು ಎಂ.ಪಿ. ಪ್ರಕಾಶ್, ಸಿದ್ದರಾಮಯ್ಯ, ಇಬ್ರಾಹಿಂ, ರಮೇಶ್ ಕುಮಾರ್‌ರನ್ನು ಆಹ್ವಾನಿಸಿದ ನಾವು ಕೃಷ್ಣಪ್ಪನವರ ಅಪೇಕ್ಷೆ ಮೇರೆಗೆ ಅಂಬರೀಷರನ್ನು ಕರೆಯಲು ಹೋದೆವು. ಅದಕ್ಕಾಗಿಯೇ ಅರ್ಧ ದಿನದಿಂದ ತಯಾರಾದ ನಾವು ಸೋನೆ ಮಳೆಯಲ್ಲಿ ಆತನ ಮನೆ ಬಾಗಿಲಲ್ಲಿ ನಿಂತೆವು. ನಾಗತಿಹಳ್ಳಿ ಚಂದ್ರಶೇಖರ, ಹೆಚ್.ಟಿ. ಕೃಷ್ಣಪ್ಪ, ನಾನು, ನಾರಾಯಣಮೂರ್ತಿ ಎಲ್ಲರೂ ಗಂಟೆಗಟ್ಟಲೆ ಕಾಯುವಾಗ, ನಮ್ಮ ಸಹನೆ ಹಾಳಾಗಿ ಹೊರಡಲನುವಾದೆವು. ರಾತ್ರಿ ಪಾರ್ಟಿ ಇಟ್ಟುಕೊಂಡಿದ್ದ ಅಂಬರೀಷ್ ಅದರ ಸಾಮಗ್ರಿಯೊಡನೆ ಎಲ್ಲಿಂದಲೋ ಬಂದ "ನೈನ್‌ಟಿ ನೈನ್ ಪರಸೆಂಟ್ ಬಂದೇ ಬರ್‍ತೀನಿ" ಎಂದ ಒಳಗೋದರು. ಕೃಷ್ಣಪ್ಪನವರು ಅಂಬರೀಷ್‌ಗೆ ಏಕವಚನ ಗೆಳೆಯ. ಆತನೊಡನೆ ಕಾರ್ಡ್ಸ್ ಆಡಿದ್ದಾರೆ, ರೇಸ್ ಆಡಿದ್ದಾ ಅವರು ಮಂತ್ರಿಯಾಗಿದ್ದಾಗ ಅಂಬಿ ಯಾರಿಗೊ ಸಹಾಯ ಮಾಡಿಸಿದ್ದಾರೆ. ಇಷ್ಟಿರುವಾಗ ಕೃಷ್ಣಪ್ಪನವರ ಅಭಿನಂದನ ಸಭೆಗೆ ಬಂದೇ ಬರುತ್ತಾರೆಂದು ಸಮಾಧಾನದಿಂದ ಬಂದೆವು.

ಆದರೆ ಕಾರ್ಯಕ್ರಮದ ದಿನ ಅಂಬರೀಷ್ ಕಡೆಯಿಂದ ಯಾವ ಸೂಚನೆಯೂ ಬರಲಿಲ್ಲ, ತಪ್ಪಿಸಿಕೊಂಡರು. ಆತ ಎರಡೂ ಚುನಾವಣಾ ಸೋಲಿನಿಂದ ಬೇಸರವಾಗಿದ್ದ ನಮಗ ಏನೋ ಒಂದು ರೀತಿ ಸಮಾಧಾನವಾಯ್ತು! ಪುಸ್ತ ಬಿಡುಗಡೆ ದಿವಸ ಕೃಷ್ಣಪ್ಪನವರ ಅಪೇಕ್ಷೆ ಮೇರೆಗೆ ರಂಗಗೀತ ಮತ್ತು ನಾಟಕ ಇಟ್ಟುಕೊಂಡೆವು. ಮಂಡ್ಯದ ರಮಾಭಾಯಿ ರಂಗಗೀತೆ ಹಾಡಿದರೆ, ಶಿವಮೊಗ್ಗದ 'ಹೊಂಗಿರಣ'ದ ಗೆಳೆಯರು 'ಕರ್ಣಾಂತರಂಗ' ನಾಟಕ ಮಾಡಿದರು.

ಕೃಷ್ಣಪ್ಪನವರು ಸ್ವತಃ ಹಾಡುಗಾರರೂ, ನಟರೂ ಆದ್ದರಿಂದ ಈ ಎಂಬತ್ತನೇ ವಯಸ್ಸಿನಲ್ಲಿ ಅವರಿಗೆ ಯಾವ ಪಾತ್ರ ಕೊಡವುದೆಂದು ಯೋಚಿಸಿ ಕಡೆಗೆ ತ್ರೇತಾಯುಗದ ಆಂಜನೇಯ ದ್ವಾಪರಯುಗದಲ್ಲೂ ಹಿಮವತ್ ಪರ್ವತದಲ್ಲಿ ಕುಳಿತಿದ್ದ ಎಂಬ ಪುರಾಣ ರಾಜಸೂಯಯಾಗ ನಾಟಕದಲ್ಲಿ ಬರುತ್ತದೆ. ಹಿಮವತ್ ಪರ್ವತಕ್ಕೆ ಹೋದ ಭೀಮ ಆಂಜನೇಯನ ಬಾಲ ಎತ್ತಲಾರದೆ ಅವಮಾನಪಡುವ ಪ್ರಸಂಗವನ್ನು ತಯಾರು ಮಾಡಿದೆ. ಕೃಷ್ಣಪ್ಪನೇ ಆಂಜನೇಯ ನಾಗತಿಹಳ್ಳಿ ಚಂದ್ರಶೇಖರನಿಗೆ ಭೀಮನ ಪಾತ್ರ ಕೊಟ್ಟೆ "ನೀನೂ ಮಾಡದಿದ್ದರೆ ನಾನು ನಾಟಕ ಮಾಡಲ್ಲ" ಎಂದು ಚಂದ್ರ ಹೇಳಿದ್ದರಿಂದ, ನಾನು ಗಡ್ಡ ಮೀಸೆ ತೆಗೆಯಲಾರದ ನಾನೇ ಭೀಮನ ಪಾತ್ರ ಇಟ್ಟುಕೊಂಡು, ಚಂದ್ರನಿಗೆ ಕೃಷ್ಣ ಪಾರ್ಟು ಕೊಟ್ಟೆ. ಮೀಸೆ ತೆಗೆಸುವ ಬಗ್ಗೆ ಅರ್ಧ ದಿನ ಚಿಂತಾಕ್ರಾಂತನಾಗಿದ್ದ ಚಂದ್ರ, ಕಡೆಗೆ ಚಿಗುರುಮೀಸೆ ಮಾಡಿಕೊಂಡು ಬಂದ. ಅಲ್ಲದೇ ತನಗೆ ವಹಿಸಿದ್ದ ಪಾತ್ರಕ್ಕಾಗಿ ಮನೆಗೇ ಹಾರ್ಮೋನಿಯಂ ಮಾಸ್ತರನ್ನು ಕರೆಸಿಕೊಂಡು ತಯಾರಾಗಿ ಬಂದಿದ್ದ ನಾನು ಶಿವಮೊಗ್ಗದಲ್ಲೇ ತಯಾರಾಗಿದ್ದೆ ಆದರೆ ಆಂಜನೇಯ ಮಾತ್ರ ಆರ್.ಟಿ. ನಗರದ ತನ್ನ ಮನೆಯಲ್ಲಿ ಆರಾಮವಾಗಿದ್ದುದು ನೋಡಿ ನಮಗೆ ಗಾಬರಿಯಾಯ್ತು,

ನಾಟಕಕ್ಕೂ ಮುನ್ನ ಒಂದು ದಿನ ಪೂರ್ತಿ ಪ್ರಾಕ್ಟೀಸ್ ಮಾಡಲೆಂದು ನಾಗಮಂಗಲದಲ್ಲಿ ಸೇರಿಕೊಂಡೆವು. ಆಗ ಕೃಷ್ಣಪ್ಪನವರ ಭಾಗದ ಡೈಲಾಗುಗಳನ್ನು ನಾನು ಬರೆದುಕೊಟ್ಟು ಹೊರಬಂದೆ. ಕಳೆದ ಶತಮಾನದಲ್ಲಿ ಅವರು ಯಾವಾಗಲೋ ಮಾಡಿದ್ದ ಆಂಜನೇಯನ ಡೈಲಾಗು ಹೊರಬರತೊಡಗಿದವು. ಅಲ್ಲದೆ ಪ್ರತಿಬಾರಿಯೂ ಬದಲಾಗುತ್ತಿದ್ದವು. ಇದರಿಂದ ಕಂಗಾಲಾದ ನಾಗತಿಹಳ್ಳಿ ಚಂದ್ರಶೇಖರ ಅವರಿಂದ ಆಂಜನೇಯನ ಮಾತು ಯಥಾವತ್ ಹೊರಡುವಂತೆ ಮಾಡಲು ಹೋರಾಡಿದ. ಆದರೆ ನಮ್ಮ ಯಾವುದೇ ಆತಂಕ ಈ ಕಲಿಯುಗದ ಆಂಜನೇಯನ ಮುಖದಲ್ಲಿರಲಿಲ್ಲ ಮನೆ ಮುಂದಿನ ವರಾಂಡದಲ್ಲಿನ ಆರಾಮ ಕುರ್ಚಿಯಲ್ಲಿ ಕುಳಿತಂತೆ ನಿರಾಳವಾಗಿ ಕುಳಿತ ಕೃಷ್ಣಪ್ಪನವರು ನೀರು ಕುಡಿದಷ್ಟೇ ಸಲೀಸಾಗಿ ತಮ್ಮ ಪಾತ್ರ ಮುಗಿಸಿದರು.

ನಾಟಕ ಹೇಗಾಗುತ್ತೆ ಎಂದು ಹೆದರಿದ್ದ ನಾವೇ ಆವೇಶ ಬಂದವರಂತಾಡಿದ್ದರಿಂದ, ಕೃಷ್ಣನ ಪಾತ್ರ ಅರ್ಜುನನನ್ನು ನೆನೆಸಿದರೆ, ಭೀಮನ ಪಾತ್ರ ದುರ್ಯೋಧನನ ಪಾತ್ರದಂತಾಯ್ತು ಈ ಸಣ್ಣ ಅತಿರೇಕದಿಂದ ಸಮಾಧಾನ ಹೊಂದಲು ರಿಣ್ಣಾಗಿ ಎಗ್ಗೆ ಹೊಡೆಯಬೇಕಾಯ್ತು,

ಆಗ ಕಲಾವಿದರೇಕೆ ಕಾಯಿಲೆಗಳ ಆಗರವಾಗಿ ಸಾಯುತ್ತಾರೆಂಬ ಜ್ಞಾನೋದಯವಾಯ್ತು!

• ಬಿ. ಚಂದ್ರೇಗೌಡ

ಸಂತೋಷ್ ಹೆಗ್ಡೆಯವರೇ, ಇದು ಸರಿಯೆ?

ವಾರದೊಪ್ಪೊತ್ತಲ್ಲೇ ಇಡೀ ವಿದ್ಯಮಾನ ಅದಲುಬದಲಾಗಿದೆ. ಭ್ರಷ್ಟ ಸರ್ಕಾರದ ಅಸಹಕಾರಕ್ಕೆ ಸೆಡ್ಡು ಹೊಡೆದು ರಾಜೀನಾಮೆ ಎಸೆದ ಲೋಕಾಯುಕ್ತ ಸಂತೋಷ್ ಹೆಗ್ಡೆ ಈ ನೆಲದ ಬಹುತೇಕರ ಕಣ್ಣಲ್ಲಿ ಹೀರೋ ಅನ್ನಿಸಿಕೊಂಡಿದ್ದರು. ಏನೇ ಓಲೈಕೆಗಳು ನಡೆದರೂ ಹೆಗ್ಡೆಯವರು 'ವಾಪಾಸಾಗುವ ಪ್ರಶ್ನೆಯೇ ಇಲ್ಲ' ಅಂದರು; ಅಭಿಮಾನ ಇಮ್ಮಡಿಸಿತು. ಆದರೆ... ಇಂಥ ನಿಷ್ಠುರತೆಯೆಲ್ಲ ಅಡ್ವಾಣಿಯ ಮಾತಿನ ಮುಲಾಜಿನಲ್ಲಿ ಕರಗಿ ಹೆಗ್ಡೆ ರಾಜೀನಾಮೆ ವಾಪಾಸು ಪಡೆದರು ನೋಡಿ, ಪ್ರಾಮಾಣಿಕ ಅಧಿಕಾರಿಯೊಬ್ಬ ವಾಪಾಸಾದುದಕ್ಕೆ ಸಂತಸಪಡಲಾಗದಂಥ ತಲ್ಲಣದ ವಾತಾವರಣವೊಂದು ಸೃಷ್ಟಿಯಾಗಿದೆ. ಈ ಕ್ಷಣವೂ ಅದು ಮುಂದುವರೆದಿದೆ.

ಇದೆಲ್ಲದಕ್ಕೆ ಪ್ರಮುಖ ಕಾರಣ ಈ ಪ್ರಕ್ರಿಯೆಯಲ್ಲಿ ಹೆಗ್ಡೆಯವರು ನಡೆದುಕೊಂಡ ರೀತಿಯೇ ಎಂಬುದನಿಲ್ಲಿ ಹೇಳಲೇಬೇಕಾಗಿದೆ. ಸರ್ಕಾರದ ವಿರುದ್ಧ ಮೈತುಂಬಾ ವಿರೋಧವಿರುವವರಂತೆ ತೋರಿಸಿಕೊಂಡಿದ್ದೂ ಅವರೆ. 'ಈ ಸರ್ಕಾರವನ್ನು ಸಂಪೋಕ್ಯಾಗಲ್ಲ' ಎಂಬರ್ಥದ ಹೇಳಿಕೆಗಳನ್ನು ಪದೇಪದೇ ಉದುರಿಸಿದ್ದೂ ಅವರೇ. ತೀರಾ ಹೆಗ್ಡೆಯವರ ಕಾರ್ಯವೈಖರಿಯಿಂದ ಖುಷಿಯಾದ ಮಂದಿಯೇ ವಾಪಾಸಾಗಿ ಅಂದರೂ ಅಚಲವಾಗಿ ನಿಂತಿದ್ದವರೂ ಅವರೇ! ಇಂತಹುದೊಂದು ಬಿಗಿ ನಿಲುವು ಕಂಡು ಯಾರ್‍ಯಾರು ಬೀಗಿದ್ದರೋ ಅವರೆಲ್ಲ ಬೆವರಿಬಿಡುವಂಥ ನಿರ್ಧಾರವನ್ನ ಹೊರಹಾಕಿದವರೂ ಅವರೇ!

ಒಂದು ಕಾಲದ ಭಾರತೀಯ ಜನತಾ ಪಾರ್ಟಿಯ ಕಟ್ಟರ್ ನಾಯಕ ಅಡ್ವಾಣಿಯವರ ಒಂದು ಮಾತು ಇಷ್ಟೆಲ್ಲಾ 'ಪರಿವರ್ತನೆ'ಗಳಿಗೆ ಕಾರಣವಾಗಿದೆ. ಆ ಒಂದು ಮಾತು ಸಂತೋಷ್ ಹೆಗ್ಡೆಯವರಿಗೆ ಈ ನೆಲದ ಕೋಟ್ಯಂತರ ದನಿಗಳಿಗಿಂತ ಮಿಗಿಲಾಗಿ ಕಂಡಿದೆ. ಅವರ ಪ್ರಕಾರ ಅಡ್ವಾಣಿ ಪಿತೃಸಮಾನರಂತೆ. ಇವರ ಕುಟುಂಬಗಳ ನಡುವೆಯೂ ಲಾಗಾಯ್ತಿನಿಂದ ಬಾಂಧವ್ಯ ಇದೆಯಂತೆ. ಇದೆಲ್ಲ ವೈಯಕ್ತಿಕ ವಿಚಾರಗಳು ರಾಜೀನಾಮೆ ವಾಪಾಸ್‌ನಂಥ ಗಂಭೀರ ವಿಚಾರಕ್ಕೂ ಸಬೂಬಾಗಿ ಪರಿಗಣಿಸಲ್ಪಡುತ್ತವೆಯೆಂದರೆ ಏನೆನ್ನಬೇಕು? ಇದು ನಿಜಕ್ಕೂ ವಿಪರ್ಯಾಸಕರ ಘಟನೆ. ಯಾಕೆ ಹೀಗನ್ನಿಸುತ್ತದೆಯೆಂದರೆ, ಸರ್ಕಾರಿ ಯಂತ್ರ ಹಾಗೂ ಭ್ರಷ್ಟ ವ್ಯವಸ್ಥೆಯ ಬಗ್ಗೆ ನಮಗಿರುವಂಥ ತಕರಾರುಗಳನ್ನು ತಲುಪಿಸಬೇಕಾದಲ್ಲಿಗೆ ತಲುಪಿಸಿ ಚುರುಕು ಮುಟ್ಟಿಸುವಂಥ




ವಿಕ್ಕಟ್ಟ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷಗಾದಿಗೆ ತಿಪ್ಪರಲಾಗ...



ಆರ್.ವಿ.ದೇಶಪಾಂಡೆ ಕರ್ನಾಟಕ ರಾಜ್ಯ ಕಾಂಗ್ರೆಸ್ಸಿನ ...ಕ್ಷ ಸ್ಥಾನದಿಂದಲೂ ಡಿ.ಕೆ.ಶಿವಕುಮಾರ್ ಕಾರ್ಯಾಧ್ಯಕ್ಷ ...ದದಿಂದಲೂ ಈಗ ಹೊರನಡೆಯಲೇಬೇಕಾಗಿದೆ. ಈಗ ...ಜ್ಯಾಧ್ಯಕ್ಷ ಸ್ಥಾನಕ್ಕಾಗಿ ಕಾಂಗ್ರೆಸ್ಸಿಗರಲ್ಲಿ ಪೈಪೋಟಿ ...ಂಭವಾಗಿದೆ. ಕೆಲ ಕಾಂಗ್ರೆಸ್ಸಿಗರು ತಮ್ಮ ಬಯೋಡೇಟಾವನ್ನು ...ದು ದೆಹಲಿಗೆ ಹೋಗಿ ಮೇಡಂ ಸೋನಿಯಾರ ಕೈಗಳಿಗೆ ...ಪುಗಳನ್ನು ಇಡಲು ಕಾಂಗ್ರೆಸ್ಸಿಗರು ಪೈಪೋಟಿ ...ಸುತ್ತಿದ್ದಾರೆ. ಇನ್ನೂ ಕೆಲವರು ದೆಹಲಿಯಲ್ಲಿರುವ ರಾಜ್ಯ ...ಗ್ರೆ ನಾಯಕರ ಮುಖಾಂತರ ಮೇಡಂಗೆ ತಮ್ಮ ಹೆಸರನ್ನು ...ರಸ್ಸು ಮಾಡುವಂತೆ ದುಂಬಾಲು ಬೀಳುತ್ತಿದ್ದಾರೆ. ಹೀಗೆ ...ನ ಕೆಲವು ತಿಂಗಳುಗಳಿಂದ ನಿಂತ ನೀರಾಗಿದ್ದ ಕಾಂಗ್ರೆಸ್ ...ದಲ್ಲಿ ಈಗ ದಿಢೀರನೆ ಚಟುವಟಿಕೆಗಳು ಆರಂಭವಾಗಿವೆ.

...ಸದ್ಯಕ್ಕೆ ಒಟ್ಟು ನಾಲ್ಕು ಜನರ ಹೆಸರು ... ದೇಶಪಾಂಡೆಯ ಉತ್ತರಾಧಿಕಾರಿ ...ಗಿ ಕೇಳಿಬರುತ್ತಿದೆ. ಅವುಗಳಲ್ಲಿ ...ದಲಿನಿಂದಲೂ ಆ ಸ್ಥಾನಕ್ಕೆ ಕೇಳಿಬ...ದ್ದ ಹೆಸರೆಂದರೆ ದಲಿತ ನಾಯಕರಾದ ...ಜಿ.ಪರಮೇಶ್ವರ್. ಇವರ ಬೆನ್ನಿಗೆ ಉತ್ತರ ...ಟಕದ ಲಿಂಗಾಯತ ನಾಯಕರು ...ತ್ತು ಪಕ್ಷದ ನಿಷ್ಠಾವಂತ ಕಾರ್ಯಕರ್ತರೂ ... ಹೆಚ್.ಕೆ.ಪಾಟೀಲ್ ಹೆಸರು ಕೂಡಾ ಬಂದಿದೆ. ಈ ಮಧ್ಯೆ ರೆಬೆಲ್ ... ಅಂಬರೀಶ್‌ರವರ ಅಭಿಮಾನಿಗಳು ...ವು ದಿನಪತ್ರಿಕೆಗಳಲ್ಲಿ 'ಅಧ್ಯಕ್ಷ ಸ್ಥಾನಕ್ಕೆ ...ಶ್ ಸ್ಟಾರ್?' ಎಂದು ಬರೆಸಿದರೂ ಯಾವುದೇ ಕಾರಣಕ್ಕೆ ...ಹೆಸರು ದೆಹಲಿ ವಲಯದಲ್ಲಿ ಚರ್ಚೆಯಾಗಿಲ್ಲವೆಂಬುದು ...

ಈ ಮಧ್ಯೆ ದಿಢೀರನೆ ಯುವ ನಾಯಕರಾದ ...ಹರಿಪ್ರಸಾದ್ ರಾಜ್ಯ ಕಾಂಗ್ರೆಸ್‌ನ ಅಧ್ಯಕ್ಷರಾಗಿ ...ತ್ತಾರೆಂಬ ಸುದ್ದಿ ಪತ್ರಿಕೆಗಳಲ್ಲಿ ಕಾಣಿಸಿದಾಕ್ಷಣ ...ಗ್ರೆಸ್ಸಿಗರೆಲ್ಲರೂ ದಿಗ್ಭ್ರಾಂತರಾದರು. ಇತ್ತೀಚಿನ ರಾಜ್ಯಸಭಾ ...ವಣೆಯಲ್ಲಿ ಎರಡನೇ ಅಭ್ಯರ್ಥಿಯಾಗಿ ಚುನಾವಣೆಗೆ ...ಸಲು ವಿಫಲ ಪ್ರಯತ್ನ ನಡೆಸಿದ ಹರಿಪ್ರಸಾದ್ ಅವರನ್ನು ...ಡಂ ಪಕ್ಷ ಸಂಘಟನೆಗಾಗಿ ಬೆಂಗಳೂರಿಗೆ ಕಳುಹಿಸುತ್ತಾರೆ ... ನಂಬಲರ್ಹ ಸುದ್ದಿ ಹರಡಿತ್ತು. ಆದರೆ ಈ ಬಗ್ಗೆ ... ಬಿ.ಕೆ.ಹರಿಪ್ರಸಾದ್ ಅವರನ್ನು ಸಂಪರ್ಕಿಸಿದಾಗ "ಅದೆಲ್ಲ ... ಮೇಡಂ ನಾನು ದೆಹಲಿಯಲ್ಲೇ ಇದ್ದು ಪಕ್ಷ ...ಟಿಸಬೇಕು ಎಂಬ ಆಶಯ ವ್ಯಕ್ತಪಡಿಸಿದ್ದಾರೆ" ಎಂದು ... ಬೆಂಗಳೂರಿಗೆ ಬರುವ ಸುದ್ದಿಯನ್ನು ನಿರಾಕರಿಸಿದರು. ...ಸಂದರ್ಭದಲ್ಲೇ ಅಧ್ಯಕ್ಷಗಾದಿಯ ಮೇಲೆ ಕಣ್ಣಿರಿಸಿರುವ ...ಸೂರಿನ ವಿಶ್ವನಾಥ್ ತನ್ನನ್ನು ಅಧ್ಯಕ್ಷರನ್ನಾಗಿ ಮಾಡಿದರೆ ...ಯಾವ ರೀತಿಯಲ್ಲಿ ಸಂಘಟನೆ ಮಾಡುತ್ತೇನೆಂದು ದೆಹಲಿ ...ಗಳ ಮುಂದೆ ತಮ್ಮ ವಾದವನ್ನು ಮಂಡಿಸಿ, ಸ್ವತಃ ... ಅಖಾಡಕ್ಕೆ ಇಳಿದಿದ್ದಾರೆ.



ಹೀಗೆ ಸದ್ಯಕ್ಕೆ ದೇಶಪಾಂಡೆ ಜಾಗದ ಮೇಲೆ ನಾಲ್ಕು ಜನ ಹಿರಿಯ ಕಾಂಗ್ರೆಸ್ಸಿಗರ ಕಣ್ಣು ಬಿದ್ದಿದೆ. ಈ ನಾಲ್ವರಲ್ಲಿ ಹೈಕಮಾಂಡ್ ಯಾರ ಕಡೆ ಒಲವು ತೋರಿಸುತ್ತದೆ ಎಂಬುದು ಇನ್ನೂ ನಿಗೂಢವಾಗಿಯೇ ಇದೆ. ಯಾಕೆಂದರೆ ಕಾಂಗ್ರೆಸ್‌ನಲ್ಲಿ ಕೊನೇಕ್ಷಣದತನಕ ಹೈಕಮಾಂಡ್‌ನ ಒಲವು ಯಾರ ಕಡೆ ಇದೆ ಎಂದು ನಿಖರವಾಗಿ ಹೇಳಲು ಅವರ ನಿಕಟವರ್ತಿಗಳಿಗೂ ಸಾಧ್ಯವಿಲ್ಲದ ಸಂಗತಿ.

ಆದರೂ ಕಾಂಗ್ರೆಸ್ ಇತಿಹಾಸ ಮತ್ತು ಕಾಂಗ್ರೆಸ್ ಹೈಕಮಾಂಡ್‌ನ ಕಾರ್ಯಾಚರಣೆಯನ್ನು ಹತ್ತಿರದಿಂದ ಬಲ್ಲವರಿಗೆ ಗೊತ್ತಿರುವ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲೇಬೇಕಾಗಿದೆ. ಪ್ರತಿಬಾರಿಯೂ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವಾಗ ಹೈಕಮಾಂಡ್ ಜಾತಿ ಲೆಕ್ಕಾಚಾರವನ್ನು ಗಂಭೀರವಾಗಿ ಪರಿಗಣಿಸುತ್ತದೆ. ಅನಾದಿಕಾಲದಿಂದಲೂ ಈ ಜಾತಿ ರಾಜಕೀಯದಿಂದಲೇ ಕಾಂಗ್ರೆಸ್ ಅಧ್ಯಕ್ಷರು ಮಾತ್ರವಲ್ಲ ಶಾಸಕರನ್ನೂ ಆಯ್ಕೆ ಮಾಡಿರುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.


ಕಳೆದ ಬಾರಿ ಬ್ರಾಹ್ಮಣ ಸಮುದಾಯದ ದೇಶಪಾಂಡೆ ಮತ್ತು ಒಕ್ಕಲಿಗ ಸಮುದಾಯದ ಡಿಕೆಶಿ ಇವರಿಬ್ಬರನ್ನು ತಮ್ಮದೇ ರಾಜಕೀಯ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಕಾಂಗ್ರೆ ಹೈಕಮಾಂಡ್ ಆಯ್ಕೆ ಮಾಡಿತ್ತು. ಆದರೆ ಆ ಲೆಕ್ಕಾಚಾರ ಯಾವುದೇ ರೀತಿಯಲ್ಲೂ ಫಲಿಸಲಿಲ್ಲವೆಂಬುದು ಇತ್ತೀಚಿನ ಎಲ್ಲಾ ಚುನಾವಣೆಗಳಲ್ಲೂ ಕಾಂಗ್ರೆ ಅಭ್ಯರ್ಥಿಗಳು ಸೋತಾಗಲೇ ಹೈಕಮಾಂಡ್ ಗೊತ್ತಾಗಿದ್ದು. ಈ ಕಾರಣದಿಂದ ಮತ್ತೆ ಅದೇ ಬ್ರಾಹ್ಮಣ ಮತ್ತು ಒಕ್ಕಲಿಗ ಸಮುದಾಯದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ದುಸ್ಸಾಹಸಕ್ಕಂತೂ ಕಾಂಗ್ರೆ ಹೈಕಮಾಂಡ್ ಖಂಡಿತವಾಗಿಯೂ ಕೈ ಹಾಕುವುದಿಲ್ಲ.

ಈ ಕಾರಣದಿಂದಲೇ ರಾಜಕೀಯವಾಗಿ ಅತ್ಯಂತ ಪ್ರಭಾವಿ ಸಮುದಾಯದ ಲಿಂಗಾಯತ ಅಥವಾ ಹಿಂದುಳಿದ ವರ್ಗದ ನಾಯಕರನ್ನು ಕಾಂಗ್ರೆ ಹೈಕಮಾಂಡ್ ಈಗ ಅಧ್ಯಕ್ಷ ಸ್ಥಾನಕ್ಕೆ ಅನಿವಾರ್ಯವಾಗಿ ಆಯ್ಕೆ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಲಿಂಗಾಯತ ನಾಯಕರಾದ ಹೆಚ್.ಕೆ.ಪಾಟೀಲ್ ಮತ್ತು ಪರಿಶಿಷ್ಟ ಜಾತಿಯ ನಾಯಕರಾದ ತುಮಕೂರಿನ ಡಾ.ಜಿ.ಪರಮೇಶ್ವರ್ ಅವರ ಹೆಸರು ಹೆಚ್ಚು ಕೇಳಿಬರುತ್ತಿದೆ. ಈ ಮಧ್ಯೆ ಹಿಂದುಳಿದ ವರ್ಗಗಳ ನಾಯಕ ವಿಶ್ವನಾಥ್ ತಾವೇ ಅರ್ಜಿ ಗುಜರಾಯಿಸಿದರೂ ಕಾಂಗ್ರೆ ಹೈಕಮಾಂಡ್ ಇದನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸಿಲ್ಲ.

ಎಚ್.ಕೆ.ಪಾಟೀಲ್ ಮತ್ತು ಪರಮೇಶ್ವರ್ ಇವರಿಬ್ಬರಲ್ಲಿ ಯಾರು ಅಧ್ಯಕ್ಷ ಗಾದಿಯನ್ನಲಂಕರಿಸಲು ಹೆಚ್ಚು ಸೂಕ್ತರು ಎಂಬ ತುಲನಾತ್ಮಕ ಚರ್ಚೆ ದೆಹಲಿಯಲ್ಲಿ ಈಗಾಗಲೇ ಆರಂಭವಾಗಿದೆ. ಕಾಂಗ್ರೆಸ್ ಪಕ್ಷ ಯಾವಾಗ ವಿರೋಧಪಕ್ಷದ ಸ್ಥಾನದಲ್ಲಿತ್ತೋ ಅಂತಹ ಸಂದರ್ಭಗಳಲ್ಲೆಲ್ಲಾ ಕಾಂಗ್ರೆ ಹೈಕಮಾಂಡ್ ಒಂದು ಸೂತ್ರವನ್ನು ಪರಿಪಾಲಿಸಿಕೊಂಡು ಬಂದಿದೆ. ಅದೇನೆಂದರೆ ಆಗಾಗ ಸಮಾವೇಶ, ಪ್ರತಿಭಟನೆ, ಸಭೆ ಸಮಾರಂಭಗಳನ್ನು ಮಾಡಲು ತಾಕತ್ತಿರುವ ಶ್ರೀಮಂತ ವ್ಯಕ್ತಿಯನ್ನೇ ಅಧ್ಯಕ್ಷರನ್ನಾಗಿ ಮಾಡುವುದು ಕಾಂಗ್ರೆ ಸಂಪ್ರದಾಯ. ಅದಕ್ಕೆ ವ್ಯತಿರಿಕ್ತವಾಗಿ ಕಾಂಗ್ರೆಸ್‌ಅಧಿಕಾರದಲ್ಲಿದ್ದಾಗ ಮುಖ್ಯಮಂತ್ರಿಗೆ ಪರ್ಯಾಯ ಶಕ್ತಿಯಾಗಿ ಕೆಲಸ ಮಾಡುವಂತಾಗಬಾರದು ಎಂಬ ಕಾರಣಕ್ಕಾಗಿ 'ಡಮ್ಮಿ' ಅಭ್ಯರ್ಥಿಯನ್ನು ಅಧ್ಯಕ್ಷರನ್ನಾಗಿ ಮಾಡುತ್ತದೆ.

ಈ ಸಂಪ್ರದಾಯದ ಆಧಾರದ ಮೇಲೆಯೇ ಸಾಕಷ್ಟು ಶ್ರೀಮಂತ ಎನಿಸಿಕೊಂಡಿರುವ ದೇಶಪಾಂಡೆ ಮತ್ತು ಡಿಕೆಶಿಯನ್ನು ಕಾಂಗ್ರೆ ಹೈಕಮಾಂಡ್ ಅಧ್ಯಕ್ಷರನ್ನಾಗಿ ಮಾಡಿದ್ದು. ಆದರೆ ದುರದೃಷ್ಟವಶಾತ್ ಇವರಿಬ್ಬರೂ ಒಮ್ಮೆ ಅಧ್ಯಕ್ಷ ಪದವಿಯ ಗದ್ದುಗೆ ಏರಿದ ನಂತರ ತಮ್ಮ ಕಿಸೆಯಿಂದ ಹಣ ಖರ್ಚು ಮಾಡಿ ಸಭೆ-ಸಮಾರಂಭ-ಪ್ರತಿಭಟನೆಗಳನ್ನು ಮಾಡುವ ಗೋಜಿಗೆ ಹೋಗಲಿಲ್ಲ. ಅದರ ಬದಲಿಗೆ ದೇಶಪಾಂಡೆಯವರು ನೆರೆ ಸಂತ್ರಸ್ತರಿಗಾಗಿ ಸಂಗ್ರಹಿಸಿದ್ದ ಹಣವನ್ನು ದುರುಪಯೋಗಪಡಿಸಿ ಪಕ್ಷಕ್ಕೆ ಅಗಾಧವಾದ ಹಾನಿಯನ್ನುಂಟುಮಾಡಿದರು.

ಈ ಹಿಂದೆ ದೇವೇಗೌಡ ಅಧಿಕಾರದಲ್ಲಿದ್ದಾಗ, ಎಸ್.ಎಂ.ಕೃಷ್ಣ ಅಧ್ಯಕ್ಷರಾಗಿ ಪಕ್ಷವನ್ನು ಬೆಳೆಸಿದರು. ಅನಂತರ ಜೆ.ಹೆಚ್.ಪಟೇಲ್ ಮುಖ್ಯಮಂತ್ರಿಯಾದಾಗ ಪಕ್ಷದ ಕಾರ್ಯಕರ್ತರನ್ನು ಸಾಕುವ ಜವಾಬ್ದಾರಿ ಧರಂಸಿಂಗ್ ವಹಿಸಿಕೊಂಡರು. ಇವರಿಬ್ಬರು ಸಂಕಷ್ಟದ ಸಂದರ್ಭದಲ್ಲಿ ತಮ್ಮ ಹಣವನ್ನು ಖರ್ಚುಮಾಡಿ ಪಕ್ಷವನ್ನು ಸಂಘಟಿಸಿದ್ದಕ್ಕಾಗಿ ಮುಂದೆ ಅವರಿಗೆ ಮುಖ್ಯಮಂತ್ರಿ ಪದವಿ ದೊರೆಯಿತು ಎಂಬುದು ಬೇರೆ ವಿಷಯ.



ಅದೇರೀತಿ ಕೃಷ್ಣ ಧರಂಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಶ್ರೀಮಂತ ಅಧ್ಯಕ್ಷರ ಬದಲು ಪಕ್ಷಕ್ಕೆ ನಿಷ್ಠೆ ಹೊಂದಿದ್ದ ಅಲ್ಲಂ ವೀರಭದ್ರಪ್ಪ ಜನಾರ್ದನ ಪೂಜಾರಿ ಮತ್ತು ಮಲ್ಲಿಕಾರ್ಜುನ ಖರ್ಗೆಯವರಂತಹವರನ್ನು ಅಧ್ಯಕ್ಷರನ್ನಾಗಿ ಮಾಡಿ ತನ್ನ ರಾಜಕೀಯ ತಂತ್ರಗಾರಿಕೆಯನ್ನು ಮೆರೆಸಿತ್ತು.

ಈಗ ಅದೇ ಮಾನದಂಡವನ್ನೇ ಮುಂದಿಟ್ಟು ನೋಡಿದರೆ ಎಚ್.ಕೆ.ಪಾಟೀಲ್ ಮತ್ತು ಡಾ.ಜಿ.ಪರಮೇಶ್ವರ್ ಇವರಿಬ್ಬರಲ್ಲಿ ಹಲವಾರು ವಿದ್ಯಾಸಂಸ್ಥೆಗಳ ಮಾಲೀಕರಾದ ಪರಮೇಶ್ವರ್ ಅತ್ಯಂತ ಶ್ರೀಮಂತ ವ್ಯಕ್ತಿಯೆಂಬುದರಲ್ಲಿ ಸಂಶಯವಿಲ್ಲ. ಪಕ್ಷ ಸಂಘಟನೆಗಾಗಿ ತಮ್ಮ ಜೇಬಿನಿಂದಲೇ ದಿನನಿತ್ಯ ಹತ್ತಾರು ಲಕ್ಷ ಖರ್ಚುಮಾಡುವ ಶಕ್ತಿಯಿರುವ ಪರಮೇಶ್ವರ್ ಬಗ್ಗೆ ಹೈಕಮಾಂಡ್‌ಗೆ ಹೆಚ್ಚು ಒಲವಿದೆ.

ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ದಿನದಿಂದ ದಿನಕ್ಕೆ ಗಟ್ಟಿಯಾಗುತ್ತಿರುವ ಈ ಸಂದರ್ಭದಲ್ಲಿ ಯಡ್ಡಿಗೆ ಪರ್ಯಾಯವಾಗಿ ಮತ್ತೊಬ್ಬ ಲಿಂಗಾಯತ ನಾಯಕನನ್ನು ಬೆಳೆಸಬೇಕೆಂಬುದು ಕಾಂಗ್ರೆಸ್ ದೊರೆಗಳ ಲೆಕ್ಕಾಚಾರ. ಕಾಂಗ್ರೆ ಅಧ್ಯಕ್ಷ ಸ್ಥಾನವನ್ನು ಲಿಂಗಾಯತರಿಗೆ ಬಿಟ್ಟುಕೊಟ್ಟರೆ ಉತ್ತರ ಕರ್ನಾಟಕದಲ್ಲಿ ಲಿಂಗಾಯತ ಸಮುದಾಯದ ಮೇಲೆ ಬಿಜೆಪಿ ಹೊಂದಿರುವ ಹಿಡಿತವನ್ನು ಮುರಿದಂತಾಗುತ್ತದೆ; ಆ ಮುಖಾಂತರ ಲಿಂಗಾಯತ ಮತಗಳು ಮತ್ತೆ ಮುಂಬರುವ ದಿನಗಳಲ್ಲಿ ಕಾಂಗ್ರೆಸ್ಸಿಗೆ ಸಿಗಬಹುದು ಎಂಬುದು ಒಂದು ಲೆಕ್ಕಾಚಾರ.

ಆದರೆ ದುರದೃಷ್ಟವಶಾತ್ ಪಾಟೀಲರನ್ನು ಉತ್ತರ ಕರ್ನಾಟಕದ ಲಿಂಗಾಯತರು ತಮ್ಮ ನಾಯಕ ಎಂದು ಪರಿಗಣಿಸುವುದೇ ಇಲ್ಲ, ಯಾಕೆಂದರೆ ಅವರು ರೆಡ್ಡಿ ಲಿಂಗಾಯತರು ಎಂಬುದು ಅವರ ದೂರು. ಅಷ್ಟೇ ಅಲ್ಲ, ಸದ್ಯಕ್ಕೆ ಪಕ್ಷವನ್ನು ಮತ್ತೆ ಪುನಶ್ಚೇತನಗೊಳಿಸಲು ಅವರ ಬಳಿ ಹಣವೂ ಇಲ್ಲ ಎಂಬುದು ಅವರ ಪಾಲಿನ ಮೈನಸ್ ಪಾಯಿಂಟ್. ಹಾಗೆ ನೋಡಿದರೆ ಕಾಂಗ್ರೆಸ್‌ನ ಕೋಶಾಧಿಕಾರಿಯಾಗಿ ಅದೆಷ್ಟೋ ವರ್ಷಗಳ ಕಾಲ ಸೇವೆ ಸಲ್ಲಿಸಿದ ದಾವಣಗೆರೆಯ ದಣಿ ಶಾಮನೂರು ಶಿವಶಂಕರಪ್ಪ ಅಥವಾ ಅವರ ಮಗ ಮಲ್ಲಿಕಾರ್ಜುನ್ ಅವರನ್ನು ಕೊನೇ ಕ್ಷಣದಲ್ಲಿ ಹೈಕಮಾಂಡ್ ಪರಿಗಣಿಸಿ ಅಧ್ಯಕ್ಷರಾಗಿ ಕಳುಹಿಸಿದರೂ ಆಶ್ಚರ್ಯ ಪಡಬೇಕಾಗಿಲ್ಲ.

ಒಂದಂತೂ ನಿಜ: ಡಾ.ಜಿ.ಪರಮೇಶ್ವರ್ ಬಗ್ಗೆ ಹೈಕಮಾಂಡ್‌ಗೆ ಒಳ್ಳೆಯ ಅಭಿಪ್ರಾಯವಿದೆ. ವಿದ್ಯಾವಂತ ಮತ್ತು ಶ್ರೀಮಂತ ದಲಿತ ನಾಯಕರಾದ ಪರಮೇಶ್ವರ್‌ಗೆ ಅಧ್ಯಕ್ಷ ಸ್ಥಾನ ನೀಡಿದರೆ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮತಗಳೆಲ್ಲವೂ ಕಾಂಗ್ರೆಸ್‌ನಲ್ಲೇ ಉಳಿಯಬಹುದು ಎಂಬುದು ಅವರ ಲೆಕ್ಕಾಚಾರ. ಆದರೆ ಈಗಾಗಲೇ ಪರಿಶಿಷ್ಟ ಜಾತಿ ಮತ್ತು ವರ್ಗದ ನಾಯಕರುಗಳಾದ ಮಲ್ಲಿಕಾರ್ಜುನ ಖರ್ಗೆ ಮತ್ತು ಹೆಚ್.ಕೆ.ಮುನಿಯಪ್ಪರಿಗೆ ಕೇಂದ್ರ ಮಂತ್ರಿ ಮಂಡಲದಲ್ಲಿ ಸ್ಥಾನ ಕೊಟ್ಟಿರುವುದರಿಂದ ಮತ್ತೆ ರಾಜ್ಯಾಧ್ಯಕ್ಷರ ಸ್ಥಾನವೂ ಅದೇ ವರ್ಗದವರಿಗೆ ಅಗತ್ಯವೇ ಎಂಬ ಮಾತು ಕೇಳಿಬರುತ್ತಿದೆ.

ಈಗಿನ ಅಗತ್ಯ ಏನೆಂದರೆ: ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಆಶ್ಚರ್ಯಕರ ರೀತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮತಗಳು ಭಾರೀ ಪ್ರಮಾಣದಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಬಿದ್ದಿದ್ದರಿಂದ ಆ ಸಾಂಪ್ರದಾಯಿಕ ಮತಗಳನ್ನು ತಮ್ಮಲ್ಲಿ ಉಳಿಸಿಕೊಳ್ಳಲು ಕಾಂಗ್ರೆ ಹೈಕಮಾಂಡ್ ಕಾರ್ಯತಂತ್ರ ರೂಪಿಸಲೇಬೇಕಾಗಿದೆ. ಇತ್ತ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕನಾಗಿ ಹಿಂದುಳಿದ ವರ್ಗಗಳ ನೇತಾರ ಸಿದ್ದರಾಮಯ್ಯ ಮತ್ತು ವಿಧಾನಪರಿಷತ್‌ನಲ್ಲಿ ಪರಿಶಿಷ್ಟ ಜಾತಿಗಳ ನಾಯಕಿ ಮೋಟಮ್ಮನವರು ಕಾರ್ಯನಿರ್ವಹಿಸುತ್ತಿರುವುದು ಪರಮೇಶ್ವರ್ ಪಾಲಿಗೆ ತೊಡಕಾಗಿ ಕಾಣಿಸಿದರೂ ಹೈಕಮಾಂಡ್ ಅಂತಿಮವಾಗಿ ಪರಮೇಶ್ವರ್‌ಗೆ ಗ್ರೀನ್‌ಸಿಗ್ನಲ್ ಕೊಡುವ ಲಕ್ಷಣಗಳು ಕಾಣಿಸುತ್ತಿವೆ.

ಹಾಗೆ ನೋಡಿದರೆ ಪರಮೇಶ್ವರ್ ಆಗಲಿ, ಎಚ್.ಕೆ. ಪಾಟೀಲ್ ಆಗಲಿ ಸಮಸ್ತ ಕರ್ನಾಟಕದ ಜನತೆ ಇಷ್ಟಪಡುವ ಜನನಾಯಕರಲ್ಲ. ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ ಕಾಂಗ್ರೆಸ್ ಪಕ್ಷಕ್ಕೆ ರಾಜ್ಯದಲ್ಲಿ ಒಬ್ಬ ಮಾಸ್ ಲೀಡರ್ ದೊರಕುತ್ತಿಲ್ಲವೆಂಬುದು ಬೇಸರದ ವಿಷಯ. ಸದ್ಯಕ್ಕೆ ಕಾಂಗ್ರೆ ಪಕ್ಷದಲ್ಲಿರುವ ಜನನಾಯಕನೆಂದರೆ ಸಿದ್ದರಾಮಯ್ಯ ಮಾತ್ರ. ಆದರೆ ಯಾವುದೇ ಕಾರಣಕ್ಕೆ ಈ ಸಂದರ್ಭದಲ್ಲಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವ ರಿಸ್ಕ್‌ಅನ್ನು ಸಿದ್ದಣ್ಣ ತೆಗೆದುಕೊಳ್ಳದ ಕಾರಣ ಹೈಕಮಾಂಡ್ ಪರ್ಯಾಯ ನಾಯಕನ ಶೋಧ ನಡೆಸುತ್ತಿದೆ.

ದಿನದಿಂದ ದಿನಕ್ಕೆ ಆರ್ಭಟಿಸುತ್ತಿರುವ ಮತ್ತು ಸಭೆ ಸಮಾರಂಭಗಳಲ್ಲಿ ಮೊಸಳೆ ಕಣ್ಣೀರನ್ನು ಸುರಿಸುತ್ತಿರುವ ಯಡ್ಡಿಯನ್ನು ಕಟ್ಟಿಹಾಕಲು ಮತ್ತು ಆಗಾಗ್ಗೆ ಶತ್ರು ರೂಪದಲ್ಲಿ ಕಾಂಗ್ರೆಯನ್ನು ಕಾಡುವ ದೇವೇಗೌಡರನ್ನು ಸಮರ್ಥವಾಗಿ ಎದುರಿಸಲು ಯಾವ ನಾಯಕನನ್ನು ಕಾಂಗ್ರೆ ಹೈಕಮಾಂಡ್ ಆಯ್ಕೆ ಮಾಡುತ್ತದೆ ಎಂಬುದು ನಿಜಕ್ಕೂ ಕುತೂಹಲಕಾರಿಯಾದ ವಿಷಯ. ಇದು ಕಾಂಗ್ರೆ ಹೈಕಮಾಂಡ್ ಪಾಲಿಗೆ ಮಾಡು ಇಲ್ಲವೇ ಮಡಿ ಎಂಬಂತಾಗಿದೆ ಎಂಬುದು ಸತ್ಯದ ಮಾತು.

• ಸದಾಶಿವ ಶೆಣೈ

...ಬ್ದಾರಿಯುತ ಹುದ್ದೆಯಲ್ಲಿದ್ದವರು ಸಂತೋಷ್ ಹೆಗ್ಡೆ. ಆವರನ್ನ ಇಲ್ಲಿನ ...ವಂತರು ಭ್ರಷ್ಟವ್ಯವಸ್ಥೆಯಿಂದ ಬೇರ್ಪಡಿಸಿ ಸದಾ ತಮ್ಮ ವಲಯದಲ್ಲಿಟ್ಟು ...ದು ಸಂತಸಪಡುವಂಥವರು. ಈಗ ವಿರುದ್ಧ ವಲಯದ ವ್ಯಕ್ತಿಯೊಬ್ಬರ ...ಗೆ ಮಣಿದು ರಾಜೀನಾಮೆ ವಾಪಾಸ್ ಪಡೆಯುವಂಥ ನಿರ್ಧಾರ ಹೆಗ್ಡೆಯವರ ...ಂದ ಪ್ರಕಟಗೊಂಡಿದ್ದೇ ಇಂದಿನ ತಲ್ಲಣಗಳಿಗೆ ಪ್ರಮುಖ ಕಾರಣ.

...ಅಯ್ತು, ಅಡ್ವಾಣಿಯ ಮಾತಿನ ಹೊರತಾಗಿ ಸರ್ಕಾರದ ಕಡೆಯಿಂದ ..., ಸಮಾಜದಲ್ಲೇ ಆಗಲಿ ರಾಜೀನಾಮೆ ವಾಪಾಸ್ ಪಡೆಯಲು ...ಕವಾದಂತಹುದೇನಾದರೂ ಇದೆಯಾ ಅಂತ ನೋಡಹೋದರೆ ...ನಿರಸನದ ಹೊರತಾಗಿ ಬೇರೇನೂ ಸಿಗಲು ಸಾಧ್ಯವಿಲ್ಲ. ಹೆಗ್ಡೆಯವರ ...ರಿಗೆ ಕಾರಣವಾದ ಎಲ್ಲಾ ಅಂಶಗಳೂ ಹಾಗಾಗೇ ಇದ್ದಾವೆ. ಅದೇ ...ಮುಂಚೆ ಮುಖ್ಯಮಂತ್ರಿ ಯಡಿಯೂರಪ್ಪ ಅದೇ ಗಣಿಗಳ್ಳ ಸಚಿವರುಗಳು. ...ಸರ್ಕಾರದ ಕಡೆಯಿಂದ ದೊರೆತಿರುವ ತಗಡು ಭರವಸೆಗಳೇ ಹೆಗ್ಡೆಯವರಿಗೆ ... ಅನ್ನಿಸಿದ್ದರೆ, ಆದರ ಬಗೆಗೂ ಒಂದು 'ಭರವಸೆ' ಮೂಡಿದ್ದರೆ ಅದಕ್ಕಿಂತ ...ತ ಮತ್ತೊಂದಿಲ್ಲ!

...ಹೆಗ್ಡೆಯವರು ರಾಜೀನಾಮೆ ನೀಡಲು ಪ್ರಮುಖವಾಗಿ ಪರಿಗಣಿಸಿದ್ದು ...ಟಕದಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವ ಗಣಿ ಮಾಫಿಯಾವನ್ನು, ಇವರ ...ತೆ ಸಹಜವಾದುದಾದರೆ, ಇವರ ಮುಂದಿನ ನಡಿಗೆ ಮಾಫಿಯಾವನ್ನು ...ಪತ್ತಲೇ ಮುಂದುವರೆಯಬೇಕಿದೆ. ಮುಖ್ಯಮಂತ್ರಿ ಯಡಿಯೂರಪ್ಪನೇ ಗಣಿಕಳ್ಳ ರೆಡ್ಡಿಗಳ ಪದತಲದಲ್ಲಿ ಉಳ್ಳಾಡುತ್ತಿರುವ ಈ ಸಂದರ್ಭದಲ್ಲಿ ಅದು ಸಾಧ್ಯವಿದೆಯೇ? ಒಂದು ವೇಳೆ ಹೆಗ್ಡೆಯವರು ರೆಡ್ಡಿಗಳ ಜುಟ್ಟು ಹಿಡಿದರೆಂದಿಟ್ಟುಕೊಳ್ಳಿ, ಆಗ ಇದೇ ಅಡ್ವಾಣಿಯ 'ಪಿತೃ ಸಮಾನ' ಪ್ರಜ್ಞೆ ಹೆಗ್ಡೆಯವರ ಕೈಹಿಡಿಯುತ್ತದೆ ಎಂಬುದಕ್ಕೆ ಗ್ಯಾರಂಟಿಯೇನಿದೆ?

ಇನ್ನೂ ಕೆಲ ಮಂದಿ ಅವಕಾಶವಾದಿಗಳು 'ಸಂತೋಷ್ ಹೆಗ್ಡೆಯವರು ಅಡ್ವಾಣಿಯ ಮಾತು ಕೇಳಿದ್ದರಲ್ಲಿ ತಪ್ಪೇನಿದೆ. ಅವರೂ ಸಹ ತುರ್ತು ಪರಿಸ್ಥಿತಿ ವಿರೋಧಿಸಿದ ದೇಶಭಕ್ತನಲ್ಲವೇ' ಅಂತೆಲ್ಲ ಕೆರೆದು ಸಂತಸಪಡುತ್ತಿವೆ. ಹೌದು, ಅಡ್ವಾಣಿ ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ ಮನುಷ್ಯನೂ ಹೌದು, ಬಾಬ್ರಿ ಮಸೀದಿ ದುರಂತ ಹಾಗೂ ಅದರ ನಂತರದಲ್ಲಿ ಮನುಷ್ಯತ್ವವನ್ನು ಕೋಮು ಅಮಲಿಗೆ ಅಡವಿಟ್ಟು ಅದರ ಎದೆಯಲ್ಲೇ ರಾಜಕೀಯ ನಡೆಸಿದ ರಕ್ಕಸನೂ ಹೌದು! ಈ ವಿಚಾರ ಈ ಅರೆಕಾಲಿಕ ಕ್ರಾಂತಿಕಾರಿಗಳಿಗೆ ಅರ್ಥವಾಗಬೇಕಿದೆಯಷ್ಟೇ.

ಇಲ್ಲಿನ ಜನರು ವೆಂಕಟಾಚಲಯ್ಯನಂಥ 'ಶೋ ಮ್ಯಾನ್'ಗಳನ್ನು ಕಂಡಿದ್ದರೂ ಸಹ ಸಂತೋಷ್ ಹೆಗ್ಡೆಯವರ ಕಾರ್ಯವೈಖರಿಯ ಬಗ್ಗೆ ತುಸುವೂ ಗುಮಾನಿ ತೋರಿಸಿರಲಿಲ್ಲ. ಆದರೀಗ ಸಂತೋಷ್ ಹೆಗ್ಡೆಯವರೇ ತಮ್ಮ ಸುತ್ತ ಗುಮಾನಿಯ ಕಣ್ಣಾವಲಿಗೆ ಚಾಲನೆ ದೊರಕಿಸಿಕೊಂಡಿದ್ದಾರೆ. ಯಾಕೆಂದರೆ ಈ ಜನರು ಒಬ್ಬ ರಾಜಕಾರಣಿಯ ಮಾತಿನ ಮುಲಾಜಿಗೆ ಸಂತೋಷ್ ಹೆಗ್ಡೆ ಪಕ್ಕಾಗಿರುವುದನ್ನು ಸುತಾರಾಂ ಒಪ್ಪುತ್ತಿಲ್ಲ, ಅದು ಒಪ್ಪುವಂತಹುದೂ ಅಲ್ಲ.

ಕೌಟುಂಬಿಕವಾಗಿ, ವೈಯಕ್ತಿಕವಾಗಿ ಸಂತೋಷ್ ಹೆಗ್ಡೆಯಂಥವರು ರಾಜಕಾರಣಿಗಳ ಒಡನಾಟವಿಟ್ಟುಕೊಂಡಿದ್ದರೂ ಸಾರ್ವಜನಿಕ ನಿರ್ಧಾರ ತೆಗೆದುಕೊಳ್ಳುವಾಗ ಅವುಗಳಿಂದ ತಪ್ಪಿಸಿಕೊಳ್ಳಬೇಕಾದದ್ದು ಪ್ರಜ್ಞೆ ಜಾಗೃತವಾಗಿರುವ ಕುರುಹಾಗಿ ಗೋಚರಿಸುತ್ತದೆ. ಆದರೆ ವೃತ್ತಿ ಜೀವನದಲ್ಲಿ ಅತ್ಯಂತ ಪ್ರಾಮಾಣಿಕವಾಗಿರುವ ಸಂತೋಷ್ ಹೆಗ್ಡೆಯವರು ಈ ವಿಚಾರದಲ್ಲಿ ದಯನೀಯವಾಗಿ ಎಡವಿದ್ದಾರೆ. ಇದೊಂದೇ ಒಂದು ಯಡವಟ್ಟಿನಿಂದಾಗಿ ಜನರ ಆದರಗಳನ್ನೆಲ್ಲಾ ಕೈಯಾರ ಕೆಡವಿಕೊಂಡಿದ್ದಾರೆ. ಆದರೀಗ ತನ್ನೆಡೆಗೆ ತಿರುಗಿಕೊಂಡಿರುವ ಗುಮಾನಿಗಳಿಗೆಲ್ಲ ಕೆಲಸದ ಮೂಲಕವೇ ಸೆಡ್ಡು ಹೊಡೆಯ ಬೇಕಾದ ಅನಿವಾರ್ಯತೆ ಹೆಗ್ಡೆಯವರ ಮುಂದಿದೆ. ಯಾಕೆಂದರೆ ಅವರಿಗೆ ಸುತ್ತಿಕೊಂಡಿರುವ ಗುಮಾನಿಗಳು ಕೇವಲ ತಪ್ಪೊಪ್ಪಿಗೆಯಿಂದ ಪರಿಹಾರವಾಗುವಂಥವಲ್ಲ. ಆದ ತಪ್ಪಿಗೆ ಕ್ಷಮೆಕೋರುವ ದೊಡ್ಡತನವನ್ನು ಹೆಗ್ಡೆಯವರು ತೋರಿಸಿದ್ದಾರೆ. ಆದರೆ ಇಂಥಾ ಜವಾಬ್ದಾರಿಯುತ ಸ್ಥಾನದಲ್ಲಿರುವವರಿಗೂ ಯಾಕೆ ಆ ಕ್ಷಣದಲ್ಲದು ತಪ್ಪು ಅನ್ನಿಸಲಿಲ್ಲವೆಂಬ ಪ್ರಶ್ನೆ ಪ್ರಮುಖವಾಗುತ್ತದೆ.

ಹೆಗ್ಡೆಯವರಿಗೆ ಸರ್ಕಾರದೆಡೆಗಿದ್ದ ಬ್ರಹ್ಮಾಂಡ ಅಸಹನೆಯೆಲ್ಲ ಅಡ್ವಾಣಿಯ ಮಾತೊಂದಕ್ಕೆ ಕರಗುತ್ತವೆಯೆಂದರೆ, ಈ ನೆಲದ ಜನಸಾಮಾನ್ಯರ ಮನದಿಂಗಿತಕ್ಕಿಂತ ಅದುವೇ ಮೇಲಾಗುತ್ತದೆಂದರೆ ಇಲ್ಲಿ ಯಾರನ್ನು ನಂಬಬೇಕೋ ತಿಳಿಯುತ್ತಿಲ್ಲ.

ಇದು ಸರಿಯೇ ಸಂತೋಷ್ ಹೆಗ್ಡೆಯವರೆ?

• ಸಂತೋಷ್ ಬಾಗಿಲಗದ್ದೆ

ಮನುವಾದಿಗಳ ಹಿಂದುಳಿದ ಸ್ವಾಭಿಮಾನಿ ಪ್ರಹಸನ!

ಇದು ವಿಕಟ ವ್ಯಂಗ್ಯವೋ? ತಮಾಷೆಯೋ? ಹಿಂದುಳಿದವರ ಸ್ವಾಭಿಮಾನವನ್ನು ಆದಿಗಡಿಗೆ ಹತ್ತಿಕ್ಕುತ್ತಲೇ ಬಂದಿರುವ ಬಿಜೆಪಿ ಬೆಂಗಳೂರಲ್ಲಿ ಮೊನ್ನೆ ಹಿಂದುಳಿದ ವರ್ಗಗಳ ಸ್ವಾಭಿಮಾನಿ ಸಮಾವೇಶ ಎಂಬ ಪ್ರಹಸನ ನಡೆಸಿದೆ! ಗಣಿ ಮಾಫಿಯಾದ ದುಡ್ಡಿಂದ ಬಸ್‌ಗಟ್ಟಲೆ ಜನರನ್ನು ತುಂಬಿ ತಂದಿದ್ದ ಮೇಲ್ವರ್ಗದ ಚೆಡ್ಡಿ ಗ್ಯಾಂಗು, ಮೇಲ್ವರ್ಗದ ಗಡ್ಕರಿ-ಯಡ್ಡಿ-ಅನಂತಕುಮಾರಾದಿಗಳು ವಿಜೃಂಭಿಸುವ ನಾಟಕ ಭರ್ಜರಿಯಾಗಿ ಮಾಡಿಮುಗಿಸಿದೆ!!

ಇದ್ದಕ್ಕಿದ್ದಂತೆ ಈ ಮನುವಾದಿಗಳಿಗೆ ಹಿಂದುಳಿದವರ ಮೇಲೆ ಪ್ರೀತಿ-ಕಾಳಜಿ ಉಕ್ಕಿ ಬರಲು ಕಾರಣವಾದರೂ ಏನು? ಹಿಂದುಳಿದವರ ಹಿತವೆಂದೂ ಬಯಸದ ಸಂಘಪರಿವಾರದ ಸರದಾರರು ಬ್ಯಾಕ್‌ವರ್ಡ್ ಕ್ಲಾಸ್ ಸಮಾವೇಶ ನಡೆಸುತ್ತಾರೆಂದರೆ, ಅದೇನೋ ಸಂಚು ಎಂಬ ಸಂಶಯ ಕಾಡದೇ ಇರದು. ಪುರೋಹಿತಶಾಹಿ ಬಿಜೆಪಿ ಭೂಪರು ಹಿಂದುಳಿದವರನ್ನು ಒಂದೆಡೆ ಸೇರಿಸಿ ಅವರ ಮೂಗಿಗೆ ತುಪ್ಪ ಸವರುತ್ತಾರೆಂದರೆ, ಅದರ ಹಿಂದೆ ಅನಾಹುತಕಾರಿ ಹಿಡನ್ ಅಜೆಂಡಾಗಳಿವೆ ಎಂದೇ ಅರ್ಥ!

ಮೊನ್ನೆ ಬಿಜೆಪಿ ಹಿಂದುಳಿದವರ ಸಮಾವೇಶ ಎರಡು ದೂ(ದು)ರಾಲೋಚನೆಗಳ ಪುರೋಹಿತಶಾಹಿ ಸ್ಕೆಚ್ ಅಷ್ಟೆ! ಒಂದು ತಮ್ಮ ಘೋಷಿತ ಶತ್ರುಗಳ ವಿರುದ್ಧ ಹಿಂದುಳಿದವರನ್ನು ಎತ್ತಿಕಟ್ಟಿ ಪುಷ್ಕಳ ಲಾಭ ಎತ್ತುವುದು; ಇನ್ನೊಂದು ಶರವೇಗದಲ್ಲಿ ಬರುತ್ತಿರುವ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಯಲ್ಲಿ ಹಿಂದುಳಿದವರ ಓಟ್ ಬ್ಯಾಂಕ್ ದೋಚುವುದು. ಈ ಎರಡು ಪೊಲಿಟಿಕಲ್ ಮೈಲೇಜ್ ಜೊತೆಗೇ ಬಿಜೆಪಿಯ ಶಿವದಾರ-ಜನಿವಾರಗಳು ಮೀಸಲಾತಿ ಬಗೆಗಿನ ನ್ಯಾ.ರಂಗನಾಥ ಮಿಶ್ರ ಆಯೋಗದ ವರದಿಯನ್ನು ಅಸ್ತ್ರ ಮಾಡಿಕೊಂಡು ಹಿಂದುಳಿದವರ ದಿಕ್ಕು ತಪ್ಪಿಸುವ ಸಮಾವೇಶ ಹಮ್ಮಿಕೊಂಡಿದ್ದರು.

ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿದೆ ನಿಜ. ಹಾಗಂತ ಹಿಂದುಳಿದವರ್ಗದವರು ಈ ಗರ್ಭಗುಡಿ ಸಂಸ್ಕೃತಿಯ ಪಕ್ಷವನ್ನು ನಂಬುತ್ತಿಲ್ಲ. ಚೆಡ್ಡಿ ಪರಿವಾರ ಅದೆಷ್ಟೇ ಸರ್ಕಸ್ ಮಾಡಿದರೂ ಹಿಂದುಳಿದವರ ವಿಶ್ವಾಸ ಗಳಿಸಲಾಗುತ್ತಿಲ್ಲ. ಈ ಹಿಂದುಳಿದ ವರ್ಗಗಳವರು ಕಾಂಗ್ರೆಸ್-ಜೆಡಿಎಸ್ ಪರವಾಗಿಲ್ಲ ಎನ್ನುತ್ತವೆಯೇ ಹೊರತು ಬಿಜೆಪಿಯ ಬೂಟಾಟಿಕೆಗೆ ಮರಳಾಗುತ್ತಿಲ್ಲ. ಇದು ಯಡ್ಡಿಯ ಚೆಡ್ಡಿ ತಂಡಕ್ಕೆ ತಳಮಳ ಮೂಡಿಸಿದೆ. ಹೇಗಾದರೂ ಮಾಡಿ ಈ ಬಾರಿಯ ಜಿ.ಪಂ.-ತಾ.ಪಂ. ಎಲೆಕ್ಷನ್‌ನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ನ ಮತವನ್ನು ದಂಡಿಯಾಗಿ ಬಾಚಬೇಕೆಂಬುದು ಲಿಂಗಾಯತ ಪಾಳೇಗಾರ ಯಡ್ಡಿಯ ಹಂಬಲ. ಅದಕ್ಕಾಗಿಯೇ ಚೆಡ್ಡಿ ಬಳಗ ರಂಗನಾಥ ಮಿಶ್ರ ಆಯೋಗದ ವರದಿ ಸಾಬರ ಪರ; ಹಿಂದುಳಿದವರ ವಿರೋಧಿ ಎಂಬ ಹುಯಿಲೆಬ್ಬಿಸಹತ್ತಿದೆ.

ಕೇಂದ್ರ ಸರ್ಕಾರ ನ್ಯಾ.ಮಿಶ್ರ ವರದಿ ಜಾರಿಗೊಳಿಸಿದರೆ, ದಲಿತರ, ಹಿಂದುಳಿದವರ ಮೀಸಲು ಅವಕಾಶ-ಸವಲತ್ತುಗಳೆಲ್ಲ ಮುಸ್ಲಿಮರ ಪಾಲಾಗುತ್ತದೆಂಬ 'ವಿಷ' ಅರಮನೆ ಆವರಣಕ್ಕೆ ಕರೆತಂದಿದ್ದ ಅಮಾಯಕರಿಗೆ ಪ್ರಾಶನ ಮಾಡಿದ್ದಾರೆ ಬಿಜೆಪಿಯ ವರ್ಣಾಶ್ರಮ ಪದ್ಧತಿಯ ಪ್ರತಿಪಾದಕರು!! ಅಲ್ಲಿಗೆ, ಅಲ್ಪಸಂಖ್ಯಾತರ ವಿರುದ್ಧ ಮುಗ್ಧ ಹಿಂದುಳಿದವರನ್ನು ಎತ್ತಿಕಟ್ಟಿ ಬೇಳೆಬೇಯಿಸಿಕೊಳ್ಳುವ ಕ್ಷುದ್ರ ರಾಜಕೀಯದ ಕಿತಾಪತಿ ಕಹಳೆ ಈ ವೈದಿಕವಾದಿ ಚೆಡ್ಡಿ ಚತುರರು ಊದಿದಂತಾಗಿದೆ! ಇದು ಬಿಜೆಪಿಯ ಮೇಲ್ವರ್ಗದವರ ಜನ್ಮಕ್ಕಂಟಿದ ಒಡೆದಾಳುವ ಕರ್ಮ!! ಬಿಜೆಪಿಗಳ ಬ್ಯಾಕ್‌ವರ್ಡ್ ಸಮಾವೇಶದ ಟ್ರಿಕ್ಕುಗಳೇನಾದರೂ ಕ್ಲಿಕ್ ಆದರೆ ಪರಿಣಾಮ ಭೀಭತ್ಸ-ಘೋರ ಆಗಲಿದೆ!

ಅಷ್ಟಕ್ಕೂ ಪ್ರತಿಗಾಮಿ ಧೋರಣೆಯನ್ನು ಅನೂಚಾನವಾಗಿ ಅನುಸರಿಸಿಕೊಂಡು ಬರುತ್ತಿರುವ ಬಿಜೆಪಿ ಹಿಂದುಳಿದವರನ್ನು ತುಳಿಯುತ್ತ ಆಡಳಿತಾವೇಷದಲ್ಲಿರುವುದು ಎಲ್ಲರಿಗೂ ಗೊತ್ತಿರುವಂಥ ಕಟುವಾಸ್ತವ. ಇಂಥ ನೀತಿ-ನಿಯಮಗಳ ಮೇಲ್ವರ್ಗದ ಪಕ್ಷವೆಂದೇ ಕುಖ್ಯಾತವಾಗಿರುವ ಬಿಜೆಪಿ ಹಿಂದುಳಿದವ ಸ್ವಾಭಿಮಾನ ಬಲಿಕೊಟ್ಟು ಧರ್ಮ ಕಾರಣ ಮಾಡಿದ್ದೇ ಹೆಚ್ಚು. ಹೀಗಿರುವಾಗ ಹಿಂದುಳಿದವರನ್ನು ಗುರಾಣಿಯಂತೆ-ಕಾಲ್ದಳದಂತೆ ಬಳಸಿಕೊಳ್ಳುವ ಸಂಚುಕೋರರ ಬಿಜೆಪಿ ಬ್ಯಾಕ್‌ವರ್ಡ್ ಕ್ಲಾಸ್ ಸಮಾವೇಶ ನಡೆಸಿದ್ದು ಅನರ್ಥಕಾರಿಯೇ ಸರಿ! ಅಷ್ಟೇ ಅನಾಹುತಕಾರಿಯೂ ಹೌದು!

ಬಿಜೆಪಿ ಅಧಿಕಾರ ಪರ್ವದಲ್ಲೂ ಹಿಂದುಳಿದವರಿಗೆ ಅನ್ಯಾಯವೇ ಆಗುತ್ತಿದೆ. ಚೆಡ್ಡಿಗಳು ಅಧಿಕಾರಕ್ಕೇರಿದ ಬಳಿಕ ಈ ವರ್ಗವನ್ನು ಒಂದಿಲ್ಲೊಂದು ಕಾರಣಕ್ಕೆ ಕಡೆಗಣಿಸುತ್ತ-ಮೂಲೆಗೊತ್ತುತ್ತಲೇ ಇದ್ದಾರೆ. ಸಂಘಪರಿವಾರದ-ಮೇಲ್ವರ್ಗದ ಮಹಾಮಹಿಮರ ಇಚ್ಛೆ-ಆದೇಶಕ್ಕನುಗುಣವಾಗಿ ಯಡ್ಡಿ ಆಡಳಿತ ನಡೆಯುತ್ತಿದೆ. ಹಿಂದುಳಿದ ವರ್ಗದ ನಾಯಕರೆಲ್ಲ ಆಟಕ್ಕಷ್ಟೇ. ಮುಂದೇನಾದರೂ ಛಾನ್ಸ್ ಸಿಗಬಹುದೆಂಬ ಹುಂಬತನದಲ್ಲಿ ಎದೆಯುಬ್ಬಿಸಿ ಹುಚ್ಚುಚ್ಚಾಗಿ ಮಾತಾಡುವ 'ಬ್ಯಾಕ್‌ವರ್ಡ್ ಕಿಂಗ್' ಈಶ್ವರಿಯಂಥ ಪೆದ್ದರು ತಮಗರಿವಿಲ್ಲದೆ ಬಿಜೆಪಿಯ ಮೇಲ್ವರ್ಗದ ಸಾಮ್ರಾಜ್ಯದ ಕಾವಲು ಭಟರಂತಾಗಿ ಹೋಗಿದ್ದಾರೆ.

ಹಿಂದುಳಿದ ಸಮುದಾಯಗಳ ಸಂಘಟನೆಗಳ ಮಠ, ದೇವಸ್ಥಾನಗಳಿಗೆ ಬಿಡಿಕಾಸು ಕೊಟ್ಟಿದ್ದನ್ನೇ ದೊಡ್ಡ ಸಾಧನೆಯೆಂದು ಬೋಂಗು ಬಿಡಲಾಗುತ್ತಿದೆಯೇ ಹೊರತು ಹಿಂದುಳಿದವರು ಸ್ವಾಭಿಮಾನದಿಂದ ಬದುಕಲು ನೆರವಾಗುವಂಥ ಕಾರ್ಯಕ್ರಮ-ಯೋಜನೆ-ಯೋಚನೆಯೊಂದನ್ನೂ ಚೆಡ್ಡಿ ಸರ್ಕಾರ ಮಾಡಿಲ್ಲ. ಹಿಂದುಳಿದ ವರ್ಗದವರಿಗೆ ಗೌರವಾನ್ವಿತ ಸ್ಥಾನ-ಮಾನವಾಗಲಿ-ಸೂಕ್ತ ಪ್ರಾತಿನಿಧ್ಯವಾಗಲಿ ಬಿಜೆಪಿ ಸರ್ಕಾರ ಕೊಟ್ಟಿಲ್ಲ. ಯಡ್ಡಿಯ ಸಚಿವ ಸಂಪುಟವನ್ನೇ ತೆಗೆದುಕೊಳ್ಳಿ. ಇಲ್ಲಿ ಹಿಂದುಳಿದ ವರ್ಗಕ್ಕೆ ನ್ಯಾಯವಾಗಿ ಸಿಗಬೇಕಾದಂಥ ಮಾನ-ಮರ್ಯಾದೆ, ಸರಿಯಾದ ಪ್ರಾತಿನಿಧ್ಯ ಸಿಕ್ಕಿದೆಯೇ ಊಹುಂ, ಸಿಕ್ಕಿಲ್ಲ. ಸ್ವಂತಿಕೆ- ಸ್ವಾಭಿಮಾನವನ್ನೆಲ್ಲ ಬ್ರಾಹ್ಮಣ-ಲಿಂಗಾಯತ ನಾಯಕರ ಪದತಲದಲ್ಲಿ ಸುತ್ತಿಟ್ಟಿರುವ ಸ್ವಯಂಘೋಷಿತ ಕುರುಬರ ನಾಯಕ ಕೆ.ಎಸ್.ಈಶ್ವರಪ್ಪ ತಾನಾಗೇ ಸಂಪುಟದಿಂದ ಹೊರಹೋಗುವಂಥ ಸನ್ನಿವೇಶ ನಿರ್ಮಾಣ ಮಾಡಲಾಯ್ತು.

ಮುಂದೊಂದು ದಿನ ಯಡ್ಡಿಗೆ ಟಾಂಗ್ ಕೊಡಬೇಕೆಂದಿದ್ದರೆ ರಾಜ್ಯ ಬಿಜೆಪಿ ಅಧ್ಯಕ್ಷನಾಗುವುದೇ ಲೇಸೆಂದು ಆತನ ತಲೆತುಂಬಿದರು ಬ್ರಾಹ್ಮಣ ಮುಖಂಡರಾದ ಅನಂತಕುಮಾರ್ ಬಳಗದವರು. ಇತ್ತ ಈತ ಸಂಪುಟದಲ್ಲಿದ್ದರೆ ಲಿಂಗಾಯತ ಧುರೀಣ ಯಡ್ಡಿಗೆ ಟಾಂಗ್ ಕೊಡಬಹುದೆಂದು ಲಿಂಗಧಾರಿಗಳು ಎಣಿಸಿದರು. ಪಕ್ಷದ ರಾಜ್ಯಾಧ್ಯಕ್ಷನಾದರೆ ಯಡ್ಡಿ ಮೇಲೆ ಸವಾರಿ ಮಾಡಬಹುದೆಂಬ ಲೆಕ್ಕಾಚಾರ ಎಡವಟ್ಟು ಈಶ್ವರಪ್ಪನದಾಗಿತ್ತು. ಒಟ್ಟಿನಲ್ಲಿ ಹೇಗೋ ಹಿಂದುಳಿದವರ 'ಪ್ರತಿನಿಧಿ' ಈಶ್ವರಪ್ಪನನ್ನು ಉಪಾಯವಾಗಿ ಕ್ಯಾಬಿನೆಟ್‌ನಿಂದ ತೊಲಗಿಸಲಾಯಿತು. ಅದೇರೀತಿ ಹರತಾಳು ಹಾಲಪ್ಪನ ಮೇಲೆ ಅತ್ಯಾಚಾರದ ಕೇಸು ಬಮದಾಗ ತರಾತುರಿಯಲ್ಲಿ ಯಡ್ಡಿ ಆತನನ್ನು ಸಂಪುಟದಿಂದ ಗೇಟ್‌ಔಟ್ ಮಾಡಿದರು.

ಅತ್ಯಾಚಾರದ ಪ್ರಕರಣ ದಾಖಲಾಗುವ ಮೊದಲೇ ಹಾಲಪ್ಪ ಮಂತ್ರಿಗಿರಿ ತೊರೆಯಬೇಕಾಗಿ ಬಂತು. ಆದರೆ ಇಂಥದೇ 'ಅಪರಾಧ' ಮಾಡಿದ್ದ ವೀರಶೈವ ಮಠಾಧೀಶರ ಕಣ್ಮಣಿ ರೇಣುಕಾಚಾರ್ಯನನ್ನು ಸಾರ್ವಜನಿಕ ಅಭಿಪ್ರಾಯವನ್ನೆಲ್ಲ ಬುಲ್ಡೋಜ್ ಮಾಡಿ ಯಡ್ಡಿ ಮಂತ್ರಿ ಮಾಡಿ



ತಮ್ಮ ಸಂಪುಟ ತುಂಬಿಕೊಂಡರು! ಹೊಲಸು ನಾಲಿಗೆ-ನರ್ತನಗಳ ರೇಣುಕನ ಮೇಲೆ ನ್ಯಾಯಾಲಯದಲ್ಲಿ ಪರಸಂಗದ ಕೇಸಿತ್ತು; ಮಹಿಳಾ ಆಯೋಗದಲ್ಲಿ ದೂರಿತ್ತು. ಸಾರ್ವಜನಿಕರಲ್ಲಿ, ಸ್ವತಃ ಬಿಜೆಪಿಯಲ್ಲೇ ಈ ಕೊಳಕನ ಬಗ್ಗೆ ಅಸಹ್ಯ ಆಕ್ರೋಶಗಳಿತ್ತು. ಆದರೂ ಆತನನ್ನು ಮಂತ್ರಿ ಮಾಡಿ ಗೌರವಿಸಿದ ಬಿಜೆಪಿಯ ಮೇಲ್ವರ್ಗದನೆಂಬ ಒಂದೇ ಕಾರಣಕ್ಕೆ ಹಾಲಪ್ಪನನ್ನು 'ಹಪ್ಪಳ' ಮಾಡಿಬಿಟ್ಟರು. ಇದು ರೇಪಿಸ್ಟ್ ಹಾಲಪ್ಪನನ್ನು ಸಮರ್ಥಿಸುವ ಹಠವೇನಲ್ಲ; ಬದಲಿಗೆ ಬಿಜೆಪಿಯಲ್ಲಿ ಮೇಲ್ವರ್ಗದವರಿಗೊಂದು ನೀತಿ-ಹಿಂದುಳಿದವರಿಗೊಂದು ಧೋರಣೆಯ ತಾರತಮ್ಯವನ್ನು ತೋರಿಸಲಿಕ್ಕಷ್ಟೇ ಈ ಹೋಲಿಕೆ!

ಯಡ್ಡಿಯ ಸಚಿವ ಸಂಪುಟದ 32 ಮಂತ್ರಿಗಳಲ್ಲಿ ಬರೋಬ್ಬರಿ 9 ಮಂದಿ ವೀರಶೈವರು. ಇದೇ ಜಾತಿಯ ಸೋಮಣ್ಣನ ಮಂತ್ರಿಮಾಡಲು ಯಡ್ಡಿ ತುದಿಗಾಲಲ್ಲಿದ್ದಾರೆ. ಹಾಗೇನಾದರೂ ಮೇಲ್ವರ್ಗದ ಸೋಮಣ್ಣ ಮಂತ್ರಿಯಾದರೆ ಶೇ.30ರಷ್ಟು ವೀರಶೈವರು ಯಡ್ಡಿಯ ಜಾತಿವಾದಿ ಸಂಪುಟದಲ್ಲಿದ್ದಂತಾಗುತ್ತದೆ! ಈ ಲಿಂಗಾಯತ ಸಚಿವರುಗಳಷ್ಟೇ ಹಿಂದುಳಿದವರ ಬಗ್ಗೆ ಕಾಳಜಿ-ಕಳಕಳಿಯಿರುವ ಬ್ರಾಹ್ಮಣ-ರೆಡ್ಡಿ ಕೋಮಿನ ಸಚಿವರು ಯಡ್ಡಿ ಕ್ಯಾಬಿನೆಟ್‌ನಲ್ಲಿದ್ದಾರೆ. ಇವರೆಲ್ಲರನ್ನು ಕಟ್ಟಿಕೊಂಡು ಆರೆಸ್ಸೆಸ್ ಆಜ್ಞಾನುಧಾರಿ ಯಡ್ಡಿ ಹಿಂದುಳಿದವರ ಉದ್ಧಾರಕ್ಕೆ 'ಪ್ರತಿಜ್ಞೆ' ಮಾಡಿದ್ದಾರೆ. ಇದೊಂದು ಕ್ರೂರ ತಮಾಷೆ!!

ಹಿಂದುಳಿದ ವರ್ಗದ ಕೋಟಾದಲ್ಲಿ ದಕ್ಷಿಣಕನ್ನಡದ ಕೃಷ್ಣಪಾಲೇಮಾರ್, ಉತ್ತರ ಕನ್ನಡದ ಆನಂದ ಅಸ್ನೋಟಿಕರ್‌ನಂಥ ಹೇತ್ಲಾಂಡಿಗಳು ಮಂತ್ರಿಯಾಗಿದ್ದಾರೆ. ಇವರಿಗೆ ಸ್ವಂತ ಊರಾದ ಮಂಗಳೂರು, ಕಾರವಾರ ಬಿಟ್ಟರೆ ರಾಜ್ಯದ ಯಾವ ಜಿಲ್ಲೆಯೂ ಗೊತ್ತಿಲ್ಲ. ಹಿಂದುಳಿದವರ ಕಷ್ಟ-ಸುಖ ತಿಳಿದಿಲ್ಲ. ಚೆಡ್ಡಿ ರಿಂಗ್ ಮಾಸ್ಟರ್‌ಗಳೆದುರು ಉಸಿರೆತ್ತುವ ತಾಕತ್ತಿಲ್ಲ. ಇವರಿಂದ ಹಿಂದುಳಿದವರಿಗೆ ಯಾವ ಪ್ರಯೋಜನವೂ ಇಲ್ಲ. ಬಿಜೆಪಿಯಲ್ಲಿ-ಸರ್ಕಾರದಲ್ಲಿ ಮೂರು ಕಾಸಿನ ಕಿಮ್ಮತ್ತಿಲ್ಲದ ಈ 'ಹಿಂದುಳಿದ' ಮಂತ್ರಿಗಳು ವಿಧಾನಸೌಧಕ್ಕೂ ಬರುವುದಿಲ್ಲ. ಕ್ಯಾಬಿನೆಟ್ ಮೀಟಿಂಗ್‌ಗೂ ಹಾಜರಾಗುವುದಿಲ್ಲ. ವಿಧಾನಮಂಡಲದಲ್ಲಿ ಕಾಣಿಸುವುದಿಲ್ಲ. ಒಟ್ಟಿನಲ್ಲಿ ಬಿಜೆಪಿಯ ದೊರೆಗಳಾದ ಮೇಲ್ವರ್ಗದವರಿಗೆ ಹಿಂದುಳಿದವರಿಗೆ ಎಷ್ಟೆಷ್ಟು ಅವಕಾಶ-ಅನುಕೂಲ ಕಲ್ಪಿಸುದ್ದೇವೆಂದು ಅಂಕಿ-ಅಂಶ ಕೊಡಲಷ್ಟೇ ಈ 'ಹಂಡೆ ಭರ್ತಿ' ಮಂತ್ರಿಗಳು ಬದುಕಿದ್ದಾರೆ, ಪಾಪ!

ನಿಗಮ-ಮಂಡಳಿಗಳಲ್ಲೂ ಹಿಂದುಳಿದೇತರರದೇ ಆರ್ಭಟ! ಅಲ್ಲೊಬ್ಬ-ಇಲ್ಲೊಬ್ಬ ಹಿಂದುಳಿದವರಿಗೆ ಪ್ರಯೋಜನಕ್ಕೆ ಬಾರದ, ಆರೆಸ್ಸೆಸ್ ಗುಲಾಮರಂಥ ಬ್ಯಾಕ್‌ವರ್ಡ್ ಭೂಪನಿಗೆ ನಿಗಮ-ಮಂಡಳಿಯ ಗೂಟದ ಕಾರಿನ ಸೌಭಾಗ್ಯ ಬಿಜೆಪಿ ಸರ್ಕಾರ ಕರುಣಿಸಿದೆ. ಹಿಂದುಳಿದ ಜನಾಂಗಕ್ಕೆ ನಿಗಮ-ಮಂಡಳಿಯಲ್ಲಿ ನ್ಯಾಯೋಚಿತ ಪ್ರಾತಿನಿಧ್ಯ ಕೊಡದಿರುವುದು ಎಲ್ಲರಿಗೂ ಗೊತ್ತಿರುವಂಥದೆ. ಮುಂದೆ ನಿಗಮ-ಮಂಡಳಿಯಲ್ಲಿ ಹಿಂದುಳಿದವರಿಗೆ ಬಿಜೆಪಿಯ ಮೇಲ್ವರ್ಗದ ಮಹಾಮಹಿಮರು ಪರಿಣಿತ ಸ್ಥಾನ ಕೊಡುತ್ತಾರೆಂಬ ನಂಬಿಕೆಯೂ ಯಾರಿಗೂ ಇಲ್ಲ. ಬಿಬಿಎಂಪಿ ಮೇಯರ್‌ಗಿರಿ ವೀರಶೈವನೊಬ್ಬನಿಗೆ ಕೊಡುವ ಕರಾಮತ್ತು ನಡೆದಿತ್ತು. ಸಾರಿಗೆ ಮಂತ್ರಿ ಅಶೋಕ್ ತನ್ನ ನಿಷ್ಠಾವಂತ ಅನುಯಾಯಿಗೆ ಬಿಬಿಎಂಪಿ ಪೀಠ ಕೊಡಿಸುವ ಹಠಕ್ಕೆ ಬಿದ್ದಿದ್ದರಿಂದ 'ಅಚಾನಕ್' ಈ ಸ್ಥಾನ ವೀರಶೈವರಿಗೆ ದಕ್ಕಿಸಿಕೊಳ್ಳಲಾಗಲಿಲ್ಲ. ಯಡ್ಡಿಗೂ ಏನೂ ಮಾಡಲಿಕ್ಕಾಗಲಿಲ್ಲ.

ಇನ್ನು ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿ ಸ್ಥಾನದತ್ತ ಒಂದು ದೃಷ್ಟಿಹರಿಸಿ ನೋಡಿ! 25 ವಿವಿಗಳಲ್ಲಿ ಒಂದೇ ಒಂದು ಕುಲಪತಿ ಕುರ್ಚಿಯನ್ನೂ ಹಿಂದುಳಿದ ವರ್ಗದ ಪ್ರತಿಭಾವಂತರಿಗೆ ಬಿಜೆಪಿ ಸರ್ಕಾರ ಕೊಟ್ಟಿಲ್ಲ. ವೀರಶೈವ ಸಮುದಾಯದವರು ಬರೋಬ್ಬರಿ 15 ವಿವಿಗಳಲ್ಲಿ ಕುಲಪತಿಗಳಾಗಿ ಕಾರುಬಾರು ನಡೆಸಿದ್ದಾರೆ. ಈಗ ಕುಲಪತಿಗಳಾಗಿ ಕಂಗೊಳಿಸುತ್ತಿರುವವರಿಗಿಂತ ಹೆಚ್ಚು ದಕ್ಷತೆ-ಪ್ರಾಮಾಣಿಕತೆ,

---

ಅದಿರು ಲೂಟಿ ಲಫ್ಡಾ: ಸಾರಿಗೆ ಸಚಿವ ಅಶೋಕ್ ಆಮದಾನಿ ಎಷ್ಟು?

ಅಕ್ರಮ ಅದಿರು ಮಾಫಿಯಾದ ಪುರಾಣ ಬರೆದಷ್ಟೂ ಉಕ್ಕುತ್ತದೆ! ಅಲ್ಲಿ ಬಳ್ಳಾರಿಯಲ್ಲಿ ಅದಿರು ಗುಡ್ಡ ಕೆರೆವಲ್ಲಿಂದ, ಇಲ್ಲಿ ಬೇಲೇಕೇರಿಯಲ್ಲಿ ವಿದೇಶಕ್ಕೆ ಅದಿರು ಕಳಿಸುವ ಬಂದರಿನ ವರೆಗಿನ 450 ಕಿ.ಮೀ.ಗಿಂತ ಹೆಚ್ಚಿನುದ್ದಕ್ಕೂ ಕಳ್ಳ ಅದಿರು ಸಾಗಾಣಿಕೆದಾರರು ಸೃಷ್ಟಿಸಿರುವ ಮಾಫಿಯಾ ಜಾಲಗಳು, ಫಿಕ್ಸ್ ಮಾಡಿಕೊಂಡಿರುವ ಪಾಪದ ವರಮಾನ ದಂಧೆಗಳಿಗೆ ಲೆಕ್ಕವೇ ಇಲ್ಲ! ಎಲ್ಲವೂ ಕೋಟಿ-ಲಕ್ಷದ ಲೆಕ್ಕದಲ್ಲೇ ಲೂಟಿ; ಅಸಹಾಯಕರ ಜೀವ ಅನಾಮತ್ತು ನುಂಗಿ ನೊಣೆವ ದಾದಾಗಿರಿ!!

ಬೇಲೇಕೇರಿಯಲ್ಲಿ ಅದಿರು ಕಳ್ಳ ಸಾಗಾಣಿಕೆದಾರರು ಬಂದರು, ಕಂದಾಯ ಇಲಾಖೆಯ ಜಾಗವನ್ನಷ್ಟೇ ಕಬಳಿಸಿಲ್ಲ, ಬಡ ಬೆಸ್ತರು ಮೀನು ಒಣಗಿಸುವ ಪ್ರದೇಶ, ಸ್ಮಶಾನವೂ ಈ ಅದಿರು ರಕ್ಕಸರ ಕಬ್ಜಾ ಆಗಿಹೋಗಿದೆ. ಬೇಲೇಕೇರಿ-ಕಾರವಾರ ಪರಿಸರದ ನೂರಾರು ಮಂದಿ ಅದಿರು ಧೂಳಿಂದ ರೋಗ ಪೀಡಿತರಾಗಿ ಹಾಸಿಗೆ ಹಿಡಿದಿದ್ದಾರೆ; ಕುಡಿಯುವ ನೀರಿಗೂ ಈ ಧೂಳು ಸೇರಿ ವಿಷವಾಗಿದೆ. ಅದಿರು ಎಲ್ಲೆಂದರಲ್ಲಿ ಸಂಗ್ರಹಿಸುವ ರಫ್ತುದಾರರ-ಹ್ಯಾಂಡ್ಲಿಂಗ್ ಏಜೆಂಟರ ಭೂದಾಹದಿಂದ ಪರಿಸರ ಕಾನೂನು, ಮಾನವ ಹಕ್ಕು ಮತ್ತು ಸಿಆರ್‌ಝಡ್ ನಿಯಮಗಳೆಲ್ಲ ಕಾಲುಕಸದಂತಾಗಿ ಹೋಗಿದೆ. ಅದಿರು ಲಾರಿಗಳ ದಟ್ಟನೆ, ದಾರಿಯುದ್ದಕ್ಕೂ ಬೇಕಾಬಿಟ್ಟಿ ನಿಲುಗಡೆಯಿಂದ ಅನಾಹುತ-ಅಪಘಾತವಾಗುವುದನ್ನು ತಪ್ಪಿಸಲೆಂದು ಬೇಲೇಕೇರಿಯಲ್ಲಿ ಲಾರಿ ಪಾರ್ಕಿಂಗ್‌ಗೆ 34 ಎಕರೆ ಜಾಗ ಮೀಸಲಿಡಲಾಗಿತ್ತು. ಈ ಜಾಗವೂ ಸರ್ಕಾರಿ ಮಂದಿಗೆ ಲಂಚ ಕೊಟ್ಟು ಅದಿರು ಮಾಫಿಯಾ ಸ್ವಾಹಾ ಮಾಡಿ ಅಕ್ರಮ ಅದಿರು ಶೇಖರಿಸಿದೆ.


ಕಳ್ಳ ಅದಿರು ಬಳ್ಳಾರಿಯಿಂದ ಬಂದಷ್ಟೇ ವೇಗವಾಗಿ ಬಂದರಿನಿಂದ ವಿದೇಶಕ್ಕೆ ವಿಲೇವಾರಿ ಆಗುವುದಿಲ್ಲ. ಹಾಗಾಗಿ ಈ ಅಕ್ರಮ ಅದಿರು ಸಂಗ್ರಹಕ್ಕೆ ರಫ್ತುದಾರ ರೌಡಿಗಳಿಗೆ ಎಷ್ಟು ಜಾಗ ಸಿದ್ದರೂ ಸಾಕಾಗದು. ಖಾಸಗಿಯವರಿಂದಲೂ ಈ ಮಾಫಿಯಾ ಬಾಡಿಗೆಗೆ ಇಲ್ಲಿ ನೆಲೆ ಹಿಡಿದಿದೆ. ಅಷ್ಟೇ ಅಲ್ಲ, ಬೇಲೇಕೇರಿ ಸಮುದ್ರದ ಮಧ್ಯದಲ್ಲಿರುವ ದೊಡ್ಡದೊಂದು ದ್ವೀಪವನ್ನು ಅದಿರು ಕಳ್ಳಸಾಗಾಣಿಕೆದಾರರು ವಶಪಡಿಸಿಕೊಂಡಿದ್ದಾರೆ. ಬೇಲೇಕೇರಿ ಬಂದರಿಂದ ಒಂದು ಕಿಲೋಮೀಟರ್ ದೂರದಲ್ಲಿರುವ



ಈ ದ್ವೀಪಕ್ಕೊಂದು ಕಲ್ಲು-ಮಣ್ಣಿನ ಸೇತುವೆಯನ್ನೂ ಕಾನೂನುಬಾಹಿರವಾಗಿ ನಿರ್ಮಿಸಿ ಅಲ್ಲಿ ಕಳ್ಳ ಅದಿರು ಸ್ಟಾಕ್ ಮಾಡಲಾಗಿದೆ! ಇಷ್ಟಾದರೂ ಸಂಬಂಧಿಸಿದ ಅಧಿಕಾರಿಗಳು ಕಣ್ಮುಚ್ಚಿ ಕೂತಿದ್ದಾರೆ; ಎಂಜಲು ಕಾಸು ನುಂಗುತ್ತಿದ್ದಾರೆ.

ಅದಿರು ಮಾಫಿಯಾದ "ಟ್ರಾನ್ಸ್‌ಪೋರ್ಟ್ ಜಾಲ"ದ ಕಳ್ಳಾಟದ ಟರ್ನ್‌ಓವರ್ ಪ್ರತಿ ತಿಂಗಳಿಗೆ ಏನಿಲ್ಲವೆಂದರೂ 60-70 ಕೋಟಿ ಮೀರುತ್ತದೆ! ಬಳ್ಳಾರಿ-ಸಂಡೂರು-ಚಿತ್ರದುರ್ಗದಿಂದ ಕಳ್ಳ ಅದಿರು ಹೊತ್ತುಕೊಂಡು ಬೇಲೇಕೇರಿ-ಕಾರವಾರ ಮತ್ತು ಮಂಗಳೂರು ಬಂದರಿನತ್ತ ಬರುವ ಹತ್ತಾರು ಚಕ್ರದ ರಕ್ಕಸ ಲಾರಿಗಳಿಗೆ ಸಾರಿಗೆ-ಪೊಲೀಸ್-ಅರಣ್ಯ ಮತ್ತು ಗಣಿ-ಭೂವಿಜ್ಞಾನ ಇಲಾಖೆ ಪ್ರತ್ಯೇಕ "ಪಾಸ್" ಪದ್ಧತಿ ಜಾರಿಗೆ ತಂದಿದೆ. ಇದು ಶುದ್ಧ ಕಾನೂನುಬಾಹಿರ-ಹಗಲು ದರೋಡೆಯ ಪರವಾನಗಿ; ಪಕ್ಕಾ ಅನಧಿಕೃತ. ಹಾಗಂತ ಬಳ್ಳಾರಿಂದ ಬೇಲೇಕೇರಿ-ಮಂಗಳೂರು ತನಕದ 7-10 ಚೆಕ್‌ಪೋಸ್ಟ್‌ಗಳಲ್ಲಿ ಕುಳಿತಿರುವ ಅರಣ್ಯ, ಪೊಲೀಸ್-ಸಾರಿಗೆ ಮತ್ತು ಗಣಿ ಇಲಾಖೆ ಅಧಿಕಾರಿಗಳ ಪಾಲಿಗೆ ಇದು ಪವಿತ್ರ-ಕಾನೂನುಬದ್ಧ! ಈ ಪಾಸ್ ತೋರಿಸಿದರಷ್ಟೇ ಅಕ್ರಮ ಅದಿರು ಲಾರಿಗಳಿಗೆ ಬಂದರು ಮುಟ್ಟುವ ಯೋಗ! ಇಲ್ಲದಿದ್ದರೆ ವನವಾಸ!!

ಪ್ರತಿ ಅದಿರು ಲಾರಿ ತಿಂಗಳಿಗೆ 6000 ರೂ. ಕೊಟ್ಟರಷ್ಟೇ ಈ ಬಣ್ಣ-ಬಣ್ಣದ ಪಾಸ್ ಕೊಡಲಾಗುತ್ತದೆ. ನಾಲ್ಕು ಇಲಾಖೆಯ ನಾಲ್ಕು ನಮೂನೆಯ ಪರ್ಮಿಟ್‌ಗಳಿವೆ. ಸಾರಿಗೆ ಇಲಾಖೆ ಈಶ್ಯೂ ಮಾಡಿರುವ ಪಾಸಂತೂ ಸದ್ರಿ ಇಲಾಖೆಯ ಮಂತ್ರಿ ಮಹೋದಯರ ನಾಮಬಲದಲ್ಲೇ ಇರುತ್ತದೆ. 6000 ರೂ. ಅಕ್ರಮ ಪರ್ಮಿಟ್ ಫೀನಲ್ಲಿ ಅರ್ಧದಷ್ಟು ಸಾರಿಗೆ ಇಲಾಖೆಗೆ ಇನ್ನರ್ಧ ಉಳಿದ ಮೂರು ಇಲಾಖೆಗೆ ಹಂಚಿಕೆಯಾಗುತ್ತದಂತೆ. ಅದಿರು ಮಾಫಿಯಾದಲ್ಲಿ ಚಲಾವಣೆಯಲ್ಲಿರುವ ಗಂಭೀರ ವರ್ತಮಾನದ ಪ್ರಕಾರ ಸಾರಿಗೆ ಮಂತ್ರಿ ಆರ್. ಅಶೋಕ್ ಸಾಹೇಬರಿಗೆ ಸಾರಿಗೆ ಇಲಾಖಾಧಿಕಾರಿಗಳು ತಮ್ಮ "ಖರ್ಚು-ವೆಚ್ಚ" ಕಳೆದು ಸೀಜನ್‌ನಲ್ಲಿ ಪ್ರತಿ ತಿಂಗಳು ಬರೋಬ್ಬರಿ 25 ಕೋಟಿ "ಅದಿರು ಕಾಣಿಕೆ"ಯನ್ನು ನಿಷ್ಠೆಯಿಂದ ಒಪ್ಪಿಸಿ ಬರುತ್ತಿದ್ದಾರಂತೆ!!



ಪ್ರತಿ ದಿನ ಬೇಲೇಕೇರಿ-ಕಾರವಾರ ಕಡೆ ಸೀಜನ್‌ನಲ್ಲಿ 4000 ಅಕ್ರಮ ಅದಿರು ಲಾರಿಗಳು ಬಂದಿದೆ. ಸರ್ಕಾರ ಅವಕಾಶ ಕೊಟ್ಟಿರುವುದು ಪ್ರತಿ ದಿನ ಬೇಲೇಕೇರಿಗೆ 1000 ಮತ್ತು ಕಾರವಾರಕ್ಕೆ 400 ಒಟ್ಟು 1400 ಲಾರಿಗಷ್ಟೇ ಕಾರವಾರ-ಬೇಲೇಕೇರಿಗೆ ಬರಲು ಅನುಮತಿ. ಆದರೆ ಎಲ್ಲ ಕಾನೂನು-ಕಟ್ಟಳೆ ಕಿತ್ತೆಸೆದು 4000 ಲಾರಿಗಳು ಉತ್ತರ ಕನ್ನಡದ ಬಂದರಿಗೆ ನುಗ್ಗಿ ಬಂದಿವೆ. ಈ ಕಳ್ಳ ಅದಿರು ಸಾಗಾಟದ ಲಾರಿ (4000) ಮತ್ತು ಕಾನೂನುಬಾಹಿರ ಪರ್ಮಿಟ್ ಫೀ (6000 ರೂ) ಭಾಗಿಸಿದರೆ ಎಷ್ಟಾಯ್ತು?

ಅದರಲ್ಲಿ ಅರ್ಧ ಯಡ್ಡಿ ಸರ್ಕಾರದ ಪ್ರಭಾವಿ ಮಂತ್ರಿ ಆರ್. ಅಶೋಕ್‌ರ ಸಾರಿಗೆ ಇಲಾಖೆ ಪಾಲು! ಅದಿರು ಉದ್ಯಮ ವಲಯದಲ್ಲಿ ಹಬ್ಬಿರುವ ಸುದ್ದಿಯಂತೆ ಈ ಸೀಜನ ಒಂದರಲ್ಲೇ ಸಾರಿಗೆ ಸಚಿವರಿಗೆ ಕನಿಷ್ಠವೆಂದರೂ 100-150 ಕೋಟಿ ಕಪ್ಪ ಒಪ್ಪಿಸಲಾಗಿದೆಯಂತೆ. ಈ ಕಾನೂನುಬಾಹಿರ (ಪರ್ಮಿಟ್) ಕತೆ ಸಿಬಿಐಗೆ ಒಪ್ಪಿಸುವ ತಾಕತ್ತು ದೇಶಭಕ್ತ-ರಾಮಾನ ಬಂಟ ಯಡ್ಡಿಗಿದೆಯೆ?

• ನಹುಶ

ಗ್ಗೆ, ಪ್ರತಿಭೆಗಳಿರುವವರು ಹಿಂದುಳಿದ ವರ್ಗದಲ್ಲಿದ್ದಾರೆ. ಇವರನ್ನೆಲ್ಲ ಯಡ್ಡಿಯ ಪುರೋಹಿತಶಾಹಿ ರ್ಕಾರ ಬುದ್ಧಿಪೂರ್ವಕವಾಗೇ ಕಡೆಗಣಿಸಿದೆ. ಇದರ ಹಿಂದೆ ಹಿಂದುಳಿದವರನ್ನು ಮೂಲೆಗುಂಪಾಗಿಸಿ ದ್ದು ಮೇಲ್ವರ್ಗದವರನ್ನು ಮೆರೆಸುವ ವ್ಯವಸ್ಥಿತ ಷಡ್ಯಂತ್ರ ಅಡಗಿದೆ.

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಡಾ.ಸಿ.ಎಸ್. ದ್ವಾರಕನಾಥ್‌ರನ್ನು ಜೆಪಿ ಸರ್ಕಾರದ ಮನುವಾದಿಗಳು ಅವಮಾನಿಸಿದ್ದು-ಕಾಡಿದ್ದು ಇಡೀ ರಾಜ್ಯಕ್ಕೆ ಗೊತ್ತಿದೆ. ಈ ಯೋಗಕ್ಕೆ ಸಿಬ್ಬಂದಿ, ಸೂಕ್ತ ಸ್ಥಾನ-ಮಾನ, ಅಧಿಕಾರಗಳ್ಯಾವುದನ್ನೂ ಯಡ್ಡಿ ಸರ್ಕಾರ ಬೇಕೆಂತಲೇ ಡಲಿಲ್ಲ. ಆಯೋಗಕ್ಕೆ ಸದಸ್ಯರನ್ನು ನೇಮಿಸಿಲ್ಲ. ಹಿಂದುಳಿದವರ ಪರವಿರುವ, ಸೆಕ್ಯುಲರ್ ೋರಣೆಯ ದ್ವಾರಕನಾಥ್ ತಾನಾಗೇ ಆ ಪೀಠತ್ಯಾಗ ಮಾಡಿಹೋಗಲಿ ಎಂಬ ಕಿತಾಪತಿ ಂಘಪರಿವಾರದ ಸರದಾರರದು. ಹಾಗೇ ಆ ಸ್ಥಾನಕ್ಕೆ ತಮಗೆ ಬೇಕಾದವರೊಬ್ಬರ ನೇಮಿಸಿ ೀರಶೈವ ಸಮುದಾಯದ ಕೆಲವು ಉಪಜಾತಿಗಳಿಗೆ ಹಿಂದುಳಿದ ವರ್ಗ 2 ಎದಲ್ಲಿ ಮೀಸಲಾತಿ ಡಿಸುವ ಕರಾಮತ್ತು ಯಡ್ಡಿ ಬಳಗ ನಡೆಸಿದೆ! ಈಗ ಹೇಳಿ, ರಂಗನಾಥ ಮಿಶ್ರಾ ವರದಿ ಪಾಯಕಾರಿಯೋ? ಮುಂದುವರೆದ ವೀರಶೈವರಿಗೆ ಮೀಸಲಾತಿ ಕೊಟ್ಟು ಹಿಂದುಳಿದವರಿಗೆ ಚನೆ ಮಾಡುವುದು ಅಪಾಯಕಾರಿಯೋ?

ಹಿಂದುಳಿದ ವರ್ಗಕ್ಕೆ ಕೆನೆಪದರು

ಆದಾಯ ಮಿತಿ ಸೌಲಭ್ಯ ಒದಗಿಸುವಂತೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಸೂಚನೆ ಡಿತ್ತು. ಇದರಿಂದ ಮೇಲುವರ್ಗದವರಿಗೆ ಅವಕಾಶ ಕಡಿಮೆಯಾಗುತ್ತದೆಂದು ಸಂಘಪರಿವಾರ ವಿಸಿತ್ತು. ಯಾವ ಕಾರಣಕ್ಕೂ ಕೆನೆಪದರು ಮೀಸಲಾತಿ ಜಾರಿಗೆ ತರದಂತೆ ಆರೆಸ್ಸೆಸ್ ಡಾನ್‌ಗಳು ಡ್ಡಿಗೆ ತಾಕೀತು ಮಾಡಿದ್ದರು. ಹಾಗಾಗಿ ಇದನ್ನು ಯಡ್ಡಿ ಸರ್ಕಾರ ಬೇಕೆಂತಲೇ ಕಡೆಗಣಿಸಿತು. ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ನಡೆದಾಗ ಹಾಲಿ ಬಿಜೆಪಿ ರಾಜ್ಯಾಧ್ಯಕ್ಷ ಕಂ ಹಿಂದುಳಿದವರ ಸ್ವಯಂಘೋಷಿತ ನೇತಾರ ಈಶ್ವರಪ್ಪ ಚಡ್ಡಿ ದಣಿಗಳಿಗೆ ಹೆದರಿ ಬಾಯ್ಮುಚ್ಚಿ ಕೂತಿದ್ದರು. ಈ ಗೊಮ್ಮೆ ಕೆನೆಪದರು ಮೀಸಲಾತಿ ಜಾರಿಗೆ ಬಂದಿದ್ದರೆ, ಆದಾಯ ಮಿತಿ 2 ಲಕ್ಷದಿಂದ 4.5 ಕ್ಷಕ್ಕೆ ಏರಿಕೆಯಾಗುತ್ತಿತ್ತು. ಇದರಿಂದ ಒಕ್ಕಲಿಗರು ಸೇರಿದಂತೆ ಹಲವು ಹಿಂದುಳಿದ ಜಾತಿಗಳಿಗೆ ನುಕೂಲವಾಗುತ್ತಿತ್ತು. ಹೀಗೆ ಹಿಂದುಳಿದವರು ಉದ್ಧಾರವಾಗುವುದು, ಮುಂದುವರೆಯುವುದು ಂಘಪರಿವಾರ ಸಹಿಸಲು ಸಾಧ್ಯವೇ? ಸಿಎಂ ಯಡ್ಡಿ ಚೆಡ್ಡಿಗಳ 'ಹಿಂದುಳಿದ ವರ್ಗಗಳ ವಿರೋಧಿ ರ್ಡರ್' ಅಕ್ಷರಶಃ ಪಾಲಿಸುತ್ತಿದ್ದಾರೆ.

ಕೇಂದ್ರ ಸರ್ಕಾರ ಹಿಂದುಳಿದ ವರ್ಗಗಳ ಜಾತಿವಾರು ಜನಗಣತಿಗೆಂದು 21.5ಕೋಟಿ ರೂ. ಜ್ಯಕ್ಕೆ ಕೊಟ್ಟಿದೆ. ಇದರ ಜೊತೆಗೆ ಸಿದ್ದರಾಮಯ್ಯ ಡಿಸಿಎಂ ಆಗಿದ್ದಾಗ ಕೊಟ್ಟಿದ್ದ 2 ಕೋಟಿ ರೂ. ಹ ಸೇರಿದೆ. ವೀರಶೈವ ಕುಲೋದ್ಧಾರಕ ಯಡ್ಡಿ ಸಿಎಂ ಆಗಿ ಎರಡು ವರ್ಷ ಕಳೆದರೂ ಈ 3.5 ಕೋಟಿ ರೂ. ಬಳಸಿ ಹಿಂದುಳಿದವರಿಗೆ ನೆರವಾಗುವ ಮನಸ್ಸು ಮಾಡಿಲ್ಲ! ಹಿಂದುಳಿದವರಿಗೆ ನುಕೂಲವಾದರೆ ಯಡ್ಡಿ ಚೆಡ್ಡಿ ಸರ್ಕಾರದ ಬೆನ್ನು ಮೂಳೆಗಳಿಗೆ ತೊಂದರೆ ತಾನೇ? ಈಗಾಗಲೇ ೀಲು-ದಗಲ್ಬಾಜಿಗಳ ಮೂಲಕ ಹೊಟ್ಟೆ ತುಂಬಿಕೊಂಡಿರುವ ಯಡ್ಡಿ ಮಾತ್ರ ಹಿಂದುಳಿದ ರ್ಗಗಳ ಉದ್ಧಾರಕ್ಕೆ ತಾನು ಕಂಕಣಬದ್ಧನೆಂದು ಹುಸಿ ವೀರಾವೇಷ ಪ್ರದರ್ಶಿಸುತ್ತಿದ್ದಾರೆ. ಹಿಂದುಳಿದ ರ್ಗದವರಿಗೆ ಮೋಸ ಮಾಡುವುದರ ಜೊತೆಜೊತೆಗೆ ಸಿಎಂ ಯಡ್ಡಿ ಆತ್ಮವನ್ನೂ ವಂಚಿಸಿಕೊಳ್ಳು ವುದು ಈ ನಾಡಿನ ದೌರ್ಭಾಗ್ಯವೇ ಸರಿ. ಮೇಲುವರ್ಗದ ಮೋಸಗಾರ ಚೆಡ್ಡಿ ಚತುರರ ಯಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿರುವ ಕರ್ನಾಟಕದ ಘೋರ ದುರಂತವಿದು!!

ಕೊನೆಯಲ್ಲೊಂದು ಜೋಕು. ಮೊನ್ನೆ ಬೆಂಗಳೂರಲ್ಲಿ ಬಿಜೆಪಿಯ ಯಜಮಾನರು ಆಯೋಜಿಸಿದ್ದು ರೀ ಹಿಂದುಳಿದವರ ಸ್ವಾಭಿಮಾನಿ ಸಮಾವೇಶವಾಗಿರಲಿಲ್ಲ. ಅದು ಹಿಂದುಳಿದವರ ಮೇಲೆ ವಾರಿ ಹೊರಟಿರುವ ಮುಂದುವರೆದವರ ಸನ್ಮಾನ ಸಮಾರಂಭವೂ ಆಗಿತ್ತು. ದಪ್ಪ ದಪ್ಪ ಲೆಬಾಳುವ ಹಾರ-ಮೈಸೂರು ಪೇಟಗಳನ್ನು ಬಿಜೆಪಿಯ ಮೇಲ್ವರ್ಗದ ದೊರೆಗಳಿಗೆ ತೊಡಿಸಿ ಡಿ ಹೊಗಳಲಾಯ್ತು. ಹೀಗೆ ಭರ್ಜರಿ ಸನ್ಮಾನ ಮಾಡಿಸಿಕೊಂಡವರು ರಾಷ್ಟ್ರ ಬಿಜೆಪಿ ಅಧ್ಯಕ್ಷ ತಿನ್ ಗಡ್ಕರಿ ಎಂಬ ಚಿತ್ಪಾವನ್ ಬ್ರಾಹ್ಮಣ; ಇನ್ನೊಬ್ಬ ಕರ್ಮಠ ವೀರಶೈವ ಸಿಎಂ ಯಡಿಯೂರ ಪ್ಪಾಜೀ!

ಎರಡು ವರ್ಷಗಳ ಸಾಧನಾ ಸಮಾವೇಶ ಮಾಡಿ ನಗೆಪಾಟಲಿಗೀಡಾಗಿದ್ದ ಸಿಎಂ ಯಡ್ಡಿ ಂದುಳಿದವರ ಹೆಸರಲ್ಲಿ ಹುಚ್ಚು ಸಮಾವೇಶ ಮಾಡಿ ತಮ್ಮ ಅಸಲೀ ಅವತಾರವನ್ನೂ ನಾವರಣ ಮಾಡಿಕೊಂಡಿದ್ದಾರೆ. ಒಟ್ಟಿನಲ್ಲಿ ಬಿಜೆಪಿಗಳ ಈ ಬೋಗಸ್ ಹಿಂದುಳಿದವರ ಸ್ವಾಭಿಮಾನಿ ಮಾವೇಶ ನಾಡಿನ ಹಿಂದುಳಿದವರಿಗೆ ಸಿಎಂ ಯಡ್ಡಿಯ ಚೆಡ್ಡಿ ಗ್ಯಾಂಗ್ ಹಿಂದುಳಿದವರ ಮೊಣ ಗೆ ತುಪ್ಪ ಸವರಿ ದಾರಿ ತಪ್ಪಿಸುತ್ತಿದೆ ಎಂಬ ಸಂದೇಶ ರವಾನಿಸಿದೆ.

• ನಹುಶ

ಗೋಲ್‌ಮಾಲ್!!

ಬೇಲೇಕೇರಿ ಬಂದರಿನಿಂದ 2009-10 ರಲ್ಲಿ ವಿದೇಶಕ್ಕೆ ರಫ್ತಾದದ್ದು ಒಟ್ಟು ಎಷ್ಟು ಲಕ್ಷ ಮೆಟ್ರಿಕ್ ನ್ ಅದಿರು? ಯಾಕೋ ಬೇಲೇಕೇರಿಯಿಂದ ರಫ್ತಾದ ಕಳ್ಳ ಅದಿರಿನ ಲೆಕ್ಕದಲ್ಲಿ ಜಾದೂ ಮಂತ್ರ ಗುತ್ತಿದೆ! ಉತ್ತರ ಕನ್ನಡದ ಜಿಲ್ಲಾಧಿಕಾರಿ ಹೈಕೋರ್ಟಿಗೆ ಕೊಟ್ಟಿರುವ ಅಫಿಡವಿಟ್‌ನಲ್ಲಿ ಮತ್ತು ಸಿಎಂ ಧಾನ ಮಂಡಲದಲ್ಲಿ ಕೊಟ್ಟಿರುವ ಅಂಕಿ-ಅಂಶದಂತೆ ಬೇಲೇಕೇರಿ ಬಂದರಿಂದ 57,17,379 ಟ್ರಿಕ್ ಟನ್ ಅದಿರು ರಫ್ತಾಗಿದೆ! ಇದರಲ್ಲಿ 35ಲಕ್ಷ ಮೆಟ್ರಿಕ್ ಟನ್ ಅದಿರು ಅಕ್ರಮವಾಗಿ ವಿದೇಶಕ್ಕೆ ೋಗಿದೆ ಎನ್ನುತ್ತಿದೆ ಯಡ್ಡಿ ಸರ್ಕಾರ.

ಆದರೆ ಬಂದರು ಇಲಾಖೆ ಈ ವರ್ಷ ಪ್ರಕಟಿಸಿರುವ ತನ್ನ ಸಾಧನೆಯ ವಾರ್ಷಿಕ ರದಿಯಲ್ಲಿ ಬರೋಬ್ಬರಿ 62,35,893 ಮೆಟ್ರಿಕ್ ಟನ್ ಅದಿರು ವಹಿವಾಟಾಗಿದೆ ಬೇಲೇಕೇರಿ ಂದರಿನಲ್ಲಿ ಎಂದು ಟಾಂಟಾಂ ಮಾಡಿಕೊಂಡಿದೆ. ಸರ್ಕಾರದ ಪ್ರಕಾರ 21,85,484 ಮೆಟ್ರಿಕ್ ನ್ ಅದಿರು ಸಾಗಾಣಿಕೆಗಷ್ಟೇ ಅನುಮತಿ ಕೊಡಲಾಗಿತ್ತು. ಅಂದರೆ ಬೇಲೇಕೇರಿಯಿಂದ 0,50,429 ಮೆಟ್ರಿಕ್ ಟನ್ ಅದಿರು ಕಳ್ಳ ಸಾಗಾಣಿಕೆಯಾಗಿದೆ ಎಂದಾಯ್ತಲ್ಲವೇ?

ಅದಿರು ಕಳ್ಳ ಸಾಗಾಣಿಕೆದಾರರನ್ನು ಕಾಪಾಡಲೆಂದೇ ಬಂದರು ಇಲಾಖಾಧಿಕಾರಿಗಳು ಕ್ಷಾತ್ ಸಿಎಂ ಸಾಹೇಬರಿಗೇ ಸುಳ್ಳು ಲೆಕ್ಕ ಕೊಟ್ಟು ದಾರಿ ತಪ್ಪಿಸಿದರೇ ಎಂಬುದೀಗ ಡುತ್ತಿರುವ ಪ್ರಶ್ನೆ. ಲೋಕಾಯುಕ್ತ ತಂಡ ಸೀಜ್ ಮಾಡಿದ್ದ ಅದಿರಿನಲ್ಲಿ ಸುಮಾರು 5 ಲಕ್ಷ ಟ್ರಿಕ್ ಟನ್ ಕಳ್ಳ ಸಾಗಾಣಿಕೆ ಆಗಿದೆಯೆಂದು ಅಂದಾಜಿಸಲಾಗಿದೆ. ಇದು ನಿಖರವೆಂಬ ಕ್ಕಾಚಾರ ಅದಿರು ಕಳ್ಳ ಸಾಗಾಣಿಕೆ ಮಾಡಿರುವ ಅದಾನಿ, ಮಲ್ಲಿಕಾರ್ಜುನ್, ಸಾಲಗಾಂವ್ಕರ್ ಷಪು ಖಳರಿಗೂ ಖಾತ್ರಿಯಾಗಿದೆ. ಬಂದರು ಇಲಾಖೆಯ ಡೈರೆಕ್ಟರ್, ಪೋರ್ಟ್ ಕನ್ಸರ್ವೇಟರ್ ತ್ಯಾದಿಗಳು ಈ ಅದಿರು ಕಳ್ಳ ಸಾಗಾಣಿಕೆದಾರರ ಬಚಾವ್ ಮಾಡುವ ದುರುದ್ದೇಶದಿಂದಲೇ [illegible] 5 ಲಕ್ಷ ಮೆಟ್ರಿಕ್ ಟನ್ ಅದಿರು ಕಡಿಮೆ ತೋರಿಸಿದ್ದಾರಾ? ಈ ೋಲ್‌ಮಾಲ್ ಲೆಕ್ಕಾಚಾರ [illegible]ದರೆ ಬೇಲೇಕೇರಿ ಬಂದರಿನಲ್ಲಿ ಈ ಬಾರಿ ಕಳ್ಳ ಗಾಣಿಯಾಗಿರುವುದು 35 ಲಕ್ಷ ಮೆಟ್ರಿಕ್ ಟನ್ ಅಲ್ಲ, ಬದಲಿಗೆ 40 ಲಕ್ಷ ಮೆಟ್ರಿಕ್ ಟನ್ ಂಬುದು ಖಾತ್ರಿಯಾಗುತ್ತದೆ. ಹಾಗೆಯೇ ಕಳೆದ ವರ್ಷ ಬೇಲೇಕೇರಿಗೆ 50 ಕಾರ್ಗೋ ಡಗುಗಳು ಬಂದು ಅದಿರು ಒಯ್ದಿವೆ. ಆ ವರ್ಷದ ಬಂದರು ಇಲಾಖೆ ಆದಾಯ 117.3 ೋಟಿ ರೂಪಾಯಿ. ಈ ವರ್ಷ 145 ಕಾರ್ಗೋ ಹಡಗು ಬೇಲೇಕೇರಿಯಿಂದ ದಾಖಲೆ ಮಾಣದ ಅದಿರು ಕೊಂಡೊಯ್ದಿವೆ. ಆದರೆ ಆದಾಯ ಮಾತ್ರ 15 ಕೋಟಿ ಮೀರಿಲ್ಲ!! ಅದಿರು ಮಾಫಿಯಾ ಕೈಚಳಕ ಹೇಗ್ಗಿದೆ ನೋಡಿ. ಎಲ್ಲ ಗೋಲ್‌ಮಾಲ್! ಗೋಲ್‌ಮಾಲ್!!



ಬೆಳಗ್ಗೆ ಹಾಲು, ರಾತ್ರಿ ಆಲ್ಕೋಹಾಲು!



ಕೇವಲ ಹಣದ ಆಸೆಗೆ ಬಿದ್ದು ಎಂಥ ಜಾಹೀರಾತುಗಳಲ್ಲಿ ಬೇಕಾದರೂ ಕಾಣಿಸಿಕೊಳ್ಳುವಂಥದ್ದು ದರ್ಶನ್, ಉಪೇಂದ್ರರಂಥ ಹೀರೋಗಳಿಗೆ ಮಾತ್ರ ಸಾಧ್ಯ. ಈ ಹಿಂದೆ ಉಪೇಂದ್ರ ಹಾಲು ಮತ್ತು ಆಲ್ಕೋಹಾಲುಗಳೆರಡಕ್ಕೂ ಏಕಕಾಲಕ್ಕೆ ರೂಪದರ್ಶಿಯಾಗಿದ್ದರು. ಒಂದೆಡೆ ನಂದಿನಿ ಹಾಲಿನ ಜಾಹೀರಾತಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ಉಪ್ಪಿ ಅದೇ ಸಮಯದಲ್ಲಿ ಯುಬಿ ಬಿಯರ್‌ಗೂ ರೂಪದರ್ಶಿಯಾಗಿದ್ದರು. ಅದನ್ನು ನೋಡೆ ಜನ 'ಉಪ್ಪಿಯೆಂದರೆ ಬೆಳಗ್ಗೆ ಹಾಲು, ರಾತ್ರಿ ಆಲ್ಕೋಹಾಲು' ಎಂದು ತಮಾಷೆ ಮಾಡುತ್ತಿದ್ದರು.

ಇನ್ನು ದರ್ಶನ್ ಕೂಡ 'ನಾಕ್ ಔಟ್' ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದರು. ಅದನ್ನು ನೋಡಿ ಆತನ ಬಹಳಷ್ಟು ಆರಾಧಕರು ನಾಕ್ ಔಟ್ ಬಿಯರ್‌ನ ಅಭಿಮಾನಿಗಳು ಕೂಡ ಆಗಿ ಇವತ್ತು ಪೂರ್ತಿ ಪಿವ್ವೋಟ್‌ಗಳಾಗಿದ್ದಾರೆ!

ಹೆಂಡದ ಸಹವಾಸ ಬೇಡ ಅಂದ ಗಣೇಶ್



"ನನಗೆ ಎಷ್ಟೇ ದೊಡ್ಡ ಮೊತ್ತದ ಸಂಭಾವನೆ ಕೊಟ್ಟರೂ ನಾನು ಲಿಕ್ಕರ್ ಜಾಹೀರಾತುಗಳಲ್ಲಿ ನಟಿಸುವುದಿಲ್ಲ" - ಇದು ಗೋಲ್ಡನ್ ಸ್ಟಾರ್ ಗಣೇಶನ ನೇರ ಮಾತುಗಳು. ಇಂದು ಯುವ ಪೀಳಿಗೆಯನ್ನು ಸೆಳೆದಿರುವ ಗಣೇಶ್‌ಗೆ ಗುಂಡಿನ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುವ ಸಾಕಷ್ಟು ಆಫರ್‌ಗಳು ಬಂದಿವೆಯಂತೆ. ಆದರೆ ಗಣೇಶ ಅವನ್ನೆಲ್ಲಾ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಇದಕ್ಕೆ ಗಣೇಶ ಕೊಡುವ ಒಕ್ಕಣೆ ಇದು: "ನನ್ನ ಹೆಚ್ಚಿನ ಅಭಿಮಾನಿಗಳು ಮಹಿಳೆಯರು ಮತ್ತು ಮಕ್ಕಳು. ನನ್ನನ್ನು ಅಷ್ಟೊಂದು ಪ್ರೀತಿಸುವ ನನ್ನ ಅನುಯಾಯಿಗಳ, ಮಕ್ಕಳ ಮುಂದೆ ನಾನು ಕುಡಿತವನ್ನು ವೈಭವೀಕರಿಸುವುದು ನನಗಿಷ್ಟವಿಲ್ಲ"

ಕನಿಷ್ಠ ಗಣೇಶನಿಗಿರುವಷ್ಟು ಕಾಳಜಿ ಉಪೇಂದ್ರ ಮತ್ತು ದರ್ಶನ್‌ಗೆ ಇಲ್ಲವಲ್ಲಾ ಅನ್ನೋದೇ ಸಂಕಟದ ವಿಚಾರ.

'ಗೋಲ್ಡನ್ ಬಾಯ್' ಪುನೀತ್?

ಪುನೀತ್ ರಾಜ್‌ಕುಮಾರ್ ಸದ್ಯ ಕನ್ನಡ ಚಿತ್ರರಂಗದಲ್ಲಿ ನೂರು ದಿನ ಓಡುವ, ಕೋಟ್ಯಾಂತರ ರೂಪಾಯಿ ಗೆಲ್ಲುವ 'ಕುದುರೆ'.

ಪವರ್ ಸ್ಟಾರ್ ಅಪ್ಪು ನಟಿಸಿರುವ ಸಿನಿಮಾ ಕಮರ್ಷಿಯಲ್ಲಾಗಿ ಹಿಟ್ ಆಗಲಿ ಬಿಡಲಿ, ಅವರ ಸಂಭಾವನೆಯಂತೂ ಒಂದೇ ಸಮನೆ ಏರುತ್ತಲೇ ಇದೆ. 'ಪೃಥ್ವಿ' ಚಿತ್ರಕ್ಕೆ ಎರಡು ಕೋಟಿ ಆರು ಲಕ್ಷ ರೂಪಾಯಿ ಪಡೆಯುವ ಮೂಲಕ ಪುನೀತ್ ಕನ್ನಡ ಚಿತ್ರರಂಗದಲ್ಲಿ ಅತಿ ಹೆಚ್ಚು ಸಂಭಾವನೆ ಪಡೆದ ನಟ ಎಂಬ ದಾಖಲೆ ನಿರ್ಮಿಸಿದರು. ಈಗ ಪುನೀತ್‌ಗೆ ಮೂರು ಕೋಟಿ ರೂಪಾಯಿ ಕೊಡಲೂ ನಿರ್ಮಾಪಕರು ಸಿದ್ಧರಿದ್ದಾರೆ.

ಇತ್ತೀಚೆಗೆ 'ಶಿಶಿರ' ಎಂಬ ಚಿತ್ರ ನಿರ್ಮಿಸಿದ್ದ ಮಹದೇವ್ ಎಂಬುವವರು ಮತ್ತು ಆಣಜಿ ನಾಗರಾಜ್ ಕೂಡ ಮೂರೂ ಕಾಲು ಕೋಟಿ ರೊಕ್ಕ ನೀಡಿ ಪುನೀತ್ ಕಾಲ್‌ಶೀಟ್ ಪಡೆಯಲು ಪ್ರಯತ್ನಿಸಿದ್ದರು. ಆದರೆ ಪುನೀತ್‌ರ ಸಹೋದರ ರಾಘವೇಂದ್ರ ರಾಜ್‌ಕುಮಾರ್ ಅವರಿಬ್ಬರಿಗೂ "ಮೊದಲು ಕಥೆ ರೆಡಿ ಮಾಡಿಕೊಂಡು ಬನ್ನಿ. ಸ್ಕ್ರಿಪ್ಟು ಚೆನ್ನಾಗಿದ್ದರೆ ಮಾತ್ರ ಕಾಲ್ ಶೀಟ್ ಕೊಡ್ತೀವಿ" ಎಂದು ಹೇಳಿ ಕಳುಹಿಸಿದ್ದರು.

ಅಂದರೆ ಪುನೀತ್‌ಗಾಗಲಿ, ಅವರ ಸಹೋದರ ರಾಘುಗಾಗಲಿ ಹಣ ಮಾತ್ರ ಮುಖ್ಯವಲ್ಲ, ಆದರ ಜೊತೆಗೆ ಚಿತ್ರದ ಕತೆ ಹೇಗಿದೆ, ಅದು ಮನೆಮಂದಿಯೆಲ್ಲ ಕೂತು ನೋಡುವಂತಹ ಕಥಾಹಂದರ ಹೊಂದಿದೆಯೇ, ಪುನೀತ್ ಮತ್ತು ರಾಜ್‌ಕುಮಾರ್ ಅವರ ವಂಶಕ್ಕೆ ಹೊಂದುವಂತಹ ಚಿತ್ರವಾಗುತ್ತದೆಯೇ ಎಂಬುದೆಲ್ಲ ಹಣಕ್ಕಿಂತಲೂ ಮುಖ್ಯ ಎಂಬುದು ಸ್ಪಷ್ಟವಾಗುತ್ತದೆ. ಹಾಗಿದ್ದರೂ ಯಾಕೆ ಇತ್ತೀಚೆಗೆ ಕೆಲ ಬಂಗಾರದ ಅಂಗಡಿಗಳಿಗೆ, ಅದರಲ್ಲೂ ಸಾಮಾನ್ಯ ಜನರ ಬಂಗಾರವನ್ನು ಅಡವಿಟ್ಟುಕೊಂಡು ಸಾಲ ಕೊಡುವಂತಹ ಆಧುನಿಕ ಗಿರಿವಿ ಕಂಪನಿಗಳಿಗೆ ಪುನೀತ್ ರೂಪದರ್ಶಿಯಾಗಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ.

ಭಾರತದ ಇತರೆ ಭಾಷೆಗಳ ಜನಪ್ರಿಯ ನಟರಂತೆ ಪುನೀತ್ ಕೂಡ ಇಂದು ಹಲವಾರು ಕಂಪನಿಗಳಿಗೆ ಮಾಡಲ್ ಆಗಿದ್ದಾರೆ. ಎಫ್ ಸ್ಕ್ವೇರ್ ಎಂಬ ಬಟ್ಟೆ ಅಂಗಡಿಗೆ, ಮಲಬಾರ್ ಗೋಲ್ಡ್ ಎಂಬ ಚಿನ್ನದ ಅಂಗಡಿಗಳ ಚೈನಿಗೆ, ಮಣಪ್ಪುರಂ ಗೋಲ್ಡ್ ಫೈನಾನ್ಸ್‌ಗೆ ಮತ್ತು ಮುತ್ತೂಟ್ ಎಂಬ ಬಂಗಾರ ಗಿರವಿ ಸಂಸ್ಥೆಗೆ ಪುನೀತ ರೂಪದರ್ಶಿಯಾಗಿದ್ದಾರೆ. ಜೊತೆಗೆ ಅವರು ರಾಯಲ್ ಛಾಲೆಂಜರ್ಸ್ ಎಂಬ ಐಪಿಎಲ್ ಕ್ರಿಕೆಟ್ ತಂಡದ ಅಂಬ್ಯಾಸಿಡರ್ ಆಗಿದ್ದರೂ ಆ ಹೆಂಡದ ಕಂಪನಿಯ ಜಾಹೀರಾತುಗಳಿಗೆ ರೂಪದರ್ಶಿಯಾಗಿಲ್ಲ ಎಂಬುದು ಸಂತಸದ ಸಂಗತಿ.

ಇಲ್ಲಿ ಇನ್ನೊಂದು ಅಂಶವನ್ನು ಕಾಣಿಸಲೇಬೇಕು. ಈ ಹಿಂದೆ ಡಾ. ರಾಜ್‌ಕುಮಾರ್ ಅವರು ಕರ್ನಾಟಕದ ಹೈನುಗಾರಿಕೆ ಕಂಪನಿಯಾದ ಕೆಎಂಎಫ್‌ನ 'ನಂದಿನಿ' ಪ್ರಾಡಕ್ಟುಗಳಿಗೆ ರೂಪದರ್ಶಿಯಾಗಿ ಆ ಸಂಸ್ಥೆ ರಾಜ್ಯಾದ್ಯಂತ ಪರಿಚಯವಾಗುವಲ್ಲಿ ನೆರವಾಗಿದ್ದರು. ಆ ಮೂಲಕ ರಾಜ್ ಅವರು ಲಕ್ಷಾಂತರ ರೈತರ ಬಂಧು ಕೂಡ ಆಗಿದ್ದರು. ಅಂದಹಾಗೆ ರಾಜ್ ಅವರು 'ನಂದಿನಿ' ಜಾಹೀರಾತಿಗೆ ಯಾವುದೇ ಸಂಭಾವನೆಯನ್ನು ಪಡೆಯದೆ ತಮ್ಮ ಜನಪರ ಕಾಳಜಿಯನ್ನು ಪ್ರದರ್ಶಿಸಿದರು.

ತಂದೆಗೆ ತಕ್ಕ ಮಗ ಎಂಬಂತೆ ಪುನೀತ್ ಕೂಡ ಈಗ 'ನಂದಿನಿ'ಯ ರೂಪದರ್ಶಿಯಾಗಿದ್ದಾರೆ. ಜೊತೆಗೆ ಅಪ್ಪನಂತೆ ಇವರೂ ಪುಕ್ಕಟೆಯಾಗಿ ಆ ಸಂಸ್ಥೆಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ.

ಆದರೆ ಇಂತಹ ಜನಪರ ನಿಲುವಿನ ಪುನೀತ್ ಅದ್ಯಾಕೆ ಜನರನ್ನು ಕಿತ್ತು ತಿನ್ನುವಂತಹ 'ಗಿರವಿ' ಸಂಸ್ಥೆಗಳಿಗೆ ರೂಪದರ್ಶಿಯಾಗಿದ್ದಾರೆ? ಜನರಿಂದ ಚಿನ್ನ ಪಡೆದು ಸಾಲ ಕೊಡುವ, ಆ ಹಣದ ಮೇಲೆ ಬಡ್ಡಿ, ಚಕ್ರ ಬಡ್ಡಿ ಹಾಕಿ ಜನರನ್ನು ಸುಲಿದು ತಿನ್ನುವ ಬಂಡವಾಳಶಾಹಿ ಕಂಪನಿಗಳ ಮಾಡೆಲ್ ಆಗುವುದು, ಮಧ್ಯಮವರ್ಗದ ಜನರಿಗೆ ಆಮಿಷ ಒಡ್ಡಿ ಅವರ ಸಂಪಾದನೆಯನ್ನೇ ಕಸಿಯುವ ಗೋಲ್ಡ್ ಫೈನಾನ್ಸ್‌ಗಳಿಗೆ ರೂಪದರ್ಶಿಯಾಗುವುದು ಪುನೀತ್‌ಗೆ ಶೋಭೆ ತರುವಂಥದ್ದಲ್ಲ ಅಲ್ಲವೇ? ಇದನ್ನು ನೋಡಿ ನಾಳೆ ಜನ "ಪುನೀತ್ ಪವರ್ ಸ್ಟಾರ್ ಮಾತ್ರವಲ್ಲ, ಗೋಲ್ಡನ್ ಕಂಪನಿಗಳ ಸ್ಟಾರ್ ಕೂಡ ಆಗಿದ್ದಾರೆ" ಎನ್ನುವ ಅಪಾಯವಂತೂ ಇದ್ದೇ ಇದೆ.

ಇಲ್ಲಿ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ. ಕನ್ನಡ ಚಿತ್ರರಂಗದಲ್ಲಿ ಅತಿ ಹೆಚ್ಚು ಸಂಭಾವನೆ ಪಡೆಯುವ ಪುನೀತ್ ಈ ಜಾಹೀರಾತುಗಳಿಗೆ ಪಡೆಯುವ ದುಡ್ಡೆಷ್ಟು? ಒಂದು ಮೂಲದ ಪ್ರಕಾರ ಒಂದು ಜಾಹೀರಾತಿಗೆ ಪುನೀತ್ ಪಡೆಯುತ್ತಿರುವ ಮೊತ್ತ ಅರವತ್ತು ಲಕ್ಷದಿಂದ ಒಂದು ಕೋಟಿ ರೂಪಾಯಿಗಳು. ಈ ಮೊತ್ತ ಬರೀ ಒಂದು ವರ್ಷದ ಕಾಂಟ್ರಾಕ್ಟ್‌ಗೆ ಮಾತ್ರ. ಹಾಗೊಮ್ಮೆ ಅದೇ ಜಾಹೀರಾತನ್ನು ಆ ಕಂಪನಿ ಒಂದು ವರ್ಷದ ನಂತರವೂ ಮುಂದುವರೆಸಬೇಕಾದರೆ ಅಥವಾ ಬದಲಿಸಬೇಕಾದರೆ ಮತ್ತೆ ಕಂಪೆನಿಯವರು ಅಷ್ಟೇ ಹಣವನ್ನು ಪುನೀತ್‌ಗೆ ಕೊಡಲೇಬೇಕು. ಒಂದು ಸಿನಿಮಾಗೆ ತಿಂಗಳುಗಟ್ಟಲೆ ಕಾಲ್‌ಶೀಟ್ ಕೊಡಬೇಕು. ಆದರೆ, ಬಾಂಬೆ, ಚೆನ್ನೈ ಅಥವಾ ಬೆಂಗಳೂರಿನಲ್ಲೇ ನಡೆಯುವ ಈ ಜಾಹೀರಾತುಗಳ ಚಿತ್ರೀಕರಣ ಎರಡು ದಿನಗಳಲ್ಲೇ ಮುಗಿದುಹೋಗುತ್ತದೆ. ಅಷ್ಟೇ ಬೇಗನೆ ಸಂಭಾವನೆ ಕೂಡ ಸಿಗುತ್ತದೆ.


ಅಂದರೆ ಪುನೀತ್ ಸೇರಿದಂತೆ ಭಾರತದ ಇತರೆ ಭಾಷೆಗಳ ಸಿನಿಮಾ ನಟರಿಗೆ ಈ ಜಾಹೀರಾತುಗಳಿಂದಲೇ ಹೆಚ್ಚು ಆದಾಯ ಇದೆ. ಇದೇ ಕಾರಣಕ್ಕೆ ಒಮ್ಮೆ ಬಾಲಿವುಡ್ ಬಾದ್‌ಶಾ ಶಾರೂಖ್ ಖಾನ್ "ನಾನು ಜಾಹೀರಾತುಗಳ ಮೂಲಕ ದುಡಿಯುತ್ತೇನೆ. ಪಾಕೆಟ್ ಮನಿಗಾಗಿ ಚಿತ್ರಗಳಲ್ಲಿ ನಟಿಸುತ್ತೇನೆ" ಎಂದಿದ್ದು.

ಪುನೀತ್‌ಗೆ ಅಗತ್ಯವಾ?

ಓರ್ವ ನಟನಿಗೆ ತಾನು ನಟಿಸುವ ಚಿತ್ರದ ಕತೆ, ಅವುಗಳ ಯಶಸ್ಸು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಆತನ ಸಾರ್ವಜನಿಕ ಇಮೇಜ್. ಆ ಕಾರಣಕ್ಕಾಗಿಯೇ ಕೆಲ ನಟರು ತಮ್ಮ ಇಮೇಜಿಗೆ ಸೂಕ್ತವಾಗುವಂತಹ ವಸ್ತುಗಳ ಅಥವಾ ಸಂಸ್ಥೆಗಳ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುತ್ತಾರೆ.

ಪುನೀತ್‌ನನ್ನು ಜನ ಇಷ್ಟ ಪಡುವುದು ಆತ 'ಪೃಥ್ವಿ'ಯಲ್ಲಿ ಪ್ರಾಮಾಣಿಕ ಅಧಿಕಾರಿ ಆಗಿದ್ದರಿಂದ, 'ಮಿಲನ'ದಲ್ಲಿ ಸೂಕ್ಷ್ಮ ಮನಸ್ಸಿನ ಗಂಡನಾಗಿದ್ದರಿಂದ, 'ಅರಸು'ದಲ್ಲಿ ಶ್ರಮ ವಹಿಸಿ ದುಡಿಯುವ ಯುವಕನಾಗಿದ್ದರಿಂದ.

ವಸ್ತುಸ್ಥಿತಿ ಹೀಗಿರುವಾಗ, ನಮ್ಮ ಕಾಳಜಿ ಏನೆಂದರೆ, ಪುನೀತ್ ರಾಜ್‌ಕುಮಾರ್ ಆದಷ್ಟು ಬೇಗನೆ ಈ ಚಿನ್ನ 'ಗಿರವಿ' ಕಂಪನಿಗಳ ಒಪ್ಪಂದದಿಂದ ಹೊರಬರಬೇಕು, ಜನರನ್ನು ಕಿತ್ತು ತಿಂದು ಲಾಭ ಮಾಡುವ ಕಂಪನಿಗಳೊಂದಿಗಿನ ಸಂಪರ್ಕವನ್ನು ಕಡಿದುಕೊಳ್ಳಬೇಕು. ಆಗ ಖಂಡಿತವಾಗಿಯೂ ಪುನೀತ್ ಅವರ ಜನಪ್ರಿಯತೆ ಇನ್ನೂ ಹೆಚ್ಚುತ್ತದೆ. ಏನಂತೀರಾ ಪವರ್ ಸ್ಟಾರ್?




• ಅರುಣ್ ಕುಮಾರ್.ಜಿ
arunodayagc@gmail.com

ಬೆತ್ತನಗೆರೆ ಮಂಜ ಬಾಂಬ್ ತರಿಸಿದ ಅಂದು ವಾಗಟ ಇಂದು ನೆಲಮಂಗಲ

ಹಿಂದೊಮ್ಮೆ ಸರಣಿ ಹತ್ಯಾಕಾಂಡದಿಂದಾಗಿಯೇ ಕುಖ್ಯಾತಿಗೆ ಬಂದಿದ್ದ ವಾಗಟಕ್ಕಿಂತಲೂ ಅಸಹ್ಯವಾಗಿ ನೆಲಮಂಗಲ ಬುಸುಗುಡುತ್ತಿದೆ. ಈಗ ನೆಲಮಂಗಲದಂಥ ಪುಟ್ಟ ಊರೊಂದಕ್ಕೆ ಬಾಂಬು ಬಂದಿದೆ ಮತ್ತು ತಾವು ಯಾರನ್ನು ಕೊಲ್ಲುತ್ತಿದ್ದೇವೆಂಬ ವಿವೇಚನೆ ಕೂಡ ಅಲ್ಲಿನ ಹಂತಕರಲ್ಲುಳಿದಿಲ್ಲ! ಜುಲೈ ಮೂರರ ಶನಿವಾರ ರಾತ್ರಿಯ ಅಟ್ಯಾಕ್‌ನಲ್ಲಿ ಲಾಂಗು, ರಿವಾಲ್ವರ್ ಮತ್ತು ಬಾಂಬುಗಳು ಒಟ್ಟೊಟ್ಟಿಗೆ ಬಳಕೆಯಾಗಿದ್ದು ಮತ್ತು ಅನ್ಯಾಯವಾಗಿ ವಕೀಲ ರವಿಕುಮಾರ್ ಬಲಿಯಾಗಿದ್ದು ನೆಲಮಂಗಲದ ಹಂತಕ ಪಡೆಗಳ ಬರ್ಬರತೆಗೊಂದು ನಿದರ್ಶನವಷ್ಟೇ-

• ರಾ. ಸೋಮನಾಥ್
ra.somanath2010@gmail.com


ರವಿ

ಮೊದಲು ಮಚ್ಚು ಲಾಂಗುಗಳು ರಕ್ತ ಹರಿಸಿದ್ದಾಯ್ತು ನಂತರ ರಿವಾಲ್ವರ್ ಬಂತು. ಈಗ ನೆಲಮಂಗಲದಂಥ ಪುಟ್ಟ ಊರೊಂದಕ್ಕೆ ಬಾಂಬು ಬಂದಿದೆ ಮತ್ತು ತಾವು ಯಾರನ್ನು ಕೊಲ್ಲುತ್ತಿದ್ದೇವೆಂಬ ವಿವೇಚನೆ ಕೂಡ ಅಲ್ಲಿನ ಹಂತಕರಲ್ಲುಳಿದಿಲ್ಲ!


ಜುಲೈ ಮೂರರ ಶನಿವಾರ ರಾತ್ರಿಯ ಅಟ್ಯಾಕ್‌ನಲ್ಲಿ ಲಾಂಗು, ರಿವಾಲ್ವರ್ ಮತ್ತು ಬಾಂಬುಗಳು ಒಟ್ಟೊಟ್ಟಿಗೆ ಬಳಕೆಯಾಗಿದ್ದು ಮತ್ತು ಅನ್ಯಾಯವಾಗಿ ವಕೀಲ ರವಿಕುಮಾರ್ ಬಲಿಯಾಗಿದ್ದು ನೆಲಮಂಗಲದ ಹಂತಕ ಪಡೆಗಳ ಬರ್ಬರತೆಗೊಂದು ನಿದರ್ಶನವಷ್ಟೇ-

ಬಂಡೆಮಂಜನ ಬದಲಿಗೆ ನಿಷ್ಪಾಪಿ ವಕೀಲ ರವಿಕುಮಾರ್ ಕೊಲೆಯಾಗಿದ್ದಾನೆ. ಕೊಂದವರು ಬೆಂಗಳೂರಿನ ಬಾಡಿಗೆ ಹಂತಕರಂತೆ. ಸದ್ಯ ಧಾರವಾಡ ಜೈಲಿನಲ್ಲಿರುವ ಬೆತ್ತನಗೆರೆ ಶಂಕ್ರ ಮತ್ತು ಪರಪ್ಪನ ಅಗ್ರಹಾರ ಜೈಲಲ್ಲಿರುವ ಆತನ ಬಲಗೈ ಬಂಟ ಬೆತ್ತನಗರೆ ಮಂಜ ಸೇರಿಕೊಂಡು ಇಟ್ಟ ಮುಹೂರ್ತಕ್ಕೆ ಏನೇನೂ ಸಂಬಂಧವಿಲ್ಲದ ವಕೀಲ ರವಿಕುಮಾರ್ ಬಲಿಯಾಗಿರುವುದು ಇನ್ನುಮುಂದೆ ನೆಲಮಂಗಲದ ಸಾಮಾನ್ಯರು ಕೂಡ ಹೇಗೆ ಗ್ಯಾಂಗ್ ಜಿದ್ದಾಜಿದ್ದಿಗೆ ತಲೆಕೊಡಬೇಕಾಗಿದೆ ಎಂಬ ಪ್ರಶ್ನೆಯನ್ನೂ ಹುಟ್ಟುಹಾಕಿದೆ. ಮತ್ತು ಹಂತಕರ ಜೊತೆ ಕೈಜೋಡಿಸಿದರೆ ಏನಾಗುತ್ತದೆ ಎಂಬ ಎಚ್ಚರಿಕೆಯನ್ನೂ ಬಡಿದೆಬ್ಬಿಸಿದೆ.

ತ್ಯಾಮಗೊಂಡ್ಲು ಪಾಸಲೆಯ ಮಣ್ಣೆ ಗ್ರಾಮದ ವಕೀಲ ರವಿಕುಮಾರ್ ಬಾಡೂಟಕ್ಕೆಂದು ಬಂಡೆ ಮಂಜನ ಜೊತೆ ಹೋಗದೇ ಇದ್ದರೆ ಈ ರೀತಿ ಅನ್ಯಾಯವಾಗಿ ಕೊಲೆಯಾಗುತ್ತಿರಲಿಲ್ಲ. ಒಬ್ಬ ಬಂಡೆಮಂಜನನ್ನು ತೆಗೆದುಬಿಟ್ಟರೆ ಬೆತ್ತನಗೆರೆ ಸೀನನ ಒಂದು ಕೈಯೇ ಕತ್ತರಿಸಿದಂತೆ ಎಂಬ ಅಪಸರಕ್ಕೆ ಬಿದ್ದ ರಕ್ತಪಿಪಾಸು ಶಂಕ್ರನಿಗೆ ತಾನು ಛೂಬಿಟ್ಟ ಹುಡುಗರು ಇಂಥದೊಂದು ಯಡವಟ್ಟು ಮಾಡುತ್ತಾರೆಂಬ ಲೆಕ್ಕಾಚಾರವಾದರೂ ಎಲ್ಲಿತ್ತು?




ಹಿಂದೊಮ್ಮೆ ಸರಣಿ ಹತ್ಯಾಕಾಂಡದಿಂದಾಗಿಯೇ ಕುಖ್ಯಾತಿಗೆ ಬಂದಿದ್ದ ವಾಗಟಕ್ಕಿಂತಲೂ ಅಸಹ್ಯವಾಗಿ ನೆಲಮಂಗಲ ಬುಸುಗುಡುತ್ತಿದೆ. ಅಲ್ಲಿನದು ದಾಯಾದಿ ಕಾಳಗ. ಬೆತ್ತನಗೆರೆಯ ಕುರುಬರನ್ನು ಒಬ್ಬೊಬ್ಬರಾಗಿ ಕೊಲ್ಲುತ್ತ ಬಂದ ಬೆತ್ತನಗೆರೆ ಸೀನನಿಗೆ ಮುಂದೊಮ್ಮೆ ವರಸೆಯಲ್ಲಿ ತನಗೆ ತಮ್ಮನಾಗಬೇಕಾದ ಶಂಕ್ರನೇ ಮುಳುವಾಗುತ್ತಾನೆಂಬುದು ಗೊತ್ತಿರಲಿಲ್ಲ. ಮೊದಲು ಬಾಳೆಮಂಡಿ ಬಸವಯ್ಯ ನಂತರ ವಕೀಲ ದೇವರಾಜ್ ಮತ್ತು ಪಂಚಾಯ್ತಿ ಮೆಂಬರ್ ಕೃಷ್ಣಮೂರ್ತಿ, ಆನಂತರ ಬೈಲಪ್ಪ ಹೀಗೆ ಬೆತ್ತನಗೆರೆಯ ಕಾಂಗ್ರೆಸ್ ಕುರುಬರನ್ನು ಒಬ್ಬೊಬ್ಬರಾಗಿ ಕೊಲ್ಲಿಸುತ್ತಿದ್ದ ಸೀನನ ಬಲಗೈ ಬಂಟನಂತಿದ್ದವನು ಬೆತ್ತನಗೆರೆ ಶಂಕ್ರ.


ಚಿತ್ತನಗೆರೆ ಶಂಕರ

ನೆಲಮಂಗಲದ ಪಾಪಕೂಪದ ಅನಭಿಷಕ್ತ ದೊರೆಯಂತಿದ್ದ ಸೀನ ತನ್ನ ಅಪ್ಪನ ಆಸ್ತಿ ವಿಷಯಕ್ಕೇ ಕೈಯಿಟ್ಟಿದ್ದು ಶಂಕ್ರ ತಿರುಗಿಬೀಳಲು ಕಾರಣವಾಯ್ತು. ತನ್ನ ತಂದೆ ಗೋಪಾಲಪ್ಪನ ಒಂದೆಕರೆ ಜಮೀನಿಗೆ ಜಿಪಿಎ ಮಾಡಿಸಿಕೊಂಡಿದ್ದ ಬಾಯಮ್ಮನ ಪರವಹಿಸಿದ ಸೀನನ ಅಕ್ಕನ ಗಂಡ ಯಾಡಾಳು ದೇವಿಯನ್ನೇ ಶಂಕ್ರ ಮುಗಿಸಿಬಿಟ್ಟ. ಅಲ್ಲಿಗೆ ನೆಲಮಂಗಲದ ಗೌಡರ ಹಂತಕಪಡೆಯೇ ಇಬ್ಭಾಗವಾಗಿಹೋಯ್ತು. ತನಗೆ ತಮ್ಮನಾಗಬೇಕಿದ್ದವನೇ ತನ್ನ ಅಕ್ಕನ ಗಂಡನನ್ನು ಕೊಲ್ಲಿಸಿದನೆಂದರೆ-ಸೀನನಿಗೆ ಅದಕ್ಕಿಂತ ದೊಡ್ಡ ಶಿಕ್ಷೆ ಬೇಕೆ?

ವಿಧಿಯಾಟವೋ ಕಾಲನ ಲೀಲೆಯೋ ಗೊತ್ತಿಲ್ಲ; ಕುರುಬರ ಸರಣಿಹತ್ಯಾ ಪಾಪವು ಹಂತಕ ಸಹೋದರರ ದುಷ್ಮನಿಯನ್ನು ಸೃಷ್ಟಿಸಿ ಪರಸ್ಪರ ಅವರವರನ್ನೇ ಕೊಂದುಕೊಳ್ಳುವ ವಿಕೃತಿಯೊಳಕ್ಕೆ ಸೆಳೆದಿತ್ತು. ಶಂಕ್ರ ತನ್ನದೇ ಪ್ರತ್ಯೇಕ ಹಂತಕ ಪಡೆ ಹುಟ್ಟುಹಾಕಿ ಸೀನನ ಸರ್ವನಾಶಕ್ಕೆ ಪಣತೊಟ್ಟರೆ, ತಂದೆ ಯಾಡಾಳು ದೇವಿಯ ಹತ್ಯೆಗೆ ಪ್ರತೀಕಾರದ ಶಪಥಗೈದ ಮಗ ಹರ್ಷ ಸೀನನ ಪಡೆಯ ಸಾರಥ್ಯ ಕೈಗೆತ್ತಿಕೊಂಡ. ಇತ್ತ ಜೈಲು ಸೇರಿಕೊಂಡ ಸೀನ ಹೇಗೋ ಪೊಲೀಸರ ಕೈಯಿಂದ ಬಚಾವಾದನಾದರೂ ಶಂಕ್ರನ ಕಾಟದಿಂದ ಬಚಾವಾಗಲಿಲ್ಲ. ಸೀನನ ಅನುಪಸ್ಥಿತಿಯಲ್ಲಿ ಆತನ ಗ್ಯಾಂಗಿನ ನಾಯಕತ್ವ ವಹಿಸಿಕೊಂಡವನೇ ಬಂಡೆ ಮಂಜ. ಈತ ಸೀನನ ಚಿಕ್ಕಪ್ಪನ ಮಗ. ಶಂಕ್ರನ ಹಾಗೆ ಈತನೂ ಸೀನನಿಗೆ ತಮ್ಮನಾಗಬೇಕು. ತ್ಯಾಮಗೊಂಡ್ಲು ರಸ್ತೆಯಲ್ಲಿ ಕಲ್ಲಿನ ಕ್ವಾರಿ ನಡೆಸುತ್ತಾ, ಸಿಕ್ಕಾಪಟ್ಟೆ ಲಾರಿಗಳನ್ನು ಇಟ್ಟುಕೊಂಡು ದುಡ್ಡೂಕಾಸಿನಲ್ಲಿ ಶಕ್ತಿವಂತನಾಗೇ ಇದ್ದ ಬಂಡೆ ಮಂಜ ಪೊಲೀಸರ ಲೆಕ್ಕಕ್ಕೆ ಅಂಥಾ ಕ್ರಿಮಿನಲ್




ಬಂಡೆ ಮಂಜ

ಅಲ್ಲದಿದ್ದರೂ ಬೆಂಗಳೂರು ಅಂಡರ್‌ವರ್ಲ್ಡ್ ಮಟ್ಟಿಗೆ ಹಳಬನೇ. ಜೇಡರಹಳ್ಳಿಯ ಗರಡಿಯಲ್ಲಿ ಪಳಗಿದ್ದಾನೆ.

ಅತ್ತ ಸೀನ ರಾಮನಗರ ಜೈಲಲ್ಲಿ ಕೂತು ಗಾಯ ನೆಕ್ಕುತ್ತಿದ್ದರೆ ಇತ್ತ ಬಂಡೆ ಮಂಜ ನೆಲಮಂಗಲದ ಪಾರುಪತ್ಯಗೆ ನಿಂತ. ಆತನ ಒಂದೇ ಗುರಿ ಅಂತ ಇದ್ದಿದ್ದರೆ ಅದು ಹ್ಯಾಡಾಳು ದೇವಿ ಹತ್ಯೆಗೆ ಪ್ರತೀಕಾರ. ಬೆತ್ತನಗೆರೆ ಶಂಕ್ರನನ್ನು ಶತಗತಾಯ ಮುಗಿಸಲೇಬೇಕಿತ್ತು. ಆದರೆ ಶಂಕ್ರ ಇನ್ನೂ ಪಾಕಡಾ. ಹೊರಗಿದ್ದು ಪೊಲೀಸರಿಂದ ತಲೆಮರೆಸಿಕೊಂಡಿರುವ ಬದಲು ಜೈಲು ಸೇರಿಕೊಳ್ಳುವುದೇ ಸೇಫು ಎಂದು ಲೆಕ್ಕ ಹಾಕಿದ ಶಂಕ್ರ ಉಪಾಯವಾಗಿ ಪೊಲೀಸರಿಗೆ ಸೆರೆಸಿಕ್ಕಂತೆ ಮಾಡಿಕೊಂಡು ಜೈಲು ಸೇರಿಕೊಂಡ. ಬಹುಶಃ ಹೊರಗೇ ಇದ್ದಿದ್ದರೆ ಬಂಡೆಮಂಜ ಬಿಡುತ್ತಿರಲಿಲ್ಲ. ಯಾವತ್ತು ಶಂಕ್ರ ಜೈಲು ಹೊಕ್ಕಿ ಬಚಾವಾದದ್ದು ಗೊತ್ತಾಯ್ತೊ, ಹ್ಯಾಡಾಳು ದೇವಿಯ ಹತ್ಯೆಗೆ ಪ್ರತೀಕಾರಕ್ಕೆ ನಿಂತಿದ್ದ ಬಂಡೆ ಮಂಜ ಮತ್ತು ದೇವಿ ಮಗ ಹರ್ಷ ಸೇರಿಕೊಂಡು ಬೇರೆಯದೇ ಸ್ಕೆಚ್ ಒಂದಕ್ಕೆ ಕೈಯಿಟ್ಟರು.

ಅದು ಬಿನ್ನಮಂಗಲ ಕೃಷ್ಣಪ್ಪನ ಹತ್ಯಾಯತ್ನ. ನೆಲಮಂಗಲದ ಮಟ್ಟಿಗೆ ರಾಜಕೀಯ ಪಿತಾಮಹನಂತಿದ್ದ ಬಿನ್ನಮಂಗಲ ಕೃಷ್ಣಪ್ಪ ತನ್ನ ರಾಜಕೀಯ ವೈರಿ ಹ್ಯಾಡಾಳು ದೇವಿಯನ್ನು ಶಂಕ್ರನನ್ನು ಛೂಬಿಟ್ಟು ಮುಗಿಸಿದ್ದಾನೆಂದೇ ಬಂಡೆ ಮಂಜನ ಗ್ಯಾಂಗ್ ಲೆಕ್ಕ ಹಾಕಿತ್ತು. ವಾಸ್ತವವಾಗಿ ಬಿನ್ನಮಂಗಲ ಕೃಷ್ಣಪ್ಪನಿಗೂ ಹ್ಯಾಡಾಳು ದೇವಿಯ ಹತ್ಯೆಗೂ ಏನೇನೂ ಸಂಬಂಧವಿರಲಿಲ್ಲ!

ದೇವಿ ಮಗ ಹರ್ಷ ಮತ್ತು ಬಂಡೆ ಮಂಜ ಸೇರಿಕೊಂಡು ಬಿನ್ನಮಂಗಲ ಕೃಷ್ಣಪ್ಪನನ್ನು ಮುಗಿಸಲು ಇನ್ನಿಲ್ಲದಂತೆ ಪ್ಲಾನ್ ಮಾಡಿದ್ದರಾದರೂ ಕೃಷ್ಣಪ್ಪನ ಗನ್‌ಮನ್‌ನ ಸಮಯಪ್ರಜ್ಞೆಯಿಂದಾಗಿ ಮಂಜನ ದಾಳಿ ವಿಫಲಗೊಂಡಿತು. ಎರಡೆರಡು ಲಾರಿ ಬಳಸಿ, ಕಾರಿಗೆ ಗುದ್ದಿ, ರಿವಾಲ್ವರ್‌ನಿಂದ ಫೈರ್ ಮಾಡಿಯೂ ಕೃಷ್ಣಪ್ಪ ಬಚಾವಾಗಿದ್ದು ಬಂಡೆಮಂಜನ ಪಾಲಿಗೆ ದೊಡ್ಡ ಹಿನ್ನಡೆಯಂತಾಯ್ತು. ಹಾಗಿದ್ದೂ ಹ್ಯಾಡಾಳು ದೇವಿಯ ಮಕ್ಕಳು ಶಂಕ್ರನನ್ನು ಮುಗಿಸುವ ಕಾರ್ಯಾಚರಣೆ ಕೈಬಿಡಲಿಲ್ಲ. ಸೀನ ಜೈಲಲ್ಲಿ ಕೂತೇ ತಲೆ ಓಡಿಸುತ್ತಿದ್ದರೆ ಬಂಡೆ ಮಂಜ ಅದನ್ನು ಹೊರಗಡೆ ಕಾರ್ಯಗತಗೊಳಿಸುತ್ತಿದ್ದ.

ಕುರುಬರ ಹತ್ಯೆಯ ಪಾಪವೂ, ಜೊತೆಗಿದ್ದೇ ದೋಖಾ ಮಾಡುವ ಶಿಷ್ಯರೂ

ಬಂಡೆ ಮಂಜ ಗಿಡ್ಡೇನಹಳ್ಳಿಗೆ ಬಾಡೂಟಕ್ಕೆ ಬಂದದ್ದು ಮಧ್ಯಾಹ್ನ 4 ಕ್ಕೆ, ದಾಳಿ ನಡೆದದ್ದು ರಾತ್ರಿ ಏಳೂವರೆಗೆ. ಅಷ್ಟು ಬೇಗ ಜೈಲಲ್ಲಿದ್ದ ಶಂಕ್ರ ಮತ್ತು ಬೆತ್ತನಗೆರೆ ಮಂಜರಿಗೆ ಸುದ್ದಿ ಮುಟ್ಟಿದ್ದು ಹೇಗೆ? ಕೇವಲ ಮೂರು ಗಂಟೆಯೊಳಗೆ ಗಾಡಿ ತುಂಬ ಹಂತಕರ ಪಡೆ ತುಂಬಿಸಿ ಬಾಂಬು, ರಿವಾಲ್ವರು, ಲಾಂಗುಗಳನ್ನು ರೆಡಿ ಮಾಡಿಸಿ ಅಟ್ಯಾಕ್ ಮಾಡಿಸುವಷ್ಟು ಸಾಮರ್ಥ್ಯ ಬೆತ್ತನಗೆರೆ ಮಂಜನಿಗೆ ಬಂದಿದ್ದಾದರೂ ಹೇಗೆ?

ನೆಲಮಂಗಲದ ಕಿರಾತಕರ ಕೈ ಎಷ್ಟು ಉದ್ದ ಎಂಬುದಕ್ಕೆ ಜುಲೈ 3 ರ ದಾಳಿಯೊಂದೇ ಸಾಕು. ಅದು ಬಂಡೆ ಮಂಜ ಮತ್ತು ಸೀನರ ಗ್ಯಾಂಗ್ ಸೃಷ್ಟಿಸಿಕೊಂಡ ಯಡವಟ್ಟುಗಳ ಫಲವಷ್ಟೇ. ಹೀಗೆ ಬಂಡೆ ಮಂಜ ಗಿಡ್ಡೇನಹಳ್ಳಿಗೆ ಬಂದಿದ್ದಾನೆಂಬ ಮಾಹಿತಿ ಜೈಲಲ್ಲಿರುವ ಶಂಕ್ರನಿಗೆ ಸಿಕ್ಕಿದ್ದು ಬಂಡೆ ಮಂಜನ ಜೊತೆಗಿದ್ದ ಹುಡುಗರಿಂದಲೇ!

ಆತನ ಹೆಸರು ಬಸವ ಉರ್ಫ್ ಲಾಳೇಶ. ಈತನೇ ಡಬ್ಬಲ್‌ಕ್ರಾಸ್ ಮಾಡಿ ಶಂಕ್ರನಿಗೆ ಮಾಹಿತಿ ಕೊಟ್ಟಿದ್ದಾನೆ. ಮೂಲತಃ ರಾಯಚೂರಿನವನಾದ ಲಾಳೇಶನನ್ನು ಕಳೆದೆರಡು ತಿಂಗಳಿನಿಂದಲೇ ಶಂಕ್ರ ಬುಟ್ಟಿಗೆ ಹಾಕಿಕೊಂಡಿದ್ದ. ಎರಡು ಲಕ್ಷ ರೂಪಾಯಿ ಕೈಗಿತ್ತು ಬಂಡೆ ಮಂಜನ ಬಗ್ಗೆ ಇನ್‌ಫಾರ್ಮೇಷನ್ ಕೊಡುವಂತೆ ಡೀಲು ಕುದುರಿಸಿದ್ದ. ಜೊತೆಗಿದ್ದೇ ಲಾಳೇಶ ಗಿಡ್ಡೇನಹಳ್ಳಿಗೆ ಬಂಡೆಮಂಜ ಬಂದಿದ್ದನ್ನು ಶಂಕ್ರನಿಗೆ ಟಿಪ್ಸ್ ಕೊಟ್ಟ. ಅಟ್ಯಾಕ್ ನಡೆದಾಗ ಮೊದಲು ಎಸ್ಕೇಪ್ ಆದವನೇ ಲಾಳೇಶ. ವಕೀಲ ರವಿಕುಮಾರ್ ಹತ್ಯೆಯಾದ ನಂತರ ಪರಾರಿಯಾದವರೆಲ್ಲ ಮತ್ತೆ ಬಂಡೆ ಮಂಜನ ಅಡ್ಡೆಗೆ ಬಂದಾಗ ಏನೋ ಅನುಮಾನ ಬಂದು ಮಂಜ ಲಾಳೇಶನ ಮೊಬೈಲ್ ಕಿತ್ತುಕೊಂಡು ನೋಡಿದರೆ ಶಂಕ್ರನ ಮೊಬೈಲಿನಿಂದ ಲಾಳೇಶನ ಫೋನಿಗೆ 32 ಕರೆಗಳು ಬಂದಿದ್ದವು!


ಬಂಡೆ ಮಂಜ ತನ್ನ ಮೊಬೈಲ್ ಕಿತ್ತುಕೊಂಡು ಚೆಕ್ ಮಾಡುತ್ತಿದ್ದದ್ದನ್ನು ನೋಡಿದ್ದೇ ಲಾಳೇಶ ಎದ್ದೂಬಿದ್ದು ಓಡಿಬಿಟ್ಟ. ಬಂಡೆ ಮಂಜನ ಅನುಮಾನ ನಿಜವಾಗಿತ್ತು. ಹಾಗೇ ಲಾಳೇಶನ ಮೇಲೆ ಬಂಡೆಗೆ ಅನುಮಾನ ಬರುವುದಕ್ಕೂ ಕಾರಣವಿತ್ತು. ಈ ಲಾಳೇಶ ಹೇಳಿಕೇಳಿ ಬಂಡೆ ಮಂಜನ ಅಕ್ಕನ ಮಗ ರಂಗನಾಥನ ಶಿಷ್ಯ. ಸದ್ಯ ಬಂಡೆ ಮಂಜನ ವಿರುದ್ಧ ತಿರುಗಿಬಿದ್ದಿರುವ ರಂಗ ಅಲಿಯಾಸ್ ರಂಗನಾಥ ಕೂಡ ದಾಳಿಯಲ್ಲಿ ಶಂಕ್ರನಿಗೆ ನೆರವಾಗಿದ್ದಾನೆಂಬುದು ಕೇವಲ ಅನುಮಾನವಷ್ಟೇ ಅಲ್ಲ-

ಇಲ್ಲಿಗೆ ಎರಡು ತಿಂಗಳ ಹಿಂದೆ ರಂಗ ಬಂಡೆ ಮಂಜನ ಮನೆಯ ಹಿಂದಿದ್ದ ಕಲಾ ಎಂಬ ವಿವಾಹಿತ ಮಹಿಳೆಯೊಬ್ಬಳ ಜೊತೆ ಮೈಸೂರಿಗೆ ಎಸ್ಕೇಪಾದ. ಇದು ಮಂಜನಿಗೆ ಗೊತ್ತಾಗಿ ಆ ಹೆಂಗಸಿನ ಸಹವಾಸಕ್ಕೆ ಹೋಗದಂತೆ ರಂಗನನ್ನು ಕರೆದು ಬೈದಿದ್ದಾನೆ. ಅಷ್ಟಾಗ್ಯೂ ಜಗ್ಗದ ರಂಗ ಇದಾಗಿ ಕೆಲದಿನಕ್ಕೆ ಮತ್ತೆ ಅದೇ ಹೆಂಗಸಿನ ಜೊತೆ ಮಂಗಳೂರಿಗೆ ಪರಾರಿಯಾದ. ಕೇವಲ ಹೆಂಗಸಿನ ಚಟಕ್ಕೆ ಬಿದ್ದ ರಂಗ ಈ ರೀತಿ ಮಾಡಿದ್ದರೆ ಆ ಮಾತು ಬೇರೆ. ಆದರೆ 'ಈ ವಿಷಯಕ್ಕೆ ಯಾರಷ್ಟೇ ಏಕೆ ಬಂಡೆ ಮಂಜ ಬಂದರೂ ನಾನು ಕೇರ್ ಮಾಡಲ್ಲ......' ಎಂದು ರಂಗ ಕಂಡಕಂಡವರಿಗೆ ಫೋನ್ ಮಾಡಿ ಡೈಲಾಗ್ ಹೊಡೆದ. ಬಹುಶಃ ಇದು ಗೊತ್ತಾಗಿಯೇ ಶಂಕ್ರ ಜೈಲೊಳಗಿದ್ದೆ ರಂಗನನ್ನು ಸರಿ ಮಾಡಿಕೊಂಡಿದ್ದಾನೆ. ರಂಗನಿಗೆ ಮಂಗಳೂರಿನಲ್ಲಿ ಮನೆ ಮಾಡಿಕೊಟ್ಟಿದ್ದೇ ಶಂಕ್ರ ಎಂಬ ಗುಮಾನಿ ಬಂಡೆಮಂಜನಿಗೆ ಬಂದಿದೆ. ಈ ರಂಗನ ಮೂಲಕವೇ ಶಂಕ್ರ ಲಾಳೇಶನನ್ನು ಬುಟ್ಟಿಗೆ ಹಾಕಿಕೊಂಡಿರಬೇಕು. ಇನ್ನೂ ಕೆಲವರ ಪ್ರಕಾರ ಬಂಡೆ ಮಂಜನ ಜೊತೆಗಿದ್ದ ಗೋಪಿ ಮತ್ತು ದೀಪು ಎಂಬ ಹುಡುಗರು ಗಿಡ್ಡೇನಹಳ್ಳಿಯ ಬಾಡೂಟಕ್ಕೆ ಬರದೇ ತಲೆ ಮರೆಸಿಕೊಂಡದ್ದು ಕೂಡ ಅನುಮಾನಾಸ್ಪದವಾಗಿತ್ತು.


ರಂಗ


ಜೊತೆಗಿದ್ದವರೇ ವಿರೋಧಿಗಳ ಜೊತೆ ಕೈಜೋಡಿಸುತ್ತಾರೆಂದರೆ ಇನ್ನು ಯಾರನ್ನಂಥ ಬಂಡೆ ಮಂಜ ನಂಬಲು ಸಾಧ್ಯ? ಕುರುಬರ ಸರಣಿ ಹತ್ಯೆಯ ಪಾಪ ಕೊನೆಗೆ ಹಂತಕರೇ ಅವರವರನ್ನೇ ಕೊಂದುಕೊಳ್ಳುವ ಹಾಗೇ ಮಾಡಿಬಿಟ್ಟಿದೆ. ಶಿಕ್ಷೆ ಇದಕ್ಕಿಂತ ಬೇಕೆ?

ಈ ಮಧ್ಯೆ ಶಂಕ್ರನ ಅರ್ಭಟ ವಿಪರೀತವಾಗಿ ನೆಲಮಂಗಲದ ಸಣ್ಣಪುಟ್ಟ ವಿಷಯಗಳಿಗೂ ಆತನ ಶಿಷ್ಯರು ತಲೆ ಹಾಕತೊಡಗಿದರು. ಊರಿನ ಯಾವುದೇ ಹುಡುಗಿಯ ಹಿಂದೆ ಬೀಳುವ ಪುಂಡ ಪಡ್ಡೆಗಳು ಕೂಡ ಶಂಕ್ರನ ಹೆಸರು ಬಳಸಿ ಕಾದಾಟಕ್ಕಿಳಿದರು. ದಿನೇದಿನೆ ಶಂಕ್ರನ ಗ್ಯಾಂಗ್ ಬಲಾಢ್ಯಗೊಳ್ಳುತ್ತಿತ್ತು. ಯಾವುದೇ ಲ್ಯಾಂಡ್ ಡೀಲಾಗಲಿ, ಕಾಲೇಜು ಹುಡುಗರ ಕಚ್ಚಾಟವಾಗಲಿ, ಸಾಲದ ವಸೂಲಿಯಾಗಲಿ; ಜೈಲಲ್ಲಿ ಕೂತೇ ಶಂಕ್ರ ತಲೆ ತೂರಿಸುತ್ತಿದ್ದ. ಒಬ್ಬ ಶಂಕ್ರನ ಹಾವಳಿಯೇ ಈ ಮಟ್ಟಿಗಾದರೆ ಇನ್ನು ಶಂಕ್ರನ ಬಲಗೈ ಬಂಟನೆಂದು ಫೀಲ್ಡಿಗಿಳಿದ ಚಿತ್ತನಗೆರೆ ಮಂಜ ಎಂಬಾತ ಹುಟ್ಟಿಕೊಂಡರೆ ಏನಾಗಬೇಡ?


ಹರ್ಷ

ಈ ಚಿತ್ತನಗೆರೆ ಮಂಜ ಕೂಡ ವರಸೆಯಲ್ಲಿ ಶಂಕ್ರನಿಗೆ ತಮ್ಮನಾಗಬೇಕು. ಶಂಕ್ರನ ತಾಯಿ ಮತ್ತು ಮಂಜನ ತಾಯಿ ಅಕ್ಕತಂಗಿಯರಂತೆ. ಆ ಮೂಲಕ ಸೀನನಿಗೂ ಚಿತ್ತನಗೆರೆ ಮಂಜ ಸಂಬಂಧಿಯಾಗುತ್ತಾನೆ. ಚಿತ್ತನಗೆರೆ ಮಂಜ ಹ್ಯಾಡಾಳು ದೇವಿ ಕೊಲೆ ಕೇಸಿನಲ್ಲಿ ಶಂಕ್ರನ ಜೊತೆಗೇ ಜೈಲಲ್ಲಿದ್ದ. ಈತನ ಅಣ್ಣ ಮುನಿಯ ಕುರುಬರ ಹುಡುಗಿಯೊಬ್ಬಳ ಹಿಂದೆ ಬಿದ್ದು ಯಾಪಾಟಿ ಕಾದಾಟಕ್ಕಿಳಿದನೆಂದರೆ, ಆಕೆಯ ಸಂಬಂಧಿ ಪೊಲೀಸ್ ಪೇದೆ ಗಂಗರಾಜು ಎಂಬಾತನನ್ನೇ ಚಾಕುವಿನಿಂದ ತಿವಿದು ಬಿಟ್ಟಿದ್ದ.

ಇಂಥ ಹಾವಳಿಕೋರರ ಗ್ಯಾಂಗ್ ಕಟ್ಟಿಕೊಂಡೇ ಸೀನನ ವಿರುದ್ಧ ಸ್ಕೆಚ್ ಹಾಕತೊಡಗಿದ ಶಂಕ್ರನ ಗ್ಯಾಂಗ್ ಅದೆಷ್ಟು ಡೆಡ್ಲಿಯಾಗಿ ಹಾವಳಿಗಿಳಿದರೆಂದರೆ -ಒಂದೋ ಬಂಡೆ ಮಂಜನನ್ನು ಮುಗಿಸಬೇಕು ಅಥವಾ ಜೈಲಲ್ಲಿರುವ ಸೀನನನ್ನೇ ನಿಕಾಲಿ ಮಾಡಬೇಕು. ಇಬ್ಬರಲ್ಲಿ ಯಾರೇ ಒಬ್ಬರು ಉಳಿದರೂ ಖಂಡಿತ ತಮಗೆ ಉಳಿಗಾಲವಿಲ್ಲವೆಂಬುದು ಶಂಕ್ರನ ಗ್ಯಾಂಗ್‌ನ ಹುನ್ನಾರವಾಗಿತ್ತು. ಹ್ಯಾಡಾಳು ದೇವಿ ಕಡೆಯವರು ನಮ್ಮನ್ನಂತೂ ಖಂಡಿತಾ ಉಳಿಸೋಲ್ಲ. ಯಾವತ್ತಿದ್ರೂ ಸಾಯಲೇಬೇಕು. ಆದ್ರೆ ಸುಂಸುಮ್ನೆ ಸಾಯ್ತೀವಾ? ಅವರು ನಮ್ಮನ್ನ ತೆಗೆಯೋದಕ್ಕೂ ಮೊದ್ಲು ನಾವೇ ಸೀನನನ್ನು ತೆಗೆದುಬಿಡ್ತೀವಿ. ಆತ ಜೈಲಲ್ಲಿದ್ರೇನಂತೆ ಹೊರಗೆ ಬಂಡೆ ಮಂಜ ಇಲ್ವಾ? ದೇವಿ ಮಗ ಹರ್ಷ ಇಲ್ವಾ? ಯಾರೇ ಕೈಗೆ ಸಿಕ್ಕಿದ್ರೂ ಮುಗಿಸಿಬಿಡ್ತೀವೀ....!


ಬಸವ

ಹೀಗಂತಲೇ ಜೈಲಲ್ಲಿ ಕೂತು ಹೂಂಕರಿಸುತ್ತಿದ್ದ ಶಂಕ್ರ ಮತ್ತು ಚಿತ್ತನಗೆರೆ ಮಂಜ ತಮಿಳು ಜಗ್ಗನನ್ನು ಹಿಡಿದು ಬಾಂಬುಗಳನ್ನು ತರಿಸಿಕೊಂಡರು. ರಿವಾಲ್ವರುಗಳು ಬಂದವು. ನೆಲಮಂಗಲದ ಕಾಲೇಜು ಹುಡುಗರನ್ನೂ ಬಿಡದೇ ಗ್ಯಾಂಗ್ ಬಲಪಡಿಸಿಕೊಂಡರು. ರಾಮನಗರದ ಜೈಲಲ್ಲೇ ಸೀನನನ್ನು ಮುಗಿಸಲು ಯತ್ನಿಸಿದರು. ರೋಲ್‌ಕಾಲ್ ಹುಟ್ಟಲಾರಂಭಿಸಿತು. ಈ ಮಧ್ಯೆ ಚಿತ್ತನಗೆರೆ ಸೀನ ಜೈಲಿಂದ ಹೊರಬರುತ್ತಿದ್ದಾನೆಂಬ ಮಾಹಿತಿಯೊಂದನ್ನು ಶಂಕ್ರನ ಗ್ಯಾಂಗ್ ಕಲೆ ಹಾಕಿದೆ. ಅದಕ್ಕೆ ತಕ್ಕಂತೆ ಚಿತ್ತನಗೆರೆ ಮಂಜನೂ ಜೈಲಿಂದ ಹೊರಬರಲು ಕಸರತ್ತು ನಡೆಸಿದ್ದಾನೆ. ಜುಲೈ 9 ರ ಶುಕ್ರವಾರ ಅಥವಾ ಜುಲೈ 12 ಸೋಮವಾರ ತಾನು ಜಾಮೀನಿನ ಮೇಲೆ ಹೊರಬರಲೇಬೇಕು ಮತ್ತು ತಾನು ಬಿಡುಗಡೆಯಾಗುವುದಕ್ಕೂ ಮೊದಲೇ ಬಂಡೆ ಮಂಜ ನಿಕಾಲಿಯಾಗಿರಬೇಕು.


ಯತೀಶ

ಇಂಥದೊಂದು ಲೆಕ್ಕ ಹಾಕಿಯೇ ಚಿತ್ತನಗೆರೆ ಮಂಜ ಶಂಕ್ರನ ಪಕ್ಕಾ ಶಿಷ್ಯ ಯತೀಶನನ್ನು ರೌಂಡಿಂಗ್‌ಗಿಳಿಸಿದ್ದ. ಆತನ ಜೊತೆ ಯಶವಂತಪುರದ ಆಟೋ ಸ್ವಾಮಿಯ ಹುಡುಗರು, ಕಮಲಾನಗರದ ಕೆಲ ಪುಡಿ ರೌಡಿಗಳೂ ಮತ್ತು ತಮಿಳು ಜಗ್ಗನ ಹುಡುಗರೂ ಸಾತು ಕೊಟ್ಟರು. ಆದರೆ ಬಂಡೆ ಮಂಜ ಹಳೇ ಹುಲಿ. ನೆಲಮಂಗಲದ ಗಣೇಶಗುಡಿ ಬಳಿಯಿರುವ ತನ್ನ ಮನೆ ಸುತ್ತ ಸರ್ಪಗಾವಲನ್ನೇ ಹಾಕಿಕೊಂಡು ಓಡಾಡುವುದನ್ನೇ ನಿಲ್ಲಿಸಿಬಿಟ್ಟಿದ್ದ. ಆದರೆ ಜುಲೈ ಮೂರರಂದು ದುಡುಕಿಬಿಟ್ಟ.

ಅದೊಂದು ಬಾಡೂಟದ ಪಾರ್ಟಿ. ಹಾಗೇ ಮಾಂಸದ ಊಟ ಏರ್ಪಡಿಸಿ ಅದಕ್ಕೆ ಬಂಡೆ ಮಂಜನನ್ನು ಆಹ್ವಾನಿಸಿದವನು ಗಿಡ್ಡೇನಹಳ್ಳಿಯ ರವಿ. ಮಧ್ಯಾಹ್ನ 4 ರ ಹೊತ್ತಿಗೆ ಒಂದು ಕ್ವಾಲೀಸ್ ಗಾಡಿಯಲ್ಲಿ ಬಂಡೆ ಮಂಜ ಮತ್ತೊಂದು ಕ್ವಾಲೀಸ್ ಗಾಡಿಯಲ್ಲಿ ದೇವಿ ಮಗ ಹರ್ಷ ಗಿಡ್ಡೇನಹಳ್ಳಿಗೆ ಬಂದಿದ್ದಾರೆ. ಬರುವಾಗ ಬಂಡೆ ಮಂಜ ತನ್ನ ಜೊತೆ ವಿನಯ, ಸತೀಶ, ನಂದೀಶ, ಪುಟ್ಟರಾಜು, ನರಸಿಂಹ, ಶಿವಾ ಮತ್ತು ಬಸವ ಉರ್ಫ್ ಲಾಳೀಶ ಎಂಬ ಹುಡುಗರನ್ನು ಜೊತೆ ಹಾಕಿಕೊಂಡ. ದೇವಿ ಮಗ ಹರ್ಷ ಕೂಡ ಮಂಜನ ಜೊತೆಯಲ್ಲೇ ಊಟ ಮುಗಿಸಿದ್ದ. ಅಲ್ಲಿಗೆ ಬಂದಿದ್ದ ಮತ್ತೂ ಒಬ್ಬನೆಂದರೆ ಆತ ವಕೀಲ ರವಿಕುಮಾರ್.

ಇತ್ತೀಚೆಗಷ್ಟೇ ಬಂಡೆಮಂಜನಿಗೆ ಪರಿಚಿತನಾಗಿದ್ದ ವಕೀಲ ರವಿಕುಮಾರ್ ಸಣ್ಣಪುಟ್ಟ ವ್ಯವಹಾರಗಳಲ್ಲಿ ಬಂಡೆ ಮಂಜನಿಗೆ ನೆರವಾಗುತ್ತಿದ್ದ. ಅದ್ಯಾವ ಕೆಟ್ಟಗಳಿಗೆಯೋ ಗೊತ್ತಿಲ್ಲ, ಬಂಡೆ ಮಂಜ ಕರೆದನೆಂದು ತನ್ನ ಆಲ್ಟೋ ಕಾರೆತ್ತಿಕೊಂಡು ವಕೀಲ ರವಿಕುಮಾರ್ ಗಿಡ್ಡೇನಹಳ್ಳಿಯ ಬಾಡೂಟಕ್ಕೆ ಬಂದುಬಿಟ್ಟ. ಅದೇನು ವಿಚಿತ್ರವೋ; ಬಂಡೆ ಮಂಜನಂತೆ ರವಿಕುಮಾರ್ ಕೂಡ ಕರಿ ಪ್ಯಾಂಟು ಬಿಳಿ ಶರ್ಟು ತೊಟ್ಟಿದ್ದ.

ಸಂಜೆ ಏಳೂವರೆಯ ಹೊತ್ತಿಗೆ ಊಟ ಮುಗಿಸಿದ ಹರ್ಷ ಮತ್ತು ಬಂಡೆ ಮಂಜ ಜೊತೆಗೊಂದಿಷ್ಟು ಹುಡುಗರನ್ನು ಹಾಕಿಕೊಂಡಿದ್ದೇ ಒಂದು ಕ್ವಾಲೀಸ್ ಗಾಡಿ ಹತ್ತಿ ಮುಂದೆ ಪಾಸಾಗಿ ಬಿಟ್ಟರು. ಎರಡೂ ಬೆಳ್ಳಿ ಬಣ್ಣದ ಕ್ವಾಲೀಸ್ ಗಾಡಿಗಳು. ವಕೀಲ ರವಿಕುಮಾರ್ ಕೂಡ ಮಂಜನಂತೆ ಬಟ್ಟೆ ಹಾಕಿದ್ದನಲ್ಲ; ಜೈಲಲ್ಲಿದ್ದ ಶಂಕ್ರನಿಗೆ ಮಾಹಿತಿ ಸಿಕ್ಕಿಬಿಟ್ಟಿದೆ. ದುರಾದೃಷ್ಟ ಹೇಗಿತ್ತೆಂದರೆ ತನ್ನ ಆಲ್ಟೋ ಕಾರನ್ನು ಮಂಜನ ಶಿಷ್ಯನಿಗೆ ಓಡಿಸಲು ಕೊಟ್ಟ ರವಿಕುಮಾರ್ ತಾನೇ ಮಂಜನ ಕ್ವಾಲೀಸ್‌ಗೆ ಡ್ರೈವರಾದ. ಗಾಡಿಯ ತುಂಬ ಹುಡುಗರನ್ನು ಹಾಕಿಕೊಂಡಿದ್ದೇ ಸೊಂಡೆಕೊಪ್ಪದ ರಸ್ತೆ ಹಿಡಿದ. ಆಲ್ಟೋ ಹಿಂಬಾಲಿಸುತ್ತಿತ್ತು. ಇನ್ನೇನು ನೆಲಮಂಗಲ 8 ಮೈಲಿ ಬಾಕಿ ಇದೆ ಎನ್ನುವಾಗಲೇ ಸೊಂಡೆಕೊಪ್ಪದ ಮಸೀದಿಯ ಬಳಿ ಬೈಕ್ ಒಂದು ರವಿಕುಮಾರ್ ಓಡಿಸುತ್ತಿದ್ದ ಕ್ವಾಲೀಸ್ ಗಾಡಿಗೆ ಚಮಕಾಯಿಸಿದೆ. ಅದರ ಬೆನ್ನಲ್ಲೇ ಬಿಳಿಯ ಸುಮೋ ಬಂದಿದ್ದೇ ಕ್ವಾಲೀಸ್‌ಗೆ ಗುದ್ದಿದೆ. ಗುದ್ದಿದ ಏಟಿಗೆ ಪಕ್ಕದ ಮೋರಿಗೆ ನುಗ್ಗಿದ ಕ್ವಾಲೀಸ್‌ಗೆ ಎದುರಾಗಿ ಸುಮೋ ಅಡ್ಡಗಟ್ಟಿ ನಿಂತಿದೆ. ಸುಮೋದಿಂದ ಇಳಿದ ಹನ್ನೆರಡು ಮಂದಿ ಹುಡುಗರ ಗ್ಯಾಂಗ್ ನೋಡುನೋಡುತ್ತಿದ್ದಂತೆಯೇ ಬಾಂಬ್ ಎಸೆದಿದೆ. ಕೆಲವರ ಕೈಯಲ್ಲಿ ಲಾಂಗ್‌ಗಳಿದ್ದವು. ಇನ್ನೊಂದಿಬ್ಬರು ರಿವಾಲ್ವರ್ ಹಿಡಿದಿದ್ದರು.

ಯಾವತ್ತು ಬಾಂಬ್ ಸಿಡಿಯಲಿಲ್ಲವೋ ರಿವಾಲ್ವರ್‌ನಿಂದ ಫೈರಿಂಗ್ ಶುರುವಾಗಿದೆ. ಕ್ವಾಲೀಸ್‌ನ ಮೇಲೆ ಹಾರಿಸಿದ ಗುಂಡಿಗೆ ಸತೀಶನ ಕೈ ತೂತಾದರೆ ನಂದೀಶನ ಬೆನ್ನಿನಿಂದ ರಕ್ತ ಸೋರುತ್ತಿತ್ತು, ಗಾಬರಿ ಬಿದ್ದ ಪುಟ್ಟರಾಜು, ನರಸಿಂಹ ಮತ್ತು ಶಿವ ಗಾಡಿಯಿಂದ ಜಂಪ್ ಮಾಡಿ ಓಟ ಕಿತ್ತಿದ್ದಾರೆ. ಆದರೆ ನಂದೀಶ ಮಾತ್ರ ಓಡದೇ ಫೈಟಿಂಗಿಗೆ ನಿಂತುಬಿಟ್ಟ. ಆತನನ್ನು ಮುತ್ತಿಕೊಂಡ ನಾಲ್ಕೈದು ಮಂದಿ ಎರ್‍ರಾಬಿರ್‍ರಿ ಕತ್ತರಿಸುತ್ತಿದ್ದಂತೆ ಉಳಿದವರೆಲ್ಲ ಡ್ರೈವರ್ ಸೀಟಿನಲ್ಲಿ ಕೂತಿದ್ದ ರವಿಕುಮಾರ್‌ನನ್ನು ಕ್ವಾಲೀಸ್‌ನಿಂದ ಎಳೆದುಕೊಂಡಿದ್ದಾರೆ. ಕತ್ತರಿಸಿದ ಏಟಿಗೇ ಆತನ ಕೈಯೇ ತುಂಡಾಗಿದೆ. 'ನನ್ ಮಗನೇ; ಬಂಡೆ ಮಂಜಾ ಅಂದ್ರೆ ನೀನೇ ಏನ್ಲೋ? ಇವತ್ತು ಸಿಕ್ದೆ ನೋಡು. ನಿನ್ನನ್ನು ಉಳಿಸಬಾರ್ದು.....!' ಎಂದದ್ದೇ ತಲೆಗೆರಡು ಲಾಂಗ್ ಏಟು ಹಾಕಿದ್ದಾರೆ. ತಲೆ ಸೀಳುತ್ತಿದ್ದಂತೆಯೇ ರವಿಯ ಪ್ರಾಣ ಹೋಗಿದೆ.

ಹಾಗೆ ಪ್ರಾಣ ಹೋದ ನಂತರವೂ ಅದೇನೋ ಗುಮಾನಿ ಬಂದು ಇನ್ನೆಲ್ಲಿ ಬದುಕಿ ಬಿಡುತ್ತಾನೋ ಎನ್ನಿಸಿ ಕುತ್ತಿಗೆಗೆ ರಿವಾಲ್ವರ್ ಇಟ್ಟು ಎರಡು ರೌಂಡ್ ಫೈರ್ ಮಾಡಿದ್ದಾರೆ. ಸತ್ತ ಹೆಣಕ್ಕೂ ಗುಂಡು ಹಾರಿಸಿದ ಹಂತಕರಿಗೆ ತಾವು ಕೊಲ್ಲುತ್ತಿರುವುದು ಬಂಡೆ ಮಂಜನನ್ನಲ್ಲ, ಅಮಾಯಕ ರವಿಕುಮಾರ್‌ನನ್ನು ಎಂಬುದು ಎಲ್ಲಿ ಗೊತ್ತಾಗಲು ಸಾಧ್ಯ?


ವಕೀಲ ರವಿಕುಮಾರ್ ಅನ್ಯಾಯವಾಗಿ ಹೆಣವಾಗಿ ಹೋದ!

ಯಲಹಂಕದ ಬೋಗಸ್ ಬಿಲ್ ಮಾಫಿಯಾ!

ಕಿರುತೆರೆ ನಟ ಬಾಲಾಜಿ ಬದುಕುಳಿದಿದ್ದೇ ಹೆಚ್ಚು


ಬಿಬಿಎಂಪಿಯ ಬೋಗಸ್ ಬಿಲ್ ಖದೀಮರ ಜಾಲ ಅದೆಷ್ಟು ಅಪಾಯಕಾರಿ ಎಂಬುದಕ್ಕೆ ಉದಾಹರಣೆಯಂತಿದ್ದಾರೆ ಯಲಹಂಕ ಬಾಲಾಜಿ!

ಈ ಟಿವಿಯಲ್ಲಿ ಪ್ರತಿನಿತ್ಯ ಬರುವ ಟಿ.ಎನ್.ಸೀತಾರಾಮ್ 'ಮುಕ್ತಾ' ಧಾರಾವಾಹಿಯಲ್ಲಿ ಪರ್ವತರೆಡ್ಡಿ ಎಂಬ ಪಾತ್ರಕ್ಕೆ ಜೀವ ತುಂಬಿದ್ದು ಇದೇ ರಂಗಭೂಮಿ ಕಲಾವಿದ ಯಲಹಂಕ ಬಾಲಾಜಿ. ಬಹುಶಃ ಪಾಲಿಕೆಯ ಬೋಗಸ್ ಬಿಲ್ ದಂಧೆಕೋರರ ವಿರುದ್ಧ ಈ ಬಾಲಾಜಿ ಬೀದಿಗಿಳಿಯದೇ ಹೋಗಿದ್ದರೆ ಇವತ್ತು ಇಂಥ ದುರ್ಗತಿ ಬರುತ್ತಿರಲಿಲ್ಲ, ಅವರ ಎದೆಯುದ್ದಕ್ಕೂ ಕುಯ್ದು ಆಪರೇಷನ್ನಿನ ಮಾರ್ಕಿದೆ. ಹೃದಯದ ತೊಂದರೆಯಿಂದಾಗಿ ಇಲ್ಲಿಗೆ ವರ್ಷದ ಹಿಂದಷ್ಟೇ ನಾರಾಯಣ ಹೃದಯಾಲಯದಲ್ಲಿ ಒಂದಲ್ಲ ಎರಡು ಹಾರ್ಟ್ ಆಪರೇಷನ್ನಿಗೀಡಾದ ಬಾಲಾಜಿಯನ್ನು ಈ ಗತಿಗೆ ತಂದದ್ದು ಪಾಲಿಕೆಯ ಯಲಹಂಕ ವಲಯದ ಎಕ್ಸಿಕ್ಯೂಟಿವ್ ಇಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಮತ್ತು ಇದೇ ಯಲಹಂಕದ ರಸ್ತೆ ಭೂಮಿಯ ನೆಲಗಳ್ಳರು!


ಯಲಹಂಕ ಬಾಲಾಜಿ

ಬಾಲಾಜಿ ಮಾಡಿದ ತಪ್ಪೆಂದರೆ ರಸ್ತೆ ಅಗಲೀಕರಣದ ನೆಪದಲ್ಲಿ ಐದುಕೋಟಿ ರೂಪಾಯಿಗಳಷ್ಟು ಪಾಲಿಕೆ ರೊಕ್ಕ ದೋಚಲು ಹೊರಟಿದ್ದ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಹ್ಲಾದ್ ವಿರುದ್ಧ ದೂರು ಕೊಟ್ಟಿದ್ದು. ಯಲಹಂಕದ ಕೋಗಿಲು ಕ್ರಾಸ್‌ನಿಂದ ಕಣ್ಣೂರು ಕ್ರಾಸ್‌ತನಕ 5.1 ಕಿ.ಮೀ. ಗುಂಟ ರಸ್ತೆಯನ್ನು 80 ಅಡಿಗೆ ಅಗಲಿಸಬೇಕೆಂದು ಸಿಡಿಪಿ ಯೋಜನೆಯಲ್ಲೇ ನಿರ್ಧಾರವಾಗಿತ್ತು. ಆ ಪ್ರಕಾರವೇ ರಸ್ತೆ ಅಗಲಿಸಲು ಹೋದರೆ ಆಜೂಬಾಜಿನ ಕಟ್ಟಡಗಳನ್ನು ಒಡೆಯಬೇಕು ಮತ್ತು ಅದಕ್ಕೆ ಸಿಕ್ಕಾಪಟ್ಟೆ ಸಮಯ ಹಿಡಿಯುತ್ತದೆ.

ಆದರೆ ಯಲಹಂಕದ ಪಾಲಿಕೆ ಬಕಾಸುರರಿಗೆ ಇದೇ ರಸ್ತೆ ಅಗಲೀಕರಣದ ನೆಪದಲ್ಲಿ ಐದುಕೋಟಿ ದುಡ್ಡು ದೋಚಬೇಕಿತ್ತು. ಅದಕ್ಕೊಂದು ಯಲಹಂಕ ವಲಯದ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಹ್ಲಾದ್ ಐದುಕೋಟಿಯ ಭೋಗಸ್ ಬಿಲ್ ಯೋಜನೆಯನ್ನೇ ರೂಪಿಸಿಬಿಟ್ಟಿದ್ದ. ಆ ಪ್ರಕಾರ ಕೆಟಿಪಿಟಿ ಕಾಯ್ದೆ ಅಂದರೆ ಕರ್ನಾಟಕ ಟೌನ್ ಪ್ಲಾನಿಂಗ್ ಆಕ್ಟ್‌ನಲ್ಲಿದ್ದ ವಿಶಿಷ್ಟ ನಿಯಮವೊಂದನ್ನು ಬಳಸಿಕೊಂಡು ಅಂದರೆ ಪ್ರಕೃತಿ ವಿಕೋಪದಂಥ ತುರ್ತು ಸಂದರ್ಭದಲ್ಲಿ ಟೆಂಡರನ್ನ ಕರೆಯದೇ ಕೋಟಿಗಟ್ಟಲೇ ರೂಪಾಯಿಗಳ ಕಾಮಗಾರಿ ನಡೆಸಬಹುದೆಂಬ ನಿಯಮದ ನೆಪವೊಡ್ಡಿ 5 ಕೋಟಿಯ ಪ್ರಾಜೆಕ್ಟಿಗೆ ಮಂಜೂರಾತಿ ಗಿಟ್ಟಿಸಿಬಿಟ್ಟ!



ಯಲಹಂಕದಲ್ಲಿ ಭೂಕಂಪವಾಗಲಿ, ಸುನಾಮಿಯಾಗಲಿ ಯಾವುದೂ ಸಂಭವಿಸಿರಲಿಲ್ಲ. ಆದರೆ ಜಕ್ಕೂರು ಏರ್‌ಪೋರ್ಟ್‌ನಲ್ಲಿ 'ಏರ್‌ಷೋ' ಇತ್ತಲ್ಲ. ಆ ಏರ್‌ಷೋ ನಿಮಿತ್ತ ತುರ್ತಾಗಿ ರಸ್ತೆ ಅಗಲೀಕರಣವಾಗಬೇಕೆಂಬ ಕಳ್ಳ ಸಬೂಬು ಮುಂದಿಟ್ಟಿದ್ದ. ಯಲಹಂಕದ ಕ್ರಿಮಿನಲ್ ಶಾಸಕ ವಿಶ್ವನಾಥ ರೆಡ್ಡಿಗೂ ಕಮೀಷನ್ ಬೇಕಿತ್ತಲ್ಲ. ಗಂಡಾಗುಂಡಿ ಮಾಡಿ ನಗರಾಭಿವೃದ್ಧಿ ಇಲಾಖೆಯಿಂದ ಮಂಜೂರಾತಿ ದೊರಕಿಸಿಕೊಟ್ಟ. ವಿಕಟವೆಂದರೆ ಮಂಜೂರಾತಿಯೇನೋ ಸಿಕ್ಕಿತ್ತಾದರೂ ಆ ಹೊತ್ತಿಗೆ ಏರ್‌ಷೋ ಮುಗಿದೇಹೋಗಿತ್ತು. ಹಾಗಿದ್ದೂ ದುಡ್ಡು ದೋಚಲು ರಸ್ತೆ ಅಗಲೀಕರಣಕ್ಕೆ ಕೈಯಿಟ್ಟ ಪಾಲಿಕೆ ಖದೀಮರು ಸದ್ಯ 80 ಅಡಿಗೆ ಅಗಲಿಸಹೊರಟರೆ ರಸ್ತೆಯನ್ನಾಕ್ರಮಿಸಿಕೊಂಡವರ ಬಿಲ್ಡಿಂಗ್ ಒಡೆಯುವುದು ತಡವಾಗುತ್ತದೆಯಾದ್ದರಿಂದ ಅರ್ಜೆಂಟಾಗಿ 60 ಅಡಿಗಷ್ಟೇ ಅಗಲೀಕರಿಸಿ ಇನ್ನಾವತ್ತಾದರೂ ಅದನ್ನು 80 ಅಡಿಗೆ ವಿಸ್ತರಿಸಿದರಾಯಿತುಎಂದು ಕಮಿಷನ್ ಕೊಟ್ಟವರಿಗೆಲ್ಲ ತುಂಡು ಗುತ್ತಿಗೆ ಕೊಟ್ಟೇ ಬಿಟ್ಟರು.

80 ಅಡಿಗೆ ಬದಲು 60 ಅಡಿ ರಸ್ತೆ ಅಗಲಿಸುವುದು ಅಂದರೆ ಇದ್ದ ರಸ್ತೆಗೆ ಸಣ್ಣಮುಟ್ಟ ತೇಪೆ ಹಾಕಿದಂತೆ ಮಾಡಿ ಬೋಗಸ್ ಬಿಲ್ ಜಡಿದು ಇಡೀ ಐದುಕೋಟಿಯನ್ನು ದೋಚುವುದು. ಇದು ಗೊತ್ತಾಗಿದ್ದೇ ಕಿರುತೆರೆ ಕಲಾವಿದ ಮತ್ತು ಜನಪರ ಹೋರಾಟಗಾರ ಯಲಹಂಕ ಬಾಲಾಜಿ ಲೋಕಾಯುಕ್ತಕ್ಕೆ ದೂರು ಕೊಟ್ಟರು. ಸಿಡಿಪಿ ಪ್ಲಾನ್ ಪ್ರಕಾರ ರಸ್ತೆ ಅಗಲೀಕರಣ ಮಾಡಬೇಕೆಂದರೆ 80 ಅಡಿಗಷ್ಟೇ ಮಾಡಬೇಕು. ಈಗ 60 ಅಡಿಗೆ ಮಾಡಿ ಮತ್ತೊಮ್ಮೆ 80 ಅಡಿಗೆ ಮಾಡುವುದೆಂದರೆ ಅದು ದುಪ್ಪಟ್ಟು ಖರ್ಚು. ಪಾಲಿಕೆ ಬೊಕ್ಕಸವನ್ನು ಈ ರೀತಿ ಪೋಲು ಮಾಡುವುದೇ ಅಪರಾಧವೆಂದೂ ರಸ್ತೆಯ ಇಕ್ಕೆಲದಲ್ಲಿದ್ದ ಕಟ್ಟಡ ಮಾಲೀಕರಿಗೆ ಸೂಕ್ತ ಪರಿಹಾರ ಕೊಟ್ಟ ನಂತರವೇ ಕಾಮಗಾರಿ ಆರಂಭಿಸಬೇಕೆಂದೂ ಬಾಲಾಜಿ ಪಟ್ಟುಹಿಡಿದಿದ್ದರು.

ಲೋಕಾಯುಕ್ತರು ಕೂಡ ಬಾಲಾಜಿಯವರ ಬೇಡಿಕೆಗೆ ಒತ್ತುಕೊಟ್ಟು ಪಾಲಿಕೆ ರೊಕ್ಕ ಪೋಲಾಗುವುದನ್ನು ತಪ್ಪಿಸುವಂತೆ ಆದೇಶಿಸಿದ್ದರು. ಅದರಂತೆ ಕಮೀಷನರ್ ಸೇರಿದಂತೆ ಪಾಲಿಕೆಯ ಎಲ್ಲಾ ಅಧಿಕಾರಿಗಳಿಗೆ ನೋಟೀಸ್ ಕೊಟ್ಟು ಸ್ಥಳ ಪರಿಶೀಲನೆಗೆ ಆದೇಶಕೊಟ್ಟರು. ಒಮ್ಮೆ ಲೋಕಾಯುಕ್ತದ ಇಂಜಿನಿಯರ್‌ಗಳು ಬಂದು ಸ್ಥಳ ಪರಿಶೀಲನೆ ನಡೆಸಿಬಿಟ್ಟರೆ ಎಲ್ಲಿ 5 ಕೋಟಿ ದೋಚುವ ಕೆಲಸಕ್ಕೆ ಕಲ್ಲು ಬೀಳುತ್ತೋ ಎಂದು ಹತಾಶೆಗೆ ಬಿದ್ದ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಹ್ಲಾದ್ ಶಾಸಕ ವಿಶ್ವನಾಥ್ ಚೇಲಾಗಳನ್ನೆಲ್ಲ ಸೇರಿಸಿದ್ದೇ ಬಾಲಾಜಿ ವಿರುದ್ಧ ಛೂಬಿಟ್ಟ.

2009ರ ಜುಲೈ 10ರ ಬೆಳಗ್ಗೆ ಲೋಕಾಯುಕ್ತದ ಇಂಜಿನಿಯರ್‌ಗಳ ಸಮೇತ ಕೋಗಿಲು ಕ್ರಾಸ್‌ಗೆ ಸ್ಥಳ ಪರಿಶೀಲನೆಗೆಂದು ಬಾಲಾಜಿ ಬರುತ್ತಿದ್ದಂತೆ ಯಲಹಂಕ ಪುರಸಭೆಯ ಮಾಜಿ ಅಧ್ಯಕ್ಷ ಕುಟ್ಟಿ ಉರ್ಫ್ ಆಂಜನೇಯ, ಬಾರ್ ಮಾಲೀಕ ಮಾಳಿಗೆ ಜಯಣ್ಣ, ಹೊಸಬೀದಿ ಕಾಂತರಾಜು, ಈತನ ತಮ್ಮ ಬಸವರಾಜು, ಕೊಂಡಪ್ಪನ ಮಗ ರಮೇಶ ಮುಂತಾದವರೆಲ್ಲ ಜಮಾಯಿಸಿದ್ದೇ ಬಾಲಾಜಿಯನ್ನು ಅಟ್ಟಾಡಿಸಿದ್ದೇ ಹಿಗ್ಗಾಮುಗ್ಗಾ ಥಳಿಸಿಬಿಟ್ಟರು. ರಸ್ತೆಯನ್ನು 80 ಅಡಿಗೆ ವಿಸ್ತರಿಸಿದರೆ ನಿಮ್ಮೆಲ್ಲರ ಬಿಲ್ಡಿಂಗ್ ಒಡೆಯಬೇಕಾಗುತ್ತದೆ ಮತ್ತು ಅದಕ್ಕೆ ಬಾಲಾಜಿ ದೂರು ಕೊಟ್ಟಿದ್ದೇ ಕಾರಣ ಎಂದು ಇಂಜಿನಿಯರ್ ಪ್ರಹ್ಲಾದ್ ಎಮ್ಮೆಲ್ಲೆ ವಿಶ್ವನಾಥ್ ಬಂಟರನ್ನು ಛೂಬಿಟ್ಟಿದ್ದ.

ಸ್ಥಳ ಪರಿಶೀಲನೆಗೆಂದು ಬಂದಿದ್ದ ಲೋಕಾಯುಕ್ತ ಇಂಜಿನಿಯರ್‌ಗಳ ಜೊತೆಗೆ ಇದ್ದ ಇ.ಇ.ಪ್ರಹ್ಲಾದ್ ಶಾಸಕ ವಿಶ್ವನಾಥ್ ಚೇಲಾಗಳಿಂದ ಬಾಲಾಜಿ ಒದೆ ತಿನ್ನುತ್ತಿದ್ದರೆ ಕಾಟಾಚಾರಕ್ಕೂ ರಕ್ಷಣೆಗೆ ಬರಲಿಲ್ಲ. ಲೋಕಾಯುಕ್ತ ಚೀಫ್ ಇಂಜಿಯರ್ ಅನಿಲ್‌ಕುಮಾರ್ ದಾಳಿಕೋರರರನ್ನು ತಡೆದು ತಮ್ಮ ವಾಹನದಲ್ಲಿ ಬಾಲಾಜಿಯನ್ನು ಪಾರು ಮಾಡದೇ ಹೋಗಿದ್ದರೆ ಮಚ್ಚು ಲಾಂಗ್ ಹಿಡಿದು ಬಂದಿದ್ದ ಎಮ್ಮೆಲ್ಲೆ ಬಂಟರು ಬಾಲಾಜಿಯನ್ನು ಮುಗಿಸೇಬಿಡುತ್ತಿದ್ದರೇನೋ!

ಆವತ್ತು ಹಾಗೆ ಹಲ್ಲೆಗೀಡಾದ ಬಾಲಾಜಿಗೆ ಯಾಪಾಟಿ ಪೆಟ್ಟು ಬಿದ್ದಿತ್ತೆಂದರೆ ಅವರ ಹೃದಯದ ಕವಾಟಕ್ಕೆ ತೂತು ಬಿದ್ದು ಎನ್‌ಲಾರ್ಜ್ ಆಗಿತ್ತು. ಹಾರ್ಟು ಪ್ರಿಂಕ್ ಲಿಂಗ್ ಆಗತೊಡಗಿ ರಕ್ತವನ್ನು ಪಂಪ್ ಮಾಡುವುದನ್ನೇ ನಿಲ್ಲಿಸಿಬಿಟ್ಟಿತ್ತು. ಎದೆ ಹಿಡಿದುಕೊಂಡೇ ಯಲಹಂಕ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟರೆ ಎಮ್ಮೆಲ್ಲೆ ಬಂಟರ ವಿರುದ್ಧ ಪೊಲೀಸರು ದೂರನ್ನೇ ದಾಖಲಿಸಲಿಲ್ಲ. ಕೊನೆಗೆ ಬದುಕುಳಿಯಲು ಬಾಲಾಜಿ ನಾರಾಯಣ ಹೃದಯಾಲಯಕ್ಕೆ ದಾಖಲಾಗಬೇಕಾಯಿತು. ಅಲ್ಲಿ ಹೃದಯಕ್ಕೆ ಆಪರೇಷನ್ ಮಾಡಿಸಿಕೊಂಡೇ ಬಾಲಾಜಿ ಬದುಕುಳಿದಿದ್ದಾರೆ. ಅಷ್ಟಕ್ಕೂ ನಾರಾಯಣ ಹೃದಯಾಲಯದಲ್ಲಿ ಬಾಲಾಜಿಯ ಹಾರ್ಟ್ ಆಪರೇಷನ್ನಿನ ಖರ್ಚು ಬರಿಸಿದ್ದು ಲೇಟೆಸ್ಟ್ ಕೃಷ್ಣಪ್ಪನವರ ಮಕ್ಕಳಾದ ಪ್ರಿಯಕೃಷ್ಣ ಮತ್ತವರ ತಮ್ಮ ಪ್ರದೀಪ್!

ಪಾಲಿಕೆ ಖದೀಮರ ಬೋಗಸ್ ಬಿಲ್ ಮಾಫಿಯಾ ವಿರುದ್ಧ ಹೋರಾಡಲು ಹೋಗಿ ಎದೆ ಕುಯ್ಯಿಸಿಕೊಂಡು ನರಳುತ್ತಿರುವ ಕಿರುತೆರೆ ಕಲಾವಿದ ಬಾಲಾಜಿಗೆ ಸಿಕ್ಕಿದ್ದಾದರೂ ಏನು? ಬೋಗಸ್ ಬಿಲ್ ಮಾಡಿ ಐದುಕೋಟಿ ಕಬಳಿಸಿದ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಹ್ಲಾದ್‌ರನ್ನು ಇವತ್ತಿಗೂ ರಕ್ಷಿಸುತ್ತಿರುವ ಎಮ್ಮೆಲ್ಲೆ ವಿಶ್ವನಾಥ್ ನುಂಗಿದ ಪಾಪದ ಪಾಲೆಷ್ಟು?

ಪ್ರೀತಿಗಾಗಿ ಪೀಠತ್ಯಾಗ



'ಲಂಕೇಶ್' ಜೊತೆ ನಿವೇದಿತಾಳ ಬಿಚ್ಚುಮಾತು...

ಚಿತ್ರದುರ್ಗದ ಹಲವು ಪ್ರಗತಿಪರರ ನೆರವಿನಿಂದ 'ಲಂಕೇಶ್' ನಿವೇದಿತಾಳ ಮೊಬೈಲ್ ನಂಬರ್ ಪಡೆದು ಆಕೆಯೊಂದಿಗೆ ಮಾತಾಡಿತು. ಈ 'ಹುಡುಗಿ'ಯ ಸ್ಪಷ್ಟತೆ, ಯೋಚನಾಲಹರಿ ಎಷ್ಟು ಪ್ರಬುದ್ಧವಾಗಿದೆ ಎಂದು ತಿಳಿಯಲು ಆಕೆಯ ಮಾತುಗಳನ್ನೇ ಆಲಿಸಿ:

"ನನ್ ಅಪ್ಪ-ಅಮ್ಮ ಯಾರು ಅನ್ನೋದೆ ನಂಗೊತ್ತಿಲ್ಲ. ಯಾರೋ ಒಡಲಾಳದ ಪ್ರೀತಿಯಿಂದ ಬೆಳೆಸಿದರು. ಯಾರೋ ಅನ್ನೋದೇ ತಪ್ಪು, ಅವರು ಬೆಂಕಿಕೆರೆಯ ಅಜ್ಜಪ್ಪ.. ಮುಂದೆ ಶಿಕ್ಷಣದ ನಂತರ ನಾನು ಅನಾಥಾಶ್ರಮದ ಪಾಲಾದೆ.

...ನಂತರ ದುರ್ಗದ ಮಠಾಧೀಶರು ನನಗೆ ಆಸರೆ ನೀಡಿದರು. ಅಲ್ಲಿ ನನ್ನ ಆಧ್ಯಾತ್ಮಿಕ ಜೀವನ ಶುರುವಾಯಿತು. ಮಠಾಧೀಶಳಾದ ನಂತರ ಕಳೆದ ಏಳು ವರ್ಷಗಳಿಂದ ಸಾಮೂಹಿಕ ಮದುವೆ ಮತ್ತಿತರ ಮಹಿಳೋದ್ಧಾರ ಕೆಲಸಗಳ ಜವಾಬ್ದಾರಿಯನ್ನು ಪರಿಪೂರ್ಣವಾಗಿ ನಿಭಾಯಿಸಿದೆ...

...ನಾನು ದೇವರನ್ನು ನೋಡಿಲ್ಲ, ನನ್ನ ಪಾಲಿಗೆ ಮುರುಘಾಮಠದ ಶರಣರೇ ದೇವರ ಸಮಾನ...

...ಶಿರಸಿ ಮಠದಲ್ಲಿ ಮಠಾಧೀಶೆಯಾಗಿ ನಾನು ಸಾಕಷ್ಟು ಕೆಲಸ ಮಾಡಿದೆ. ಎಷ್ಟೋ ಜನ ನನ್ನ ಬೆಂಬಲಕ್ಕಿದ್ದರೂ, ಅವರು ಎಷ್ಟೇ ಮರ್ಯಾದೆ, ಗೌರವ ಕೊಟ್ಟರೂ ನನ್ನನ್ನು ಅನಾಥ ಪ್ರಜ್ಞೆಯೊಂದು ಕಾಡ್ತಾನೆ ಇತ್ತು. ಬಹುಶಃ ಇದು ನನ್ನ ಬಾಲ್ಯದಿಂದಲೇ ಆರಂಭವಾಗಿದ್ದು ಅನಿಸುತ್ತೆ, ಅಷ್ಟಕ್ಕೂ ನಾನು ಮಹಿಳಾ ಮಠಾಧೀಶಳು ಬೇರೆ ಆಗಿದ್ದರಿಂದ ಅಲ್ಲಿ ಕೆಲ ಪುರುಷ ಧ್ವನಿಗಳ ಅಪಸ್ವರವನ್ನು ಕೇಳಬೇಕಾಗಿತ್ತಲ್ಲ? ಅಂತಹ ಹೊತ್ತಿನಲ್ಲಿ ನನ್ನೆಲ್ಲ ಮನದಾಳದ ಸಂಕಟವನ್ನು ಆಗಷ್ಟೇ ಪರಿಚಯವಾಗಿದ್ದ ಸ್ನೇಹಿತ ಚೇತನ್‌ನೊಂದಿಗೆ ಹೇಳಿಕೊಳ್ಳುತ್ತಾ ಬಂದೆ. ನನ್ನ ತೊಳಲಾಟವನ್ನು ಅರ್ಥ ಮಾಡಿಕೊಳ್ಳುತ್ತಾ ಬಂದ ಚೇತನ್ ನನಗೆ ಮಾನಸಿಕ, ನೈತಿಕ ಬೆಂಬಲ ನೀಡುತ್ತಾ ಬಂದ. ನಮಗೇ ಗೊತ್ತಿಲ್ಲದಂತೆ ನಾವು ಪ್ರೀತಿಸತೊಡಗಿದ್ದೆವು. ಒಂದು ಗಟ್ಟಿ ನಿರ್ಧಾರಕ್ಕೆ ಬರಲು ನಾನೊಂದಿಷ್ಟು ಟೈಮ್ ಕೇಳಿದೆ. ಎರಡು ದೋಣಿಗಳಲ್ಲಿ ಕಾಲಿಡುವುದು ಸಾಧ್ಯವಿಲ್ಲ, ಅದು ಸರಿಯೂ ಅಲ್ಲ. ಹಾಗೆ ಮಾಡಿದರೆ ಜನರಿಗೆ, ಭಕ್ತರಿಗೆ, ಸ್ವಾಮೀಜಿಯವರಿಗೆ ಮೋಸ ಬಗೆದಂತೆ. ಅದಕ್ಕೂ ಹೆಚ್ಚಾಗಿ ನನಗೆ ನಾನೇ ಆತ್ಮವಂಚನೆ ಮಾಡಿಕೊಂಡಂತೆ ಎಂಬ ಭಾವ ದಟ್ಟವಾಗತೊಡಗಿತು.... ಈ ಸಂದಿಗ್ಧತೆಯನ್ನು ಗುರುಗಳಿಗೆ ತಲುಪಿಸಿದೆ. ಗುರುಗಳು ಇನ್ನೊಮ್ಮೆ ಯೋಚಿಸಲು ಹೇಳಿದರು. ಆದರೆ ಅನಾಥಪ್ರಜ್ಞೆಯಿಂದ ಹೊರಬಂದು ಚೇತನ್‌ನೊಂದಿಗೆ ಒಂದಾಗಿದ್ದ ನನಗೆ ಬೇರೆ ದಾರಿಯೇ ಇರಲಿಲ್ಲ, ಗುರುಗಳೂ ಇದು ಸರಿ ಎಂದು ಒಪ್ಪಿದ ಮೇಲೆಯೇ ನಾನು ಪೀಠ ತೊರೆದು, ಪ್ರೀತಿಯನ್ನು ಗಟ್ಟಿಯಾಗಿ ಅಪ್ಪಿಕೊಂಡೆ...

... ಕೆಲವು ಪತ್ರಿಕೆಗಳು ನಾನು ಮಠದಿಂದ ಚಿನ್ನ, ದುಡ್ಡು ಕದ್ದಿರುವುದಾಗಿ ಸುಳ್ಳು ಬರೆದಿವೆ. ನಾನೇ ಶಿರಸಿ ಮಠವನ್ನು ಬೆಳೆಸಿದ್ದೇನೆ, ನಿರ್ವಹಿಸಿದ್ದೇನೆ. ಅಲ್ಲಿ ಕದಿಯಲು ಏನೂ ಇಲ್ಲವೇ ಇಲ್ಲ... ಹಾಗೆ ಮಾಡುವ ಕೊಳಕು ಮನಸ್ಸು ನನ್ನದಲ್ಲ... ಚೇತನ್ ತಾಯಿ ರತ್ನಮ್ಮರಿಗೆ ಪೊಲಿಟಿಕಲ್ ಪವರ್ ಇರೋದ್ರಿಂದ ತುಂಬಾ ಟಾರ್ಚರ್ ಸೀಡ್ತಾ ಇದ್ದಾರೆ. ಇವತ್ತು (ಜುಲೈ 8) ಬೆಳಿಗ್ಗೆ ನಮಗೆ ಜೀವ ಬೆದರಿಕೆಯನ್ನು ಹಾಕಲಾಗಿದೆ. ಅದಕ್ಕೇ ನಮ್ಮ ಜೀವಕ್ಕೆ ಅಪಾಯವಿದೆ ಎಂದು ನಾವು ಪೊಲೀಸರಿಗೆ ದೂರು ನೀಡಿದ್ದೇವೆ..."

ಲೌಕಿಕ ಜೀವನ, ಆಧ್ಯಾತ್ಮಿಕ ಜೀವನಗಳೆರಡನ್ನೂ ಒಟ್ಟಿಗೆ ನಿರ್ವಹಿಸುವುದನ್ನು, ನಿಭಾಯಿಸುವುದನ್ನು ಒಪ್ಪಿಕೊಳ್ಳಲೊಲ್ಲದ ಹಿಪಾಕ್ರಸಿ ಭಾರತೀಯ ಸಮಾಜದಲ್ಲಿ ಅಂತರ್ಗತವಾಗಿದೆ. ಸ್ವಾಮಿಯಾದವನು ಬ್ರಹ್ಮಚರ್ಯ ಪಾಲಿಸಲೇಬೇಕೆಂಬ ಭ್ರಮೆ ಇರುವ ಸಮಾಜದಲ್ಲಿ, ಸಂಸಾರಸ್ಥರು ಪೀಠ ಏರುವಂತಿಲ್ಲ, ಪೀಠ ಏರಿದವರು ಲೌಕಿಕ ಬದುಕನ್ನು ಆರಿಸಿಕೊಳ್ಳುವಂತಿಲ್ಲ.

ಆದರೆ ಬಹುತೇಕ ಸ್ವಾಮೀಜಿಗಳು ಕದ್ದುಮುಚ್ಚಿ ಸಂಸಾರ ನಡೆಸುತ್ತ ಬಂದಿದ್ದಾರೆ. ಇನ್ನು ಕೆಲವರು ವಿಕೃತ ಲೈಂಗಿಕ ತೀಟೆಗಳಲ್ಲಿ ಸಿಕ್ಕಿಹಾಕಿಕೊಂಡು ಮಾನಗೇಡಿಗಳಾಗಿದ್ದಾರೆ. ಇತ್ತೀಚೆಗಷ್ಟೇ ನಿತ್ಯಾನಂದ, ಧಾರವಾಡದ ಮುರುಘಾಮಠದ ಶಿವಯೋಗಿ ಸ್ವಾಮಿ ಈ 'ಪರಾಕ್ರಮ' ಮಾಡಿದ್ದಾರೆ. ಇನ್ನೊಂದು ಕಡೆ ರಾಘವೇಶನಂಥವರು ಮಲ್ಲಿಕಾ ಶೆರಾವತ್‌ಳೊಂದಿಗೆ ಪೋಸು ಕೊಡುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಮಹಿಳೆಯೊಬ್ಬಳು ಪೀಠಾಧೀಶರಾಗುವುದನ್ನು ಒಪ್ಪಲೊಲ್ಲದ ಈ ಸಮಾಜದಲ್ಲಿ, ಸನ್ಯಾಸಿನಿ ಸಂಸಾರಿಣಿಯಾಗುವುದು ಆಭಾಸಕರವಾಗಿ ಕಾಣುತ್ತಿದೆ. ಆದರೆ ತನ್ನ ವೈಯಕ್ತಿಕ ಹಕ್ಕಿನಂತೆ ಲೌಕಿಕ ಬದುಕನ್ನು ಆರಿಸಿಕೊಂಡಿರುವ ಸನ್ಯಾಸಿನಿ ನಿವೇದಿತಾ ಒಂದು ಸಣ್ಣ ಬಂಡಾಯವನ್ನೇ ಮಾಡಿದ್ದಾಳೆ.

• ಪಿ.ಕೆ.ಮಲ್ಲನಗೌಡರ್
mallishashi@gmail.com

ಸನ್ಯಾಸಿನಿಯೊಬ್ಬರು ಸಂಸಾರಿಯಾಗಿದ್ದಾರೆ. ಬಹುತೇಕ ಮಾಧ್ಯಮಗಳು ಇದೊಂದು ಭಾರೀ ದ್ರೋಹವೆಂಬಂತೆ ರಂಜನೀಯ ಸುದ್ದಿಗಳಿಗೆ ಶರಣು ಎಂದಿವೆ.

ಮದುವೆ ಎನ್ನುವುದು ಹೆಣ್ಣೊಬ್ಬಳ ವೈಯಕ್ತಿಕ ಆಯ್ಕೆ ಎಂಬುದನ್ನು ಒಪ್ಪಲೊಲ್ಲದ ಪುರುಷ ಪ್ರಾಬಲ್ಯದ ಸಮಾಜದಲ್ಲಿ ಅದೂ ಸನ್ಯಾಸಿನಿಯೊಬ್ಬರು ಬಂಡಾಯದ ಮದುವೆ ಆಗುವುದೆಂದರೆ? ಇಂತಹ ಪರಿಸ್ಥಿತಿಯಲ್ಲೂ ತನಗೆ ಬೇಕಾದ, ತಾನಿಷ್ಟ ಪಟ್ಟ ಪ್ರಿಯತಮನನ್ನು ತಣ್ಣಗೆ ಮದುವೆಯಾಗುವ ಮೂಲಕ ಚಿತ್ರದುರ್ಗದ ಮುರುಘಾಮಠದ ಸನ್ಯಾಸಿನಿ ನಿವೇದಿತಾ ದಿಟ್ಟ ಹೆಜ್ಜೆಯನ್ನೇ ಇಟ್ಟದ್ದಾರೆ. ಆದರೆ ಚಿತ್ರದುರ್ಗದ ಬಿಜೆಪಿಯ ಶೋಕಿಲಾಲ್ ರಾಜಕಾರಣಿ ರತ್ನಮ್ಮ ಮಾತ್ರ ಇಲ್ಲದ ಹುಯಿಲು ಎಬ್ಬಿಸುತ್ತ, ತನ್ನ ರಾಜಕೀಯ ಪ್ರಭಾವ ಬಳಸಿ ನಿವೇದಿತಾಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಯತ್ನ ಮಾಡುತ್ತಿದ್ದಾರೆ. ರತ್ನಮ್ಮನವರ 22 ವರ್ಷದ ಮಗ ಚೇತನ್‌ನನ್ನು ನಿವೇದಿತಾ ಬಲವಂತವಾಗಿ ಮದುವೆ ಆಗಿದ್ದಾರೆ ಎಂಬುದು ರತ್ನಮ್ಮರ ಆರೋಪ....

ಆಧ್ಯಾತ್ಮ, ಅನಾಥಪ್ರಜ್ಞೆ ಮತ್ತು ಲವ್ವು....

ಆಗಿದ್ದಿಷ್ಟೇ. ಕಳೆದ ಹಲವು ವರ್ಷಗಳಿಂದ ಸನ್ಯಾಸಿನಿ ನಿವೇದಿತಾ ಮತ್ತು ಚಿತ್ರದುರ್ಗದ ಕೆರೆಗೋಡೆ ನಿವಾಸಿ, ಬಿಜೆಪಿಯ ಜಿಲ್ಲಾ ಉಪಾಧ್ಯಕ್ಷೆ ರತ್ನಮ್ಮರ ಪುತ್ರ ಚೇತನ್ ಮಧ್ಯೆ ಪ್ರೇಮಾಂಕುರವಾಗಿದೆ. ಮೊನ್ನೆ ಜುಲೈ ಮೊದಲವಾರದಲ್ಲಿ ಚಿತ್ರದುರ್ಗದ ಮುರುಘಾಮಠದಿಂದ ನಿವೇದಿತಾ 'ಕಾಣೆಯಾದರು'. ಆಗಲೇ ಚಿತ್ರದುರ್ಗ ಠಾಣೆಯಲ್ಲಿ 'ನನ್ನ ಮಗ ಚೇತನ್‌ನನ್ನು ಸನ್ಯಾಸಿನಿ ನಿವೇದಿತಾ ಅಪಹರಿಸಿದ್ದಾಳೆ' ಎಂದು ರತ್ನಮ್ಮ ದೂರು ದಾಖಲಿಸಿದರು. ಆದರೆ ಶಿವಮೊಗ್ಗದಲ್ಲಿ ಮದುವೆಯಾದ ನಿವೇದಿತಾ-ಚೇತನ್ ಸೀದಾ ಚನ್ನಗಿರಿಯ ಪೊಲೀಸ್ ಠಾಣೆಗೆ ಹಾಜರಾಗಿ ತಮ್ಮ ಮದುವೆಗೆ ಮಾನ್ಯತೆ ಕೋರಿದರು. ಚೇತನ್ ತನ್ನ ತಾಯಿ ಮತ್ತು ಮಾಧ್ಯಮಗಳೆದುರೇ, 'ಇದು ನಾನು ಇಷ್ಟಪಟ್ಟು ಆದ ಮದುವೆ. ಇಲ್ಲಿ ಯಾರದೂ ಒತ್ತಡವಿಲ್ಲ' ಎಂದ ಮೇಲೆ ಚಿತ್ರದುರ್ಗ ಪೊಲೀಸರು ಕಿಡ್ನಾಪ್ ಕೇಸನ್ನು ವಜಾ ಮಾಡಲೇಬೇಕಾಯಿತು.

ತಿಪ್ಪೇಸ್ವಾಮಿ ಎಂಟ್ರಿ

ಇಲ್ಲೇ ರತ್ನಮ್ಮರ ಬಿಜೆಪಿ ಮನಸ್ಸು ಕೆರಳಿಬಿಟ್ಟಿದೆ. ಅವರ ಸಂಬಂಧಿ, ಅವರ ರಾಜಕೀಯ ಗಾಡ್‌ಫಾದರ್



ಚಳ್ಳಕೆರೆಯ ಚಡ್ಡಿ ಎಂಎಲ್‌ಎ ತಿಪ್ಪೇಸ್ವಾಮಿಯನ್ನು ಕಂಡಿದ್ದಾರೆ. ಆಗಲೇ ಈ ಮದುವೆ ಮುರಿಯಲು ಹೊಸ ಕುತಂತ್ರ ರೂಪುಗೊಂಡಿದೆ. ತಿಪ್ಪೇಸ್ವಾಮಿಯ ನೆರವಿನಿಂದಲೇ ಚಿತ್ರದುರ್ಗ ಜಿಲ್ಲಾ ಮಹಿಳಾ ಬಿಜೆಪಿಯ ಅಧ್ಯಕ್ಷೆಯಾಗಿರುವ ರತ್ನಮ್ಮ ಜಿಲ್ಲಾ ಪಂಚಾಯತಿಯ ಕೆಡಿಪಿ ತ್ರೈಮಾಸಿಕ ಸಭೆಗಳ ಸದಸ್ಯೆ ಕೂಡಾ ಹೌದು. ತನ್ನ ಸಣ್ಣವಯಸ್ಸಿನ ಮಗ 32ರ ಸನ್ಯಾಸಿನಿಯನ್ನು, ಅದೂ 'ಅನಾಥ' ಸನ್ಯಾಸಿನಿಯನ್ನು ಮದುವೆಯಾಗಿದ್ದು ಬಲಾಢ್ಯ ನಾಯಕ ಜನಾಂಗದ ಶೋಕಿಲಾಲ್ ಸುಬ್ಬಮ್ಮ ರತ್ನಮ್ಮರಿಗೆ ಮೈಉರಿಸಿದೆ. ಚಳ್ಳಕೆರೆ ಶಾಸಕ ತಿಪ್ಪೇಸ್ವಾಮಿ ನೆರವಿನಿಂದ ಎಸ್ಪಿ ಲಾಬುರಾಮರನ್ನು ಕಂಡ ರತ್ನಮ್ಮ 'ತನ್ನ ಮಗನಿಗೆ 22 ವರ್ಷ ವಯಸ್ಸಾಗಿಲ್ಲ, ಅವನಿನ್ನೂ ಮೇಜರ್ ಅಲ್ಲ, 1990ರಲ್ಲಿ ಹುಟ್ಟಿದ ಅವನಿಗೀಗ ಕೇವಲ 20 ವರ್ಷ. ಆದ್ದರಿಂದ 19-29 ಕಲಮಿನ ಅನ್ವಯ ಬಾಲ್ಯವಿವಾಹ ಪ್ರಕರಣ ದಾಖಲು ಮಾಡಿ, ನಿವೇದಿತಾಗೆ ಸೂಕ್ತ ಶಿಕ್ಷೆ ನೀಡಿ' ಎಂದು ಹೊಸ ದೂರೊಂದನ್ನು ಗುಜರಾಯಿಸಿ, ಮದುವೆ ಮುರಿವ ಕೆಲಸಕ್ಕೆ ಕೈಹಾಕಿದ್ದಾರೆ. ಕಿಡ್ನಾಪ್ ಎಂಬ ದೂರು ಠುಸ್ಸಾದ ಮೇಲೆ ಈಗ ಬಾಲ್ಯ ವಿವಾಹದ ತಂಟೆ ತೆಗೆದಿದ್ದಾರೆ ರತ್ನಮ್ಮ (ರಗಳೆ ರತ್ನಮ್ಮಳ ಹಿಸ್ಟರಿಗಾಗಿ ಬಾಕ್ಸ್ ಓದಿ).

ಹಿರಿಯೂರಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೋಮಾ ಓದುವ ಚೇತನ್‌ಗೆ ಇಪ್ಪತ್ತೆರಡಾಗಿದೆ. ಅದೂಅಲ್ಲದೇ ಆತ ಪೊಲೀಸರು, ಮಾಧ್ಯಮಗಳ ಎದುರೇ 'ನಾನು ನನ್ನ ತಾಯಿಯನ್ನ ಬಿಡುತ್ತೇನೆ ವಿನಃ ನಿವೇದಿತಾರನ್ನಲ್ಲ' ಎಂದು ಮುಕ್ತವಾಗಿ ಘೋಷಿಸಿದ್ದಾನೆ. ಆದರೆ ಸುದ್ದಿಶೂರಳಾದ ರತ್ನಮ್ಮ ಮಾತ್ರ ಭಾರೀ ರಂಪ ಎಬ್ಬಿಸಲು ನೋಡುತ್ತಿದ್ದಾರೆ. ಸರಳ ಮದುವೆಯಾಗಿ ಸುದ್ದಿಯಾಗಲೊಲ್ಲದ ಸನ್ಯಾಸಿನಿ ನಿವೇದಿತಾ ಇದೆಲದ್ದರಿಂದ ಡಿಸ್ಟರ್ಬ್ ಆಗಿದ್ದಾರೆ. ಈಗ ನಿವೇದಿತಾ, ಚೇತನ್ ದುರ್ಗದ ಪ್ರಗತಿಪರರ ನೆರವಿನಿಂದ ಚನ್ನಗಿರಿಯ ಪಿಡಬ್ಲ್ಯೂಡಿ ಪಕ್ಕದ ಮನೆಯೊಂದರಲ್ಲಿ ಸಂಸಾರ ಶುರು ಮಾಡಿದ್ದಾರೆ.

ಪೀಠದಿಂದ ಪ್ರೀತಿಗೆ: ಒಂದು ಸ್ತ್ರೀಬಂಡಾಯ

ಈ ಪ್ರೀತಿಯ ಕತೆಗಿಂತ ಮೊದಲು ಇಲ್ಲಿ ಪೀಠದ ಕತೆ ಹೇಳಬೇಕಿದೆ. ಚನ್ನಗಿರಿ ತಾಲ್ಲೂಕಿನ ಬೆಂಕಿಕೆರೆಯ ನಿವೇದಿತಾ ಹುಟ್ಟು ಅನಾಥೆ. ಅಜ್ಜಪ್ಪ ಎನ್ನುವವರು ಈಕೆಯನ್ನು ಸಾಕಿ ಬೆಳೆಸಿದ್ದಾರೆ. ಮಲ್ಲಾಡಿಹಳ್ಳಿಯಲ್ಲಿರುವ ಮುರುಘಾಮಠ ಸಂಸ್ಥೆಯಲ್ಲಿ ಸಿ.ಪಿ.ಎಡ್. ಓದುವಾಗ ಮತ್ತೆ ಅನಾಥಪ್ರಜ್ಞೆಗೆ ಜಾರಿದಳು ನಿವೇದಿತಾ. ಆ ಕಾರಣಕ್ಕೇನೋ ಜೀವನದ ಬಗ್ಗೆ ಜಿಗುಪ್ಸೆ ಬೆಳೆಸಿಕೊಂಡ ಈಕೆಯನ್ನು ಮುರುಘಾಮಠದ ಸ್ವಾಮಿಗಳು ಶಿಕ್ಷಕಿಯನ್ನಾಗಿ ಮಾಡಿದರು. ಮುಂದೆ ಚಿತ್ರದುರ್ಗಕ್ಕೆ ಕರೆಸಿಕೊಂಡ ಅವರು ಈಕೆಯಲ್ಲಿದ್ದ ಜನೋಪಕಾರಿ ನಿಲುವುಗಳನ್ನು ಮೆಚ್ಚಿ ದೀಕ್ಷೆ ನೀಡಿ ಶರಣೆಯನ್ನಾಗಿಸಿದರು. ಎಲ್ಲಾ ಜಾತಿಗಳವರಿಗೆ, ಜೊತೆಗೆ ಮಹಿಳೆಯರಿಗೂ ದೀಕ್ಷೆ ನೀಡುವ ಹೊಸ ಪರಂಪರೆಯಂತೆ ನಿವೇದಿತಾಗೂ ದೀಕ್ಷೆ ನೀಡಲಾಗಿತ್ತಷ್ಟೇ.

ಆರು ವರ್ಷಗಳ ಹಿಂದೆ ಮುರುಘಾಮಠದ ಮರಿಮಠವಾದ ಶಿರಸಿಯಲ್ಲಿನ ಮಠವೊಂದಕ್ಕೆ ಶರಣೆ ನಿವೇದಿತಾರನ್ನು ಪೀಠಾಧೀಶರನ್ನಾಗಿ ನೇಮಿಸಲಾಗಿತ್ತು. ಆರಂಭದಲ್ಲಿ ಅಲ್ಲಿನ ಭಕ್ತರು ಮಹಿಳೆಯೊಬ್ಬಳು ಪೀಠಾಧೀಶರಾಗುವುದನ್ನು ಒಮ್ಮತದಿಂದ ಒಪ್ಪಿರಲಿಲ್ಲ,

ನಂದಿಪುರ: ಇಬ್ರು ಹೆಂಡ್ತಿ, ಇಪ್ಪತ್ತೆರಡು ಮಕ್ಳು!



ಆಧ್ಯಾತ್ಮಿಕ ಜೀವನಶೈಲಿ ಆಯ್ದುಕೊಂಡೂ, ಲೌಕಿಕ ಸುಖದ ಸಹಜ ಜೀವನ ನಡೆಸಿಯೂ ಜನಪ್ರಿಯರಾದ ಕೆಲವೇ ಕೆಲವು ಸ್ವಾಮೀಜಿಗಳಿದ್ದಾರೆ. ಅಂತವರಲ್ಲಿ ಈಗ್ಗೆ ಎಂಟು ವರ್ಷಗಳ ಹಿಂದೆ ನಿಧನರಾದ ಚರಂತಯ್ಯ ಸ್ವಾಮಿಯೂ ಒಬ್ಬರು.

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿಯ ನಂದಿಪುರದಲ್ಲಿ ಶಾಲಾ ಮಾಸ್ತರಾಗಿದ್ದ ಚರಂತಯ್ಯ ತಾವೇ ಮಠ ಸ್ಥಾಪಿಸಿದರು. ಅದು ಕರ್ಮಠ ಮಠವಾಗದೇ ಬಸವತತ್ವಗಳನ್ನು ಆಚರಣೆಗೆ ತರುವ ಸಾಮಾಜಿಕ ಕೇಂದ್ರವಾಗಿತ್ತು. ಚರಂತಯ್ಯ ಮಾಸ್ತರು ಎಂದೂ ತನ್ನನ್ನು ಸ್ವಾಮೀಜಿ ಎಂದುಕೊಳ್ಳಲಿಲ್ಲ. ಸುತ್ತಲಿನ ಹಳ್ಳಿಗಳ ಬಡಮಕ್ಕಳಿಗಾಗಿ ಪ್ರಾಥಮಿಕ ಶಾಲೆ ತೆರೆದು ಧನ್ಯರಾದರು.

ಅಂದಂತೆ ಇವತ್ತು ಅಲ್ಲಿ ಅವರ ಮಗನೊಬ್ಬ ಪೀಠಾಧೀಶರಾಗಿದ್ದು ಕಲ್ಯಾಣಮಂಟಪವಿದೆ, ಬಡಮಕ್ಕಳಿಗಾಗಿ ಸುಸಜ್ಜಿತ ಶಾಲೆಯಿದೆ. ಅಲ್ಲಿ ಹಣ ಬಾಚುವ ವೃತ್ತಿ ಶಿಕ್ಷಣ ಕೇಂದ್ರಗಳಿಲ್ಲ. ಇದನ್ನೆಲ್ಲ ಸಾಧಿಸಿದ್ದು ಸ್ವಾಮಿ-ಶಿಕ್ಷಕ ಚರಂತಯ್ಯನವರು. ಸ್ವಾಮಿಯಾಗುವ ಮೊದಲೇ ಎರಡು ಮದುವೆಯಾಗಿದ್ದ ಅವರಿಗೆ ಇಪ್ಪತ್ತೆರಡು ಮಕ್ಕಳಂತೆ!


ಆಧ್ಯಾತ್ಮ, ಸಮಾಜಸೇವೆ, 'ತುಂಬು' ಸಂಸಾರವನ್ನು ಒಟ್ಟೊಟ್ಟಿಗೆ ನಡೆಸಿಯೂ ಸಮಾಜಮುಖಿಯಾಗಿ ಬದುಕಬಹುದು ಎಂಬುದಕ್ಕೆ ಚರಂತಯ್ಯನವರೇ ಸಾಕ್ಷಿ.



...ದೆ ತಮ್ಮ ಪ್ರವಚನ, ...ೋಪಯೋಗಿ ಕೆಲಸಗಳಿಂದ ...ದಿತಾ ಭಕ್ತರ ಒಲವು ...ದರು. ಆದರೆ ಮಠದೊಳಗಿನ ... ಸ್ಥಾಪಿತ ಹಿತಾಸಕ್ತಿಗಳು ...ದಿತಾರಿಗೆ ಕಿರುಕುಳ ...ಡುತ್ತಲೇ ಬಂದವು. ಕಳೆದ ... ಶಿರಸಿ ಮಠದ ಪೀಠ ...ಜಿಸಿದ ನಿವೇದಿತಾ ಸೀದಾ ...ದುರ್ಗದ ಮಠ ಸೇರಿದರು. ...ಆಗ ಅವರ ಮನವೊಲಿಸಿ ...ತ್ತೆ ಶಿರಸಿ ಮಠಕ್ಕೆ ...ೀಗುವಂತೆ ಮಾಡಿದ್ದು ಇದೇ ...ಪಿಯ ರತ್ನಮ್ಮ. ಅಂದರೆ ...ೇದಿತಾ, ರತ್ನಮ್ಮರಿಗೆ ಮೊದಲಿನಿಂದಲೂ ಪರಿಚಯವಿತ್ತು. ...ದುರ್ಗದಲ್ಲಿ 25ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ...ದಾಗ ನಿವೇದಿತಾರಿಗೆ ರತ್ನಮ್ಮರ ಪುತ್ರ ಚೇತನ್ ...ಚಯವಾಯ್ತು. ಸಮ್ಮೇಳನದ ಊಟದ ವ್ಯವಸ್ಥೆಯ ಉಸ್ತುವಾರಿ ...ತ್ತಿದ್ದ ನಿವೇದಿತಾಗೆ ಅಲ್ಲಿ ...ಯಂಸೇವಕನಾಗಿದ್ದ ಚೇತನ್ ...ಪಿಸಿಬಿಟ್ಟ. ಮುಂದೆ ಹಲವಾರು ಸಲ ...ತನ್ ಶಿರಸಿಗೆ ಹೋಗಿಬಂದ. ...ಬೈಲ್‌ನಲ್ಲಿ ಶುರುವಾದ ಪ್ರೇಮ ...ನಸ್ಸಿಗೆ, ಮನೆಗೆ, ಮಠಕ್ಕೆ ಹರಡಿತು. ...ಠದಲ್ಲಿನ ರಾಜಕಾರಣದಿಂದ ...ಸತ್ತಿದ್ದ ನಿವೇದಿತಾ ಲೌಕಿಕ ...ವನದತ್ತ ಆಕರ್ಷಿತರಾಗಿ ...ತನ್‌ನನ್ನು ಗಾಢವಾಗಿ ...ತಿಸತೊಡಗಿದರು. ಚಿತ್ರದುರ್ಗದಲ್ಲಿ ...ಯುವ ಶರಣ ಸಂಸ್ಕೃತಿ ಉತ್ಸವ ಮತ್ತು ಇತರ ಕಾರ್ಯಕ್ರಮಗಳ ...ಳಿ ಇವರಿಬ್ಬರೂ ಇನ್ನೂ ಹತ್ತಿರವಾದರು. ಮುಂದೆ ಬೆಂಗಳೂರು, ...ೀಗ್‌ಫಾಲ್ಸ್‌ಗಳನ್ನೆಲ್ಲ ಸುತ್ತುತ್ತ ಆಪ್ತರಾದರು.

ಮದುವೆ ಮುಗಿದಿತ್ತು!

ಹಾಗೆ ನೋಡಿದರೆ, ಕಳೆದ ತಿಂಗಳಲ್ಲೇ ಬೆಂಗಳೂರಿಗೆ 'ಓಡಿಬಂದಿದ್ದ' ನಿವೇದಿತಾ, ಚೇತನ್ ಮದುವೆಯಾಗಿದ್ದರು. ಈ ಸುದ್ದಿ ತಿಳಿದ ಚೇತನ್ ತಾಯಿ ರತ್ನಮ್ಮ ಬೆಂಗಳೂರಿಗೆ ಧಾವಿಸಿ ಕಾವಿಧಾರಿಣಿ ನಿವೇದಿತಾಗೆ ಬುದ್ಧಿ ಹೇಳಿ, ಚೇತನ್‌ನಿಂದ ಆಕೆಯನ್ನು ದೂರ ಮಾಡಲು ಯತ್ನಿಸಿದ್ದರು. ರತ್ನಮ್ಮರ ಸಲಹೆಯಂತೆ ಬೆಂಗಳೂರಿಂದ ವಾಪಸ್ಸಾದ ನಿವೇದಿತಾ, ಚೇತನ್ ಕೆಲದಿನ ಎಲ್ಲ ಮರೆತರು. ಆದರೆ ಇಬ್ಬರಿಗೂ ಬಿಟ್ಟಿರಲಾಗದೆ ಕಳೆದವಾರ ಕಾನೂನುಬದ್ಧವಾಗಿಯೇ ಮದುವೆಯಾಗಿದ್ದಾರೆ.



ಚೇತನ್ ಮೈನರ್ ಎಂದು ತೋರಿಸಲು ರತ್ನಮ್ಮ ನೀಡಿದ್ದ ಡ್ರೈವಿಂಗ್ ಲೈಸೆನ್ಸ್

ಅನಾಥೆಯಾಗೇ ಬದುಕಿದ ನಿವೇದಿತಾ ಮಠದಲ್ಲಿನ ಆಧ್ಯಾತ್ಮಿಕ ಬದುಕಿನ ನಡುವೆಯೂ ಅಲ್ಲಿನ ಕೆಲವರ ಕುತಂತ್ರಗಳ ಕಾರಣದಿಂದ ಮತ್ತೆ ಅನಾಥ ಪ್ರಜ್ಞೆ ಬೆಳೆಸಿಕೊಂಡರು. ಆಗ್ಲ ಜೊತೆಯಾದವನು ಚೇತನ್. ಈಗ ಮಠದ ಪೀಠಕ್ಕೆ ರಾಜೀನಾಮೆ ನೀಡಿ, ಚಿತ್ರದುರ್ಗದ ಶರಣರ ಒಪ್ಪಿಗೆ ಪಡೆದು ಸಂಸಾರಕ್ಕೆ ಕಾಲಿಟ್ಟಿರುವ ಸನ್ಯಾಸಿನಿ ನಿವೇದಿತಾ ಒಂದು ಸಣ್ಣ ಬಂಡಾಯ ಮಾಡಿದ್ದಾಳೆ. ಅದು ಆಕೆಯ ವೈಯಕ್ತಿಕ ವಿಷಯ.

ನಿವೇದಿತಾ, ಚೇತನರನ್ನು ಅವರಷ್ಟಕ್ಕೆ ಬದುಕಲು ಬಿಡುವುದು ಎಲ್ಲರ ನೈತಿಕ ಕರ್ತವ್ಯ. ಇದನ್ನು ರತ್ನಮ್ಮ ಮತ್ತು ಚಿತ್ರದುರ್ಗದ ಚೆಡ್ಡಿಗಳು ಅರ್ಥ ಮಾಡಿಕೊಳ್ಳಲಿ.

ನಿವೇದಿತಾ, ಚೇತನ್‌ಗೆ ಒಳ್ಳೆಯದಾಗಲಿ.

ನಂದಿಗುಡಿ: ಸಂಸಾರಿಯಾದ ಸಭ್ಯಸ್ವಾಮಿ



ಇದು 2009 ಅಕ್ಟೋಬರ್-ನವೆಂಬರ್‌ನಲ್ಲಿ ನಡೆದ ಘಟನೆ. ಮಠ, ಹಣ, ಅಧಿಕಾರ, ಕೀರ್ತಿ ತೊರೆದ ಲಿಂಗಾಯತ ಸ್ವಾಮೀಜಿಯೊಬ್ಬರು ಲೌಕಿಕ ಬದುಕಿಗೆ ತೆರೆದುಕೊಂಡ ವೃತ್ತಾಂತವಿದು.

ನೊಳಂಬರ ಪ್ರಮುಖ ಮಠವಾದ ನಂದಿಗುಡಿ ಪೀಠದ ಮಠಾಧೀಶರಗಿದ್ದ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು ತಮ್ಮ ಕೈಲಾದ ಸಮಾಜಸೇವೆಯನ್ನು ನಿಷ್ಠೆಯಿಂದ ಮಾಡಿಕೊಂಡು ಬಂದಿದ್ದರು. ಆದರೆ ಮಠದ ಸುತ್ತಲಿನ ಅಂತಃಕಲಹ ಅವರಿಗೆ ಜಿಗುಪ್ಸೆ ಮೂಡಿಸಿತು. ಅಷ್ಟೊತ್ತಿಗೆ ಅವರಿಗೆ ನಂದಿಗುಡಿಯಲ್ಲಿ ಬಿಎಡ್ ಲೆಕ್ಚರರ್ ಆಗಿದ್ದ ಗೀತಾಳೊಂದಿಗೆ ಪ್ರೇಮಾಂಕುರವಾಯಿತು. 2006ರ ಹೊತ್ತಿಗೆ ಪ್ರೇಮಿ-ಸ್ವಾಮಿ ಕಣ್ಮರೆಯಾದರು. ಸ್ವಾಮೀಜಿ ಬೇಸತ್ತು ಕಾಶಿಯಾತ್ರೆಗೆ ಹೋಗಿದ್ದಾರೆ ಎಂದೇ ಭ್ರಮಿಸಿದ್ದ ಭಕ್ತರು 2009ರಲ್ಲಿ ಪೊಲೀಸರಿಗೆ ದೂರು ನೀಡಿದಾಗ ಸತ್ಯ ಹೊರಬಿತ್ತು. ಪಕ್ಕಾ ಸಂಸಾರಸ್ಥರಾಗಿದ್ದ ನಂದೀಶ್ವರ ಸ್ವಾಮೀಜಿ ಗೀತಾರೊಡನೆ ಬಾಡದ ಬಯಲು ಗ್ರಾಮದಲ್ಲಿ ಸಂಸಾರ ಹೂಡಿ, ಕೃಷಿ ಬದುಕು ಶುರುಮಾಡಿದ್ದರು.

ಈಗ ಒಬ್ಬ ಪುತ್ರನೊಂದಿಗೆ ಅಲ್ಲೇ ವಾಸಿಸಿರುವ ಕೃಷಿಕ ನಂದೀಶ್ವರರನ್ನು ಭೇಟಿಯಾಗುವ ಭಕ್ತರಿಗೇನೂ ಕಡಿಮೆಯಿಲ್ಲ. ಹಿಂದೆ ಉಡುಪಿಯ ಮಠಾಧೀಶ ವಿದ್ಯಾಭೂಷಣರು ಬಳ್ಳಾರಿಯ ಡಾ.ರಮಾರನ್ನು ಭೇಟಿಯಾಗಿ ಲೌಕಿಕ ಜೀವನಕ್ಕೆ ಕಾಲಿಟ್ಟಿದ್ದರು.

ನಂದೀಶ್ವರರ ವಿಚಾರದಲ್ಲಿ ಏಳದ ವಿವಾದ ಈಗ ನಿವೇದಿತಾರ ವಿಚಾರದಲ್ಲಿ ಎದ್ದಿದೆ. ಹೆಣ್ಮಕ್ಕಳು ಪೀಠಾಧೀಶರಾಗುವುದನ್ನು, ಹೆಣ್ಮಕ್ಕಳು ಸಿದ್ಧಸೂತ್ರಗಳನ್ನು ಧಿಕ್ಕರಿಸಿ ಹೊಸಹಾದಿ ಕಂಡುಕೊಳ್ಳುವುದನ್ನು ಸಹಿಸಲೊಲ್ಲದ ಕರ್ಮಠ ಮನಸ್ಸುಗಳಿಗೆ ಸನ್ಯಾಸಿನಿ ಸಂಸಾರಿಣಿಯಾದ ವಿಚಾರವೂ ಮಜಾ ಉಡಾಯಿಸುವ ಸಂಗತಿಯೇ ಆಗಿದೆ.



ರಗಳೆ ರತ್ನಮ್ಮನ ಚರಿತ್ರೆ

ಇಡೀ ಪ್ರಕರಣ ರಾಜ್ಯಾದ್ಯಂತ ಬೇರೆಬೇರೆ ಕಾರಣಗಳಿಗೆ ಚರ್ಚೆಯಾಗುತ್ತಿದ್ದರೂ, ಚಿತ್ರದುರ್ಗದಲ್ಲಿ ಮಾತ್ರ ಇನ್ನೊಂದು ಕಾರಣಕ್ಕೆ ಚರ್ಚೆಗೆ ಗ್ರಾಸವಾಗಿದೆ. ಇದರ ಕೇಂದ್ರಬಿಂದು ಸನ್ಯಾಸಿನಿಯನ್ನು ವಿವಾಹವಾಗಿರುವ ಚೇತನ್ ತಾಯಿ ರತ್ನಮ್ಮ. ಈಕೆ ಚಿತ್ರದುರ್ಗ ಜಿಲ್ಲೆಯ ಬಿಜೆಪಿ ಮಹಿಳಾ ಘಟಕದ್ದ ಅಧ್ಯಕ್ಷೆ. ಇದಕ್ಕೂ ಮೊದಲು ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆಯಾಗಿದ್ದರು. ಈ ರತ್ನಮ್ಮನಿಗೆ ಚಳ್ಳಕೆರೆಯ ಶಾಸಕ ತಿಪ್ಪೇಸ್ವಾಮಿಯೇ ಪಾಲಿಟಿಕಲ್ ಗಾಡ್‌ಫಾದರ್. ತಿಪ್ಪೇಸ್ವಾಮಿ ಯಾವ ಪಕ್ಷದಲ್ಲಿರುತ್ತಾನೋ ಅಲ್ಲಿ ರತ್ನಮ್ಮ ಇರುತ್ತಾರೆ. ಅಷ್ಟರಮಟ್ಟಿಗೆ ಅವರ ರಾಜಕೀಯ ನಿಷ್ಠೆ ಬೆಸೆದುಕೊಂಡಿದೆ.



ತಿಪ್ಪೇಸ್ವಾಮಿ

ಸ್ವಜಾತಿಯವರೇ (ನಾಯಕ ಜನಾಂಗ) ಆಗಿರುವುದರಿಂದ ರತ್ನಮ್ಮ 'ತಿಪ್ಪೇಸ್ವಾಮಿ ನನಗೆ ಚಿಕ್ಕಪ್ಪ' ಎಂದೊಮ್ಮೆ, 'ಮಾವನಾಗಬೇಕು' ಎಂದು ಮಗದೊಮ್ಮೆ ಹೇಳುತ್ತಿರುತ್ತಾರೆ. ಈಗ ಈ ವಿವಾಹ ಪ್ರಕರಣ ತನ್ನ ರಾಜಕೀಯ ವರ್ಚಸ್ಸಿಗೆ ಧಕ್ಕೆ ತರುತ್ತದೇನೋ ಎಂಬ ಭಯದಲ್ಲಿದ್ದಾರೆ.

ಹಿಂದೊಮ್ಮೆ ಮುನ್ಸಿಪಾಲ್ಟಿ ಚುನಾವಣೆಗೆ ನಿಂತು ಠೇವಣಿ ಕಳೆದುಕೊಂಡು ರಾಜಕೀಯ ಆಘಾತ ಅನುಭವಿಸಿದ್ದ ರತ್ನಮ್ಮನಿಗೆ ಸಹಜವಾಗಿಯೇ ಈಗ ಇನ್ನಷ್ಟು ಸಂಕಟದ ಪರಿಸ್ಥಿತಿ ಎದುರಾಗಿದೆ.

"ಈ ಪ್ರಕರಣದಲ್ಲಿ ನನ್ನ ಮಗ ಮುಗ್ಧ 21 ವರ್ಷದ ನಂತರ ಮದುವೆಯಾಗಿದ್ದರೆ ನನ್ನ ವಿರೋಧವೇನೂ ಇರುತ್ತಿರಲಿಲ್ಲ. ಅವನು ಮದುವೆಗೆ ಅಪ್ರಾಪ್ತ..., ಅವನಿಗೆ ತಿಳಿವಳಿಕೆ ಇಲ್ಲಾಂದ್ರೆ ಸನ್ಯಾಸಿನಿಗಾದರೂ ತಿಳಿವಳಿಕೆ ಬೇಡವೇ? ಸಮಾಜಕ್ಕೆ ನೀತಿ-ನಿಯಮ, ಮಾರ್ಗದರ್ಶನ ಮಾಡುವ ಸನ್ಯಾಸಿನಿ ಹೀಗೆ ಮಾಡಬಹುದೇ?" ಎಂದು ಮಾಧ್ಯಮಗಳಲ್ಲಿ ರತ್ನಮ್ಮ ಅಲವತ್ತುಕೊಳ್ಳುತ್ತಿದ್ದರೆ, ಇದನ್ನು ನೋಡಿದ ದುರ್ಗದ ಜನ ಮುಸಿಮುಸಿ ನಗುತ್ತಿದ್ದಾರೆ.

ಮುರುಘಾ ಶರಣರನ್ನು ಸಮಯ ಸಿಕ್ಕಾಗಲೆಲ್ಲ ಟಾರ್ಗೆಟ್ ಮಾಡುವ ಸಂಘಪರಿವಾರದ ಮನಸುಗಳು ರತ್ನಮ್ಮನನ್ನು ದಾಳ ಮಾಡಿಕೊಂಡು ಮುರುಘಾಮಠದ ಇಮೇಜಿಗೆ ಧಕ್ಕೆ ತರುವ ಪ್ರಯತ್ನ ಮಾಡುತ್ತಿವೆ. ಆದರೆ ಇದು ವರ್ಕ್‌ಔಟ್ ಆಗುವ ಲಕ್ಷಣಗಳು ಕಾಣಿಸುತ್ತಿಲ್ಲ.

ತನ್ನ ಮಗ ತಪ್ಪು ನಿರ್ಧಾರ ಕೈಗೊಂಡಿದ್ದಾನೆ ಎಂದು ಕನಲಿ ಹೋದವರಂತೆ ಕಾಣುವ ರತ್ನಮ್ಮ ಹಲವು ವರ್ಷಗಳ ಹಿಂದೆ ಯಾರೋ ತನ್ನ ಟಾಟಾ ಸುಮೋದ ಡ್ರೈವರನನ್ನು ಬರ್ಬರವಾಗಿ ಕೊಲೆ ಮಾಡಿ, ಆತನ ಶವವನ್ನು ರೈಲ್ವೇ ಹಳಿಗಳ ಮೇಲೆ ಎಸೆದು ಹೋಗಿದ್ದಾಗ ಏಕೆ ಮೌನ ವಹಿಸಿದ್ದರು? ಇದಾದ ನಂತರ ಸಶಸ್ತ್ರ ಮೀಸಲು ಪಡೆಯಲ್ಲಿ ಸಾಮಾನ್ಯ ಪೇದೆಯಾಗಿದ್ದ ರತ್ನಮ್ಮನ ಗಂಡನೂ ಕೊಲೆಯಾಗಿ ಹೋದ. ಈ ಎರಡೂ ಕೊಲೆಗಳಿಗೆ ಕಾರಣ ಏನೆಂಬುದು ಮಾತ್ರ ಇನ್ನೂ ನಿಗೂಢವಾಗಿದೆ. ರಾಜಕೀಯ ಪ್ರಭಾವ ಇದ್ದರೂ ಕೂಡಾ ರತ್ನಮ್ಮ ಈ ವಿಷಯದಲ್ಲಿ ಏಕೆ ಮೌನವಹಿಸಿದ್ದರು? ತನ್ನ ಗಂಡನ ಕೊಲೆಗೆ ಕಾರಣರಾದವರ ಪತ್ತೆಗಾಗಲೀ, ಅಂತಹವರ ಮೇಲೆ ಕಾನೂನುಕ್ರಮ ಕೈಗೊಳ್ಳುವಂತೆ ಏಕೆ ಧ್ವನಿ ಎತ್ತಲಿಲ್ಲ ಎಂಬ ಅಭಿಪ್ರಾಯ ಈಗಲೂ ಜೀವಂತವಾಗಿದೆ.



ಪದ್ಮನಾಭನಗರ ಜೈವಿಕ ವನದ ಜೀವ ಹಿಂಡುತ್ತಿದೆ ಹೈಟೆಕ್ ಭೂತ!

ಕೆಲವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಶಾಪಿ
ಮಾಲೊಂದನ್ನು ನಿರ್ಮಿಸ
ಭೂಮಾಫಿಯಾ ಪ್ರಯತ್ನ
ಬಗ್ಗೆಯೂ ಗುಮಾನಿ
ಕೇಳಿಬರುತ್ತಿದೆ. ಆ ಅಸ
ಇಂದಿಗೂ ಹಲವ
ಮಗ್ಗಲು ಬದಲಿಸುತ್ತಾ ಇ
'ಹೈಟೆಕ್' ಅವತಾರ
ಅಟಕಾಯಿಸಿಕೊಂಡಿ

ದಿನೇದಿನೆ ಬೃಹದಾಕಾರವಾಗುತ್ತಾ ಅಳಿದುಳಿದ ಹಸಿರನ್ನೂ ಆಪೋಶನ ತೆಗೆದುಕೊಂಡು ಮಾಯಾನಗರಿ ಬೆಂಗಳೂರು ಬೆಳೆಯುತ್ತಿದೆ. ಬಹುತೇಕ ಮಂದಿ ಇದಕ್ಕೆ ಸಾರಾಸಗಟಾಗಿ ಅಭಿವೃದ್ಧಿ ಅಂತ ಹೆಸರಿಟ್ಟು ಪರಿಸರ, ಅನೂಹ್ಯ ಜೀವಸಂಕುಲದ ಮೇಲಾಗುತ್ತಿರುವ ನಿರಂತರ ದೌರ್ಜನ್ಯಕ್ಕೆ ಕಿವುಡು, ಕುರುಡಾಗಿ ವರ್ತಿಸುತ್ತಾರೆ. ಇಂಥ ವಿಷಮ ಸನ್ನಿವೇಶದಲ್ಲೂ ಕೆಲ ಪರಿಸರಾಸಕ್ತರು ಪ್ರಾಕೃತಿಕ ಸಮತೋಲನ ಕಾಯ್ದುಕೊಳ್ಳಲು ಹೆಣಗುತ್ತಾರೆ. ಪದ್ಮನಾಭನಗರದ ಲಕ್ಷ್ಮೀಕಾಂತ ದೇವಾಲಯದ ಪರಿಸರ ಇಂಥ ಕಾಳಜಿಯ ಪ್ರತೀಕವೆಂಬಂತೆ ಪ್ರಾಕೃತಿಕ ಶ್ರೀಮಂತಿಕೆಯಿಂದ ನಳನಳಿಸುತ್ತಿದೆ.

ಆದರೆ ಪ್ರತಿಯೊಂದರಲ್ಲೂ ಮೇಲಿನ ಥಳುಕುಬಳುಕಿಗಷ್ಟೇ ಪ್ರಾಶಸ್ತ್ಯ ಕೊಡುವ ಆಧುನಿಕತೆಯ ಹೀನಬುದ್ಧಿ ಈ ನೈಸರ್ಗಿಕ ಪರಿಸರಕ್ಕೆ ಮಾರಣಾಂತಿಕ ಏಟು ನೀಡಲು ಹೆಣಗುತ್ತಿದೆ. ಪದ್ಮನಾಭನಗರ ಕಾರ್ಪೊರೇಷನ್ ಕಚೇರಿ ಎದುರಲ್ಲೇ ಇರುವ ಈ ಸರ್ಕಾರಿ ಜಾಗ 1.46 ಎಕರೆ ಪ್ರದೇಶಗಳಲ್ಲಿ ಹರಡಿಕೊಂಡಿದೆ. ಲಲಿತಾ ಎಂಬುವರು ಕಳೆದ 30 ವರ್ಷಗಳಿಂದ ಲಕ್ಷ್ಮೀಕಾಂತ ದೇವಸ್ಥಾನ ಟ್ರಸ್ಟ್ ಹೆಸರಲ್ಲಿ ಅಮೂಲ್ಯ ಸಸ್ಯಸಂಕುಲದ ಆರೈಕೆಯಲ್ಲಿ ತೊಡಗಿದ್ದಾರೆ.

ಇದು ಮೊದಲೇ ಹೇಳಿದಂತೆ ಹೈಟೆಕ್ ಗಂಧವಿಲ್ಲದ ಪಕ್ಕಾ ಪ್ರಾಕೃತಿಕ ಪಾರ್ಕ್. ಇದರ ಪರಿಸರ ಈ ಭಾಗದ ಕೆಲ ಹಿರೀಕರಿಗೆ, ಸಾಹಿತಿಗಳಿಗೆ ಹಾಗೂ ಪರಿಸರ ಕಾಳಜಿಯಿರುವ ಪ್ರತಿಯೊಬ್ಬರಿಗೂ ಅಚ್ಚುಮೆಚ್ಚಿನ ಜಾಗ. ಈ ನೆಲದಲ್ಲಿ ಮಲೆನಾಡು ಮುಂತಾದೆಡೆಗಳಲ್ಲಿರುವ ಗುಂಡುತೋಪು ಪರಿಕಲ್ಪನೆಯಡಿಯಲ್ಲೇ ಈ ಪಾರ್ಕ್ ತಲೆ ಎತ್ತಿದೆ. ಇದರಲ್ಲೊಮ್ಮೆ ಅಡ್ಡಾಡಿದರೆ ಆಹ್ಲಾದಕಾರಿ ಅನುಭವವಾಗುವುದಲ್ಲದೇ ಮಲೆನಾಡು ಹೊಕ್ಕು ಬಂದ ಅನುಭವವಾಗುತ್ತದೆ. ಇದಕ್ಕೆ ಕಾರಣ ಆ ಪರಿಸರದಲ್ಲಿರುವ ಕೃತಕವಲ್ಲದ ಪ್ರಾಕೃತಿಕ ಶ್ರೀಮಂತಿಕೆ. ಕಕ್ಕೆ, ಹೊಂಗೆ, ನಂಜಿನಕೊರಡು, ಮಿಟ್ಲೆ, ಕುಪ್ಪೆಗಿಡ, ಜಲಭೇದಿ, ತಂಗಡಿ, ಸಂಜೆಮಲ್ಲಿಗೆ, ಶಂಕಪುಷ್ಪ ಸೇರಿದಂತೆ ಬಲು ಅಪರೂಪದ ಔಷಧೀಯ ಸಸ್ಯಗಳು ಹಾಗೂ ಕೆಲವೇ ಕೆಲ ಪ್ರದೇಶಗಳಲ್ಲಿ ಮಾತ್ರ ಬೆಳೆಯಬಲ್ಲ ಮರಗಳು ಇಲ್ಲಿ ಹುಲುಸಾಗಿ ಬೆಳೆದು ನಿಂತಿವೆ. ಸಸ್ಯ ಮತ್ತು ಪರಿಸರ ತಜ್ಞರೇ ಈ ಸ್ಥಳಕ್ಕೆ ಭೇಟಿ ನೀಡಿ ಔಷಧೀಯ ಸಸ್ಯಗಳ ಬಗ್ಗೆ ಪಟ್ಟಿ ದಾಖಲಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದೂ ಆಗಿದೆ. ಮಿನಿ ಮಲೆನಾಡಿನಂತೆ ಮೈ ತುಂಬಿಕೊಂಡಿರುವ ಈ ಪ್ರದೇಶ ಹೀಗೇ ಇರಬೇಕೆಂದರೆ ಅದಕ್ಕೆ ಯಾವುದೇ ಧಕ್ಕೆ ತರಕೂಡದು.

ಆದರೆ ಈ ಪ್ರದೇಶದ ಒಂದಷ್ಟು ಮಂದಿ ರಾಜಕೀಯ ಮುಖಂಡರು ಕೆಲ ನಾಗರಿಕರ ತಲೆಗೆ ಹೈಟೆಕ್ ಭೂತ ಹೊಕ್ಕಿಸಿ ಅಧ್ವಾನವೆಬ್ಬಿಸಲು ಅಣಿಯಾಗಿದ್ದಾರೆ. ಸಚಿವ ಆರ್. ಅಶೋಕ್ ಹಾಗೂ ಈ ವಾರ್ಡ್‌ನ ಬಿಬಿಎಂಪಿ ಸದಸ್ಯ ಎಲ್. ಶ್ರೀನಿವಾಸ್ ಸುಪರ್ದಿಯಲ್ಲಿ ಚಾಲನೆಗೆ ಬಂದ ಈ ಅಧ್ವಾನ ಇದೀಗಲೇ ಅಮೂಲ್ಯ ಸಸ್ಯ ವೈವಿಧ್ಯವನ್ನು ಬಲಿತೆಗೆದುಕೊಂಡು ಉಳಿದುದನ್ನೂ ಸರ್ವನಾಶ ಮಾಡಲು ಹವಣಿಸುತ್ತಿದೆ. ಈ ಪಾರ್ಕ್ ಅನ್ನು ನೈಸರ್ಗಿಕವಾಗಿಡಬೇಕೆಂಬ ಉದ್ದೇಶದಿಂದ 1,200 ಅಡಿ ಸುತ್ತಳತೆಯಲ್ಲಿ ಬೇಲಿ ನಿರ್ಮಿಸಿ ಅದಕ್ಕೆಲ್ಲ ಅಮೂಲ್ಯ ಔಷಧೀಯ ಗುಣವುಳ್ಳ ಅಮೃತಬಳ್ಳಿಯನ್ನು ಹಬ್ಬಿಸಲಾಗಿತ್ತು, ಆಕ್ಯುಪ್ರೆಷರ್ ಚಿಕಿತ್ಸೆಯನ್ನು ಪ್ರಾಕೃತಿಕವಾಗಿ ನೀಡುವ ಉದ್ದೇಶದಿಂದ ನಡೆದಾಡುವ ಜಾಗಕ್ಕೆಲ್ಲ ತರಬಾದ ಚಪ್ಪಡಿ ಕಲ್ಲು ಹಾಸಲಾಗಿತ್ತು, ಮಳೆನೀರು ಇಂಗಿಸುವ ಉದ್ದೇಶದಿಂದ ಕಲ್ಲುಗಳ ನಡುವೆ ಪ್ಲಾಸ್ಟರಿಂಗ್ ಮಾಡದೆ, ಅಡಿಗೆ ಕಾಂಕ್ರಿಟ್ ಅನ್ನೂ ಹಾಕದೆ ಸಮತೋಲನ ಕಾಯ್ದುಕೊಳ್ಳಲಾಗಿತ್ತು.

ಆದರೆ, ಬಿಬಿಎಂಪಿಯ ಮಂದಿ ಕೆಲ 'ಹಿತಾಸಕ್ತಿ'ಗಳ ಆಧಾರದ ಮೇಲೆ ಈ ಔಷಧೀಯ ಜೈವಿಕ ವನವನ್ನು ಮಾಮೂಲಿ ಪಾಲಿಕೆ ಪಾರ್ಕ್‌ಗಳಂತೆ ಹೈಟೆಕ್ ಮಾಡಲು ಮುಂದಾಯಿತು. ಇದರ ದೆಸೆಯಿಂದಾಗಿ 1,200 ಅಡಿ ಪ್ರದೇಶದಲ್ಲಿ ಹರಡಿದ್ದ ಅಮೃತಬಳ್ಳಿ ಬೇಲಿಯನ್ನು ನಿರ್ದಾಕ್ಷಿಣ್ಯವಾಗಿ ಕಡಿದು ಆ ಜಾಗದಲ್ಲಿ ಹೈಟೆಕ್ ಬೇಲಿ ಎಬ್ಬಿಸಲಾಯಿತು. ಜೊತೆಗೆ ಇದರ ಆಸುಪಾಸಲ್ಲಿ ಉದ್ದಕ್ಕೆ ಬೆಳೆಸಲಾಗಿದ್ದ ಅಮೂಲ್ಯ ಗಿಡಮೂಲಿಕೆಗಳು ಬುಡಮೇಲಾಗಿ ನಾಮಾವಶೇಷಗೊಂಡವು.

ಇನ್ನು ವಾಕಿಂಗ್‌ಗಾಗಿ ನಿರ್ಮಿಸಲಾಗಿದ್ದ ಚಪ್ಪಡಿ ಕಲ್ಲಿನ ಪರಿಸರ ಸ್ನೇಹಿ ಹಾದಿಯ ಕಥೆ: ನೀರಿಂಗಿಸುವ ಉದ್ದೇಶ ಹಾಗೂ ಆಕ್ಯುಪ್ರೆಷರ್ ಚಿಕಿತ್ಸೆಯ ದೃಷ್ಟಿಯಿಂದ ನಿರ್ಮಿಸಲಾಗಿದ್ದ ಕಲ್ಲು ಹಾಸನ್ನು ಕಿತ್ತು ಹೊಸ ಟೈಲ್ಸ್ ಹಾದಿ ನಿರ್ಮಿಸಲು ಹವಣಿಸಲಾಗುತ್ತಿದೆ. ಇದಕ್ಕಾಗಿ ಹನ್ನೆರಡು ಅತ್ಯಮೂಲ್ಯ ಮರಗಳನ್ನು ಧರೆಗುರುಳಿಸಲಾಗಿದೆ. ಕೊನೆಗೊಮ್ಮೆ ಟ್ರಸ್ಟ್ ವತಿಯಿಂದ ಮನವರಿಕೆ ಮಾಡಿಕೊಂಡ ಸುರೇಶ್ ಹೆಬ್ಳೀಕರ್ ಅನಾಹುತ ಮನಗಂಡು ಸಂಬಂಧಪಟ್ಟವರಿಗೆ ವಿನಂತಿಸಿಕೊಂಡು ಅಂತೂ ತಾತ್ಕಾಲಿಕವಾಗಿ ಜೈವಿಕ ವನ ದಹನ ಕಾರ್ಯ ಸ್ಥಗಿತಗೊಂಡಿದೆ.

ಆದರೆ ಅಪಾಯವೆಂಬುದು ಈ ಔಷಧೀಯ ಜೈವಿಕ ವನದ ಮೇಲೆ ಅಗೋಚರವಾಗಿ ತೂಗುತ್ತಲೇ ಇದೆ. ಅದಕ್ಕೆಲ್ಲ ಪ್ರಮುಖ ಕಾರಣ ಬಹುತೇಕರಿಗೆ ಈ ಔಷಧೀಯ ಜೈವಿಕ ವನದ ಪರಿಕಲ್ಪನೆ ಹಾಗೂ ಅದರಿಂದಾಗುವ ಅನೇಕಾನೇಕ ಉಪಯೋಗಗಳ ಅರಿವಿಲ್ಲ. ಈ ವನದಲ್ಲಿರುವ ಸಸ್ಯ ಸಂಪತ್ತಿಗೆ ಪರಿಮಳ ತೈಲವನ್ನು ಗಾಳಿಗೆ ಸೂಸಿ ನರರೋಗ ಹಾಗೂ ಶ್ವಾಸಕೋಶ ಕಾಯಿಲೆಗಳನ್ನು ಪರಿಹರಿಸುವ ಗುಣವಿದೆ. ಇಲ್ಲಿ 600ಕ್ಕೂ ಹೆಚ್ಚು ಪ್ರಭೇದದ ಔಷಧೀಯ ಸಸ್ಯಗಳಿವೆಯಾದುದರಿಂದ ಆಯುರ್ವೇದ ಶಾಸ್ತ್ರದ ಮ್ಯೂಸಿಯಂನಂತೆ ಮೈದಾಳಿದೆ. ಇವೆಲ್ಲ ಇಲ್ಲಿಗೆ ಭೇಟಿ ನೀಡಿದ ತಜ್ಞರುಗಳೇ ಸ್ವತಃ ಉದ್ಗರಿಸಿದ ಅಂಶಗಳು.

ಇದರೊಳಗೆ ಪ್ರತಿಯೊಂದು ಪ್ರಕ್ರಿಯೆಯೂ ಸಹಜತೆಗೆ ತಕ್ಕುದಾಗಿಯೇ ನಡೆಯುತ್ತಿದೆ. ಇದರನ್ವಯ ಗಿಡಗಂಟೆಗಳು, ಅದರಿಂದ ಬೀಳುವ ದರಗು (ಒಣ ಎಲೆ) ಅಲ್ಲಲ್ಲೇ ಸಹಜ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಲಾಗುತ್ತಿದೆ. ಆದರೆ ಇದೇ ಇಲ್ಲಿನ ಕೆಲ ಹೈಟೆಕ್ ಕಣ್ಣುಗಳಿಗೆ ಅವ್ಯವಸ್ಥೆಯಂತೆ





ಕಾಣುತ್ತಿದೆ. ಇದರ ಜೊತೆಗೆ ಈ ನೈಸರ್ಗಿಕ ತ್ಯಾಜ್ಯದ ಜೊತೆಗೆ ಮನೆಯ ಕಸವನ್ನೆಲ್ಲ ತಂದು ಸುರಿದು 'ಟ್ರಸ್ಟ್‌ನವರು ಸ್ವಚ್ಛತೆ ಕಾಪಾಡುತ್ತಿಲ್ಲ' ಅಂತ ಹಬ್ಬಿಸುವ ಪ್ರಯತ್ನವೂ ಕೆಲ ಪಟ್ಟಭದ್ರರ ಕಡೆಯಿಂದ ನಿರಂತರವಾಗಿ ನಡೆಯುತ್ತಿದೆ. ಕೆಲ ತಿಂಗಳುಗಳ ಹಿಂದೆ ಬೀದಿಯಲ್ಲಿ ಬಿದ್ದಿದ್ದ ಅನಾಥ ಶವವೊಂದನ್ನ ದೇವಸ್ಥಾನದ ಹಿಂಭಾಗದಲ್ಲಿ ನೇಣಿಗೆ ಹಾಕಿ ಹೆದರಿಕೆ ಹರಡಿ ಜನ ಬಾರದಂತೆ ಮಾಡುವ ಹುನ್ನಾರವೂ ನಡೆಯಿತು. 'ಅಲ್ಲಿ ವಿಷಕಾರಿ ಹಾವುಗಳಿವೆ' ಅಂತ ಸುಳ್ಳು ಸುದ್ದಿ ಹಬ್ಬಿಸುವ ಮೂಲಕವೂ ಹೆದರಿಕೆ ಹುಟ್ಟಿಸುವ ಕೆಲಸ ಕೂಡಾ ನಡೆಯುತ್ತಿದೆ. ಇದಲ್ಲದೆ, ವರ್ಷಾವರ್ಷ ಈ ಕಾಡಿಗೆ ಬೆಂಕಿ ಹಚ್ಚಿ ನಿರ್ನಾಮವಾಗಿಸುವ ಅನಿಷ್ಠ ಕೆಲಸಕ್ಕೂ ಕೆಲ ಮಂದಿ ಕೈಹಾಕುತ್ತಲೇ ಇದ್ದಾರೆ.

ಇದೆಲ್ಲದರ ಆಳ ಕೆದಕುತ್ತಾ ಹೋದರೆ, ಈ ಜಾಗ ನುಂಗಲು ಹವಣಿಸುತ್ತಿರುವ ಭೂಮಾಫಿಯಾ ಏನಾದರೂ ಇದೆಯಾ ಅಂತೊಂದು ಅನುಮಾನ ಮೂಡುತ್ತದೆ. ಕೆಲವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಶಾಪಿಂಗ್ ಮಾಲೊಂದನ್ನು ನಿರ್ಮಿಸಲು ಭೂಮಾಫಿಯಾ ಪ್ರಯ... ಬಗ್ಗೆಯೂ ಗುಮಾನಿಗಳು ಕೇಳಿಬರುತ್ತಿದೆ. ಆ ಅ... ಇಂದಿಗೂ ಹಲವಾರು ಮಗ್ಗಲು ಬದಲಿಸುತ್ತಾ ... 'ಹೈಟೆಕ್' ಅವತಾರದಲ್ಲಿ ಅಟಕಾಯಿಸಿಕೊಂಡಿದೆ.


ಇದೀಗ ಇಂತಹುದೊಂದು ಅಮೂಲ್ಯ ಜೈವಿಕ... ಯನ್ನು ಉಳಿಸಿಕೊಳ್ಳಲು ಹೆಣಗುತ್ತಿರುವ ಟ್ರಸ್ಟಿನ ... 'ಈ ಭೂಮಿಯ ಹಿಡಿ ಮಣ್ಣೂ ನಮಗೆ ಬೇಡ. ಅ... ಸಸ್ಯ ಸಂಪತ್ತು, ಪ್ರಾಕೃತಿಕ ಸಮತೋಲನ ಉಳಿ... ಸಾಕು. ಅದಕ್ಕಾಗಿ ಈ ಪ್ರದೇಶದ ದೇಖಾರೇಖಿಯ... ಕೇಳುತ್ತಿದ್ದೇವೆ' ಅನ್ನುತ್ತಾರೆ. ಅದಷ್ಟನ್ನು ಟ್ರಸ್ಟ್‌ಗೆ ನೀ... ನೈಸರ್ಗಿಕ ತಾಣವನ್ನು ಕಾಪಾಡಲು ಬಿಬಿಎಂಪಿಗೆ ಅಡ್ಡಿಯಿದೆಯೆಂಬುದು ಸದ್ಯದ ಪ್ರಶ್ನೆ.

ಸಹಜವಾಗಿದ್ದ ಹಾಸುಗಲ್ಲಿನ ಮೇಲೆ ... ಎಡವಿಬೀಳುತ್ತೇವೆಂಬ ಘನ ಕಾರಣದಿಂದ ಹೈಟೆಕ್ ... ದುಂಬಾಲು ಬಿದ್ದಿರುವವರು ಪ್ರಕೃತಿಯ ಚೋರಲು... ಆಗಬಹುದಾದ ಅನಾಹುತಗಳನ್ನು ಅರಿಯಬೇಕಿದೆ... ಇದೆಲ್ಲದಕ್ಕೆ, ಒಂದಷ್ಟು ಮಂದಿ ಕುರುಡಾದ... ಅದರಿಂದಾಗಿಯೇ ಜೈವಿಕ ಸಮತೋಲನ ಕಾ... ಈ ಪ್ರದೇಶದಲ್ಲಿ ಒಟ್ಟಾಗಿ ಗಲಾಟೆ ಎಬ್ಬಿಸುತ್ತಾರೆ. ... ಕೊನೆಯಲ್ಲಿ ಬರ್ತ್‌ಡೇ ಪಾರ್ಟಿ ನಡೆಸಲೂ ಇದೇ ... ಹಾಲ್‌ನಂತೆ ಬಳಕೆಯಾಗುತ್ತಿದೆ. ಇಂಥಾ ಅವಿವೇ... ಪಾರ್ಕ್‌ನೊಳಗೆ ವಿದ್ಯುತ್ ದೀಪ ಹಾಕುವ ಡಿಮಾ... ಇಡಹತ್ತಿದ್ದಾರೆ. ಇದರಿಂದಾಗಿ ಸೂಕ್ಷ್ಮ ಜೀವ... ಬರ್ಬಾದೇಳುತ್ತದೆಂಬ ಪ್ರಾಥಮಿಕ ಪ್ರಜ್ಞೆಯೂ ಇವ... ರುವುದು ವಿಪರ್ಯಾಸ.

ಎಲ್ಲಾ ವೈಯಕ್ತಿಕ ವಿಚಾರ ಹಾಗೂ ರಾಜಕೀಯ... ಆಲೋಚಿಸಿ ಈ ಔಷಧೀಯ ಜೈವಿಕ ವ... ಉಳಿಸಿಕೊಳ್ಳುವ ಭಾರ ಪ್ರತಿಯೊಬ್ಬರ ಮೇಲಿದೆ.


• ಬಾಗಿ...

ಕವಿ ಜೀವಗಳ ಕಕ್ಕುಲಾತಿ...



ಹೈಟೆಕ್ ಭೂತದ ಕಪಿಮುಷ್ಟಿಗೆ ಸಿಲುಕಿ ಅವಸಾನದ ಹೆದರಿಕೆಯಲ್ಲಿರುವ ಈ ಜೈವಿಕ ವನ ಕವಿಜೀವಗಳಿಗೆ ಸ್ಫೂರ್ತಿ, ಬೆರಗು ಹುಟ್ಟಿಸುವಲ್ಲೂ ಯಶಸ್ವಿಯಾಗಿದೆ.

ಅಖಂಡ 29 ವರ್ಷಗಳಿಂದ ಈ ಪರಿಸರದಲ್ಲಿರುವ ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಈ ಜೈವಿಕ ವನದ ಅಂದಿನ ಸ್ಥಿತಿಯನ್ನು, ಇಂದಿನ ತಲ್ಲಣಗಳನ್ನು ಬಲ್ಲವರಾಗಿದ್ದಾರೆ. ಅವರ ದೃಷ್ಟಿಯಲ್ಲಿದು ಐಟಿಸಿಟಿಯ ಮಿನಿ ಮಲೆನಾಡು. ಬೆಂಗಳೂರಿನ ಪರಿಸರ ವಿಷಮಯವಾಗುತ್ತಿರುವ ಇಂದಿನ ಸನ್ನಿವೇಶದಲ್ಲಿ ಪ್ರತಿಯೊಂದು ಏರಿಯಾಗಳಲ್ಲೂ ಇಂಥದ್ದರ ಅವಶ್ಯಕತೆಯಿದೆ ಹಾಗೂ ಯಾವುದೇ ಕಾರ್ಯಕ್ಕೂ ಇದಕ್ಕೆ ಹೈಟೆಕ್ ಸ್ಪರ್ಶ ನೀಡಿ ನೈಸರ್ಗಿಕ ಜೀವಸಂಕುಲವನ್ನು ಬರಿದಾಗಿಸುವುದನ್ನು ನಿಸಾರ್ ಅಹಮದ್ ಒಪ್ಪುವುದಿಲ್ಲ. ಹಾಗಂತ ಪತ್ರವೊಂದರಲ್ಲಿ ಖುದ್ದು ಅವರೇ ಹೇಳಿಕೊಂಡಿದ್ದಾರೆ.



ಇನ್ನು ಟ್ರಸ್ಟ್ ವತಿಯಿಂದ ನಡೆಯುವ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರೂ ಈ ಪಾರ್ಕಿನ ಸಹಜ ಸೌಂದರ್ಯ ಹಾಗೂ ಗಿಡಮೂಲಿಕಾ ಶ್ರೀಮಂತಿಕೆಗೆ ಮಾರುಹೋಗಿದ್ದಾರೆ. "ಇದು ಬರಿ ಜೈವಿಕ ಉದ್ಯಾನವಲ್ಲ, ಕಾವ್ಯೋದ್ಯಾನವೂ ಹೌದು" ಅಂತಲೂ ಬೆರಗಿನಿಂದ ಉದ್ಗರಿಸಿದ್ದರು. ಜೊತೆಗೆ ಇಲ್ಲಿಗೆ ಭೇಟಿ ನೀಡಿದ ವಿದೇಶಿಯರೂ ಇಲ್ಲಿನ ವೈವಿಧ್ಯತೆಗೆ ಮರುಳಾಗಿದ್ದಾರೆ.

ಆದರಿದು ಅರ್ಥವಾಗಬೇಕಾದವರಿಗೆ ಆಗದಿರುವುದು ಮಾತ್ರ ವಿಪರ್ಯಾಸ.

▸▸ಕಾರ್ಟೂನ್ ಕಾರ್ನರ್





ರಾಮನಗರ: ಒಕ್ಕಲಿಗರ ದೌರ್ಜನ್ಯ ದಲಿತರಿಗೆ ಬಹಿಷ್ಕಾರ

ರಾಮನಗರದಿಂದ ಹದಿನೈದು ಕಿ.ಮೀ. ದೂರದಲ್ಲಿರುವ ...ನಹಳ್ಳಿಯಲ್ಲಿ ದಲಿತ ಕುಟುಂಬಗಳು ಬಹಿಷ್ಕಾರಕ್ಕೊಳಗಾಗಿ ...ದಿನವನ್ನೂ ಜೀವಭಯ, ಆತಂಕದಲ್ಲಿ ದೂಡುತ್ತಿವೆ. ಜಾತಿ ...ನ ಕೆಲ ಒಕ್ಕಲಿಗ ನಾಯಕರು ಯಾವ ಕಾನೂನಿಗೂ ಕಿಮ್ಮತ್ತು ...ದೇ ಅಂಕನಳ್ಳಿಯ ದಲಿತರನ್ನು ಪ್ರಾಣಿಗಳಿಗಿಂತ ಕೀಳಾಗಿ ...ುತ್ತಿದ್ದಾರೆ. ಇಂತಹ ಫ್ಯೂಡಲ್ ಪುಢಾರಿಗಳ ಪರ ಪೊಲೀಸ್ ...ಖೆಯೂ ನಿಂತಿರುವುದರಿಂದ ದಲಿತರಿಗೆ ...ಕೆಯೇ ಇಲ್ಲವಾಗಿದೆ. ಎಂ.ಪಿ. ಕುಮಾರ ...ು, ಶಾಸಕ ರಾಜು ಇದು ತಮಗೆ ...ಂಧಿಸಿಯೇ ಇಲ್ಲ ಎಂಬಂತೆ ನಿರುಮ್ಮಳ ...ದ್ದಾರೆ.



...ಅಷ್ಟಕ್ಕೂ ಕಳೆದ ವಾರದಿಂದ ಹೀಗೆ ...ಒಂದೊಮ್ಮೆಯೇ 30 ದಲಿತ ಕುಟುಂಬ ...ಗೆ ಬಹಿಷ್ಕಾರ ಹಾಕಿದ್ದರ ಹಿಂದಿನ ಕಾರಣ ...ದರೂ ಏನು? ಇಲ್ಲೇನೂ ದಲಿತರು ...ಗೆ ದೇವಸ್ಥಾನಕ್ಕೆ ಪ್ರವೇಶ ಕೊಡಿ ಎಂದೂ ...ಲ್ಲ. ಜಾತ್ರೆ ಸಂದರ್ಭದಲ್ಲಿ ಮಾರಮ್ಮದೇವಿಯ ಮೆರವಣಿಗೆ ...ಕೇರಿಗೆ ಬಂದಾಗ, ತಮಗೂ ಪ್ರತ್ಯೇಕವಾಗಿ ಆರತಿ ತಟ್ಟೆ ...ಡಿಕೊಡಿ ಎಂದು ದಲಿತ ಯುವಕರು ಕೇಳಿದ್ದಾರಷ್ಟೇ. ಈ ...ತ್ತು ವರ್ಷಗಳಿಂದ ಅಲ್ಲಿ ಮಾರಮ್ಮನ ಜಾತ್ರೆಯಲ್ಲಿ ಒಕ್ಕಲಿಗರು ...ತರಿಗೆ ಹೂವು, ಹಣ್ಣು, ಆರತಿ ತಟ್ಟೆ ಮಾಡಿಕೊಡುತ್ತ ಬಂದಿದ್ದಾರೆ. ...ರೆ ಅವರೆಂದೂ ದಲಿತರ ಆರತಿ ತಟ್ಟೆಗಳನ್ನು ಮುಟ್ಟಿ ಪೂಜೆ ...ನೇರಿಸಿಲ್ಲ. ದೇವಿಯ ಹೂವು, ಕಾಯಿ, ಹಣ್ಣುಗಳನ್ನು ಕೇರಿಯಲ್ಲಿ ಒಂದೆಡೆ ಗುಡ್ಡೆ ಹಾಕಿ ಹೋಗುತ್ತ ಬಂದಿದ್ದಾರೆ. ಈ ಸಲ ಕೆಲ ವಿದ್ಯಾವಂತ ದಲಿತ ಯುವಕರು ಈ ಅಮಾನವೀಯ ಪದ್ಧತಿಯನ್ನು ವಿರೋಧಿಸಿದ್ದಾರೆ. ತಮಗೂ ಎಲ್ಲರಂತೆ ದೇವಿಯ ಆಶೀರ್ವಾದ, ಪ್ರಸಾದ ಸಿಗಲಿ ಎಂಬುದಷ್ಟೇ ಅವರ ಬೇಡಿಕೆಯಾಗಿತ್ತು.

ಈ ಬೇಡಿಕೆಯನ್ನು ಸಾರಾಸಗಟಾಗಿ ತಿರಸ್ಕರಿಸಿದ ಕೆಲ ಒಕ್ಕಲಿಗ ಹುಂಬರು, ಹಿಂದಿನ ಸಂಪ್ರದಾಯದಂತೆ ಆರತಿ ತಟ್ಟೆ ಮಾಡೋದಾಗಿ ಹಠ ಹಿಡಿದಿದ್ದಾರಲ್ಲದೇ, ಜಾತಿಯ ಹೆಸರಲ್ಲಿ ಒಕ್ಕಲಿಗರನ್ನು ಒಂದು ಮಾಡಿ, ನ್ಯಾಯಯುತ ಬೇಡಿಕೆ ಮಂಡಿಸಿದ ಮೂವತ್ತು ದಲಿತ ಕುಟುಂಬಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಊರಲ್ಲಿನ ಯಾವ ಅಂಗಡಿಯವರೂ ದಲಿತರಿಗೆ ರೇಷನ್ನು ಮಾರುತ್ತಿಲ್ಲ, ಫ್ಲೋರ್‌ಮಿಲ್‌ಗಳವರು ದಲಿತರಿಗೆ ರಾಗಿ, ಗೋಧಿ ಬೀಸಿ ಕೊಡುತ್ತಿಲ್ಲ. ಇದಕ್ಕಾಗಿ ಅಂಕನಹಳ್ಳಿಯ ದಲಿತರೀಗ 15 ಕಿ.ಮೀ. ದೂರದ ರಾಮನಗರವನ್ನು ಅವಲಂಬಿಸಬೇಕಾಗಿದೆ. ದಲಿತರು ಓಡಾಡುವ ದಾರಿ, ಜಾಡುಗಳಿಗೆ ಬೇಲಿ ಹಾಕಿರುವ ಒಕ್ಕಲಿಗರು, ತಮ್ಮ ಹೊಲಗಳ ಅಂಚಿಗೂ ದಲಿತರು ಬಾರದಂತೆ ನಿರ್ಬಂಧ ಹೇರಿದ್ದಾರೆ. ಊರ ಮುಂದಿರುವ ಬಸ್‌ಸ್ಟಾಪಿನ ಫುಟ್‌ಪಾತ್‌ನಲ್ಲೂ ದಲಿತರು ನಿಲ್ಲದಂತೆ ಗೂಂಡಾಗಿರಿ ನಡೆಸುತ್ತಿದ್ದಾರೆ. ದಲಿತರು ತಮ್ಮ ಹಿತ್ತಲಲ್ಲಿ ಕಟ್ಟಿಕೊಂಡಿದ್ದ ಸ್ನಾನದ ಕೊಟ್ಟಿಗೆಗಳನ್ನು ನಾಶ ಮಾಡಿದ್ದಾರೆ ಒಕ್ಕಲಿಗ ಗೂಂಡಾಗಳು.


ಇಂತಹ ಗೂಂಡಾಗಳಿಂದ ದಲಿತರಿಗೆ ರಕ್ಷಣೆ ನೀಡಬೇಕಾಗಿದ್ದ ಪೊಲೀಸ್ ಇಲಾಖೆ ಗೂಂಡಾಗಳ ಪರ ನಿಂತಿದೆ. ದಲಿತರು ದೂರು ಕೊಡಲು ಹೋದರೆ ಎಸ್ಸೈ ಬೀಚನಹಳ್ಳಿ ಎಂಬ ಮೇಲ್ಜಾತಿಯ ಭೂಪ ದಲಿತರನ್ನೇ ಅವಾಚ್ಯ ಶಬ್ದಗಳಿಂದ ಬೈದು ವಾಪಸ್ ಕಳಿಸಿದ್ದಾನೆ. ಇಲ್ಲಿನ ಎಸ್‌ಐ ಕೂಡಾ ಒಕ್ಕಲಿಗರ ಮನೆಯಲ್ಲಿ ಬಾಡೂಟ ಮಾಡಿ ಎದ್ದು ಹೋಗಿದ್ದಾನೆ.

ಮುನ್ನೂರು ಮನೆಗಳಿರುವ ಒಕ್ಕಲಿಗರನ್ನು ದಾರಿ ತಪ್ಪಿಸುತ್ತಿರುವುದು ಕೆಲವೇ ಕೆಲವು ಫ್ಯೂಡಲ್ ಪುಢಾರಿಗಳು. ಶಿವಣ್ಣ, ನರಸಿಂಹಯ್ಯ, ತಿಮ್ಮಯ್ಯ, ಚಂದ್ರಶೇಖರ್, ಶಿವಪ್ಪ, ಡೈರಿ ರಾಜಾಗಳೂ ಎಂಬ ಕೆಲಸಗೇಡಿಗಳು ಒಂದಿಷ್ಟು ಹುಡುಗರನ್ನು ಕಲೆಹಾಕಿಕೊಂಡು ಕುಡಿದು ಗಲಾಟೆ ಮಾಡುತ್ತಿದ್ದಾರೆ. 'ಹೆಚ್ಚೂಕಡಿಮೆ ಕೆಮ್ಮಿದರೆ ನಿಮ್ಮನ್ನು ಊರಿಂದಲೇ ಓಡಿಸಿಬಿಡ್ತೀವಿ' ಎಂದು ದಲಿತರಿಗೆ ಧಮಕಿ ಹಾಕಲಾಗುತ್ತಿದೆ. ಇಂತಹ ರೌಡಿಗಳ ಜೊತೆ ಸ್ಕೂಲ್ ಮೇಷ್ಟ್ರುಗಳಾದ ರಮೇಶು, ಧನಂಜಯ, ಕೆಂಡಯ್ಯ ಮುಂತಾದ ಮುಠ್ಠಾಳರೂ ಸೇರಿದ್ದಾರೆ.

ಡಾ. ಬಂಜಗೆರೆ ಜಯಪ್ರಕಾಶ್, ಡಿಎಸ್‌ಎಸ್‌ನ ದೇವರಾಜು, ರವಿಕುಮಾರ್, ಬಾಗಿ, ಪ್ರಕಾಶ್ ಮುಂತಾದವರಿದ್ದ ಸತ್ಯಶೋಧನಾ ಸಮಿತಿ ದಲಿತರು ಅನುಭವಿಸುತ್ತಿರುವ ಕಷ್ಟಗಳನ್ನು ಖುದ್ದಾಗಿ ವೀಕ್ಷಿಸಿ ಬಂದಿದೆ.

ಈ ಸಮಿತಿಯ ವರದಿಯಿಂದ ಎಚ್ಚೆತ್ತುಕೊಂಡ ಜಿಲ್ಲಾಡಳಿತ ಎಂಎಲ್‌ಎ, ಡಿಸಿ, ಎಸ್ಪಿ, ತಹಶೀಲ್ದಾರ್‌ಗಳ ಸಮ್ಮುಖದಲ್ಲಿ ಕಾಟಾಚಾರದ ಸಭೆ ನಡೆಸಿದೆ. ಬಹಿಷ್ಕಾರ ಹಿಂದೆ ಪಡೆದಿರುವುದಾಗಿ ಮೇಲ್ಜಾತಿಯವರು ಒಪ್ಪಿಕೊಂಡಿದ್ದಾರಾದರೂ, ಬಹಿಷ್ಕಾರ ಮಾತ್ರ ಮುಂದುವರಿದೇ ಇದೆ. ದಲಿತರಿಗೆ ಒಂದು ಲಕ್ಷ ರೂಪಾಯಿಗಳ ರೇಷನ್ ಹಾಗೂ ಇತರ ಪರಿಹಾರ ನೀಡುವುದಾಗಿ ಹೇಳಿದ ಜಿಲ್ಲಾಡಳಿತ 25 ಸಾವಿರದಲ್ಲಿ ಕೈತೊಳೆದುಕೊಂಡಿದೆ.

ರಾಮನಗರದ ದಲಿತರು ಇನ್ನೂ ಆತಂಕ, ಭಯಗಳಲ್ಲೇ ಇದ್ದಾರೆ. ಸಂಸದ ಕುಮಾರಸ್ವಾಮಿಯವರಿಗೆ ಈಗಲಾದರೂ ಎಚ್ಚರವಾದೀತೆ? ●



ಒಂದು ಪ್ರೀತಿಯ ಕತೆ ಮತ್ತು ವ್ಯಥೆ...

ಮತ್ತದೇ ಜಾತಿಭೂತ, ಶ್ರೀಮಂತಿಕೆಯ ದಬ್ಬಾಳಿಕೆಗಳು ಇಬ್ಬರು ಮುಗ್ಧ ಯುವ ದಂಪತಿಗಳನ್ನು ಅತಂತ್ರ ಸ್ಥಿತಿಗೆ ತಳ್ಳಿವೆ.

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಹನುಮನಾಳದ ಯುವಕ ಯಶವಂತ್ ಟಿಸಿಎಚ್ ಓದಿದ್ದು, ಕಳೆದ ವರ್ಷ ಬೆಂಗಳೂರಿನ ಉನ್ನತಿ ಕಾಲ್‌ಸೆಂಟರ್ ತರಬೇತಿ ಸಂಸ್ಥೆಗೆ ಸೇರಿದ. ಅಲ್ಲಿ ಇಂಗ್ಲಿಷ್ ಕಲಿಸುತ್ತಿದ್ದ ಪದವೀಧರೆ, ಬೆಂಗಳೂರಿನ ಕಲ್ಯಾಣ ನಗರದ ಯುವತಿ ಲಕ್ಷ್ಮಿಯೊಂದಿಗೆ ಯಶವಂತನ ಪ್ರೇಮಾಂಕುರವಾಗಿದೆ. ರಿಯಲ್ ಎಸ್ಟೇಟ್ ಉದ್ಯಮಿಯಾಗಿರುವ ಲಕ್ಷ್ಮೀ ತಂದೆ ಬಾಲಸುಂದರ್‌ಗೆ ಇದು ಗೊತ್ತಾಗಿ ರಾದ್ಧಾಂತವಾಗಿದೆ.

ಅಷ್ಟೊತ್ತಿಗೆ ಯಶವಂತನಿಗೆ ಫಸ್ಟ್ ಸೋರ್ಸ್ ಎನ್ನುವ ಬಿಪಿಓ ಕಂಪನಿಯಲ್ಲಿ ಎಂಟು ಸಾವಿರ ಸಂಬಳದ ಕೆಲಸ ಸಿಕ್ಕಿದೆ. ಲಕ್ಷ್ಮೀಗೆ ಇನ್ಫೋಸಿಸ್ ಬಿಪಿಓ ಕೇಂದ್ರದಲ್ಲಿ ಕೆಲಸ ಸಿಕ್ಕು ಮೈಸೂರಿನ ಇನ್ಫೋಸಿಸ್ ಕೇಂದ್ರದಲ್ಲಿ ತರಬೇತಿಗೆ ಹಾಜರಾಗಿದ್ದಾಳೆ. ಆರ್ಥಿಕವಾಗಿ ಸ್ವತಂತ್ರರಾದ ಈ ಇಬ್ಬರು ಮದುವೆಯಾಗಲು ನಿಶ್ಚಯಿಸಿದ್ದಾರೆ. ಆದರೆ ತಮಿಳು ಮೊದಲಿಯಾರ್ ಜಾತಿಗೆ ಸೇರಿದ ಲಕ್ಷ್ಮೀ ಕುಟುಂಬಕ್ಕೆ ಬಡಕುಟುಂಬದ ಕ್ಷತ್ರಿಯ ಜನಾಂಗದ ಯುವಕ ಯಶವಂತ್ ಇಷ್ಟವಾಗಿಲ್ಲ. ಯಶವಂತ್‌ನಿಗೆ ಪಾಠ ಕಲಿಸಲು ಲಕ್ಷ್ಮೀ ತಂದೆ ಬಾಲಸುಂದರ್ ಯಶವಂತನ ಮೇಲೆ ಹಲ್ಲೆಯನ್ನು ನಡೆಸಿದ್ದಾನೆ. ಮೈಸೂರಿನಲ್ಲಿ ತರಬೇತಿ ಮುಗಿಸಿದ ಲಕ್ಷ್ಮೀ ಬೆಂಗಳೂರಿನ ಇನ್ಫೋಸಿಸ್ ಬಿಪಿಓ ಕೇಂದ್ರಕ್ಕೆ ಹಾಜರಾಗಲು ಬಂದಿದ್ದಾಳೆ. ಆಗ ಯಶವಂತ್ ಮತ್ತು ಆಕೆ ದೃಢ ನಿರ್ಧಾರಕ್ಕೆ ಬಂದು, ಜೂನ್ 4, 2010 ರಂದು ಹಾಸನ ಜಿಲ್ಲೆಯ ಸಿದ್ದರಗಟ್ಟ ಗ್ರಾಮ ತಲುಪಿದ್ದಾರೆ. ಅಲ್ಲಿ ಯಶವಂತ್ ಮಿತ್ರ ವೆಂಕಟೇಶನ ನೆರವಿನಿಂದ, ಗ್ರಾಮ ಪಂಚಾಯತಿಯವರ ಮತ್ತು ಗ್ರಾಮಸ್ಥರ ಬೆಂಬಲದಿಂದ ಇಬ್ಬರೂ ಸರಳ ಮದುವೆಯಾಗಿದ್ದಾರೆ.

ಇದು ಗೊತ್ತಾದ ಲಕ್ಷ್ಮೀ ತಂದೆ ಯಶವಂತನ ಊರಿಗೆ ಧಾವಿಸಿ ಆತನ ಬಡ ತಂದೆತಾಯಿಗಳಿಗೆ ಧಮಕಿ ಹಾಕಿದ್ದಾನೆ. ಬಿಜಾಪುರದಲ್ಲಿ ಓದುವ ಯಶವಂತ್ ತಂಗಿ, ಬೆಂಗಳೂರಲ್ಲಿರುವ ಯಶವಂತ್‌ನ ಸಹೋದರನನ್ನು ಕೊಲ್ಲುವುದಾಗಿ ಬೆದರಿಕೆ ಒಡ್ಡಿದ್ದಾನೆ. ಇತ್ತ ಹನುಮನಾಳ ತಲುಪಿದ ಯಶವಂತನಿಗೆ ಹೇಬಿಯಸ್ ಕಾರ್ಪಸ್ ಅರ್ಜಿ ತೋರಿಸಿದ ಪೊಲೀಸರು, ಲಕ್ಷ್ಮೀಯನ್ನು ತಂದೆಯ ಬಳಿಗೆ ಒಪ್ಪಿಸಿದ್ದಾರೆ. ಆಗಿಂದ ಲಕ್ಷ್ಮೀಯನ್ನು ಗೃಹಬಂಧನದಲ್ಲಿಟ್ಟು ಹಿಂಸೆ ನೀಡುತ್ತಿರುವ ಆಕೆಯ ತಂದೆ, ಯಶವಂತನಿಗೆ ಬೆದರಿಕೆಯ ಕರೆಗಳನ್ನು ಮಾಡುತ್ತ, ಮದುವೆ ಫೋಟೋಗಳನ್ನು, ಲಕ್ಷ್ಮೀಯ ಪ್ರೇಮಪತ್ರಗಳನ್ನು ವಾಪಸ್ ನೀಡುವಂತೆ ಹೆಣ್ಣೂರು ಕ್ರಾಸ್ ಪೊಲೀಸರ ಮೂಲಕ ಒತ್ತಡ ಹಾಕುತ್ತಿದ್ದಾನೆ.

ಪರಸ್ಪರ ಒಪ್ಪಿ ಮದುವೆಯಾಗಿರುವ ಯಶವಂತ್, ಲಕ್ಷ್ಮೀಯರ ಸಹಾಯಕ್ಕೆ ಪ್ರಗತಿಪರ ಸಂಘಟನೆಗಳು ಮುಂದೆ ಬರಬೇಕಿದೆ. ಹಾಗೆಯೇ ಹೆಣ್ಣೂರು ಪೊಲೀಸರು ಈ ಯುವ ದಂಪತಿಗಳ ನೆರವಿಗೆ ಬರುವುದು ಅಗತ್ಯವಾಗಿದೆ.


● ಮಲ್ಲಿ

...ಮಠಗಳ ಮರ್ಜಿಯಲ್ಲಿ ಮಕ್ಕಳ ಶಾಲೆಗಳು

...ಉಳಿದ ಜಿಲ್ಲೆಗಳೇನೋ ಗೊತ್ತಿಲ್ಲ, ಆದರೆ ...ಡಿಯೂರಪ್ಪರ ಶಿವಮೊಗ್ಗ ಜಿಲ್ಲೆಯಲ್ಲಿ ಬಹುತೇಕ ಸರ್ಕಾರಿ ...ಲೆಗಳು, ಅದರಲ್ಲೂ ಮೊರಾರ್ಜಿ ಶಾಲೆ ಮತ್ತು ಕಿತ್ತೂರು ...ಮ್ಮ ಶಾಲೆಗಳು ಮಠಗಳ ಮರ್ಜಿಯಲ್ಲಿ ನರಳುತ್ತಿದ್ದು, ...ಮಕ್ಕಳಿಗೆ ಮಾಂಸಾಹಾರದ ಅಡುಗೆಯಿರಲಿ, ಮೊಟ್ಟೆ ...ನುವ ಭಾಗ್ಯವೂ ಇಲ್ಲವಾಗಿದೆ.

...ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಡಿ ...ಯುತ್ತಿರುವ ಮೊರಾರ್ಜಿ, ಚೆನ್ನಮ್ಮ ಶಾಲೆಗಳ ಮಕ್ಕಳಲ್ಲಿ ...ಗೆ ತಾರತಮ್ಯ ಹುಟ್ಟುಹಾಕುತ್ತಿರುವುದರ ಹಿಂದೆ ...ರ್ಖ ಮುಖ್ಯಮಂತ್ರಿಯ ಜಾತಿಪ್ರೇಮವಿದೆ.

...ಶಿವಮೊಗ್ಗದ ಹಿರೇಮಾಗಡಿಯ ಬಳಿಯಿರುವ ಕಿತ್ತೂರು ...ಚೆನ್ನಮ್ಮ ಶಾಲೆ ಲಿಂಗಾಯತ ಮಠವೊಂದರ ಆವರಣದಲ್ಲಿದೆ. ಇಲ್ಲಿ ಓದುತ್ತಿರುವ ಮಗಳನ್ನು ಭೇಟಿಯಾಗಲು ಬಂದ ತಂದೆಯೊಬ್ಬರು ಮಗಳಿಗೆಂದು ಆರಿದ್ರಾ ಮಳೆಯ ಹಬ್ಬದೂಟ ತಂದಿದ್ದರು. ಆದರೆ ಶಾಲೆ ಮಠದ ಆವರಣದಲ್ಲಿರುವುದರಿಂದ ಅಲ್ಲಿ ಮಾಂಸದೂಟ ನಿಷಿದ್ಧ! ಪಾಪ, ಆ ತಂದೆ ಮಗಳನ್ನು ಮಠದ ಹಿಂದಿರುವ ಹಳೆಯ ಕಟ್ಟಡವೊಂದರ ಬಳಿ ಕರೆದುಕೊಂಡು ಹೋಗಿ ಊಟ ಮಾಡಿಸಬೇಕಾಯಿತು. ಯಾವ ಅಪರಾಧಕ್ಕಾಗಿ ಆ ಪುಟ್ಟಮಗು ಎಲ್ಲೋ ನಿಂತು ಊಟ ಮಾಡಬೇಕು? ಇನ್ನು ಹಲವಾರು ಪೋಷಕರು ತಮ್ಮ ಮಕ್ಕಳನ್ನು ಹೊರಕರೆದೊಯ್ದು ರಸ್ತೆಬದಿಯ ಮಾಂಸದ, ಮೀನಿನ ಅಂಗಡಿಗಳ ಬಳಿ ನಿಂತು ಊಟ ಮಾಡಿಸುತ್ತಾರೆ.



ಶಿಕಾರಿಪುರದ ಚುರ್ಚಿಗುಂಡಿ ಬಳಿಯ ಸನ್ಯಾಸಿ ಕೊಪ್ಪದಲ್ಲಿರುವ ಮೊರಾರ್ಜಿ ಶಾಲೆಯ ಹಾಸ್ಟೆಲಿನಲ್ಲಿ ಇದೇ ಪರಿಸ್ಥಿತಿ. ಆ ಗ್ರಾಮದ ಲಿಂಗವಂತರು ಹಾಸ್ಟೆಲಿನಲ್ಲಿ ಮೊಟ್ಟೆ, ಮಾಂಸ ಬೇಯಿಸಬಾರದು, ತಿನ್ನಬಾರದು ಎಂದು 'ಫತ್ವಾ' ಹೊರಡಿಸಿದ್ದಾರೆ. ಈ ಉದ್ಧಟತನವನ್ನು ವಾರ್ಡನ್, ಪ್ರಿನ್ಸಿಪಾಲ್ ಯಾರೂ ಪ್ರಶ್ನಿಸಲಿಲ್ಲ.

ಮಠಗಳ ಮರ್ಜಿಗೆ, ಮೇಲ್ಜಾತಿಗಳ ಹಂಗಿಗೆ ಸರ್ಕಾರವೇ ಬಿದ್ದಿರುವಾಗ, ನಮ್ಮ ಮಕ್ಕಳು ಉತ್ತಮ ಆಹಾರದಿಂದಲೂ ವಂಚಿತರಾಗುತ್ತಿದ್ದಾರೆ. ಛೀ, ನಾಚಿಕೆಯಾಗಬೇಕು ಈ ಸರ್ಕಾರಕ್ಕೆ....

-ಮಂಜಣ್ಣ ಸೊರಬ

ಮುಸ್ಲಿಂ ವಿದ್ಯಾರ್ಥಿಗಳಿಗೆ ಮತ್ತೊಂದು ಕಂಟಕ

ಇತ್ತೀಚಿನ ವರ್ಷಗಳಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಸ್ಲಿಂ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಸಾಕಷ್ಟು ಪ್ರಗತಿ ತೋರುತ್ತಿರುವುದನ್ನು ಸಂಘ ಪರಿವಾರಕ್ಕೆ ಸಹಿಸಿಕೊಳ್ಳಲಾಗುತ್ತಿಲ್ಲ. ಇದರಿಂದ ತಿಕ ಸುಟ್ಟ ಬೆಕ್ಕುಗಳಂತಾಡುತ್ತಿರುವ ಚಡ್ಡಿಗಳು ಸ್ಕಾರ್ಫ್ ವಿವಾದ, ಬುರ್ಖಾ ವಿವಾದ ಇತ್ಯಾದಿ ಸಂವಿಧಾನ ವಿರೋಧಿ ಗದ್ದಲಗಳನ್ನು ಎಬ್ಬಿಸುತ್ತಿವೆ. ಇದಕ್ಕೆ ಕೆಲ ಕಾಲೇಜುಗಳ ಚಡ್ಡಿ ಮ್ಯಾನೇಜ್‌ಮೆಂಟ್‌ಗಳು ಬೆಂಬಲವಾಗಿ ನಿಂತಿವೆ.



ಕಳೆದ ಬಾರಿ ಬುರ್ಖಾ ವಿವಾದ, ಆರೆಸ್ಸೆಸ್ ಬೈಠಕ್‌ನಿಂದ ಸುದ್ದಿಯಾಗಿದ್ದ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿಯ ಸರ್ಕಾರಿ ಕಾಲೇಜಿನಲ್ಲೀಗ ಮುಸ್ಲಿಂ ವಿದ್ಯಾರ್ಥಿಗಳನ್ನು ತುಳಿಯಲು ಕಾನೂನುಬಾಹಿರ ನಿಯಮವೊಂದು ಜಾರಿಗೆ ಬಂದಿದೆ.

ಮುಸ್ಲಿಮರು, ಶೂದ್ರರೇ ಹೆಚ್ಚಿರುವ ಈ ಕಾಲೇಜಿನಲ್ಲಿ ಜಾರಿಗೆ ಬಂದಿರುವ ಈ ಕಾನೂನುಬಾಹಿರ ನಿಯಮದ ಪ್ರಕಾರ, ಕಾಲೇಜಿಗೆ ಸೇರ್ಪಡೆಯಾಗುವ ಮುನ್ನವೇ ವಿದ್ಯಾರ್ಥಿಗಳಿಂದ 'ವರ್ಗಾವಣೆ ಪತ್ರ ಕೋರಿ ಅರ್ಜಿ'ಯೊಂದನ್ನು ಬರೆಸಿ, ಸಹಿ ಮಾಡಿಸಿ ಇಟ್ಟುಕೊಳ್ಳಲಾಗುತ್ತಿದೆ!


ಇದರ ಹಿಂದಿರುವವನು ಪ್ರಾಂಶುಪಾಲನಾಗಿ ಅಧಿಕಾರ ವಹಿಸಿಕೊಂಡಿರುವ ಕನ್ನಡ ಉಪನ್ಯಾಸಕ ಸುಬ್ರಮಣ್ಯ ಭಟ್ಟ. ಈತ ಆರೆಸ್ಸೆಸ್ ಪೀಡೆ ಕಲ್ಲಡ್ಕ ಪ್ರಭಾಕರ ಭಟ್ಟನ ಖಾಸಾ ಶಿಷ್ಯ. ಕಳೆದ ವರ್ಷದ ಸ್ಕಾರ್ಫ್ ವಿವಾದದ ಹಿಂದೆಯೂ ಈ ಸುಬ್ಬಭಟ್ಟನೇ ಇದ್ದ. ಈಗ ವರ್ಗಾವಣೆ ಪತ್ರದ ಕುತಂತ್ರ ಶುರು ಮಾಡಿರುವ ಸುಬ್ಬಭಟ್ಟ, ಬಹುಪಾಲು ಮುಸ್ಲಿಂ ವಿದ್ಯಾರ್ಥಿಗಳಿಂದ, 'ನಾನು ವೈಯಕ್ತಿಕ ಕಾರಣಗಳಿಗಾಗಿ ಕಾಲೇಜು ತೊರೆಯುತ್ತಿರುವೆ. ದಯವಿಟ್ಟು ವರ್ಗಾವಣೆ ಪತ್ರ ನೀಡಿ' ಎಂಬ ಅರ್ಜಿಯನ್ನು ಮೊದಲೇ ಬರೆಸಿ ಇಟ್ಟುಕೊಳ್ಳುತ್ತಿದ್ದಾನೆ.

ಇದನ್ನು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಸಂಘಟನೆ ಪ್ರತಿಭಟಿಸಿದಾಗ ತಿಪ್ಪೆ ಸಾರಿಸಲು ನೋಡಿದ್ದಾನೆ. ಒಟ್ಟಿನಲ್ಲಿ ಮುಸ್ಲಿಂ ವಿದ್ಯಾರ್ಥಿಗಳನ್ನು 'ಹದ್ದುಬಸ್ತಿ'ನಲ್ಲಿಡಲು ಭಟ್ಟ ಈ ಕಾನೂನುಬಾಹಿರ ನಿಯಮ ರೂಪಿಸಿದ್ದಾನೆ. ಶಿಕ್ಷಣ ಇಲಾಖೆ, ಮಂಗಳೂರು ವಿ.ವಿ.ಗಳು ಸುಬ್ಬಭಟ್ಟನಿಗೆ ಮೂಗುದಾರ ಹಾಕದಿದ್ದರೆ ಬಡ ಮುಸ್ಲಿಂ ವಿದ್ಯಾರ್ಥಿಗಳ ಬದುಕು ಹಾಳಾಗಲಿದೆ.

● ಇಸ್ಮತ್ ಫಜೀರ್, ಮಂಗಳೂರು

'ಸುಸಂಸ್ಕೃತ ಪ್ರಶ್ನೆಗಳನ್ನಷ್ಟೇ ಕೇಳಿ' ಎನ್ನುವುದಾದರೆ...

'ದೇಶಕಾಲ' ಕುರಿತ ಚರ್ಚೆಯ ಮೂರನೆ ಭಾಗ ಇದು. ಕಳೆದ ವಾರ ಕೆ.ಫಣಿರಾಜ್, ಜಿ. ರಾಜಶೇಖರ್ ಹಾಗು ತರೀಕೆರೆಯವರು ನೀಡಿದ್ದ ಪ್ರತಿಕ್ರಿಯೆ ಕುರಿತಂತೆ ಮಂಜುನಾಥ್ ಲತಾ-ಐಜೂರ್ ಮತ್ತು ಇತರರ ಅಭಿಪ್ರಾಯಗಳು ಇಲ್ಲಿವೆ.



'ಒಂದೇ ಬಲ್ಲಿನಿಂದ ಹೊರಟ ಬಾಣ'ಗಳಂತಿರುವ ಪ್ರತಿಕ್ರಿಯೆಗಳನ್ನು ನೀಡಿರುವ ಶ್ರೀ ಜಿ.ರಾಜಶೇಖರ್, ಶ್ರೀ ಕೆ.ಫಣಿರಾಜ್ ಹಾಗೂ ಶ್ರೀ ರಹಮತ್ ತರೀಕೆರೆಯವರಿಗೆ ನಮ್ಮ ಧನ್ಯವಾದಗಳು.

****

ಏಳೆಂಟು ವರ್ಷಗಳ ಹಿಂದಿನ ಮಾತು. ಪ್ರೊ. ಕೆ.ರಾಮದಾಸ್ ಅವರು ಮೈಸೂರಿನಲ್ಲಿ ತಿಂಗಳ ಪತ್ರಿಕೆಯೊಂದನ್ನು ಬಿಡುಗಡೆ ಮಾಡಿದರು. ಆ ಪತ್ರಿಕೆಯು ಇಟ್ಟುಕೊಂಡಿದ್ದ ಉಪಶೀರ್ಷಿಕೆ 'ಜಡಸಮಾಜಕ್ಕೆ ಚುಚ್ಚುಮದ್ದು' ಎಂಬುದರ ಬಗ್ಗೆ ಅವರ ತಕರಾರು: 'ಸಮಾಜವೇ ಜಡವಾಗಿರುವಾಗ ಚುಚ್ಚುಮದ್ದಿನಿಂದೇನು ಪ್ರಯೋಜನ? ಅದಕ್ಕೆ 'ಶಾಕ್ ಟ್ರೀಟ್‌ಮೆಂಟ್' ಕೊಡಬೇಕು ಕಣ್ರೀ; ಆಗಲೇ ಅದೊಂದಿಷ್ಟು ಅತ್ತಿತ್ತ ಚಲಿಸೋದು!'

****

ರಹಮತ್ ಸರ್ ಹೇಳುವಂತೆ 'ಎದುರಿಗಿರುವವರ ಅಭಿಪ್ರಾಯವನ್ನು ಅರ್ಥ ಮಾಡಿಕೊಳ್ಳುವುದಕ್ಕೂ ನಿರಾಕರಿಸುವ ಫ್ಯಾಸಿಸಂ ನಮ್ಮ ಸಮಾಜದ ಸಂದುಮೂಲೆಗಳನ್ನೂ ಆವರಿಸಿಕೊಳ್ಳುತ್ತಿರುವ ಹೊತ್ತಿದು'; 'ದೇಶಕಾಲ' ಸಂದರ್ಭದಲ್ಲೂ ಇದೇ ಆಗಿತ್ತು ಎಂಬುದನ್ನು ತಾವೆಲ್ಲರೂ ಗಮನಿಸಿರಬಹುದು.

ಯಾವುದೇ ಸಾಂಸ್ಕೃತಿಕ ಪತ್ರಿಕೆಯೊಂದು, ಕೃತಿಯೊಂದು ಹೊರಬರುವ, ಬಂದ ಸಂದರ್ಭದಲ್ಲಿ ಅದರ ಕುರಿತು ವಿಚಾರ-ವಿಮರ್ಶೆ, ಪ್ರಶಂಸೆ-ಟೀಕೆಗಳು ನಡೆಯುವುದು ಸಹಜ ವಿದ್ಯಮಾನ. ಆದರೆ 'ದೇಶಕಾಲ ವಿಶೇಷ' ಸಂದರ್ಭದಲ್ಲಿ ಆಗಿದ್ದೇ ಬೇರೆ. ನಮ್ಮೆಲ್ಲ ಸಾಂಸ್ಕೃತಿಕ ವ್ಯಕ್ತಿಗಳು, ಪತ್ರಿಕೆಗಳು 'ದೇಶಕಾಲ ವಿಶೇಷ'ವನ್ನು ಏಕಮುಖವಾಗಿ, ಮುಂಖಾನುಮುಂಖವಾಗಿ ಹೊಗಳಿದ್ದು ಬಿಟ್ಟರೆ ಬೇರೇನನ್ನೂ ಮಾಡಲಿಲ್ಲ. ಅದು ಪ್ರತಿಪಾದಿಸಹೊರಟಿರುವ 'ಏಕಮೌಲ್ಯ'ವನ್ನು ಪ್ರಶ್ನಿಸುವ, ಅದು ಪ್ರತಿಷ್ಠಾಪಿಸಲು ಹೊರಟ 'ಸಾಹಿತ್ಯಕ ಪ್ರತಿಷ್ಠೆ'ಯ ಕುರಿತು ಆಕ್ಷೇಪಿಸಲಿಲ್ಲ. ಸಾಹಿತ್ಯ-ಸಂಸ್ಕೃತಿಯ ಕುರಿತು ಗಂಭೀರ ಕಾಳಜಿ ಪ್ರಕಟಿಸುವ 'ಪ್ರಜಾವಾಣಿ' ಕೂಡ ಹಿರಿಯ ಸಮಾಜವಾದಿ ಚಿಂತಕರೊಬ್ಬರು 'ದೇಶಕಾಲ'ಕ್ಕೆ ಅಗತ್ಯಕ್ಕಿಂತ ಹೆಚ್ಚು ಪ್ರಚಾರ ನೀಡುತ್ತಿರುವ ಕುರಿತು ಆತಂಕ ವ್ಯಕ್ತಪಡಿಸಿ ಬರೆದ ಎರಡು ಸಾಲಿನ ಅಭಿಪ್ರಾಯವನ್ನೂ ಪ್ರಕಟಿಸಲಿಲ್ಲ. ಇದುವರೆಗೆ ಕನ್ನಡ ಸಾಹಿತ್ಯ-ಸಂಸ್ಕೃತಿಯ ಸಂದರ್ಭದಲ್ಲಿ 45 ವರ್ಷಗಳನ್ನು ಪೂರೈಸಿರುವ 'ಸಂಕ್ರಮಣ', 35 ವರ್ಷಗಳ 'ಶೂದ್ರ', 25 ವರ್ಷಗಳ 'ಅನ್ವೇಷಣೆ', 15 ವರ್ಷಗಳ 'ಶೋಷಿತ/ಪಂಚಮ', 8 ವರ್ಷಗಳ 'ಸಂವಾದ', ಲಂಕೇಶರು ನಿರಂತರವಾಗಿ ರೂಪಿಸಿದ ದೀಪಾವಳಿ ವಿಶೇಷಾಂಕಗಳು- ಇವು ಕನ್ನಡ ನೆಲದಲ್ಲಿ ಹುಟ್ಟು ಹಾಕಿದ ಪ್ರಮುಖ ಚರ್ಚೆಗಳಾಗಲೀ, ವಿಸ್ತರಿಸಿದ ವೈಚಾರಿಕತೆಯಾಗಲೀ ನೆನಪಿಗೆ ಬರಲಿಲ್ಲ. ಅಂತಹ ಪತ್ರಿಕೆಗಳ ಚಾರಿತ್ರಿಕ, ಸಾಂಸ್ಕೃತಿಕ ಮಹತ್ವ ಮುಖ್ಯವೆನಿಸಲೇ ಇಲ್ಲ. ಅವುಗಳಿಗೂ 'ದೇಶಕಾಲ'ಕ್ಕೂ ಏನು ವ್ಯತ್ಯಾಸವಿದೆ ಎನ್ನುವುದನ್ನು ಚರ್ಚಿಸಬೇಕೆಂಬ ದರ್ದು ಕೂಡ ಉಂಟಾಗಲಿಲ್ಲ.

ಅಂತಹ ತುರ್ತು ಇದ್ದ ಮಂಜುನಾಥ್ ಎಂಬುವವರು ಒಂದು ವಾರಪತ್ರಿಕೆಯಲ್ಲಿ ಈ ಕುರಿತು ಚರ್ಚೆ ಹುಟ್ಟು ಹಾಕಿದರು. 'ಮನೆಯಂಗಳದಲ್ಲಿ ಮಾತುಕತೆ'ಯಾಡಿದ ಕವಿ ಎಸ್.ಜಿ. ಸಿದ್ದರಾಮಯ್ಯ ಅವರು 'ದೇಶಕಾಲ'ಕ್ಕೆ ಧಿಕ್ಕಾರವನ್ನೇ ಸಾರಿದರು! ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಚಿಂತಕರಾದ ಶ್ರೀ ಬರಗೂರು ರಾಮಚಂದ್ರಪ್ಪ ಅವರು ಅದರ 'ಸಾಹಿತ್ಯಶ್ರೇಷ್ಠತೆಯ ಪಾಳೇಗಾರಿಕೆ'ಯನ್ನು ಜರಿದರು. ಇಂತಹ ಗಂಭೀರ ವಿಮರ್ಶಾ ಪ್ರಕ್ರಿಯೆಗಳು ನಡೆದಾಗಲೆಲ್ಲ ಅವನ್ನು ನಗಣ್ಯವಾಗಿ ಕಂಡ ನಮ್ಮ ಸಾಂಸ್ಕೃತಿಕ ಜೀವಿಗಳು, ನಾವು 'ಇದೇನಹಾ!' ಎಂಬ ಪರಿಭಾಷೆಯಲ್ಲಿ ಬರೆದೊಡನೆ ಎಚ್ಚೆತ್ತು ಚರ್ಚೆಗೆ ಮುಂದಾಗಿದ್ದಾರೆ. ಇವರೆಲ್ಲ ಹೇಳುತ್ತಿರುವ 'ಗಂಭೀರ ವಿಮರ್ಶೆ', 'ಸಾಂಸ್ಕೃತಿಕ ಅನುಸಂಧಾನ' ಎಂಬುದೆಲ್ಲ ನಡೆದ ವೇಳೆ ಯಾವ ಚರ್ಚೆಯನ್ನೂ ಕೇಳಿಸಿಕೊಳ್ಳದೆ ಅಲಕ್ಷಿಸಿದ್ದ ಇವರು ನಾವು 'ಚುಚ್ಚು ಧಾಟಿ'ಯಲ್ಲಿ ಬರೆದಾಕ್ಷಣ ಗಂಭೀರವಾಗಿ ಪ್ರತಿಕ್ರಿಯಿಸುತ್ತಾರೆಂದರೆ ನಮ್ಮ ಭಾಷೆ ಸರಿಯಾಗಿದೆ!


'ದೇಶಕಾಲ ವಿಶೇಷ'ವನ್ನು ಯಾವ ವಿಮರ್ಶೆಗೂ ಒಳಪಡಿಸುವ ಅಗತ್ಯ ಕಾಣದೆ ಕೇವಲ ಅದರ ಭಜನೆಗೆ, ಕೀರ್ತನೆಗೆ ನಿಂತ ಜಡ್ಡುಗಟ್ಟಿದ ನಮ್ಮ ನಡುವಿನ ಸಾಂಸ್ಕೃತಿಕ ಮನಸ್ಸುಗಳನ್ನು ಎಚ್ಚರಿಸಲು ನಾವು ಈ 'ಶಾಕ್ ಟ್ರೀಟ್‌ಮೆಂಟ್'ಗೆ ಮುಂದಾಗದೆ ಎಂದಿನಂತೆ 'ಅಕಾಡೆಮಿಕ್ ಶೈಲಿ'ಯಲ್ಲಿ ಬಿನ್ನವಿಸಿಕೊಂಡಿದ್ದರೆ ಇಂತಹುದೊಂದು ಚರ್ಚೆ ಸಾಧ್ಯವಾಗುತ್ತಿತ್ತೆ? ನಾವು ಹೀಗೆ ಬರೆದದ್ದೇ ವಾಗ್ವಾದ ಹುಟ್ಟುವುದಕ್ಕೆ ಕಾರಣವಾಗಿರುವುದೇ ನಿಜವಾದರೆ ಶ್ರೀ ಕೆ.ಫಣಿರಾಜ್ ಅವರು ಕರೆದಂತೆ ನಾವು 'ವಾಗ್ವಾದ ಭಂಜಕರು' ಹೇಗಾಗುತ್ತೇವೆ? ಹೀಗೆ ನಾವು 'ಸಾಂಸ್ಕೃತಿಕ ಜಡತೆ'ಯನ್ನು ನಮ್ಮದೇ ಶೈಲಿಯಲ್ಲಿ ಎಚ್ಚರಿಸಲು ಯತ್ನಿಸಿದ್ದೇ ಇವರಿಗೆ ಮಹಾಪರಾಧವಾಗಿ ಕಂಡು ತಮ್ಮ ಬರಹದಲ್ಲಿ ಅವರು ನಮ್ಮನ್ನು ಕಟಕಟೆಯಲ್ಲಿ ನಿಲ್ಲಿಸಿ ನಾವು 'ವಾಗ್ವಾದ ಭಂಜಕರು', 'ವಿಕೃತರು' ಎಂದು ತೀರ್ಪು ನೀಡಿದ್ದಾರೆ!

ಹಾಗಾದರೆ ವಿಮರ್ಶೆ, ವೈಚಾರಿಕತೆ, ಚಲನಶೀಲತೆಗಳೆಲ್ಲ ಜಡ್ಡುಗಟ್ಟಿದ್ದ ಸಂದರ್ಭಗಳಲ್ಲಿ ತೆಲುಗಿನ 'ವಿಪ್ಲವ' ಕವಿಗಳು, ಮರಾಠಿಯ ದಲಿತ ಕವಿಗಳು ಆಯ್ದುಕೊಂಡ ಕಾವ್ಯಭಾಷೆಯನ್ನು, ಪೆರಿಯಾರ್ ರೂಪಿಸಿದ ಚಳವಳಿಯ ಮಾರ್ಗವನ್ನು, ತೆಲುಗಿನ ಚಿಂತಕ ವಿ.ಆರ್. ನಾರ್ಲಾ ಅವರ ವೈಚಾರಿಕತೆಯನ್ನು ನಮ್ಮ ಸಂಸ್ಕೃತಿ ಚಿಂತಕರು ಹೇಗೆ ಪರಿಭಾವಿಸುತ್ತಾರೆ? 'ಕನ್ನಡ ಸಾಹಿತ್ಯದಲ್ಲಿರುವುದೆಲ್ಲ ಬೂಸಾ' ಎಂದ ಬಸವಲಿಂಗಪ್ಪನವರ ಪ್ರತಿಕ್ರಿಯೆ, 'ಕುವೆಂಪು ಕಾದಂಬರಿಗಳ ದಲಿತಪಾತ್ರ ಚಿತ್ರಣ'ವನ್ನು ಪ್ರಶ್ನಿಸಿದ ಬಿ. ಕೃಷ್ಣಪ್ಪನವರ ವೈಚಾರಿಕತೆ ಕೇವಲ ಮೇಲ್ವರ್ಗದವರ ಮೇಲಿನ ಅಸಹನೆ ಮಾತ್ರವೆ? ಅವುಗಳಿಗೆ ಯಾವ ಸಾಂಸ್ಕೃತಿಕ, ಚಾರಿತ್ರಿಕ ಹುರುಳು-ಹಿನ್ನೆಲೆಗಳು ಇಲ್ಲವೆ? ಲಂಕೇಶ್, ಚಂಪಾ ಬಳಸಿದ 'ಅತಿ ಉತ್ಪ್ರೇಕ್ಷಿತ ವಿಡಂಬನಾ ಶೈಲಿ', ಕೊಂಕುನುಡಿಗಳು ಕೇವಲ ಉಡಾಫೆಯ ಮನೋಭಾವದಿಂದ ಹುಟ್ಟಿದವುಗಳೆ? ಅವೆಲ್ಲ ನಮ್ಮ ಸಮಾಜ-ಸಂಸ್ಕೃತಿಯ ಮೇಲಿನ 'ಅನನ್ಯ ವಿಮರ್ಶಾ ಕ್ರಮಗಳು' ಎನ್ನುವುದಾದರೆ ನಮ್ಮದು ಏಕಲ್ಲ?

ಶ್ರೀ ರಹಮತ್ ತರೀಕೆರೆಯವರು ತಾವು ಸಂಪಾದಿಸಿರುವ 'ಹೊಸ ತಲೆಮಾರಿನ ತಲ್ಲಣ' ಕೃತಿಯಲ್ಲಿ 'ಕನ್ನಡದ ವಿಮರ್ಶೆಗೆ ಆವರಿಸಿರುವ ಅನೇಕ ಜಡತೆ ಮತ್ತು ಇಕ್ಕಟ್ಟುಗಳಿಗೆ ಬಹುಶಃ ಮದ್ದೆಂದರೆ, ಬರೆಹ ಮಾಡುವ ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ವಿಮರ್ಶೆ ಬರೆಯುವುದು. ವಿಮರ್ಶೆ


ರಹಮತ್ ತರೀಕೆರೆ


ಕೆ.ಫಣಿರಾಜ್


ಜಿ.ರಾಜಶೇಖರ

ಮಾಡಲೆಂದೇ ಇರುವ ಒಂದು ತಜ್ಞವೈದ್ಯರ ಮೀಸಲುಪಡೆಯ ಕಲ್ಪನೆಯನ್ನು ನಾಶಮಾಡುವುದು. ಆಗ ವಿಮರ್ಶೆ ಹೊಸಹೊಸ ಭಾಷೆ ಮತ್ತು ಚಿಂತನೆಯಿಂದ ಬಹುತ್ವವನ್ನು ಪಡೆಯುತ್ತದೆ' ಎಂದು ವಿವೇಚಿಸುತ್ತಾರೆ. 'ದೇಶಕಾಲ ವಿಶೇಷ'ದ ಸಂದರ್ಭದಲ್ಲೂ ಹೀಗೆ ಆವರಿಸಿದ ಜಡತೆಯನ್ನು ಕಳೆಯಲು ನಾವು ಅನುಸರಿಸಿದ ಈ ಧಾಟಿಯನ್ನೂ ಅವರು ಹೊಸ ವಿಮರ್ಶಾ ಮಾರ್ಗವೆಂದು ಏಕೆ ಗುರುತಿಸಲಾರರು?

ನಮ್ಮ ಬರೆಹದ ಶೈಲಿಯೇ ಚೂಪು ವ್ಯಂಗ್ಯದ್ದಾಗಿರುವುದು ಅಸೂಕ್ಷ್ಮತೆಯೆ? ಹೀಗೆ ವ್ಯಂಗ್ಯ ಮಾಡುತ್ತಿದ್ದೇವೆಂದರೆ ನಾವು ಸೇಡಿಯಾಪು ಕೃಷ್ಣಭಟ್ಟರನ್ನು, ಅಥವಾ ಇನ್ನಾರೋ ಬ್ರಾಹ್ಮಣ ಲೇಖಕರನ್ನು ಕೇವಲ ಜಾತಿಯ ಕನ್ನಡಕದಿಂದ ಮಾತ್ರ ನೋಡುತ್ತಿದ್ದೇವೆಂದು ಅರ್ಥವೆ? 'ಮೋಚಿ' ಕಥೆ ಬರೆದ ಭಾರತೀಪ್ರಿಯ, 'ಧನಿಯರ ಸತ್ಯನಾರಾಯಣ' ಬರೆದ ಕೊರಡ್ಕಲ್ ಶ್ರೀನಿವಾಸರಾಯರು, 'ಮೊಸರಿನ ಮಂಗಮ್ಮ' ಬರೆದ ಮಾಸ್ತಿಯವರ ಬಗ್ಗೆ ನಮಗೆ ಎಲ್ಲಾ ಮಾನವೀಯ ಬರಹಗಾರರ ಮೇಲಿರುವಷ್ಟೇ ಗೌರವವಿದೆ. ದಲಿತ ಚಳವಳಿಗೆ ತಮ್ಮನ್ನು ತೆತ್ತುಕೊಂಡ ಮಂಗ್ಳೂರ ವಿಜಯ, ಜನಪರ ಹೋರಾಟಗಳಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡಿರುವ ವಾಸು, 'ಗೌರಿ ಲಂಕೇಶ್' ಬಳಗದ ಶ್ರೀ ಶಿವಸುಂದರ್, ಕೋಮುವಿರೋಧಿ ಚಳವಳಿಯ ಹೋರಾಟಗಾರರಾದ ಶ್ರೀ ಜಿ.ರಾಜಶೇಖರ್, ಶ್ರೀ ಪಟ್ಟಾಭಿರಾಮ ಸೋಮಯಾಜಿ, ಶ್ರೀ ಕೆ.ಫಣಿರಾಜ್ (ಇವರ ಜಾತಿ ನಿಜವಾಗಿಯೂ ನಮಗೆ ಗೊತ್ತಿಲ್ಲ)-ಇಂತಹ ಇನ್ನೂ ನೂರಾರು ಬ್ರಾಹ್ಮಣರನ್ನು ಕೇವಲ ಬ್ರಾಹ್ಮಣರೆಂಬ ಕಾರಣಕ್ಕೆ ಟೀಕಿಸುವ 'ಕುರುಡು ವೈಚಾರಿಕತೆ' ನಮ್ಮದಲ್ಲ. ಹಾಗೆಯೇ 'ಬ್ರಾಹ್ಮಣ್ಯ' ಎನ್ನುವುದನ್ನು ನಾವು ಜಾತಿ ಎಂಬರ್ಥದಲ್ಲಿ ನೋಡುವುದೂ ಇಲ್ಲ. 'ಬ್ರಾಹ್ಮಣ್ಯ' ಎನ್ನುವುದು ಶ್ರೇಷ್ಠತೆಯನ್ನು, ಅಸಮಾನತೆಯನ್ನು, ಮೇಲು-ಕೀಳನ್ನು ಪ್ರತಿಪಾದಿಸುವ ಬದುಕಿನ ಒಂದು ಕ್ರಮ ಮತ್ತು ವ್ಯಕ್ತಿಗತ ನಡವಳಿಕೆ; ಅದು ಶೂದ್ರನಲ್ಲಿದ್ದರೂ, ದಲಿತನಲ್ಲಿದ್ದರೂ 'ಬ್ರಾಹ್ಮಣ್ಯ'ವೇ. ಯಾವುದೇ ಜಾತಿಯ ನೀಚನನ್ನು ನೀಚ ಎಂದು ಕರೆಯಲು ನಮಗೇಕೆ ಸಂಕೋಚ? ಅಂತಹ 'ಬ್ರಾಹ್ಮಣ್ಯ'ದ ಮನಸ್ಸುಗಳ ವಿರುದ್ಧ ಇರುವ ನಮ್ಮ ಟೀಕೆ 'ಸಾರಾಸಗಟು ಬ್ರಾಹ್ಮಣ ವಿರೋಧ' ಎನಿಸಿಕೊಳ್ಳುತ್ತದೆಯೆ?

****

ಶ್ರೀ ಕೆ.ಫಣಿರಾಜ್ ತಾವು ಕೊಡುವ ತಮ್ಮ ಹಿಂದಿ
'ವಾಗ್ವಾದ'ಗಳಂತಹ ಸರ್ಟಿಫಿಕೇಟುಗಳನ್ನಿಟ್ಟುಕೊಂಡೇ ಎಲ್ಲರ
ವಿಮರ್ಶೆಗೆ, ಚರ್ಚೆಗೆ ಹೊರಡಬೇಕೆಂದು ಹೇಳುತ್ತಿದ್ದಾರೆಯೆ
ಹಾಗಿದ್ದರೆ ಯಾವ 'ವಾದ ಸರಣಿ'ಯ ಹಿನ್ನೆಲೆಯೂ ಇಲ್ಲ
ಅಕಾಡೆಮಿಕ್ ಅಲ್ಲದ ಒಬ್ಬ ರೈತ, ಗಾರೆ ಕೆಲಸದವ, ಆಟೋ
ಚಾಲಕ, ವಿದ್ಯಾರ್ಥಿ ಯಾವೊಂದು ಚರ್ಚೆಗೂ, ಪ್ರಶ್ನೆಗ
ಮುಂದಾಗಬಾರದು ಎಂತಲೆ? ಹಾಗಿದ್ದರೆ ಸಾರ್ವಜನಿಕ ಸಭ
ಸಮಾರಂಭಗಳಲ್ಲಿ, ಸೆಮಿನಾರುಗಳಲ್ಲಿ ಇಂತ
'ನಾನ್-ಅಕಾಡೆಮಿಕ್' ಜನ ತಮ್ಮದೇ ಭಾಷೆಯಲ್ಲಿ ಎತ್ತು
ನಿಜವಾದ ಪ್ರಶ್ನೆಗಳನ್ನು ಅವುಗಳು 'ಶುದ್ಧಭಾಷೆಯಲ್ಲಿಲ್ಲ'ವೆಂ
ಕಾರಣಕ್ಕೆ ತಿರಸ್ಕರಿಸಲು ಬರುವುದೆ?

ಶ್ರೀ ಫಣಿರಾಜ್ ಅವರು ತಮ್ಮ ವಾದಕ್ಕೆ ಜೋಡಿ
ಕೊಂಡಿರುವ 'ಪ್ರತಾಪ ಸಿಂಹನ ಪ್ರಕರಣ'ಕ್ಕೂ ನಮ್ಮ ಚರ್ಚೆಗ
ಸಂಬಂಧವಿಲ್ಲ, ಅದಕ್ಕೆ ಉತ್ತರವೀಯಬೇಕಾದ ಜರೂ
ಇಲ್ಲವಾದರೂ ಒಂದು ಪ್ರಶ್ನೆ ಕೇಳಬಹುದು: ಪ್ರತಾಪ ಸಿಂ
ಇಂದಲ್ಲ; ತನ್ನ ಅಂಕಣದ ಆರಂಭದ ದಿನಗಳಿಂದಲೂ ಮನುಷ
ಪರವಾಗಿರುವ ಎಲ್ಲಾ ಚಿಂತಕರನ್ನೂ ಲೇಖಕರನ
ಹೋರಾಟಗಾರರನ್ನೂ ತನ್ನ ವಿಕೃತಿಗೆ ತಕ್ಕಂತೆ ಹೀಗಳೆದಿದ್ದಾ
ಅಂಬೇಡ್ಕರ್-ಗಾಂಧಿಯಿಂದ ಮೊದಲ್ಗೊಂಡು ಅರುಂಧ
ರಾಯ್, ಜಿ.ಕೆ. ಗೋವಿಂದರಾವ್, ಚಂಪಾರ ತನಕ, ದಲಿ
ಹೋರಾಟಗಾರರವರೆಗೆ ಆತನ 'ನೀಚಬುದ್ಧಿಯ ನಾಲಿ
ಹರಿದಾಡಿದೆ. ಆಗೆಲ್ಲ ಎಚ್ಚರಗೊಳ್ಳದ ನಮ್ಮ 'ಪ್ರಗತಿಪರ ಪ್ರ
ಆತ ಈಗ ಅನಂತಮೂರ್ತಿಯವರನ್ನು ಅವಮಾನಿಸಿದಾ
ಮಾತ್ರ ಜಾಗೃತವಾಗುವುದರ ಮರ್ಮವೇನು? -ಹೀಗೆ ಪ್ರಶ್ನೆ ಕೇಳಿದಾ
ನಾವು ಪ್ರತಾಪ ಸಿಂಹನಂತೆಯೇ ವಿಕೃತರಾಗಿ ಕಾಣುತ್ತೇವೆಯೆ? 'ವಿಜಯ
ಕರ್ನಾಟಕ'ದ ಕುರಿತು ನಾವು ಮೌನಿಷ್ಠರಾಗಿರುವಾಗ ಅನಂತಮೂರ್ತಿ-'ದೇಶಕಾಲ
ಸಂದರ್ಭದಲ್ಲಿ ಮೌನಿಷ್ಠವಾಗಿ ಇರಲು ಏಕೆ ಸಾಧ್ಯವಾಗುವುದಿಲ್ಲ?

****

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಡಾ.ಸಿ.ಎಸ್.ದ್ವಾರಕಾನಾ
ರಿಗೆ ಕೆಲವು ಬಜರಂಗದಳದವರು ಬಲವಂತವಾಗಿ ತೀರ್ಥ ಕುಡಿಸಿದಾ
ಪ್ರಗತಿಪರ ಪತ್ರಿಕೆಯೊಂದರಲ್ಲಿ 'ತೀರ್ಥ ನಿರಾಕರಿಸುವ ಹಕ್ಕು ನಮಗೆಲ್ಲ ಇ
ಎಂದು ಬರೆದ ಎಸ್.ಆರ್. ವಿಜಯಶಂಕರ ಅವರು, ಕೆಲದಿನಗಳ ನಂ
'ವಿಜಯ ಕರ್ನಾಟಕ'ದಲ್ಲಿ 'ತೀರ್ಥ ಪವಿತ್ರ ಅನ್ನುವುದು ಎಲ್ಲರಿಗೂ ಗೊತ್ತಾಗು
ದಿನಗಳು ಬರಲಿ' ಎಂದು ಬರೆಯುತ್ತಾರೆ. ಎಚ್.ಎಸ್.ವೆಂಕಟೇಶಮೂರ್ತಿಯ
'ಶ್ರೀಸಂಸಾರಿ'ಯಂತಹ ಪ್ರತಿಗಾಮಿ ಕವಿತೆಯನ್ನು 'ವಿಶ್ವಾತ್ಮಕ ನೆಲೆಯ ಕವಿ
ಎಂದು ಕರೆಯುವ ಇಂತಹ ಸೋಗಲಾಡಿ, ಬಲಪಂಥೀಯ ವಿಮರ್ಶ
'ದೇಶಕಾಲ ವಿಶೇಷ'ದಲ್ಲಿ ವಿಶೇಷ ಲೇಖನ ಬರೆಯುತ್ತಾರೆ. 'ದೇಶಕಾ
ಇನ್ನೊಬ್ಬ ವಿಮರ್ಶಕ ಜಿ.ಬಿ. ಹರೀಶ ಪ್ರತಾಪ ಸಿಂಹನೊಂದಿಗೆ ಸೇ
'ಮಹಮದ್ ಆಲಿ ಜಿನ್ನಾ: ಮೊದಲು ನಾನು ಭಾರತೀಯ ಎಂದವ
ಭಾರತವನ್ನು ಒಡೆದನೆ?' ಎಂಬ ಆರ್‌ಎಸ್‌ಎಸ್ ತತ್ವಪ್ರಣೀತ ಪುಸ್ತಕವ
ಸಂಪಾದಿಸುತ್ತಾರೆ. 'ದೇಶಕಾಲ' ವಿಶೇಷಾಂಕಕ್ಕೆ ಕಥೆ ಬರೆದಿರುವ ಎ
ಸುರೇಂದ್ರನಾಥ್ 'ಈಟಿವಿ' ಮುಖ್ಯಸ್ಥರಾಗಿ ಭಾರತೀಯ ಸಂಸ್ಕೃತಿಯ ಹೆಸರಿ
ನಾಡಿಗೆಲ್ಲ ಸನಾತನ ಧರ್ಮವನ್ನು ಬಿಡಿಬಿಡಿಯಾಗಿ ಹಂಚುವ ಕೆ
ಮಾಡುತ್ತಾರೆ. ಇನ್ನು ಕೇವಲ ಶೇ. 1.5ರಷ್ಟು ಜನರ ಮಾಧ್ಯಮವಾಗಿರು
ಯಾವ ಸಾಮಾಜಿಕ ಸ್ಪಂದನವೂ ಇಲ್ಲದ ಬ್ಲಾಗ್ ಜಗತ್ತಿನ ಕುರಿತು ಎಂ.ಎ
ಶ್ರೀರಾಮ್ ಬರೆಯುತ್ತಾರೆ. ಇಂತಹ ಲೇಖಕರನ್ನೆಲ್ಲ ಏನೆಂದು ಕರೆಯಬೇ
ಇವರೆಲ್ಲ 'ದೇಶಕಾಲ'ದೊಳಗೆ ಮೊದಲಿನಿಂದಲೂ ಬರೆಯುತ್ತಿರುವುದು ಕೇ
ಆಕಸ್ಮಿಕವೆ?

'ದೇಶಕಾಲ'ದ ಸಂಪಾದಕರು ಹೊಸ ತಲೆಮಾರಿನ ಲೇಖಕರಲ್ಲೊಬ್ಬರ
ವಿಕ್ರಮ ವಿಸಾಜಿಯವರನ್ನು ತಮ್ಮ 21ನೇ ಶತಮಾನದ ಲೇಖಕರ ಪ
ಸೇರಿಸಿಕೊಳ್ಳಲು ಅವರ ಪುಸ್ತಕಗಳನ್ನೆಲ್ಲ ತರಿಸಿಕೊಳ್ಳುತ್ತಾರೆ. ಕೆಲವೇ ದಿನಗ
'ನಮ್ಮ ಪತ್ರಿಕೆಯ ಧೋರಣೆ ಮತ್ತಿತರ ಕಾರಣಗಳಿಂದಾಗಿ ನಿಮ್ಮನ್ನು ನ
ಲಿಸ್ಟಿಗೆ ಸೇರಿಸಿಕೊಳ್ಳಲಾಗುವುದಿಲ್ಲ ಕ್ಷಮಿಸಿ' ಎಂದು ವಿಷಾದ ಪತ್ರ ಬರೆಯುತ
ಅಮರೇಶ ನುಗಡೋಣಿಯಂಥ ಹಿರಿಯ ಕಥೆಗಾರರು ಪೂರ್ಣ ಕಥೆ ಕಳುಹಿಸಿ
ಅದನ್ನು ಅರ್ಧ ಪ್ರಕಟಿಸಿ ಓದುಗರು ಕಕ್ಕಾಬಿಕ್ಕಿಯಾಗುವಂತೆ ಮಾಡುತ
ವಿಶೇಷಾಂಕದ ತೆರೆಮರೆಯಲ್ಲಿ ನಡೆದ ಇಂತಹ ಅನೇಕ ಘಟನೆಗಳು ಬಹುದೊ
ತಪ್ಪುಗಳಿಲ್ಲದಿರಬಹುದು. ಆದರೆ ಇವೆಲ್ಲ ಗಂಭೀರ ಪತ್ರಿಕೆಯೊಂದರ ನಡಾವಳಿಗ

ಈ ನೆಲವನ್ನು ನಿರಂತರವಾಗಿ ಪೀಡಿಸಿದ, ಪೀಡಿಸುತ್ತಿರುವ ರೈತರ ಆತ್ಮಹ
ಗಣಿ ಲೂಟಿ, ನಾಶದ ಹಾದಿ ಹಿಡಿದಿರುವ ಚುನಾವಣೆಗಳು, ಉತ್ತರ ಕರ್ನಾಟ
ನೆರೆಹಾವಳಿ, ಜನಸಾಮಾನ್ಯರ ಬದುಕನ್ನು ನುಂಗಿನೊಣೆಯುತ್ತಿರುವ ಭ್ರಷ್ಟಾಚ
ನಿತ್ಯ ನಡೆಯುತ್ತಿರುವ ದಲಿತರ ಮಾರಣಹೋಮ, ಜನರ ಹಣವನ್ನು ಮಠಗ
ಸುರಿಯುವ ಸರ್ಕಾರದ ಪಕ್ಷಪಾತ, ಜನ ವಿರೋಧಿ ಸಂಸ್ಕೃತ ವಿ.ವಿ
ಅನುಷ್ಠಾನ, ಚರ್ಚ್- ಮಸೀದಿಗಳ ಮೇಲಿನ ದಾಳಿ, ಕಾಮುಕ ಸ್ವಾಮೀಜಿಗಳ
ಸಮರ್ಥಿಸಿಕೊಳ್ಳುವ ಮುತಾಲಿಕ್, ರೈತರ ಮೇಲಿನ ಗೋಲಿಬಾರ್, ಗೋ
ನಿಷೇಧ, ಮತಾಂತರ ನಿಷೇಧದ ಚರ್ಚೆ... ಇಂತಹ ಯಾವೊಂದು ನಿಜಸಮಸ
ಕುರಿತೂ ಕನಿಷ್ಠ ಮಾತಾಡದ 'ದೇಶಕಾಲ'ದ ಸಂಚಿಕೆಗಳನ್ನು 'ಸಾಂಸ್ಕ
ವಾರಸುದಾರಿಕೆ'ಯ ಪತ್ರಿಕೆಗಳು ಎಂದು ಇವರೆಲ್ಲ ಕರೆಯುತ್ತಿರುವ
ಸರಿಯಾಗಿದೆಯೆ?

****

ಇನ್ನು ಶ್ರೀ ಜಿ.ರಾಜಶೇಖರ್ ಅವರು 'ದೇಶಕಾಲ ವಿಶೇಷ'
ಆರೋಪಿಸಬಹುದಾದ ವಿಶೇಷ ಆರೋಪಗಳೇನೂ ಇಲ್ಲವೆಂದು 'ದೇಶಕಾ
ಪರ ಪೂರ್ಣ ವಕಾಲತ್ತು ವಹಿಸಿ 'ಕ್ಲೀನ್ ಚಿಟ್' ನೀಡಿದ್ದಾರೆ. ಇದರ ಅ

ಯಾವುದು ವಾಗ್ವಾದ? ಯಾವುದು ಭಾವಾವೇಶ?

'ದೇಶಕಾಲ' ವಿಶೇಷ ಸಂಚಿಕೆಯ ಬಗ್ಗೆ ...ಜುನಾಥ್ ಲತಾ ಹಾಗೂ ಚಂದ್ರಶೇಖರ ...ಜುರು ಅವರು ಬರೆದಿರುವ ಲೇಖನದಿಂದಾಗಿ ...ಗೆ ಆಘಾತವಾಗಿರುವುದಾಗಿ ಗೆಳೆಯರಾದ ...ರಾಜಶೇಖರ ಹಾಗೂ ಕೆ. ಫಣಿರಾಜ್ ...ದ್ದಾರೆ. ಹಾಗೆ ನೋಡಿದರೆ ಇದೂ ಒಂದು ...ನಾತ್ಮಕ ಪ್ರತಿಕ್ರಿಯೆಯೇ. ಸದ್ಯ ಯಾವ ...ದಗಳಿಗೂ ತೆರೆದುಕೊಳ್ಳದ ಬರಡುತನ ಕನ್ನಡ ...ತಿಕ ವಲಯವನ್ನು ಆವರಿಸಿಕೊಂಡಿದೆಯೋ ...ೇ ಎಂಬ ಅನುಮಾನ ಬರುತ್ತಿದೆ. ಏಕೆಂದರೆ, ...ವಾರಗಳ ಹಿಂದೆ ಪ್ರಜಾವಾಣಿಯಲ್ಲಿ ಡಾ. ...ಚ್ಚಿ ಬಾಲಸುಬ್ರಹ್ಮಣ್ಯ ಅವರು 'ದೇಶಕಾಲ' ...ಷಾಂಕದ ಬಗ್ಗೆ ಕೆಲವು ಗಂಭೀರ ಪ್ರಶ್ನೆಗಳನ್ನು ...ದ್ದರು. ಆದರೆ ಇದರ ಕುರಿತು ಯಾರೂ ಈವರೆಗೂ ಪ್ರತಿಕ್ರಿಯಿಸಿದ ...ಲ್ಲ. 'ಸಾಂಸ್ಕೃತಿಕ ಅಧಿಕಾರ ಕೇಂದ್ರಗಳು ರೂಪುಗೊಳ್ಳುವ ಕ್ರಮ'ದ ಕುರಿತು ...ನ ಮಾತುಗಳ ಹಿನ್ನೆಲೆಯಲ್ಲಿ 'ದೇಶಕಾಲ' ಎದುರಿಸುತ್ತಿರುವ ಅಪಾಯದ ... ಅಲ್ಲಿ ಡಾ. ನರಹಳ್ಳಿ ಬೊಟ್ಟು ಮಾಡಿ ತೋರಿದ್ದರು. 'ದೇಶಕಾಲ' ...ಯ ಯೋಜನೆ, ವಿನ್ಯಾಸ, ಆಯ್ಕೆಗಳನ್ನು ಗಮನಿಸಿದಾಗ ಕೆ.ವಿ.ಸುಬ್ಬಣ್ಣ ...'ಶ್ರೇಷ್ಠತೆಯ ವ್ಯಸನ' ಲೇಖನ ನೆನಪಾದುದನ್ನೂ, ಎಪ್ಪತ್ತರ ದಶಕದಲ್ಲಿ ... ಲಂಕೇಶ್ ಪ್ರತಿಪಾದಿಸಿದ ಸಾಂಸ್ಕೃತಿಕ ಕಾಳಜಿಗಳು ಕಾಡಿದ್ದನ್ನೂ, ನವ್ಯ ...ಳಿಯ ಭೂತಗಳು ಧುತ್ತೆಂದು ಎದುರಾಗಿದ್ದನ್ನೂ ಮತ್ತು ಇದರಿಂದ ...ಎದುರಾದ ಗೊಂದಲ ಹಾಗೂ ಆತಂಕದ ಸ್ಥಿತಿಯನ್ನೂ ಕುರಿತು ಅವರು ...ದ್ದರು.

... ಮೇಲಿನ ವಾಗ್ವಾದಗಳ ಪರಿಚಯ ಗೆಳೆಯ ಫಣಿರಾಜ್ ಅವರಿಗೆ ... ಇರಲು ಸಾಧ್ಯವಿಲ್ಲ. ಆದರೂ ಅದನ್ನೆಲ್ಲ ಬಿಟ್ಟು ಕನ್ನಡದಲ್ಲಿನ ವಾಗ್ವಾದ ...ಪರೆಯ ಬಗ್ಗೆ ಅವರು ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ. ಅಲ್ಲಿಯೂ ...ಪು-ಮಾಸ್ತಿ, ತೇಜಸ್ವಿ-ಅನಂತಮೂರ್ತಿ ಮುಂತಾದವರ ನಡುವಿನ ...ದದಲ್ಲಿ ತಾವು ತಾತ್ವಿಕವಾಗಿ ಯಾರ ನಿಲುವಿಗೆ ಹತ್ತಿರ ಎಂಬುದರ ...ಪವನ್ನೇ ಮಾಡಿಲ್ಲ. ಲೇಖನದ ಕೊನೆಯಲ್ಲಿ ಅವರು ಮಂಡಿಸಿರುವುದು ... ಭಾವನಾತ್ಮಕ ನಿಲುವನ್ನೇ. 'ಅತಿ'ಗೆ ಹೋಗುವುದರಲ್ಲಿನ ಮಿತಿಗಳನ್ನು ...ಪಿಸುತ್ತಲೇ ತಾವೂ ಕೆಲವು ಸರಳ ತೀರ್ಮಾನಗಳಿಗೆ ತಲುಪಿದ್ದಾರೆ. ಆದರೆ ...ದ ಸಾಂಸ್ಕೃತಿಕ ಸಂದರ್ಭ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಯಾರ ಪರವೋ ವಿರುದ್ಧವೋ ನಿಲ್ಲುವಷ್ಟು ಸರಳವಾಗಿಲ್ಲ ಎಂಬುದು ಫಣಿರಾಜ್ ಅವರಿಗೆ ಗೊತ್ತಿಲ್ಲದ ವಿಷಯವೇನಲ್ಲ. ಕನ್ನಡದಲ್ಲಿ ತೇಜಸ್ವಿ 'ಅತಿ ಸಂಸ್ಕೃತಿಯ ಮೆಣಸಿನ ಹೊಗೆ' ಹಾಕಿರುವವರ ಬಗ್ಗೆ ಬರೆದಾಗ ತಮ್ಮ ಪರವಾದ ವಾದ ಸೃಷ್ಟಿಸುವ ಉದ್ದೇಶವನ್ನೇನೂ ಹೊಂದಿರಲಿಲ್ಲ. ಲಂಕೇಶರು 'ಯಾವ ಹಿಡಿತಕ್ಕೂ ಸಿಗದ ಅನಂತಮೂರ್ತಿಯವರ ಸಂಕೀರ್ಣ ಕೂಟ' ಎಂದಾಗಲೂ ತೀವ್ರವಾಗಿ ತಮ್ಮ ಅಭಿಪ್ರಾಯವನ್ನಷ್ಟೇ ಮಂಡಿಸಿದ್ದರು.

'ದೇಶಕಾಲ' ವಿಶೇಷಾಂಕದ ಬಗ್ಗೆ ಬಂದರೆ, ಮೇಲ್ನೋಟಕ್ಕೆ ಈ ಸಂಚಿಕೆಯ ಬಗ್ಗೆ ಯಾವ ತಕರಾರುಗಳೂ ಇರೋದಕ್ಕೆ ಸಾಧ್ಯವಿಲ್ಲ. ವಿವೇಕ ಶಾನಭಾಗ ಮತ್ತು ಅವರ ಗೆಳೆಯರು ಅತ್ಯಂತ ಪರಿಶ್ರಮದಿಂದ ಈ ಸಂಚಿಕೆಯನ್ನು ರೂಪಿಸಿದ್ದಾರೆ. ಆದಷ್ಟೂ ಬರಹಗಾರರನ್ನು ಒಂದೆಡೆ ತರಲು ಯತ್ನಿಸಿದ್ದಾರೆ. ಆದರೆ 'ಇಪ್ಪತ್ತೊಂದನೆ ಶತಮಾನದ ಪುಸ್ತಕಗಳು ಮತ್ತು ಬರಹಗಾರರು' ಎಂಬ ತಲೆಬರಹ ತೀರಾ ಅನಗತ್ಯವಾಗಿತ್ತು. ಇದು ಟಿಪ್ಪಣಿ ಬರೆದ ವಿಮರ್ಶಕರಿಗೂ ಹೊಸ ಬರಹಗಾರರಿಗೂ ಮುಜುಗರ ತರುವ ಸಂಗತಿಯೇ. ಈಚಿನ ಭರವಸೆ ಹುಟ್ಟಿಸುವ ಬರಹಗಾರರು ಎಂದಿದ್ದರೆ ಸಾಕಿತ್ತು. ಈ ವಿಷಯದಲ್ಲಿ ವಿವೇಕ ಶಾನಭಾಗರಿಗೆ ಗೊಂದಲವಿರುವ ಹಾಗಿದೆ. ಏಕೆಂದರೆ ಇಪ್ಪತ್ತೊಂದನೆಯ ಶತಮಾನದ ಬರಹಗಾರರು ಎಂದು ಅವರು ನೀಡಿರುವ ಪಟ್ಟಿಯಲ್ಲಿರುವ ನಾಲ್ಕಾರು ಮಂದಿಯನ್ನು ಬಿಟ್ಟರೆ, ಇನ್ನಾರ ಕತೆ ಕವಿತೆಗಳೂ 'ದೇಶಕಾಲ'ದ ಕಳೆದ ಐದು ವರ್ಷದ ಸಂಚಿಕೆಗಳಲ್ಲಿ ಕಾಣಿಸಿಕೊಂಡಿದ್ದೇ ಇಲ್ಲ. ಕವಿತೆಯ ವಿಷಯಕ್ಕೆ ಬಂದರೆ 'ದೇಶಕಾಲ' ಮತ್ತೆ ಮತ್ತೆ ಪ್ರಕಟಿಸಿರುವುದು ಎಸ್. ಮಂಜುನಾಥ್ ಅವರ ಕವನಗಳನ್ನು. ಇದೊಂದು ವಿಪರ್ಯಾಸ. ಇದು ಸಂಪಾದಕರ ವಿವೇಚನೆಗೆ ಸಂಬಂಧಿಸಿದ ವಿಷಯವಾದರೂ ಅಷ್ಟು ಸರಳವಾದ ವಿಚಾರವಲ್ಲ. ನವ್ಯ ಸಾಹಿತ್ಯ ಚಳವಳಿಯು ಉದ್ದಕ್ಕೂ ನಡೆಸಿಕೊಂಡು ಬಂದಿರುವ 'ಪಾಲಿಟಿಕ್ಸ್ ಆಫ್ ಪ್ರೊಜೆಕ್ಷನ್'ನ ಭಾಗ ಇದು.

ಸಂಪಾದಕರು ತಾವು ಪ್ರಕಟಿಸುವ ಲೇಖನಗಳನ್ನು ಮತ್ತು ಲೇಖಕರ ತಾತ್ವಿಕ ನಿಲುವುಗಳನ್ನು ಪೂರ್ತಿಯಾಗಿ ಒಪ್ಪಿ ಪ್ರಕಟಿಸುವುದಿಲ್ಲ ಎಂದುಕೊಂಡರೂ ಇಲ್ಲಿ ಒಂದು ಸೂಕ್ಷ್ಮ ಇದೆ. ನಾವು ಈಗ್ಗೆ ನಾಲ್ಕು ವರ್ಷಗಳ ಹಿಂದೆ ಕುಂದಾಪುರದ ರಂಗ ಅಧ್ಯಯನ ಕೇಂದ್ರದಲ್ಲಿ ಎಸ್. ಮಂಜುನಾಥ್ ಅವರ ಸಂದರ್ಶನ ನಡೆಸಲು ಹೊರಟಾಗ, ಅವರು 'ಕುವೆಂಪು ಕವಿಯೇ ಅಲ್ಲ' ಎಂದು ಹೇಳಿ ತಮ್ಮ ಮಾತು ನಿಲ್ಲಿಸಿಬಿಟ್ಟರು. ಸಂದರ್ಶನವೂ ಮುಂದುವರೆಯಲಿಲ್ಲ. ನವ್ಯ ಸಾಹಿತ್ಯ ಚಳವಳಿಯ ಮೂಲಕ ಹಾದು ಬಂದ ಇಂತಹ ಗೊಂದಲಕಾರಿ ಚಿಂತನೆಗಳ ಪಳೆಯುಳಿಕೆ ಇಂದಿಗೂ ಹಾಗೆಯೇ ಉಳಿದಿದೆಯೇ ಎಂಬ ಆತಂಕ ಒಂದುಕ್ಷಣ ನನ್ನನ್ನು ಆವರಿಸಿತು. ಇದನ್ನೆಲ್ಲ ಯಾವ 'ವಾಗ್ವಾದ'ದ ಮೂಲಕ ಗೆಲ್ಲಲು ಸಾಧ್ಯ? ಇನ್ನೊಂದೆಡೆ ಇವರೆಲ್ಲ ರಿಲ್ಕ್‌ನನ್ನು ಕನ್ನಡಕ್ಕೆ ಪರಿಚಯಿಸುವ ಉಮೇದಿನಲ್ಲಿರುವ ಹಾಗಿದೆ. ಸರಿ. ಕನಿಷ್ಠ ರಿಲ್ಕ್ ಹಾಗೂ ಬ್ರೆಕ್ಟ್ ನಡುವೆ ನಡೆದಿರುವ ವಾಗ್ವಾದವನ್ನಾದರೂ ಇವರು ಕನ್ನಡಕ್ಕೆ ಪರಿಚಯಿಸುತ್ತಿದ್ದಾರೆಯೆ?

ಜಿ. ರಾಜಶೇಖರ ಅವರು 'ದೇಶಕಾಲದಲ್ಲಿ ಎಚ್.ಎಸ್. ಶಿವಪ್ರಕಾಶ್ ಅವರ ಗೈರುಹಾಜರಿ ಪೂರ್ವಗ್ರಹದ್ದಲ್ಲ' ಎನ್ನುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ನಿಜಸಂಗತಿ ಏನೆಂದರೆ ಕನ್ನಡ ವಿಮರ್ಶಾ ವಲಯ ಶಿವಪ್ರಕಾಶ್ ಅವರನ್ನು ಪೂರ್ತಿ ಮರೆತುಬಿಟ್ಟಿದೆ. ಅದರ ಬಗ್ಗೆ ಶಿವಪ್ರಕಾಶ್ ಅವರೂ ತಲೆಕೆಡಿಸಿಕೊಂಡವರಲ್ಲ. ಆದರೆ ಈಚೆಗೆ ಟಿ. ಪಿ. ಅಶೋಕ್ ಅಂಥವರು ತಮಗೆ 'ಭಾವನಾತ್ಮಕ'ವಾಗಿ ಹತ್ತಿರವಿರುವ ಲೇಖಕರ ಪುಸ್ತಕಗಳ ಬಗ್ಗೆ ಮಾತ್ರ ಪುನಃ ಪುನಃ ಬರೆಯುತ್ತಿರುವುದು ಯಾರಿಗೂ ಎದ್ದು ಕಾಣುವಂತಿದೆ. ಅನೇಕ ಲೇಖಕರ ಅಸ್ತಿತ್ವವನ್ನೇ ಅವರು ಮರೆತುಬಿಟ್ಟ ಹಾಗಿದೆ. ಕನ್ನಡದ ಕಥೆಗಾರರೊಬ್ಬರು ತಮ್ಮ ಸಹಲೇಖಕರ ಕಾದಂಬರಿಯೊಂದರ ಬಗ್ಗೆ 'ಕನಿಷ್ಠ ಅಂಕ ನೀಡಿ' ಅಪಹಾಸ್ಯ ಮಾಡಿರುವ ಬರ್ಬರತೆಯನ್ನೂ ನಾವು ನೋಡಿದ್ದೇವೆ. ಅಸಹನೆ ಸಾಹಿತ್ಯ ವಿಮರ್ಶೆಯ ವಿಧಾನವಲ್ಲ ಎಂಬುದನ್ನು ಒಪ್ಪಬಹುದು. ಆದರೆ ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ ಈ ಪ್ರಚ್ಛನ್ನ ತಾರತಮ್ಯ ಮತ್ತು ಅಸಹನೆಗೆ ಏನನ್ನೋಣ? ಇದೆಲ್ಲಾ ನೋಡಿದರೆ ತೇಜಸ್ವಿ ಬಹಳ ಹಿಂದೆಯೆ ಕನ್ನಡ ವಿಮರ್ಶಕರ ಬಗ್ಗೆ ಆಡಿರುವ ನಿಷ್ಠುರವಾದ ಮಾತು ನಿಜ ಎನಿಸುತ್ತದೆ. ಕನ್ನಡ ಸಾಹಿತ್ಯದ ವಕ್ತಾರರಂತೆ ಮಾತನಾಡುವ ಈ ವಿದ್ವಜ್ಜನರ ಬಗ್ಗೆ ಯೋಚಿಸದೆ ಇರುವುದೇ ಸರಿಯಾದ್ದು ಎಂದು ಈಚೆಗೆ ನನಗೆ ಅನಿಸುತ್ತಿದೆ.

ವೈಯಕ್ತಿಕ ದೂಷಣೆಯಲ್ಲಿ ನನಗೆ ನಂಬಿಕೆ ಇಲ್ಲ. ಆದರೆ ಯಾರ ಮಾತುಗಳನ್ನೂ 'ವಾಗ್ವಾದ'ದ ಹೆಸರಿನಲ್ಲಿ ಹತ್ತಿಕ್ಕುವುದರಲ್ಲಿಯೂ ನಂಬಿಕೆ ಇಲ್ಲ. ಫಣಿರಾಜ್ ಅವರು ಹೇಳುವ 'ವಾಗ್ವಾದ'ದ ವಾತಾವರಣ ಕನ್ನಡದ ಇವತ್ತಿನ ಸಾಹಿತ್ಯದ ಸಂದರ್ಭದಲ್ಲಿ ಎಲ್ಲಿದೆ? ತಮಗೆ ಬೇಕಾದವರ ಬಗೆಗಿನ ಭಾವಾವೇಶವಷ್ಟೇ ತುಂಬಿಕೊಂಡಿದೆಯಲ್ಲವೇ? 'ದೇಶಕಾಲ' ಪತ್ರಿಕೆಯ ಕುರಿತು ಈಗ ನಡೆಯುತ್ತಿರುವ 'ವಾಗ್ವಾದ'ವೂ ಇದರಿಂದ ಹೊರತಲ್ಲ. ನಾನು ಗೌರವಿಸುವ, ಯಾವ ಕೂಟಕ್ಕೂ ಸೇರದ ಜಿ. ರಾಜಶೇಖರ ಹಾಗೂ ಕೆ. ಫಣಿರಾಜ್ ಅವರು ಕೂಡ ವ್ಯಕ್ತಿಗತ ಸಂಬಂಧಕ್ಕಷ್ಟೇ ಒತ್ತು ನೀಡಿ ವಾದ ಮಂಡಿಸಿರುವುದು ನನಗೆ ನಿರಾಶೆ ತಂದಿದೆ.

• ವಸಂತ ಬನ್ನಾಡಿ, ಕುಂದಾಪುರ

ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

'ದೇಶಕಾಲ'ದ ವಿಶೇಷ ಸಂಚಿಕೆಯನ್ನು ಕುರಿತ ಮಂಜುನಾಥ ಲತಾ ...ತ್ತು ಚಂದ್ರಶೇಖರ್ ಐಜೂರ್ ಲೇಖನ ಮತ್ತು ಅದಕ್ಕೆ ಬಂದ ಪ್ರತಿಕ್ರಿಯೆಗಳನ್ನು ...ೋಡಿದೆ. ಈ ಎರಡೂ ಬರಹಗಳಲ್ಲಿ ಒಂದು ವೈರುಧ್ಯವಿದೆ. ಸೂಕ್ಷ್ಮವಾಗಿ ...ಮನಿಸಿದರೆ ಮಂಜುನಾಥ-ಐಜೂರ್ ಬರಹದಲ್ಲಿ 'ದೇಶಕಾಲ' ಐದು ...ರ್ಷದಿಂದ ರೂಪಿಸುತ್ತಿರುವ ಮನಸ್ಥಿತಿಯ ತಾತ್ವಿಕ ವಿರೋಧ ವಿಶೇಷಾಂಕದ ...ವದಲ್ಲಿ ಹೊರಬಿದ್ದಿದೆ. ಅದಕ್ಕೆ ಬಂದ ಪ್ರತಿಕ್ರಿಯೆಗಳು ಮಾತ್ರ ...ರೀಕೆರೆಯವರನ್ನು ಹೊರತುಪಡಿಸಿ) ಕೇವಲ ವಿಶೇಷ ಸಂಚಿಕೆಯನ್ನು ...ಮಾತ್ರ ಆಧರಿಸಿವೆ. ಈ ಬರಹಗಾರರಿಬ್ಬರ ಬರಹ ತೀರಾ ಒರಟಾಗಿಯೂ, ...ನ್ಯಾಯಾಧೀಶರ ತೀರ್ಪಿನ ತರಹವೂ ಇರುವುದರಿಂದ ಬರಹದ ಕ್ರಮವನ್ನು ...ಶೋಧಿಸಬಹುದು. ಆದರೆ ಆ ಮೂಲಕ ಅವರು ಎತ್ತುವ ಪ್ರಶ್ನೆಯನ್ನು ...ಶೋಧಿಸಲಿಕ್ಕಾಗದು.

... ನಾನು 'ದೇಶಕಾಲ'ದ ಓದುಗನಾಗಿಯೂ ಈ ತನಕ ಅದು ರೂಪಿಸಿದ ...ಹಿತ್ಯಿಕ ಪರಿಕಲ್ಪನೆಯನ್ನೂ ಒಳಗೊಂಡಂತೆ ನನ್ನ ಕೆಲವು ಮಾತುಗಳಿವು. ...ಮಂಜುನಾಥ-ಐಜೂರ್ ಲೇಖನದ ಬರಹದ ಕ್ರಮಕ್ಕೆ ನನ್ನಂಥ ಬಹಳ ...ರ ವಿರೋಧವಿದೆ. ಆದರೆ ಆ ಬರಹದ ಒಟ್ಟು ಧ್ವನಿ ಮತ್ತು ಅವರು ...ತ್ತುವ ಪ್ರಶ್ನೆಯ ಜತೆ ಕನ್ನಡದ ಬಹುಪಾಲು ಮನಸ್ಸುಗಳ ಸಹಮತವಿದೆ. ...ದೇಶಕಾಲ' ಮತ್ತು ಅದರ ವಿಶೇಷಾಂಕದ ಬ್ರಾಹ್ಮಣ ಲಾಬಿ ಕುರಿತಂತೆ ...ಸಾಹಿತ್ಯ ವಲಯದಲ್ಲಿ ಮೌಖಿಕವಾಗಿ ಪುಸ್ತಕ ಸಂಪಾದಿಸುವಷ್ಟು ಚರ್ಚೆಗಳು ...ನಡಿವೆ. ಆದರೆ ಈ ಎಲ್ಲಾ ಚರ್ಚೆಗಳು ಬರಹದ ರೂಪದಲ್ಲಿ ಬಂದಿರಲಿಲ್ಲವಷ್ಟೆ. ...ವನ್ನು ರಹಮತ್ ತರಿಕೆರೆಯವರೂ ಸಹ ತಮ್ಮ ಪ್ರತಿಕ್ರಿಯೆಯಲ್ಲಿ ಸೂಕ್ಷ್ಮ...ವಾಗಿ ಹೇಳಿದ್ದಾರೆ. ಕೆ.ಫಣಿರಾಜ್ ಮತ್ತು ಜಿ.ರಾಜಶೇಖರ್ ಅವರನ್ನು ನಾವು ...ತುಂಬಾ ಗೌರವಿಸುತ್ತೇವೆ. ಜಿ. ರಾಜಶೇಖರ್ ಅವರನ್ನಂತು ಈ ಹೊತ್ತಿನ ...ಕರ್ನಾಟಕದ ಸಾಕ್ಷಿಪ್ರಜ್ಞೆ ಎಂತಲೇ ಭಾವಿಸಿದ್ದೇವೆ. ಆದರೆ ಅಂಥವರು ದೇಶಕಾಲಕ್ಕೆ ...ಮಿತಿಗಳಿಲ್ಲ ಎನ್ನುವ ಅರ್ಥದಲ್ಲಿಯೂ ಅದರಲ್ಲಿ ಬ್ರಾಹ್ಮಣ ಲಾಬಿಯಿಲ್ಲ ...ಎನ್ನಿಸುವಂತೆಯೂ 'ದೇಶಕಾಲ'ದ ಪರ ವಕಾಲತ್ತು ನಡೆಸುವವರಂತೆ ...ವಿಮರ್ಶಾತ್ಮಕವಾಗಿ ಬರೆದದ್ದು ನೋಡಿದರೆ ಮನಸ್ಸಿಗೆ ಬೇಸರವೆನಿಸಿತು. ...ಬಹುಶಃ ನನ್ನ ಓದಿನ ಮಿತಿಯಲ್ಲಿ ಜಿ. ರಾಜಶೇಖರ್ ಅವರ ಬರಹದ ಬಗ್ಗೆ ...ಭಿನ್ನಿಸಿದ್ದು ಇದೇ ಮೊದಲ ಸಲ.

... ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ಎನ್ನುವುದೊಂದು ಕನ್ನಡದ ಗಾದೆ. ...ದೇಶಕಾಲ' ಪತ್ರಿಕೆಯ ಬಗ್ಗೆಯೂ ಆ ಮಾತನ್ನು ಹೇಳಬಹುದು. 'ದೇಶಕಾಲ'ವು ...ಮುದ್ರಣ ಮತ್ತು ವಿನ್ಯಾಸದ ಗುಣಮಟ್ಟದಲ್ಲಿ ಕನ್ನಡದ ಒಂದು ವಿಶಿಷ್ಟ ...ಸಾಹಿತ್ಯ ಪತ್ರಿಕೆ. ಆ ಬಗ್ಗೆ ಎರಡು ಮಾತಿಲ್ಲ. ಹಾಗೆಯೇ ಅನ್ಯ ಭಾಷೆಯ ...ಯ ಸಾಹಿತ್ಯವನ್ನು, ಕೆಲವಾದರೂ ಒಳ್ಳೆಯ ಬರಹಗಳನ್ನು ಕರುಣಿಸಿದೆ. ಅಂತೆಯೇ ಕೆಲವು ಗಂಭೀರ ಮಿತಿಗಳಿರುವ ಪತ್ರಿಕೆ ಎನ್ನುವುದನ್ನೂ ಸಹ ಒಪ್ಪಿಕೊಳ್ಳಬೇಕು. ಆ ಪತ್ರಿಕೆ ಮಾಡುತ್ತಿರುವ ಸಾಹಿತ್ಯಿಕ ರಾಜಕಾರಣ ಬ್ರಾಹ್ಮಣ ಲಾಬಿ ತೀರಾ ಮುಚ್ಚಿಟ್ಟಂತೇನೂ ಇಲ್ಲ. 'ದೇಶಕಾಲ'ದ ನಾಲ್ಕೈದು ಸಂಚಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ತುಂಬಾ ಢಾಳಾಗಿ ಗೋಚರಿಸುತ್ತದೆ. ಹಿರಿಯ ಸಾಹಿತಿಗಳ ಸಮಿತಿಯೊಂದನ್ನು ರಚಿಸಿ ಪತ್ತೆ ಹಚ್ಚುವಷ್ಟು ಅದು ಗುಟ್ಟಾಗಿಯೂ ಉಳಿದಿಲ್ಲ. ಅದುವೇ 'ದೇಶಕಾಲ'ದ ಶಕ್ತಿಯೂ ಕೂಡ. ಅದನ್ನು 'ದೇಶಕಾಲ' ಒಪ್ಪಿಕೊಂಡು ಆ ಕುರಿತ ವಿಮರ್ಶೆಯಿಂದ ಹೊರಗುಳಿಯುವುದು ಒಳ್ಳೆಯದು.

ಜಿ.ರಾಜಶೇಖರ್ ಅವರು ಹೇಳುವಂತೆ 'ದೇಶಕಾಲ'ದ ಲೇಖಕರ ಪಟ್ಟಿಯಲ್ಲಿ ಸ್ವಲ್ಪಮಟ್ಟಿಗೆ ದಲಿತರೂ ಅಲ್ಪಸಂಖ್ಯಾತರೂ ಇದ್ದಾರೆ. ಅವರು ಇರುವುದೇ 'ದೇಶಕಾಲ' ಹಾಗಲ್ಲ ಎಂದು ಸಮರ್ಥನೆ ಮಾಡಿಕೊಳ್ಳುವುಕ್ಕಾಗಿ ಎನ್ನಬಹುದು. ಅದೀಗ ಅವರದೇ ಬರಹದ ಮೂಲಕ ಸಾಬೀತಾಗಿದೆ. ಇಷ್ಟು ಸರಳ ವ್ಯಾಕರಣ ಜಿ. ಆರ್‌ಗೆ ಹೊಳೆಯಲಿಲ್ಲವೆಂದರೆ ನಂಬುವುದು ಕಷ್ಟ. ಸಂಪಾದಕರಾದ ವಿವೇಕ ಶಾನಭಾಗ ಅವರ ಶ್ರದ್ಧೆ, ಅಚ್ಚುಕಟ್ಟುತನ ಅವರ ಸೌಜನ್ಯದ ನಡವಳಿಕೆ ಮೆಚ್ಚುವಂತಹದ್ದು. ನಿಜಕ್ಕೂ ಅವರು 'ದೇಶಕಾಲ'ವನ್ನು ರೂಪಿಸುವ ಕ್ರಮ ಬೆರಗು ಮೂಡಿಸುವಂತಹದ್ದು. ವಿವೇಕ ಶಾನಭಾಗರು ತುಂಬಾ ಸೂಕ್ಷ್ಮ ಸಂವೇದನೆಯ ಬರಹಗಾರರು. ಅವರೂ ಕೂಡ 'ದೇಶಕಾಲ' ಪತ್ರಿಕೆಯು ಯಾವುದೇ ಸಾಹಿತ್ಯಿಕ ರಾಜಕಾರಣವನ್ನಾಗಲಿ, ಬ್ರಾಹ್ಮಣ ಲಾಬಿಯನ್ನಾಗಲಿ ಮಾಡುತ್ತಿಲ್ಲ ಎಂದು ಗಟ್ಟಿ ಧ್ವನಿಯಲ್ಲಿ ಪ್ರಾಮಾಣಿಕವಾಗಿ ಹೇಳಲಾರರು ಎಂದು ಭಾವಿಸುವೆ.

'ದೇಶಕಾಲ'ದ ವಿಶೇಷ ಸಂಚಿಕೆಗೆ ಮೊದಲು ನನ್ನ ಪದ್ಯವನ್ನು ಕೇಳಿದ್ದರು, ನಂತರ ನನ್ನ ಎರಡು ಪುಸ್ತಕವನ್ನು ಕಳುಹಿಸಲು ಹೇಳಿ ಹೊಸ ತಲೆಮಾರಿನ ಬರಹಗಾರರ ಬಗ್ಗೆ ವಿಮರ್ಶೆ ಬರೆಸುವುದಾಗಿ ತಿಳಿಸಿದರು. 'ದೇಶಕಾಲ'ದ ಜತೆ ಭಿನ್ನಮತ ಇಟ್ಟುಕೊಂಡ ನನಗೆ ಅದರ ವಿಶೇಷಾಂಕದಲ್ಲಾದರೂ ಎಲ್ಲರೂ ಒಳಗೊಳ್ಳುವಂತಾದದ್ದಕ್ಕೆ ಸ್ವಲ್ಪ ಖುಷಿಯೂ ಆಯಿತು. ವಿಶೇಷಾಂಕ ಹೊರಬಂದ ನಂತರ 21ನೇ ಶತಮಾನದ 21 ಬರಹಗಾರರಲ್ಲಿ ನನ್ನನ್ನು ಗುರುತಿಸಿಕೊಳ್ಳಲು ನಿಜಕ್ಕೂ ಮುಜುಗರವಾಯಿತು. ಕಾರಣ ಹಾಗೆ ಗುರುತಿಸಿಕೊಳ್ಳುವಂತಹ ಬರಹವನ್ನೇನೂ ನಾನು ಮಾಡಿಲ್ಲ. ಸಂಪಾದಕರು ಹೀಗೆ ಆಯ್ಕೆ ಮಾಡುವ ಬಗ್ಗೆ ಮೊದಲೇ ತಿಳಿಸಿ ಆ ಪಟ್ಟಿಯನ್ನು ಹೇಳಿದ್ದರೆ ಖಂಡಿತಾ ನಾನು ಒಪ್ಪಿಕೊಳ್ಳುತ್ತಿರಲಿಲ್ಲ. ನನ್ನಂತಹದೇ ಅನುಭವ ಈ ಇಪ್ಪತ್ತೊಂದು ಬರಹಗಾರರಲ್ಲಿ ಕೆಲವರಿಗಾದರೂ ಆಗಿದೆ. ಅಷ್ಟಕ್ಕೂ ನನಗಿಂತ ಚೆನ್ನಾಗಿ ಬರೆವ (ಈಗಲೂ ಕವಿಯಾಗಿ ನಮ್ಮ ಜತೆ ಇರುವ) ಎಸ್.ಕೆ ಹನುಮಂತಯ್ಯ, ಹೆಚ್. ನಾಗವೇಣಿ, ಸುಬ್ಬು ಹೊಲೆಯಾರ್, ಬಿ. ಪೀರ್‌ಬಾಷ, ವಿಕ್ರಮ ವಿಸಾಜಿ ಇನ್ನೂ ಅನೇಕ ಸೂಕ್ಷ್ಮ ಸಂವೇದನೆಯ ಬರಹಗಾರರನ್ನು ಒಳಗೊಳ್ಳದ ದುಃಖ ಬಹುವಾಗಿ ಕಾಡಿತು. ಈ ಕಾರಣಕ್ಕೆ ಅಭಿನಂದನೆಯ ಮೆಸೇಜ್ ಕಳುಹಿಸಿದ ಹಿರಿಯರು ಮತ್ತು ಸ್ನೇಹಿತರಿಗೆ ನನಗಿಂತ ಉತ್ತಮ ಬರಹಗಾರರು ವಿಶೇಷಾಂಕದ ಹೊರಗಿದ್ದಾರೆ ಹಾಗಾಗಿ ಇದು ನನಗೆ ಮುಜುಗರದ ಸಂಗತಿ' ಎಂದು ಎಲ್ಲರಿಗೂ ಮೆಸೇಜ್ ಫಾರ್ವರ್ಡ್ ಮಾಡಿದೆ. ಇದನ್ನು ಈ ಸಂದರ್ಭದಲ್ಲಿ ಯಾಕೆ ಹೇಳಬೇಕಾಯಿತೆಂದರೆ, ಮಂಜುನಾಥ-ಐಜೂರ್ ಹೇಳುವ 'ದೇಶಕಾಲ'ದ ಜಗಲಿಯಲ್ಲಿ ನಮ್ಮನ್ನು ಕೂಡಿಸಿದ್ದಾರೆ ಎನ್ನುವ ಮಾತು ನಿಜ ಅನ್ನಿಸಿದ್ದಕ್ಕೆ.

ಆಯಾ ಕಾಲದ ರಾಜಕಾರಣ, ಪ್ರಚಾರ ಯಾವುದೇ ಪತ್ರಿಕೆಯನ್ನಾಗಲಿ ಸಾಹಿತಿಯನ್ನಾಗಲಿ ಬಹುಕಾಲದವರೆಗೆ ಗಟ್ಟಿಯಾಗಿ ಉಳಿಸಲಾರವು. ಕನ್ನಡ ಸಾಹಿತ್ಯ ಲೋಕ ಅಷ್ಟರಮಟ್ಟಿಗೆ ಪ್ರಾಮಾಣಿಕ. ಈಗಲೂ ಲಂಕೇಶರ ಟೀಕೆ ಟಿಪ್ಪಣಿಯನ್ನು ಓದುತ್ತೇವೆಂದರೆ ಅದಕ್ಕಿರುವ ಪ್ರಜಾಪ್ರಭುತ್ವೀಯ ನಿಲುವಿಗಾಗಿ. ಮತ್ತೆ ಮತ್ತೆ ಕುವೆಂಪು ನಮ್ಮನ್ನು ಕಾಡುತ್ತಾರೆಂದರೆ ಅವರ ಬರಹದ ಚೈತನ್ಯಶೀಲತೆಗಾಗಿ. ಅಡಿಗರ, ಬೇಂದ್ರೆಯವರ, ಅನಂತಮೂರ್ತಿಗಳ ಬರಹಗಳನ್ನು ಓದಿ ಮೈದುಂಬಿಕೊಳ್ಳುತ್ತೇವೆಂದರೆ ಅದು ಜಾತಿಯ ಕಾರಣಕ್ಕಲ್ಲ ಅವರ ಸಾಹಿತ್ಯದ ಗಟ್ಟಿತನಕ್ಕಾಗಿ. ಹಾಗಾಗಿ 'ದೇಶಕಾಲ' ಮಾಡುತ್ತಿರುವ ಬ್ರಾಹ್ಮಣ ಲಾಬಿಯ ರಾಜಕಾರಣ ಬಹುದೂರ ನಡೆಯಲಾರದು ಹೆಚ್ಚೆಂದರೆ ತೆವಳಬಹುದಷ್ಟೆ. ಹಲವು ವೈವಿಧ್ಯದ, ಹಲವು ಧೋರಣೆಯ, ಭಿನ್ನ ಶೈಲಿಯ, ಪ್ರಜಾಪ್ರಭುತ್ವೀಯ ಬಹುಜನರ ಮೂಲಕ ಹೊರಹೊಮ್ಮಬಹುದಾದ ಧಾರಣ ಶಕ್ತಿಯನ್ನು ಒಳಗೊಳ್ಳದ ಹೊರತು ಯಾವ ಪತ್ರಿಕೆಯೂ ಬಹುದೂರ ನಡೆಯಲಾರದು. ಅಂತಹ ಧಾರಣ ಶಕ್ತಿಯ ಕೊರತೆ 'ದೇಶಕಾಲ' ಪತ್ರಿಕೆಗೆ ಖಂಡಿತಾ ಇದೆ. ಮುಂದೊಂದು ದಿನ ಇದರ ಅನುಭವ ಈ ಪತ್ರಿಕೆಗೂ ಆಗಬಹುದು. ಇದನ್ನು ಮುಂದಾದರೂ ತಿದ್ದಿಕೊಳ್ಳುವ ಸಾಧ್ಯತೆ ಇದೆ. ಈ ಮಾತನ್ನು 'ದೇಶಕಾಲ' ಮತ್ತು ವಿವೇಕ ಶಾನಭಾಗರ ಮೇಲಿನ ಗೌರವದಿಂದಲೂ ಹೇಳುತ್ತಿರುವೆ. ಅಷ್ಟಕ್ಕೂ ಲಂಕೇಶರು ಇದ್ದಾಗಿನ ಒಂದು ಸಂಚಿಕೆ ಉಂಟುಮಾಡಿದ ಸಾಹಿತ್ಯಿಕ ವಾಗ್ವಾದವನ್ನು 'ದೇಶಕಾಲ'ದ ಐದೂ ವರ್ಷದ ಸಂಚಿಕೆಗಳಲ್ಲಿ ಸಾಧ್ಯವಾಗಿಲ್ಲ ಎನ್ನುವುದಾದರೆ, ಅದನ್ನು ಸುಖಾಸುಮ್ಮನೆ ವಿಮರ್ಶಿಸಿ ಕಾಲಹರಣ ಮಾಡುವುದಕ್ಕಿಂತ ನಿರ್ಲಿಪ್ತವಾಗುವುದೊಳಿತು.


• ಅರುಣ್ ಜೋಳದಕೂಡ್ಲಿಗಿ

ಪ್ರತಿಕ್ರಿಯೆ

ಕಳೆದ ಒಂದು ದಶಕದಿಂದ ಜಿ.ರಾಜಶೇಖರ್ ಮತ್ತು ರಹಮತ್ ತರೀಕೆರೆಯವರ ಬರಹಗಳನ್ನು ಓದಿಕೊಂಡು ಬೆಳೆದವನು ನನಗೆ ಕಳೆದ ವಾರ ಮಂಜುನಾಥ ಲತಾ ಮತ್ತು ಚಂದ್ರಶೇಖರ ಐಜೂರರ ಲೇಖನಕ್ಕೆ ಇವರು ನೀಡಿರುವ ಪ್ರತಿಕ್ರಿಯೆ ಕಂಡು ಆಶ್ಚರ್ಯವಾಯಿತು. ಚರ್ಚೆಗೆ ಒಳಪಡಬೇಕಾದ ಲೇಖನವನ್ನು ಈ ತ್ರಿಸದಸ್ಯರ ಪೀಠ (ಜಿ.ರಾಜಶೇಖರ, ಕೆ.ಫಣಿರಾಜ, ರಹಮತ್) ಅದರ ಭಾಷೆಯನ್ನೆ ನೆಪವಾಗಿಟ್ಟುಕೊಂಡು ತಳ್ಳಿಹಾಕಿದ್ದೊಂದು ದುರಂತ. ಚರ್ಚೆಯನ್ನು ಹೇಗೆ ಮಾಡಬೇಕೆಂಬ ಧಾರಾಳ ... ಮಾಡಿದ್ದಾರೆ. 'ಇನ್ನು ಮುಂದೆ ಯಾರೂ ಇಂಥ ಪ್ರಶ್ನೆಗಳನ್ನು ಕೇಳಕೂಡದು. 'ದೇಶಕಾಲ'ದ ಆಯ್ಕೆಯನ್ನು ಭಿನ್ನಮತವಿಟ್ಟುಕೊಂಡೂ ಒಪ್ಪಿಕೊಳ್ಳಬೇಕು, ಇಲ್ಲವಾದರೆ ಅದು ಕಂಟೆಂಪ್ಟ್ ಆಫ್ ದಿ ಕೋರ್ಟ್' ಆಗುತ್ತದೆ ಎಂಬ ನಿಲುವಿಗೆ ಮೂವರು ಬಂದು ನಿಂತಿದ್ದಾರೆ.

ಪ್ರತಿಸಂಸ್ಕೃತಿಯ ಬಗ್ಗೆ ಮಾತನಾಡಿದ ರಹಮತ್ ಅವರು ಈಗ ಯಾವ ಸಂಸ್ಕೃತಿಯ ವಕ್ತಾರರಾಗಹೊರಟಿದ್ದಾರೆಂಬುದು ಗೊತ್ತಾಗುತ್ತಿಲ್ಲ. ಜಿ.ರಾಜಶೇಖರ ಅವರು ಕೂಡ ಈ ಲೇಖನದ ಒಳದನಿಯನ್ನು ಅರ್ಥಮಾಡಿಕೊಳ್ಳದೆ press note ಕೊಟ್ಟಿದ್ದಾರೆ. 'ದೇಶಕಾಲ' ಎಷ್ಟು ತಿಂಗಳಿಗೊಮ್ಮೆ ಹೊರಡುತ್ತದೆ ಎಂಬ ಮಾಹಿತಿಯಿಂದ ಹಿಡಿದು ಬರೆದ ಲೇಖಕರು.... ಎಲ್ಲವೂ ಇದೆ. ಇನ್ನು ಅವರ ಹೇಳಿಕೆ ನೋಡಿ: 'ಸಂಪಾದಕರು ಸ್ವತಃ ತಾನೇ ಹಾಕಿಕೊಂಡಿರುವ ಅಭಿರುಚಿ ಮತ್ತು ವಿವೇಚನೆಗಳ ಮಾನದಂಡ ಹೊರತುಪಡಿಸಿ ತನ್ನ ಪತ್ರಿಕೆಗಳ ಬಗ್ಗೆ ಯಾರಿಗೂ ವಿವರಣೆ ನೀಡಬೇಕಾದದ್ದಿಲ್ಲ' ಎಂದಿದ್ದಾರೆ. ಹಾಗಾದರೆ ವಿಶ್ವೇಶ್ವರ ಭಟ್ಟರ 'ವಿಕ'ದ ನಿಲುವುಗಳನ್ನು ಯಾಕೆ ಪ್ರಶ್ನಿಸುವಿರಿ? ಪ್ರತಾಪ ಸಿಂಹನ ಬರಹವನ್ನು ಯಾಕೆ ಪ್ರಶ್ನಿಸುವಿರಿ? ನಿಮ್ಮ ವಾದವನ್ನೆ ಇಟ್ಟುಕೊಂಡು ಹೊರಟರೆ ಯಾವುದನ್ನೂ (ಸರಕಾರೀ ಸಂಸ್ಥೆಗಳನ್ನು ಹೊರತುಪಡಿಸಿ) ಪ್ರಶ್ನಿಸಬಾರದೆಂದಾಗುತ್ತದೆ. ಅಂತಿಮವಾಗಿ ಸರ್ವಾಧಿಕಾರದೆಡೆಗೆ ಇದು ನಮ್ಮನ್ನು ಕೊಂಡೊಯ್ಯುತ್ತದೆ. ಇಷ್ಟು ಅಸೂಕ್ಷ್ಮವಾದ ಚಿಂತನೆಯನ್ನು ನಾನು ಜಿ.ರಾಜಶೇಖರ ಅವರಿಂದ ನಿರೀಕ್ಷಿಸಿರಲಿಲ್ಲ. ಇನ್ನು 'ಅಖಿಲ ಕರ್ನಾಟಕ ಪತ್ರಿಕಾ ನಿಂದಾ ವಿರೋಧಿಗಳ ಸಂಘ' ಸ್ಥಾಪಿಸಲು ಹೊರಟಿರುವ ಕೆ.ಫಣಿರಾಜರಿಗೆ ಭಗವಂತ ಒಳ್ಳೆಯದನ್ನು ಮಾಡಲಿ.

- ಪ್ರಭು ಬಿ. ಪಾಟೀಲ್, ರಾಮನಗರ



ಭೈರಣ್ಣನಿಗೆ ಸಾಬರು ಸರಿಯಾಗಿ ಇಕ್ಕಿದರಂತಲ್ಲಾ!

ನಮ್ಮ ಚಡ್ಡಿ ಭೈರಣ್ಣನವರು ಸುಮಾನಕ್ಕಾಗಿ ಸಾಬರನ್ನು ಕೆಣಕಿ, ಚಡ್ಡಿ ಹರಿಸಿಕೊಂಡ ಸ್ವಾರಸ್ಯಕರ ಘಟನೆ ಜರುಗಿದೆಯಂತಲ್ಲಾ. ಮುಸ್ಲಿಂ ಧರ್ಮಗ್ರಂಥ ಹಿಂಸೆಯನ್ನು ಪ್ರಚೋದಿಸುತ್ತದೆ. ಅದಕ್ಕೇ ಆ ಧರ್ಮದಲ್ಲಿ ಅಷ್ಟೊಂದು ಹಿಂಸೆ. ಆದ್ದರಿಂದ ಖುರಾನ್ ಪರಿಷ್ಕರಣೆಗೊಳ್ಳಬೇಕಾಗಿದೆಯೆಂದು ಭೈರಪ್ಪ ಹೇಳಿದ್ದಾರೆಂದು ಸಿಟ್ಟಾದ ಸಾಹೇಬರು "ಸುವ್ವರ್ ಭೈರಪ್ಪ, ಸರಿಯಾಗಿ ಖುರಾನ್ನ ಓದಿ ಮಾತಾಡ್‌ಬೇಕು. ಸುಳ್ಳು ಸುಳ್ಳೇ ಹೇಳಬಾರ್ದು. ನಾವು ಇವುರ್ದು ಮನುಧರ್ಮ ಓದಕ್ಕೆ ಹೋಗಿ ಪೂರಾ ಮುಗುಸಕ್ಕೇ ಆಗಲಿಲ್ಲ, ಆದ್ರೆ ಒಂದು ವಿಷಯ ನಮ್ಗೆ ಗೊತ್ತಾಯ್ತು, ಮನುಧರ್ಮಶಾಸ್ತ್ರ ಮನುಸುರು ಬರದಿಲ್ಲ, ಅದು ಬರದಿರೋದು ಸೈತಾನ್ ಅಂತ. ಆದ್ರೆ ನಾವು ಎಲ್ಲೂ ಬಾಯಿಬಿಟ್ಟು ಹೇಳಿಲ್ಲ, ಭೈರಪ್ಪಂದು ಮಾನ ಕಾಪಾಡಿದ್ವಿ. ಆದ್ರೆ ಶಾಂತಿ ಹೇಳೊ ಇಸ್ಲಾಂ ಧರ್ಮ ಹಿಂಸೆನೂ ಹೇಳುತ್ತೆ ಅಂತ ಈ ಭೈರಪ್ಪ ಹೇಳ್ತನಲ್ಲ ಯಾವುದು ಜಾತಿ ಇವುನ್ದು" ಎಂದರಂತಲ್ಲಾ, ಥೂತ್ತೇರಿ!

* * * * * *

ಇಸ್ಲಾಂ ಎಂದರೆ ಶಾಂತಿ, ಮುಸ್ಲಿಂ ಎಂದರೆ ವಿಧೇಯ, ಇವೆರಡನ್ನು ಬದಿಗಿಟ್ಟು ಬದುಕುತ್ತಿರುವ ಸಾಬರು, ಹಿಂದೂ ಧರ್ಮದ ಅಸಂಖ್ಯಾತ ಜಾತಿಗಳಲ್ಲಿ ತಾವೂ ಒಂದು ಜಾತಿಯಾಗಿ ಹೇಗೋ ಜೀವನ ಮಾಡುತ್ತಿರಬೇಕಾದರೆ, ಚಡ್ಡಿ ಭೈರಣ್ಣ ಖುರಾನು ಓದದೇ "ಮುಸ್ಲಿಂ ಧರ್ಮದಲ್ಲಿ ಹಿಂಸೆಯಿದೆ" ಎಂದುಬಿಡುವುದೆ! "ಹಿಂದೂ ಧರ್ಮದಲ್ಲಿರುವವರೆಲ್ಲಾ ಭಗವದ್ಗೀತೆಯನ್ನು ಹೇಗೆ ಓದಿಲ್ಲವೊ, ಹಾಗೆಯೇ ಮುಸ್ಲಿಮರೆಲ್ಲಾ ಖುರಾನ್ ಓದಿರಲಾರರೆಂಬ ಪ್ರಾಥಮಿಕ ತಿಳಿವಳಿಕೆಯಿಲ್ಲದ ಭೈರಪ್ಪ ವಿದ್ವಾಂಸನಲ್ಲ, ಪಂಡಿತನೂ ಅಲ್ಲ, ಪಾಮರನೂ ಅಲ್ಲ, ಬದಲಿಗೆ ಬೊಗಳೆ ಭೈರಣ್ಣ" ಎಂದು ಸಾಬರೆಲ್ಲಾ ಸೇರಿ ಆಡಿಕೊಂಡರಂತಲ್ಲಾ, ಥೂತ್ತೇರಿ!

* * * * * *



ಅನ್ಯಧರ್ಮವನ್ನು ಟೀಕಿಸಬೇಕಾದರೆ ತನ್ನ ಧರ್ಮವನ್ನೊಂದಿಷ್ಟು ಬಗ್ಗಿ ನೋಡಿದರೆ ಒಳ್ಳೆಯದು. ಈ ಜಗತ್ತಿನಲ್ಲಿ ಎಲ್ಲೂ ಆಚರಣೆಯಲ್ಲಿಲ್ಲದ ಅಸ್ಪೃಶ್ಯತೆ ಭಾರತದಲ್ಲಿದೆ. ಇರುವುದಷ್ಟೇ ಅಲ್ಲ, ಆಚರಣೆಯಲ್ಲೂ ಇದೆ. ತುಮಕೂರು ಜಿಲ್ಲೆಯಲ್ಲಿ ದಲಿತ ಮಹಿಳೆಯನ್ನು ಕಲ್ಲು ಹೊಡೆದು ಸಾಯಿಸಲಾಗಿದೆ. ಅದೇ ಜಿಲ್ಲೆಯ ಇಂಗ್ಲಿಷ್ ಉಪನ್ಯಾಸಕನಿಗೆ ದಲಿತ ಎಂಬ ಕಾರಣಕ್ಕೆ ಮನೆಯನ್ನೇ ಬಾಡಿಗೆಗೆ ಕೊಟ್ಟಿಲ್ಲ, ಇವೆಲ್ಲಾ ಭೈರಪ್ಪನ ಧರ್ಮದ ದಿನನಿತ್ಯದ ಗೋಳು. ಈ ಕಡೆ ಒಂದಿಷ್ಟೂ ಗಮನಹರಿಸದ ಭೈರಪ್ಪ "ಅನ್ಯಧರ್ಮದಲ್ಲಿ ಹಿಂಸೆಯಿದೆ, ಅದಕ್ಕೆ ಕಾರಣ ಆ ಧರ್ಮದಲ್ಲಿನ ಧರ್ಮ ಗ್ರಂಥ" ಎಂದು ಟೀಕಿಸಿ ಸಾಬರ ಕೈಯಲ್ಲಿ ಸಮಾ ಇಕ್ಕಿಸಿಕೊಂಡನಂತಲ್ಲಾ, ಥೂತ್ತೇರಿ!

* * * * * *

ಇತ್ತ ಕರ್ನಾಟಕದ ರಾಜಕಾರಣ ತುಂಬಾ ತುಂಬಾ ಸ್ವಾರಸ್ಯಕರವಾಗಿದೆಯಂತಲ್ಲಾ, ತಮ್ಮ ತಂದೆ ಸಮಾನರು, ತಂದೆ ಸ್ಥಾನವನ್ನು ತುಂಬಿರುವವರೂ ಆದ, ಬಾಬರಿ ದಿಗ್ವಿಜಯ ಕುಖ್ಯಾತಿಯ ಅಡ್ವಾನಿ, ಸಂತೋಷ್ ಹೆಗಡೆ ರಾಜೀನಾಮೆಯನ್ನು ವಾಪಸು ತೆಗೆಸಿದ ನಂತರ, ಸದರಿ ಸಂತೋಷ್ ಹೆಗಡೆ ಎಡೂರಪ್ಪ ತಮಗೆ ಕರುಣಿಸಬಹುದಾದ ಪರಮಾಧಿಕಾರಕ್ಕಾಗಿ ಕಾಯುತ್ತಿರಬೇಕಾದರೆ, ಅತ್ತ ಎಡೂರಪ್ಪ ಲಲುತ್ತಲೇ ವಿರೋಧ ಪಕ್ಷದವರ ಸಭೆ ಕರೆದು ಕೇಳಿದರಂತಲ್ಲಾ, ಕೂಡಲೇ ಎದ್ದುನಿಂತ ಮೋಟಮ್ಮ, ಮೊಳದುದ್ದ ನಾಲಿಗೆ ಚಾಚಿ "ಲೋಕಾಯುಕ್ತರಿಗೆ ಪರಮಾಧಿಕಾರ ಕೊಟ್ಟರೆ ಅವರು ಮೊದಲು ರೇಡ್ ಮಾಡುವುದೇ ದಲಿತರನ್ನು, ಅದಕ್ಕಾಗಿ ಬೇಡವೇ ಬೇಡ" ಎಂದರಂತಲ್ಲಾ, ಥೂತ್ತೇರಿ!

* * * * * *

ಮೋಟಮ್ಮ ಫೂಟ್ ಲಾಯರಿಯಂತೆ ಕ್ಯಾತೆ ತೆಗೆದ ಕೂಡಲೇ, ಇದಕ್ಕೊಂದೇ ಕಾಯುತ್ತಿದ್ದವರಂತೆ ಎಡೂರಪ್ಪ ದಿಢೀರೆಂದು ಸಭೆಯನ್ನು ಬರಖಾಸ್ತುಗೊಳಿಸಿ ಕುಣಿಯುತ್ತ ಓಡಿದರಂತಲ್ಲಾ, ಲೋಕಾಯುಕ್ತರಿಗೆ ಪರಮಾಧಿಕಾರವೆಂದರೇನು, ಆತ ಮುಖ ಮೂತಿ ನೋಡದೆ ನಮ್ಮ ಮೇಲೆಯೇ ರೈಡ್ ಮಾಡಿದರೆ ಕತೆಯೇನು, ಅಧಿಕಾರಿಗಳಾದರೊ ಸಂಬಳ, ಭತ್ಯೆ, ಊರಿನ ಜಮೀನಿನ ಆದಾಯ ತೋರಿ ಬಚಾವಾಗುತ್ತಾರೆ. ನಾವೇನು ತೋರುವುದು. ರೆಡ್ಡಿಯಂತಹವನ ಸಹಾಯದಿಂದ, ಸಹಕಾರದಿಂದ, ದಿಢೀರ್ ಶ್ರೀಮಂತರಾದವರು ಎಲ್ಲಿಂದ ಲೆಕ್ಕ ತೋರುವುದು ಎಂಬ ಚರ್ಚೆಗಳು ವಿಧಾನಸಭೆಯ ಕಾರಿಡಾರಿನಲ್ಲಿ ಜರುಗುತ್ತಿರುವಾಗಲೇ, ಇತ್ತ ಲೋಕಾಯುಕ್ತರಿಗೆ ಕೊಡುವುದೇ ಆದರೆ ಎಂತಹ ಅಧಿಕಾರ ಕೊಡುವುದು ಎಂಬ ತಾಂತ್ರಿಕ ಚರ್ಚೆಗಳು ಎಡೂರಪ್ಪನ ಸುತ್ತಾ ನಡೆಯುತ್ತಿವೆಯಂತಲ್ಲಾ, ಥೂತ್ತೇರಿ!!

* * * * * *

ಇತ್ತ ಕಾಂಗ್ರೆಸ್ಸಿನ ಕತೆ ಶಾನೆ ಸ್ವಾರಸ್ಯವಾಗಿದೆಯಂತಲ್ಲಾ, ನೆರೆ ಪರಿಹಾರದ ಹಣವನ್ನು ಡೆಪಾಸಿಟ್ ಮಾಡಿಕೊಂಡು, ಅದನ್ನು ಸರ್ಪದಂತೆ ಕಾಯುತ್ತ ಕುಳಿತಿದ್ದ ದೇಶಪಾಂಡೆ ಎಂಬ ಸಿಕ್ ಇಂಡಸ್ಟ್ರಿ ಮಾಲೀಕನಿಗೆ, ಸದರೀ ಕಾಂಗ್ರೆಸ್ ಅಧ್ಯಕ್ಷಗಿರಿ ಸಾಕಾಗಿ, ಆ ಸ್ಥಾನ ಬಿಡುತ್ತಾರೆ ಎಂಬುದು ಗೊತ್ತಾದ ಕೂಡಲೇ 'ಬಂ' ಎಂಬ ಹೋರಾಟಗಾರ, ಅವರಿವರ ಸಹಾಯದಿಂದ ಎದ್ದು ನಿಂತಿದ್ದೂ ಅಲ್ಲದೆ, ಸೋನಿಯಾ ಗಾಂಧಿಯನ್ನು ಭೇಟಿಯಾಗಿ ಬಂದರಂತಲ್ಲಾ, ತನ್ನ ಜನಾಂಗವನ್ನೆಲ್ಲಾ ಕರೆದುಕೊಂಡು ಹೋಗಿ ಬಿಜೆಪಿ ದೊಡ್ಡಿಗೆ ಸೇರಿಸಿ, ಏಕಾಂಗಿಯಾಗಿ ಕುಂಟುತ್ತ ಬಂದು ಕಾಂಗ್ರೆಸ್ ಹಾಳೆಯ ಸೇರಿಕೊಂಡಿರುವ 'ಬಂ' ಇಲಿ ಮಗನನ್ನೂ ಎದುರಿಸಲಾಗದೆ ಕಾಂಗ್ರೆಸ್ ಪಾರ್ಟಿ ಅಧ್ಯಕ್ಷಗಿರಿಗಾಗಿ ಬಾಯಿ ಬಿಡುತ್ತಿರುವುದನ್ನು ನೋಡಿ ಕಾಂಗ್ರೆಸ್ಸಿಗರು ಆಡಿಕೊಳ್ಳುತ್ತಿವೆಯಂತಲ್ಲಾ, ಥೂತ್ತೇರಿ!!!

'ಸುಸಂಸ್ಕೃತ ಪ್ರಶ್ನೆಗಳನ್ನಷ್ಟೇ ಕೇಳಿ' ಎನ್ನುವುದಾದರೆ...

▶▶14

'ದೇಶಕಾಲ' ಯಾವ ಟೀಕೆ-ಟಿಪ್ಪಣಿ, ವಿಮರ್ಶೆ-ಚರ್ಚೆಗಳಿಂದ ಹೊರತಾದ ಸಾರ್ವಕಾಲಿಕ ಮೌಲ್ಯದ ಪತ್ರಿಕೆಯೆಂದೆ? ಸಾಹಿತಿಗಳ ಹಾಗೆ ಸಾಹಿತ್ಯ ವಿಮರ್ಶಕರು ಸಹ ತಮ್ಮ ಅನಿಸಿಕೆಗಳನ್ನು ಅನ್ಯೋಕ್ತಿ, ಸಂಕೇತ, ಪ್ರತಿಮಾ ವಿಧಾನಗಳ ಮೂಲಕ ಮಂಡಿಸಬಾರದೆಂಬುದೇನಾದರೂ ಇದೆಯೆ? 'ವಿಮರ್ಶೆ ಕೂಡ ಒಂದು ಸೃಜನಶೀಲ ಪ್ರಕಾರ; ಅದು ಬಹು ಆಯಾಮಗಳನ್ನು, ಬಹುಶಿಸ್ತೀಯ ಆಕರಗಳನ್ನು ಪಡೆದು ಕಂಗೊಳಿಸಬೇಕಿದೆ' ಎಂದೆಲ್ಲ ವಿಶ್ಲೇಷಿಸುವವರು ನಮ್ಮ ವಿಮರ್ಶೆಯ ಪರಿಭಾಷೆಯ ಬಗ್ಗೆ ಏಕೆ ಮಡಿವಂತರಾಗಿದ್ದಾರೆ?

'ದೇಶಕಾಲ'ದ 'ಎಲೈಟಿಸ್ಟ್ ಧೋರಣೆ' ಶ್ರೀ ರಾಜಶೇಖರರಿಗೆ ಮೆಚ್ಚಿಕೆಯಾಗಿರಬಹುದು. ಆದರೆ ಅದು ನಮಗೆ ಹಸಿವಿನಿಂದ ಸಾಯುತ್ತಿರುವ ಬಡವನ ಮುಂದೆ ದುಬಾರಿ ಬೆಲೆಯ, ಸುಂದರ ವಿನ್ಯಾಸದ ಬಟ್ಟೆ ಧರಿಸಿದ ಶ್ರೀಮಂತ ಕಲಾವಿದನೊಬ್ಬ, ಸುಂದರ ಕುಸುರಿಯ ಗಿಟಾರ್ ಹಿಡಿದು ಹಾಡಿ ಕುಣಿದಂತಿದೆ! 'ಹಸಿವಿನ ಮುಂದೆ ನಿನ್ನದೆಂತಹುದಯ್ಯಾ ಹಾಡು-ಕಲೆಗಾರಿಕೆ?' ಎಂದು ಅವನನ್ನು ಪ್ರಶ್ನಿಸಿದರೆ; ಆತ 'ನನ್ನ ಹಣ, ನನ್ನ ಹಾಡು, ಹಾಡುತ್ತೇನೆ-ಕುಣಿಯುತ್ತೇನೆ, ಕೇಳೋಕೆ ನೀನು ಯಾರು?' ಎಂದು ಉತ್ತರಿಸಬಹುದಾದರೆ ಅವನ ಅಂತಹ ತಾತ್ವಿಕತೆಗೆ ನಮ್ಮ ಧಿಕ್ಕಾರವಿದೆ! ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಬನಾರಸ್‌ನಲ್ಲೊಮ್ಮೆ ಮಾತನಾಡುತ್ತಾ 'ನಮ್ಮ ದೇಶದಲ್ಲಿ ಬಡತನ ಹೆಚ್ಚಾಗಿರುವುದಕ್ಕೆ, ಇಲ್ಲಿನ ಮಹಾರಾಜನ ಮೈಮೇಲಿರುವ ಒಡವೆಗಳೂ ಕಾರಣ' ಎಂದು ಹೇಳಿದ್ದು ಇಂತಹ ಮನೋಧರ್ಮವನ್ನೆ.

'ದೇಶಕಾಲದ ಸಂಪಾದಕರು ಸ್ವತಃ ತಾನೇ ಹಾಕಿಕೊಂಡಿರುವ ಅಭಿರುಚಿ ಮತ್ತು ವಿವೇಚನೆಗಳ ಮಾನದಂಡ ಹೊರತುಪಡಿಸಿ, ತನ್ನ ಪತ್ರಿಕೆಗಳ ಬಗ್ಗೆ ಯಾರಿಗೂ ವಿವರಣೆ ನೀಡಬೇಕಾದದ್ದಿಲ್ಲ' ಎಂದು ಶ್ರೀ ರಾಜಶೇಖರ್ ಹೊರಡಿಸಿರುವ ಷರಾ ಏನನ್ನು ಸೂಚಿಸುತ್ತದೆ? 'ತಾನು ಪತ್ರಿಕೆಯೊಂದನ್ನು, ಅಭಿವ್ಯಕ್ತಿಯೊಂದನ್ನು ಪ್ರಕಟಿಸಿ ಆಯಿತು; ಅದಕ್ಕೆ ನಾನು ಯಾವ ಜವಾಬ್ದಾರಿಯನ್ನೂ ಹೊರಬೇಕಾಗಿಲ್ಲ; ಯಾವುದಕ್ಕೂ ಉತ್ತರ ಕೊಡಬೇಕಾಗಿಲ್ಲ' ಎಂಬ ಸರ್ವಾಧಿಕಾರಿ ಧೋರಣೆ ತಾನೆ ಇದು? ಹಾಗೆ ಯಾರಿಗೂ ಸಂಪಾದಕರು ಉತ್ತರ ಕೊಡಬೇಕಾಗಿರುವ ಅಗತ್ಯವಿಲ್ಲವಾದರೆ ಅದನ್ನು ಅವರು 'ಖಾಸಗಿ ಪತ್ರಿಕೆ'ಯನ್ನಾಗಿ ಮಾತ್ರ 'ಹೊಕ್ಕು-ಬಳಕೆ' ಮಾಡಿಕೊಂಡಿರಲಿ ಬಿಡಿ. ಅದು ಬಿಟ್ಟು ಸಂಪಾದಕರು ಯಾಕೆ ತಮ್ಮ ಪತ್ರಿಕೆಯ ಬಗ್ಗೆ ಸಾರ್ವಜನಿಕ ಮಾಧ್ಯಮಗಳಲ್ಲಿ ಸಂದರ್ಶನ, ಪ್ರಚಾರಗಳೆಲ್ಲ ಪ್ರಕಟವಾಗುವಂತೆ ನೋಡಿಕೊಳ್ಳುತ್ತಾರೆ? ತಮ್ಮ ಪತ್ರಿಕೆಗಳನ್ನೇಕೆ ಸಾರ್ವಜನಿಕ ಸ್ಥಳಗಳಲ್ಲಿರುವ ಪುಸ್ತಕದಂಗಡಿಗಳಲ್ಲಿ, ಪುಸ್ತಕ ಮೇಳಗಳಲ್ಲಿ, ಜಾತ್ರೆ-ಸಂತೆಗಳಲ್ಲಿ ಮಾರಾಟಕ್ಕಿಡುತ್ತಾರೆ?

ಕೊನೆಗೆ ನಮ್ಮ ಪ್ರಶ್ನೆಗಳಿಷ್ಟೆ:

'ಪಾಪಿಗಳ ಲೋಕ'ವನ್ನೇ ಅನನ್ಯವೆಂದು ಕೊಂಡಾಡಿದ ನಮ್ಮ ನಡುವಿನ ಸಂವೇದನಾಶೀಲ ಚಿಂತಕರಾದ ಶ್ರೀ ರಾಜಶೇಖರ್ ಅವರು 'ದೇಶಕಾಲ'ದ ಬಗ್ಗೆ ಇನ್ನಾವ ವಿಮರ್ಶಾತ್ಮಕ ಧೋರಣೆ ಇಟ್ಟುಕೊಂಡು ಮಾತನಾಡುತ್ತಾರೆ ಹೇಳಿ? 'ಶೋಷಿತರಿಗೆ, ಶೋಷಿತರ ಚಳವಳಿಗಳಿಗೆ ಈ ಬಗೆಯ ವಿಮರ್ಶೆಯಿಂದ ಏನೂ ಆಗಬೇಕಾದದ್ದಿಲ್ಲ' ಎನ್ನುವುದಾದರೆ ಯಾವ ವಿಮರ್ಶೆ ನಮ್ಮ ನಡುವಿನ ಶೋಷಣೆಯನ್ನು ಕೊನೆಗಾಣಿಸಿದೆ ಹೇಳಿ? ಹಾಗೆ ವಿಮರ್ಶೆ-ಗಿಮರ್ಶೆಯಿಂದೆಲ್ಲ ಪ್ರಯೋಜನವಿಲ್ಲ ಎನ್ನುವ ನಿಲುವಿಗೆ ಬರುವುದಾದರೆ ನಾವೆಲ್ಲರೂ ಬರೆಯುವುದನ್ನು ಬಿಟ್ಟು ನಮ್ಮ ನಮ್ಮ ಕೆಲಸ ಮಾಡಿಕೊಂಡಿದ್ದರೆ ಸಾಕಲ್ಲವೆ? ಯಾವ ಬಡವ, ಶೋಷಿತ ನಮ್ಮ ವಿಮರ್ಶೆಗಾಗಿ ಕಾದು ಕುಳಿತುಕೊಂಡಿದ್ದಾನೆ ಹೇಳಿ?

ಬಹುಭಾಷೆಗಳ, ಬಹುಸಂಸ್ಕೃತಿಗಳ ಈ ದೇಶದಲ್ಲಿ 'ಸುಸಂಸ್ಕೃತವಾದ ಪ್ರಶ್ನೆಗಳನ್ನಷ್ಟೇ ಕೇಳಿ' ಎಂದರೆ ಹೇಗೆ ನೀವೇ ಹೇಳಿ?

• ಮಂಜುನಾಥ್ ಲತಾ
manjunathlatha@gmail.com
• ಕೆ.ಎಲ್. ಚಂದ್ರಶೇಖರ್ ಐಜೂರ್
chandrashekharaijoor@gmail.com


ಮುಂಜಾವಿಗು ಧಗೆ!

ಈಗ ಮುಂಜಾವಿಗು ಧಗೆ
ಮಂಜೂ ಇಲ್ಲ, ನಂಜ ಹೊಗೆ
ದಿಕ್ಕೆಟ್ಟಿದೆ ಹೂನಗೆ!

ಹಕ್ಕಿಪಕ್ಕಿಗಳಾದಿ
ಗಂಟಲು ಬಿದ್ದು ಹೋಗಿದೆ
ನನಗೋ
ನನ್ನ ದನಿಯೇ ಅಪರಿಚಿತ
ಧೂಳು ಹಿಡಿದಿದೆ
ಬೆಳಗಿಗು ಅಲರ್ಜಿ ಬಡಿದುಕೊಂಡಿದೆ

ದೇವರಗುಡಿಯ ಘಂಟೆನಾದ
ರಣಕಹಳೆ ಊದಿದಂತೆ
ಮುಲ್ಲಾನ ಅಲ್ಲಾಹು... ಕೂಗು
ಅಖಾಡಕ್ಕೆ ಕರೆದಂತೆ
ಮೂಡಲದ ಕೆಂಚು
ಭಯಾನಕ ಸಂಚಿನಂತೆ...
ಎಲ್ಲೆಲ್ಲು ಬಿಸುಗಾಳಿ... ಬಿಸಿ ಹವೆ!
ಗ್ರಾಮದೇವಿಯ ಜಾತ್ರೆಯಲ್ಲಿ
ರಾತ್ರಿ ನೀಡಿದ ಬಲಿ
ನನ್ನದೇ ಆಗಿರಬಹುದೆ?
ಶಂಕೆ ಸುರುವಾಗಿದೆ
ಅದರ ಬಿಂಬ ಗಟಾರದಲ್ಲಿ
ಇಣುಕುತ್ತಿದೆ
ನಲ್ಲಿಯಲ್ಲಿನ ನೀರು





ಬಣ್ಣಗೆಟ್ಟಿದೆ
ನೆತ್ತರಿರಬಹುದೇ?
ಗುಮಾನಿ ಹುಟ್ಟಿಸಿದೆ.

ಒಲೆ ಉರಿಯಲ್ಲು ಹೊಗೆ
ತುಂಬಿಕೊಂಡಿದೆ;
ಅಕ್ಕಿ ಬೇಯಬೇಕು ಹೇಗೆ?
ರಾಜಕಾರಣಕ್ಕೂ ನುಸುಕು
ಬಲಿಯಾಗಿದೆ;
ಸೂರ್ಯ ಹೊಳೆಯಬೇಕು ಹೇಗೆ?

ಇದೋ
ಕಾವ್ಯಕ್ಕು ಝಳ!
ತಂಪು ಇಲ್ಲದ ಮೇಲೆ
ಕವಿತೆ ಹುಟ್ಟೀತೇ?
ಹುಟ್ಟಿದರೂ
ಉಗಿಯಾಡದಿದ್ದೀತೇ?

-ವಿಜಯಕಾಂತ ಪಾಟೀಲ

ಅತ್ತೂ ಕರೆದು ಆಡಳಿತ ಮಾಡು ಅಂತ ಯಾರೇಳಿದ್ದರು!

ಯ ಲು ಸೀ ಮ

ಕಟ್ಟೆಪುರಾಣ

▸ಬಿ. ಚಂದ್ರೇಗೌಡ

ಕಾಳಮಾವನನ್ನು ಕಂಡ ಕೂಡಲೇ ಜುಮ್ಮಿ ವಿಶೇಷ ...ಯಿಂದ,

"ಇದ್ಯಾಕ್ ಮಾವ ಉಸಾರಿಲ್ಲವೇನೊ, ಮನಿಗಿ ...ದ್ದಂತೆ?" ಎಂದಳು.

ಅದಕ್ಕೆ ಕಾಳಮಾವ ಒಂದಿಷ್ಟು ಗೊಗ್ಗರು ದನಿಯಲ್ಲಿ, "ಊ ಕಂಡ್ರೆ, ಸಳಿ ಜರ ಬಂದಿದ್ದೊ."

"ಆಸುಪತ್ರಿಗೆ ತೋರಿಸಿಗಳಿವಾ?"

"ನಿಮ್ಮತ್ತೆ ಕಸಾಯ ಮಾಡಿಕೊಟ್ಟು. ಅದ್ನೆ ಕುಡದೆ. ಪರವಾಗಿಲ್ಲ."

"ನೀನ್ಯಾವತ್ತೂ ಉಸಾರು ತಪ್ಪಿದೋನೆ ಅಲ್ಲಪ್ಪ."

"ಕಾಳಮಾವ ಯಾಕೆ ಮನಗಿದ್ದ ಗೊತ್ತೇನೆ? ಅವುನು ...ಂಜಣ್ಣನ ಮಗನ ಮದಿವಿಗೋಗಿ, ಬಾಡು ...ಯಾಗ್ಯತೆ ಅಂತ ಸರಿಯಾಗಿ ಉಂಡವ್ಪನೆ. ಅದು ...ಕಬುಟ್ಟದೆ" ಎಂದ ಉಗ್ರಿ.

"ನಾವೂ ಬೇಕಾದಂಗೆ ತಿಂದೊ. ನಮಿಗೇನೂ ...ಇಯಿಲ್ಲ?"

"ನಿನಿಗೂ ಕಾಳಮಾವನಿಗೂ ಒಂದೆಯಾ? ಅವುನಿಗೆ ... ಪದಾರ್ಥ ಹಿಡಿಯದಿಲ್ಲ ಕಣೇ."

"ಇನ್ನ ಮದುವೆ ಊಟಕೆ ಹೋಗದಿಲ್ಲ" ಎಂದ ...ಮಾವ.

"ಅಂಗನ್ನಕ್ಕೆ ಬರದಿಲ್ಲ, ಕಳ್ಳುಬಳ್ಳಿಲಿ ಮದಿವಾದ್ರೆ ...ಗ್ದೆಯಿರಕ್ಕಾದತೇ? ಹೋದ್ರುವೆ ನಿನಿಗೆಷ್ಟು ಬೇಕೊ ತಿಂದು ಬಾ" ಎಂದಳು ಜುಮ್ಮಿ.

"ಬಲವಂತ ಮಾಡಿ ಇಕ್ಕಿಬುಡ್ತರೆ ಕಂಡ್ರೆ. ಅಂಗೆ ...ಟ್ಟು ಬರಕ್ಕಾದತೇ?"

"ಅಂಗಂತ ಇಕ್ಕಿದನ್ನೆಲ್ಲ ಉಂಡ್ರೆ ಮನಿಕಬೇಕಾಯ್ತದೆ ...ಮಾವ."

"ಅಲ್ಲಾ, ಜನ ಕೆಟ್ಟವುರೆ ಅಂದ್ರೆ ಅಂಗಿಗಲ್ಲ ಕಂಡ್ರೆ."

"ಅದಿವತ್ತು ಗೊತ್ತಾಯ್ತೆ ನಿನಿಗೆ?"

"ಇಕ್ಕಿದೂಟನ್ನೆಲ್ಲ ಅಂಗೆ ಯಲೆಮ್ಯಾಲೆ ಬುಟ್ಟು ...ಹೋಯ್ತರಲ್ಲಾ? ಈ ನನ ಮಕ್ಕಳಿಗೆ ಹಿಟ್ಟು ಬ್ಯಲ್ಲವಾಗಿ, ... ಚಿನ್ನವಾಗೊ ದಿನ ದೂರಯಿಲ್ಲ ಕಂಡ್ರ" ಎಂದು ...ಮಾವ ಒಳಗಣ್ಣಾದ. ಆಗ ಜುಮ್ಮಿ,

"ಓಹೊಹೊ, ಕಾಳಮಾವ ಮದಿವಿಗೆ ಬಂದ ಜನ ಅಂತಿಲೇ ಊಟ ಬುಟ್ಟು ಹೋದದ್ದ ನೋಡಿ ಅಂಗಂತಾ ಅವುನೆ" ಎಂದಳು.

"ಅಲ್ಲ ಕಂಡ್ರೆ. ಸೀ ತಾಳದ. ಹೋಗ್ಲಿ ಅನ್ನನೂ ಬುಟ್ಟು ಹೋಯ್ತವಲ್ಲಾ, ಅದ್ಯಾಕಿಕ್ಕಿಸಿಗಬೇಕು. ಸೀಯಾಕಕ್ಕೆ ಬಂದಾಗ ನನಿಗೆ ಸಕ್ಕರೆ ಕಾಯಲ ಅಂತ ಕೈಯೊಡ್ಡಕಾಗ ದಿಲವೆ."

"ಜನಕೆ ಅನ್ನದ ಮ್ಯಾಲೆ ಆಂಕಾರ ಬಂದದೆ ಕಣಮಾವ."

"ಈ ತಿರಕದವುಲತ್ತು ಭಾಳದಿನ ಇರದಿಲ್ಲ ಬುಡು."

"ಕಾಳಮಾವ ಇಕ್ಕಿದನ್ನೆಲ್ಲ ಉಂಡು ಕಾಯ್ಲ ತಂದುಕಂಡು ಏನೇನೊ ಮಾತಾಡ್ತ ಅವುನೆ ಕಣೇ" ಎಂದ ಉಗ್ರಿ.

"ಅಂಗಲ್ಲ ಕಂಡ್ರ, ಮನುಸ ಏನೇನ್ನಲ್ಲ ತಯಾರು ಮಾಡ್ತನೆ. ಬತ್ತ, ರಾಗಿ, ಕಾಳು, ಕಡ್ಡಿ ತಯಾರು ಮಾಡ್ತಿ ನೋಡನ. ಅದು ಭೂಮಿಲೇ ಬ್ಯಳಿಬೇಕಪ್ಪ. ಭೂಮಿಯಿಂದ ಬಂದಿದ್ದು ಮನುಸುನ ವಟ್ಟಿಗೋದ್ರೆ ಅಲ್ಲಿಗೆ ಆ ನಿಯಮ ಸರಿ. ಅದು ಬುಟ್ಟು ಅನ್ನತಗಂಡೋಗಿ ತಿಪ್ಪಿಗಾಕ್ತರಲ್ಲಾ, ಉದ್ದಾರಾದರ್ಲ ಇವುರು" ಎಂದ ಕಾಳಮಾವ.

"ಯಾರಿಗೆ ಯಾರೂ ಬುದ್ಧಿ ಹೇಳೊ ಅಂಗೆ ಇಲ್ಲ ಕಣಮಾವ. ಒಂದು ಸರಕಾರದಲ್ಲಿ ವಿರೋಧ ಪಕ್ಷ ಇರದ್ಯಾಕಪ್ಪ?"

"ಯಾಕೆ ಅಂದ್ರೆ ಅವುರ ಕ್ಯಲಸ ಅವುರು ಮಾಡಕ್ಕೆ."

"ಅವುರ ಕ್ಯಲಸ ಅಂದ್ರೆ, ಆಡಳಿತ ಮಾಡೋರು ಏನೇನು ಮಾಡ್ತರೆ, ಏನೇನು ತಿಂತರೆ ಅನ್ನದ ಪತ್ತೆಹಚ್ಚಿ ಜನ ಕೇಳಬೇಕು. ಅಂತ ಕ್ಯಲಸನೂ ಮಾಡಬಾರ್ದು ಅಂತ ಎಡೂರಪ್ಪ ಅಳತನೆ ಅಂದ್ರೆ ಇನ್ನೇನೇಳನ?" ಎಂದ ಉಗ್ರಿ.

"ಮಹಾಧೀರಾಧಿ ಧೀರನಂಗೆ ಮಾತಾಡ್ತಿದ್ದ. ಈಗಂಗೆ ಯಮ್ಮತ್ತಂಗೆ ಅಳತ ನಂಗೆಯ" ಎಂದು ಸೀರ ಮೂದಲಿಸಿದ.

"ಇನ್ನು ಮುಂದೆ ಅಳದಿಲವಂತೆ ಸುಮ್ಮನಿರು ಚಿಗಪ್ಪ" ಎನ್ನುತ್ತಾ ವಾಟಿಸ್ಸೆ ಬಂದ.

"ಅಳದ್ಯಾಕೆ? ಇನ್ನುಮ್ಯಾಲೆ ಅಳದಿಲ್ಲ ಅನ್ನದ್ಯಾಕೆ ಅಂತ?" ಎಂದಳು ಜುಮ್ಮಿ.

"ಸಿಚುಯೇಶನ್ನು ಅಂಗಿರತವೆ ಕಣಕ್ಕ. ಎಡೂರಪ್ಪನ ವೈರಿಗಳಿಗೆ ತಂದೆ ತಾಯಿ ಯಲ್ಲಾ ಅವುರೆ. ಆದ್ರೆ ಎಡೂರಪ್ಪ ಮಾತ್ರ ತಬ್ಬಲಿ. ತಬ್ಬಲಿಯಾದೋನು ಆಗಾಗ್ಗೆ ಅಳೊತರ ಎಡೂರಪ್ಪನೂ ಅತ್ತವುನೆ. ಅದೇ ಅವುನ ವೈರಿಗಳಾದ ಗಾಲಿ ರೆಡ್ಡಿಗಳು ಅವುರಪ್ಪ ಸುಸ್ಮವ್ವನ ಜ್ವತೆ ಕುತಗಂಡು ನಗ್ತರೆ. ಇದಕೇನೇಳ್ತೀ?"

"ಎಡೂರಪ್ಪನೂ ಅವುರು ಒಂದಾಗ್ಯವುರಲ್ಲ ಈಗ್ಯಂತ ವೈರಿಗಳೊ?"

"ಮಿಸ್ಟರ್ ಉಗ್ರಿ, ಮೇಲುನೋಟಕೆ ಅವುರಂಗವುರೆ ಅಂತ ತಿಳಕಬ್ಯಾಡ. ಆ ರೆಡ್ಡಿಗಳ ನೋಡಿದೇಟಿಗೆ ಎಡೂರಪ್ಪನಿಗೆ ಈ ಮುಂಡೆ ಮಕ್ಕಳಿಂದ ನನ್ನ ಮರಿಯಾದಿ ಹಾಳಾಯ್ತು, ವಳ್ಳೆ ಆಡಳಿತ ಕೊಡಕ್ಯಾಗದಿಲ್ಲ ಅಂತ ಅನ್ನಕತ್ತನಲವೆ" ಎಂದ ವಾಟಿಸೆ.

"ನಿಜ. ರೆಡ್ಡಿಗಳು ಇನ್ನೊಂತರ ಅನ್ನಕತ್ತರೆ. ಅದೂ ಅಲ್ದೆ ಎಡೂರಪ್ಪ ಏನ್ನೂ ಮಾಡಕ್ಯಾಗದಂಗೆ ಇಟ್ಟದ್ದಿವಿ ಅಂತ ನಗತರೆ. ಅದ ನೋಡಿ ಸಯಿಸಕ್ಯಾಗದೆ ಅತ್ತಿರಬೇಕು."

"ಅಳೋ ಗಂಡುಸ್ನುವೆ, ನಗೋ ಹೆಂಗಸ್ನೂ ನಂಬಬಾರ್ದು ಅಂತ ಯಾರೊ ಮುರ್ಖನನ್ನ ಮಕ್ಕಳು ಗಾದೆನೆ ತಿರುಗಮುರುಗ ಮಾಡಿ ಬುಟ್ಟವುರೆ. ಅದಂಗಲ್ಲ, ಮಾಭಾರತದ ಕಾಲದಲ್ಲಿ ಕೃಷ್ಣ ಯಾವಾಗ್ಲು ನಗತಿದ್ದ, ಅದೇ ದ್ರೌಪದಿ ಯಾವಾಗ್ಲು ತಲೆ ತೋರಿಸಿಗಂಡು ಅಳತಿದ್ಲು, ಅವುರಿಬ್ಬರಿಂದ ಕುರುಕ್ಷೇತ್ರವೇ ನ್ಯಡದು ಕುರುವಂಶ ನಾಶವಾಗೋಯ್ತು, ಆಗ್ಲಿಂದ ನಗೋ ಗಂಡ್ಸ, ಅಳೋ ಹೆಂಗ್ಸ ನಂಬಬಾರ್ದು ಅನ್ನೋ ಮಾತು ಚಾಲ್ತಿಗೆ ಬತ್ತು. ಇವು ಯಾರೊ ಪೂಲಿಷ್ ಫೆಲೊಗಳು ಯಡೂರಪ್ಪನಿಗೋಸ್ಕರ ಆ ಗಾದೆ ಮಾತ್ನೆ ತಿರುಗ ಮುರುಗ ಮಾಡಿ ಮಡಿಗ್ಯವೆ" ಎಂದ ವಾಟಿಸ್ಸೆ.



"ನಿಜವಾಗ್ಲು ಅವುನು ಅತ್ತಿರದು ಲೋಕಾಯುಕ್ತ ಸಂತೋಷ್ ಹೆಗ್ಡೆಗಲವೇನೊ ವಾಟಿಸ್ಸೆ?"

"ನನಿಗೇನು ಅಂಗನ್ನುಸ್ತಾಯಿಲವಪ್ಪ, ಯಾಕಂದ್ರೆ ಎಡೂರಪ್ಪ ಬಾಯಿಬುಟ್ರೆ ಸುಳ್ಳಪ್ಪ. ಇವುನು ಅತ್ತಗಂಡು ಆಡಳಿತ ಮಾಡದ್ಯಾಕೆ ಅಂತ."

"ಅದು ಸರಿ, ಆಗೊಂದು ಸತಿಯಾ ಶೋಭಾ ಕರಂದ್ಲಾಜೆ, ಮನು ಬಳಿಗಾರ್ ಇಟ್ಟಗಳಕ್ಯಾಗಲಿಲ್ಲವಲ್ಲಾ ಅಂತ ಅತ್ತಿದ್ದ. ಅದ ನೋಡಿ ಲ್ಯಕ್ಕ ಹಾಕದಾದ್ರೆ ಈ ಗಣಿಗಾರಿಕೆ ನನಮಕ್ಕಳ ಜಾತಕ ಬರೀತ ಕುಂತಿದ್ದ ಹೆಗಡೆಯ ಏನೂ ಮಾಡಿದ್ರೂ ಉಳಿಸಿಗಳಕ್ಯಾಗಲಿಲ್ಲ, ಉಳಿಸಿಗಂಡ್ರೆ ನಾನು ಉಳಿಯಂಗಿಲ್ಲ, ತಗದಾಕಿಯಾ ಇದೀ ಕರ್ನಾಟಕದ ಜನ ಉಗಿತರೆ ಅಂತ ನ್ಯನಿಸಿಗಂಡೇಟಿಗೆ ಅಳುಬಂದುಬುಟ್ಟದೆ, ಅದ್ಕೆ ಯಮ್ಮತ್ತಂಗೆ ಅತ್ತವುನೆ."

"ಸಂತೋಸ್ ಯಗಡೆ ಅಂದ್ಯಾರೂ? ಎಂದ ಕಾಳಮಾವ.

"ಅವುನು ನ್ಯಾಯಾದೀಶ ದ್ವಡಪ್ಪ, ಆಗೊಂದು ಸತಿ ಯಲಕ್ಷನ್ನಲಿ ಕ್ಯಂಗಲ್ ಹನುಮಂತಯ್ಯನ್ನ ಸೋಲಿಸಿದ್ನಲ್ಲ ಕೆ.ಎಸ್. ಹೆಗಡೆ ಅಂತ ಅವುನ ಮಗ ಇವುನು. ಅವುನ್ನ ತಂದು ಲೋಕಾಯುಕ್ತನ್ನ ಮಾಡಿದ್ರು."

"ಲೋಕಾಯುಕ್ತ ಅಂದ್ರೇನೂ?"

"ಓ ನಮ್ಮ ದೊಡ್ಡಪ್ಪನಿಗೆ ಈಗ ಡೀಟೈಲಾಗೇಳಬೇಕು. ಈ ಕರ್ನಾಟಕವ ಅಧಿಕಾರಿಗಳು ರಾಜಕಾರಣಿಗಳು ತಿಂದಾಕ್ತ ಅವುರೆ. ಸರಕಾರ ಯೋಜನೆಗಳ ಮಾಡಿದ್ರೆ, ಈ ರಾಜಕಾರಣಿಗಳು, ಅಧಿಕಾರಿಗಳು ಸೇರಿಕಂಡು ಬಿಲ್ ತಯಾರಿಸಿ ದುಡ್ಡನ್ನೆಲ್ಲ ತಗಂಡೋಗಿ ಮನೆ ಕಟ್ಟಿಸಿಗಂಡು ಆಸ್ತಿ ಹಿಡಿತ ಕುಂತವುರೆ. ಅಂಥೋರ ಆಸ್ತಿನ್ನೆಲ್ಲ ಮುಟ್ಟುಗೋಲಾಯ್ಕಂಡು ತನಿಖೆ ಮಾಡೋದು ಈ ಲೋಕಾಯುಕ್ತನ ಕ್ಯಲಸ."

"ವಳ್ಳೆ ಕ್ಯಲಸ ಬುಡಂಗರೆ."

"ವಳ್ಳೆ ಕ್ಯಲಸ ಸರಿ ದ್ವಡಪ್ಪ ಆದ್ರೆ ಅವುನಿಗೆ ಪವರ್ನೇ ಕೊಟ್ಟಿರಲಿಲ್ಲ. ಹಿಡಿಯದು ಬುಡುದು, ಹಿಡಿಯದು ಬುಡದು, ಅಂಗೆ ಮಾಡಿಕಂಡು ಬತ್ತಿದ್ದ ಆದ್ರು ಬೇಜಾರಾಗದಂಗೆ ಹಿಡಿತಾ ಗಣಿಕಳ್ಳನ್ನ ಹಿಡಿದಿದ್ದ. ಆ ಗಣಿಕಳ್ರು ಸದರವಾದಿ ಕಳ್ರು. ಅವುರು ಸಂತೋಷ್ ಹ್ಯಗಡೆನೆ ರಾಜಿನಾಮೆ ಕೊಟ್ಟು ಮನಿಗೋಗೋ ಅಂತ ಪರಿಸ್ಥಿತಿ ತಂದು ಮಡಗಿದ್ರು."

"ಅಗೊಳೊ, ಇನ್ಯಂಥಾ ಕಳ್ರಿದ್ದರ್ಲಾ ಅವ್ವುರು."

"ನ್ಯಲ ಬಗದು ಮಾರೊ ಕಳ್ರು ದ್ವಡಪ್ಪಾ, ಅವುರಿಂದ ಆಯ್ತಾಯಿರೊ ಅನಾಹುತ ಒಂದ್ಯರಡಲ್ಲ, ಕಡಿಗೆ ಎಡೂರಪ್ಪನಿಗೆ ಒಂದು ಅಗ್ನಿ ಪರೀಕ್ಷೆ ಎದುರಾಯ್ತು, ಏನಪ್ಪಾ ಅಂದ್ರೆ, ಸಂತೋಷ್ ಹೆಗಡೆ, ಗಾಲಿ ರೆಡ್ಡಿಗಳ ಪೈಕಿ ಯಾರ ಕಡೆ ಇರಬೇಕು ತಾನು ಅನ್ನದು. ಆಗ ಎಡೂರಪ್ಪ ಗಾಲಿ ರೆಡ್ಡಿ ಆರಿಸಿಗಂಡ."

"ಅಂಗರೀಗ ಯಗಡೆ ಮನಿಗೋದ ಅನ್ನು."

"ಇಲ್ಲ ದ್ವಡಪ್ಪ, ಅದ್ವಾನಿ ನೀನು ರಾಜೀನಾಮೆ ಕೊಡಬ್ಯಾಡ ನಾನಿದ್ದೀನಿ ಅಂದನಂತೆ. ಅವತ್ತಿಂದ ಎಡೂರಪ್ಪನ ಮುಖ ನೋಡಕ್ಯಾಗದಿಲ್ಲ, ಅದ್ಕೆಯಾ ಹೋದ ಮರಿಯಾದಿ ಉಳಿಸಿಗಳಕ್ಕೆ ರೈತರಿಗ್ಯಲ್ಲ ರಾಸು ಕೊಡ್ತಿನಿ; ಅಕ್ರಮದ ಪಂಪಸೆಟ್ಟ ಸಕ್ರಮ ಮಾಡ್ತಿನಿ ಅಂದವುನೆ."

"ಮದ್ಲು ಸರಿಯಾಗಿ ಕರಂಟು ಕೊಡಕ್ಯೇಳ್ರ." ●

ಅಭಿಪ್ರಾಯ ಕೇಳಿದಾಗ

ಹೊಸದಾಗಿ ಪರಿಚಿತಳಾದ ಸಾಹಿತಿ ತನ್ನ ಪುಸ್ತಕ ಕೊಟ್ಟು ಹೋದಳು. ನಾನು ಕುತೂಹಲದಿಂದ ಆ ಪುಸ್ತಕದ ಕತೆಗಳಲ್ಲಿ ಕೆಲವನ್ನು ಓದಿದೆ. ಮೊದಲ ಕತೆಯಲ್ಲಿ ಒಬ್ಬಳು ಹುಡುಗಿ ಮದುವೆಯಾಗುವುದಿಲ್ಲ ಎಂದು ಹಟ ಮಾಡುತ್ತಾಳೆ. ಹೆತ್ತವರು ಒತ್ತಾಯ ಮಾಡಿ ವಿದೇಶದಲ್ಲಿರುವ ಚೆಂದದ ಹುಡುಗನೊಬ್ಬನಿಗೆ ಮದುವೆ ಮಾಡಿಕೊಡುತ್ತಾರೆ. ಅವನು ಮತ್ತೆ ವಿದೇಶಕ್ಕೆ ಹೋಗುವ ಮುನ್ನ ಈ ಹುಡುಗಿ ಅವನನ್ನು ತೀವ್ರವಾಗಿ ಪ್ರೀತಿಸತೊಡಗಿ ತನ್ನ ದೌರ್ಬಲ್ಯ ನೋಡಿಕೊಂಡು ಸೋಜಿಗಪಡುತ್ತಾಳೆ. ಅಂಟಿಕೊಂಡವಳು ಬಿಡುವುದಿಲ್ಲ, ಆತ ತನ್ನ ಕಾರು ಇಲ್ಲೇ ಬಿಟ್ಟುಹೋಗುತ್ತಾನೆ. ಹೋದ ಕೆಲವೇ ದಿನದಲ್ಲಿ ಸಾಯುತ್ತಾನೆ. ಆಮೇಲೆ ಹುಡುಗಿ ಸತ್ತ ಗಂಡನ ನೆನಪಿನಲ್ಲೇ ಇರುತ್ತಾ ಸರಳಜೀವನ ನಡೆಸತೊಡಗುತ್ತಾಳೆ; ಗಂಡನ ಕಾರಿನಲ್ಲಿ ಹೋಗಿ ಕಾಲೇಜೊಂದರಲ್ಲಿ ಪಾಠ ಮಾಡುತ್ತಾಳೆ. ದಿನಗಳೆದಂತೆ ದುಃಖ ಮಾಸುತ್ತದೆ; ಸಹೋದ್ಯೋಗಿಯೊಬ್ಬನನ್ನು ಇಷ್ಟಪಡುತ್ತಾಳೆ. ಆದರೆ ಈ ಸಂಬಂಧವನ್ನು ಆಕೆಯ ಅಣ್ಣ ಇಷ್ಟಪಡುವುದಿಲ್ಲ.

ಇದೆಲ್ಲ ತ್ರಿವೇಣಿ, ಅನುಪಮಾ ಮುಂತಾದವರಲ್ಲಿ ಬಂದು ಆಗಿದೆ. 'ಸೋತು ಗೆದ್ದವಳು' ಕಾದಂಬರಿಯಲ್ಲಿ ತ್ರಿವೇಣಿ ಈ ತರಹದ ಭಾವನೆಯನ್ನು ಶೋಧಿಸಿ ನೋಡಿದ್ದಾರೆ.

'ಹೇಗಿದೆ ಕತೆ?' ಅಂದಳು ಸಾಹಿತಿ.

'ಪರವಾಗಿಲ್ಲ, ಆದರೆ ಈ ತರಹದ್ದು ಕನ್ನಡದಲ್ಲಿ ಬಂದಿದೆ ಎಂದು ಹೇಳಿ ನಿಮ್ಮನ್ನು ನಿರುತ್ಸಾಹಗೊಳಿಸುವುದಿಲ್ಲ, ಬಂದಿದ್ದರೂ ಮತ್ತೆ ಬರೆಯಬಹುದು. ಹೊಸ ಅನುಭವವಿದ್ದರೆ ಎಲ್ಲ ಸರಿಹೋಗುತ್ತದೆ' ಎಂದು ಹಾರಿಕೆ ಉತ್ತರ ಕೊಟ್ಟೆ.

'ನನ್ನ ಕತೆಯಲ್ಲಿ ಹೊಸ ಅನುಭವ ಇಲ್ಲವಾ?'

'ಹಾಗಲ್ಲ ಮಹಾರಾಯಿತಿ. ಗಂಡ ಇದ್ದೂ ಇನ್ನೊಬ್ಬನನ್ನು ಪ್ರೀತಿಸಿದ್ದನ್ನು ಟಾಲ್‌ಸ್ಟಾಯ್ ಬರೆದಿದ್ದಾನೆ. ಗಂಡ ಮತ್ತು ಪ್ರೇಮಿ ಇದ್ದೂ ಚೆನ್ನಮಲ್ಲಿಕಾರ್ಜುನನನ್ನು ಪ್ರೀತಿಸುವವರೂ ಇರಬಹುದು. ಇವುಗಳಲ್ಲಿ ಯಾವುದು ನಿನ್ನ ಮನಸ್ಸು ಸೇರಿ ನಿನ್ನ ಅನುಭವವಾಗಿ ರೂಪಗೊಳ್ಳುತ್ತೆ ಅನ್ನೋದು ಮುಖ್ಯ. ನಿನ್ನ ಕತೆಯಲ್ಲಿ ಹಾಗಾಗೋಲ್ಲ, ಜಾಗ್ರತೆ ಕಮ್ಮಿ. ಆದ್ದರಿಂದ ಹೇಳಿದ್ದೆಲ್ಲ ಸ್ವಲ್ಪ ಸುಳ್ಳಾಗುತ್ತೆ. ನೀನು ಒಳ್ಳೊಳ್ಳೆ ಕತೆಗಳೆಂದು ಯಾವ ಕತೆಗಳ ಬಗ್ಗೆ ಪ್ರಮಿಸಿದ್ದೀಯೋ ಅವು ನನಗೆ ಇಷ್ಟವಾಗಿಲ್ಲ, ಆದರೆ ನೀನು ಅಷ್ಟೇನೂ ದೊಡ್ಡ ಉದ್ದೇಶವಿಲ್ಲದೆ ಬರೆದ ಒಂದು ಕತೆ ಚೆನ್ನಾಗಿದೆ–ಇಲ್ಲಿ ಹುಡುಗಿ ತುಂಬ ಒಳ್ಳೆಯವಳು, ಸಣ್ಣ ಆಶೆಯವಳು. ಇದ್ದ ಒಬ್ಬ ಗೆಳೆಯ ಮದುವೆಯ ವಿಷಯ ಮಾತಾಡೋದೇ ಇಲ್ಲ, 'ನನ್ನ ಮದುವೆಯಾಗ್ತೀಯಾ' ಎಂದು ಕೇಳಲು ಹುಡುಗಿಗೆ ಸಂಕೋಚ. ಅವನು ತುಂಬ ಒಳ್ಳೆಯವನು. ತಮಾಷೆಯವನು, ಬುದ್ಧಿವಂತ. ವಿಚಿತ್ರ ಸ್ವಭಾವದ ಹುಡುಗ. ಒಂದು ದಿನ ಬಂದು ತನಗೆ ಮದುವೆ ಗೊತ್ತಾಗಿದೆಯೆಂದು ಹೇಳಿ 'ನೀನು ನಿಶ್ಚಿತಾರ್ಥಕ್ಕೆ ಬರಲೇಬೇಕು' ಎಂದು ಹೇಳುತ್ತಾನೆ. ತಬ್ಬಿಬ್ಬಾದ ಹುಡುಗಿ ಸಂನ್ಯಾಸಿನಿಯಾಗಲು ಯೋಚಿಸಿ, ಏನೇನೋ ಚಿಂತಿಸಿ ಕೊನೆಗೆ ಅಮ್ಮನಿಗೆ ಒಂದು ಗಂಡು ನೋಡಲು ಸೂಚಿಸುತ್ತಾಳೆ. ಅದು ಒಳ್ಳೆಯ ಕತೆ."

ಅಷ್ಟರಲ್ಲಿ ಈ ಕತೆಗಾರ್ತಿ ತುಂಬ ಮಾತಾಡತೊಡಗಿದ್ದಳು. ಗಂಡ ಅವಳ ಮಾತು ಕೇಳಿ ನಾನೇನು ಅಂದುಕೊಳ್ಳುತ್ತೇನೋ ಎಂದು ಭಯಗೊಂಡಿದ್ದ. ಎಕ್ಸ್‌ಪ್ರೆಸ್ ಸಂಭಾಷಣೆಯ ನಡುವೆ ಆಕೆ ಹೇಳಿದಳು: "ನಾನು ಈ ಪುಸ್ತಕದ ಬಿಡುಗಡೆ ದಿವಸ ಏನು ಭಾಷಣ ಮಾಡಿದೆ ಗೊತ್ತಾ?"

"ಏನು?"

"ಆಧುನಿಕ ಸಾಹಿತಿಯಾದ ನಾನು ಗಂಡನಲ್ಲದವನೊಂದಿಗೆ ಸ್ನೇಹಿತರಾಗಿರುವುದು ತಪ್ಪ? ಪರಪುರುಷನನ್ನು ಸಾಹಿತ್ಯದ ಗುರುವಾಗಿ ಒಪ್ಪಿಕೊಳ್ಳುವುದು ತಪ್ಪ? ನನ್ನ ಗಂಡ ಸಭೆಯಲ್ಲಿ ಇದ್ದಾರೆ, ಅವರೇ ಹೇಳಲಿ. ಅದರಲ್ಲಿ ತಪ್ಪೇನಿದೆ? ನಾನು ಹೇಳಿದ್ದು ಸರಿಯಿಲ್ಲವಾ?"

ನಾನು ಸುಮ್ಮನಿದ್ದೆ. ಆಮೇಲೆ ಹೇಳಿದೆ, "ತಪ್ಪಲ್ಲ ಅನ್ನುತ್ತೆ. ಇಂಥ ವಿಚಾರದಲ್ಲಿ ನನ್ನಲ್ಲಿ ಅಭಿಪ್ರಾಯವಿಲ್ಲ, ಈಚೆಗೆ ನಾನು ಮೌನದಲ್ಲಿ ಮುಳುಗುತ್ತಿದ್ದೇನೆ. ಆದ್ದರಿಂದ ಮಾತು ತುಂಬ crude ಅನ್ನುತ್ತೆ. ನಿನ್ನ ಅಭಿಪ್ರಾಯ ಸರಿ. ಇನ್ನೊಬ್ಬ ಗಂಡಸನ್ನು ಸ್ನೇಹಿತನನ್ನಾಗಿ ಪರಿಗಣಿಸುವುದು ತಪ್ಪಲ್ಲ, ಆದರೆ ವೇದಿಕೆಯಿಂದ ಅದನ್ನು ಹೇಳಿಕೊಂಡು ಹೆಮ್ಮೆಪಡುವುದು ತಪ್ಪು. ಹಾಗೆ ಹೇಳಿಕೊಳ್ಳುವವರಿಗೆ ಸಂಬಂಧಗಳ ಮೌಲ್ಯ, ದಾಕ್ಷಿಣ್ಯಗಳು ಗೊತ್ತಿರುವುದಿಲ್ಲ. ಒಮ್ಮೆ ಪಾತಿವ್ರತ್ಯವನ್ನೇ ನಂಬಿ ಅದನ್ನೇ ಸುಖವನ್ನಾಗಿ, ಆರೋಗ್ಯದ ಮೂಲವನ್ನಾಗಿ ಮಾಡಿಕೊಂಡವರು ಇದ್ದರಂತೆ. ಅಂಥವರು ಇರಲೇ ಇಲ್ಲ ಎಂದು ವಾದಿಸುವುದು ಸಿನಿಕತನ. ಅಂಥವರೊಬ್ಬರಿಗೆ ಪರಪುರುಷರ ಬಗ್ಗೆ ಪ್ರೀತಿ ಬಂದದ್ದೂ ಇಲ್ಲವೇ ಇಲ್ಲ ಎಂದು ಹೇಳಲಾಗುವುದಿಲ್ಲ. ಈ ಪ್ರೀತಿಯ ಜೀವಂತಿಕೆ ಮತ್ತು ಮರ್ಜಿ ವಿಚಿತ್ರವಾದದ್ದು. ಹಾಗೆಯೇ ತನ್ನ ಸಕಲ ಆರೋಗ್ಯ ಕಾಪಾಡಿಕೊಳ್ಳಲು ಮೊತ್ತಮೊದಲ ಬಾರಿಗೆ ವೇಶ್ಯೆಯ ಕೈ ಹಿಡಿದವನು. ಇವೆಲ್ಲ ಅನಿವಾರ್ಯವೂ ಸೂಕ್ಷ್ಮವೂ ಆದ ಪ್ರಸಂಗಗಳು. ಅವುಗಳನ್ನು ವೇದಿಕೆಯಿಂದ ಘೋಷಿಸುವುದು ಅಷ್ಟು ಸರಿಯಲ್ಲ. ನಾನು ಈಗ ಇದನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದು ಸೂಚಿಸುತ್ತೇನೆ, ಕೇಳು. ನಿನ್ನ ಕತೆಗಳಲ್ಲಿ ಬರೆಯುವ ಉತ್ಸಾಹವಿದೆ, ವೇದಿಕೆಯಿಂದ ಹೇಳುವ ಆಶೆ ಇದೆ–ನಾನು ಸೂಚಿಸುತ್ತಿರುವ ದಾಕ್ಷಿಣ್ಯಗಳು ಕಡಿಮೆ.



"ಏನಾದ್ರೂ advice ಕೊಡಿ" ಅಂದರು ಗಂಡಹೆಂಡತಿ.

"ಯಾರೂ ಹಿತವಚನ ತಗೊಳ್ಳಲ್ಲ, ಅದಕ್ಕೇ ಬೇಡ."

ಅವರು ನಕ್ಕರು. ಕೊನೆಯಲ್ಲಿ ಹೇಳಿದೆ: "ಇವತ್ತು ನಿನ್ನನ್ನು ಕ್ಷಣ ಸುಮ್ಮನಾಗಿಸಿ ನಾನೇ ಮಾತಾಡಿದ್ದೇನೆ. ನಿನ್ನ ಸ್ನೇಹಿತರನ್ನು ನಿನ್ನ ಬಗ್ಗೆ ಕೇಳಿದ್ದೇನೆ. ತುಂಬ ಮಾತಾಡ್ತೀ, ಎಲ್ಲದನ್ನೂ ಘೋಷಿಸ್ತೀ ಅಂತ ಹೇಳಿದರು. ಆದ್ದರಿಂದ ನಿನಗೆ ಬೇಕಿದ್ದರೆ ಒಂದು ಹಿತವಚನ ಕೊಡಬಹುದು."

"ಏನದು?"

"ಒಂದು ಹದಿನೈದು ದಿನ ಮಾತಾಡಬೇಡ."


ದೊಡ್ಡದಾಗಿ ನಕ್ಕಳು. ಗಂಡ, "ಸರಿಯಾಗಿ ಹೇಳಿದ್ರಿ. ಅವರ ಮಾತನ್ನಾದ್ರೂ ಕೇಳೆ" ಅಂದರು. ಆಕೆ ನಗುತ್ತಲೇ ಇದ್ದಾಗ ಹೇಳಿದೆ "ಹದಿನೈದು ದಿನ ಸುಮ್ಮನಿದ್ದು ಯೋಚಿಸು–ಬೇಕಾದ್ರೆ ಪರಪುರುಷರ ಬಗ್ಗೆ" ಅಂದೆ.


'ಛೈ' ಅಂದೆ. ಬೈದುಕೊಂಡಿರಬೇಕು.

–ನವೆಂಬರ್ 10,1983

ಕೃಷ್ಣದೇವರಾಯನ ಒಡವೆ ಗೋವಿಂದೋ ಗೋವಿಂದ

ಫ್ಯಾಷನ್ ಅನ್ನೋದು ಒಂದು ತರಹ ಊಸುರುವಳ್ಳಿ ಜಾತೀದು. ಬದಲಾವಣೆ ಆಗ್ತಾನೆ ಇರ್ತದೆ. ಹಿಂದೆಲ್ಲ ಟೈಟ್ ಪ್ಯಾಂಟು ಅಂತ ಇತ್ತು, ಅದನ್ನ ಮೂಲಂಗಿ ಪ್ಯಾಂಟು ಅಂತಾನೂ ಇದ್ರು. ಸ್ಕಿನ್ ಟೈಟ್ ಪ್ಯಾಂಟು ಅಂತಾನೂ ಕರೀತಿದ್ರು. ಇದು ಹೆಂಗಿರ್ತಿತ್ತಪ್ಪ ಅಂದರೆ.... ಚಿತ್ರ ಕಲಾವಿದರಿಗೆ ನಗ್ನತೆ ಅಂದರೆ ಬಲು ಇಷ್ಟ ಅಂತೆ. ಅದನ್ನ ಚಿತ್ರಿಸಲೇ ಬಯಸುತ್ತಾರಂತೆ. ಆದರಲ್ಲಿ ಅವರು ನಗ್ನತೆಯನ್ನು ಕಾಣಿಸುವುದೇ ಇಲ್ಲವಂತೆ. ಅಶ್ಲೀಲ ಅನ್ನಿಸುವುದೇ ಇಲ್ಲವಂತೆ. ನೋಡುವವರ ಕಣ್ಣುಗಳೆಲ್ಲ ಕಲಾವಿದರ ಕಣ್ಣುಗಳೇ ಅಲ್ವಲ್ಲ... ಮಡಿವಂತ ಕಣ್ಣುಗಳೂ





▸ ಎಚ್.ಎಲ್. ಕೇಶವಮೂರ್ತಿ

ಇರುತ್ತವಲ್ಲಾ.... ಇಂತಹ ಕಣ್ಣುಗಳಿಗೆ ಅಲ್ಲಿ ಅಶ್ಲೀಲತೆ ಗೋಚರಿಸುತ್ತಂತೆ. ಬಟ್ಟೆ ಇರೋದು ಅಲಂಕಾರಕ್ಕೆ ಮಾತ್ರ, ನಿಜವಾದ ವ್ಯಕ್ತಿತ್ವ ಇರೋದು ದೇಹದಲ್ಲಿ ಅಂದ್ರೂ ಅವರು ಕೇಳಲ್ಲವಂತೆ. ಥೂ ಅಸಹ್ಯ ಅಂತ ಮೂಗು ಮುರಿಯುತ್ತಾರಂತೆ. ಅಂತಹವರನ್ನ ತೃಪ್ತಿಪಡಿಸೋಕೆ ಕಲಾವಿದರು ಏನು ಮಾಡ್ತಾವೆ ಅಂದರೆ ನಗ್ನ ಚಿತ್ರಾನೇ ರಚಿಸಿದ್ರೂ ಚಿತ್ರದಲ್ಲಿರುವ ನಗ್ನ ಸುಂದರಿಯ ಎರಡು ತೋಳುಗಳ ಮೇಲೂ ಒಂದೊಂದು ಅಡ್ಡಗೆರೆ, ಎದೆ ಮೇಲೆ ಅಡ್ಡಲಾಗಿ ಒಂದು ಗೆರೆ ಎಳೆದು ಮರ್ಯಾದಸ್ಥ ಹೆಣ್ಣುಮಗಳು ಎಂಬ ಭ್ರಮೆ ಮೂಡಿಸುತ್ತಾರಂತೆ! ಹಂಗಿರ್ತಿತ್ತು ಈ ಟೈಟ್ ಪ್ಯಾಂಟು ಅನ್ನೋದು. ಮುಚ್ಚಬೇಕಾದ ದೇಹದ ಭಾಗವನ್ನ ಎತ್ತಿ ತೋರಿಸುತ್ತಿತ್ತು, ಇದನ್ನ ತೊಟ್ಟವರು ಬೇಸಿಗೆ ಕಾಲದಲ್ಲಂತೂ ಪಡಬಾರದ ಪಾಡು ಪಡ್ತಿದ್ರು. ಆದ್ರೂ ಫ್ಯಾಷನ್ ಅಲ್ವಾ.... ಆದರ ಮೆರೆದಾಟ ಎಲ್ಲೆಲ್ಲೂ ಇರ್ತಿತ್ತು, ಇರಬಾರದು ಎಂದು ಯಾರಿಗೋ ಅನ್ನಿಸಿರಬೇಕು. ದೊಗಳೆ ಪ್ಯಾಂಟು ಹೊಲಿಸಿಕೊಂಡಿರಬೇಕು. ಇದು ಒಂದು ತರದಲ್ಲಿ ಮಂಡ್ಯ ಪೇಟೆಂಟ್ ಉದ್ದಾನೆ ಚಡ್ಡಿಯಂಗಿರ್ತಿತ್ತು. ಇದರ ಜೊತೆಗೆ ಸ್ಟೋನ್‌ವೇರ್ ಪ್ಯಾಂಟು ಬಾಟಮ್‌ಲೆಸ್ ಪ್ಯಾಂಟು ಅಂತ ಯಾವುಯಾವುದೋ ನಮೂನೆ ಪ್ಯಾಂಟುಗಳೆಲ್ಲ ಬಂದ್ರೂ. ಪಡ್ಡೆ ಹೈಕಳು ತಮ್ಮ ಉಡುಪುಗಳನ್ನ ಇದಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳೋದು ಅನಿವಾರ್ಯವೇ ಆಗಿತ್ತು, ತಪ್ಪಿದಲ್ಲಿ 'ಗಾಂಧಿ' ಎಂಬ ಮೂದಲಿಕೆಗೆ ಗುರಿಯಾಗಬೇಕಾಗಿತ್ತು!

ಹುಡುಗರ ಪಾಡೇ ಈ ಪರಿಯಾದರೆ ಇನ್ನು ಹೆಣ್ಣುಮಕ್ಕಳ ಪರದಾಟವೇನಂತ ಹೇಳೋಣ. ಸೀರೆ ಒಂದನ್ನೇ ತಗಂಡ್ರೂ ಅದನ್ನ ಉಡೋ ರೀತಿ ತರಹೇವಾರಿ. ಕೂರ್ಗಿ ಸ್ಟೈಲು, ಮಾರವಾಡಿ ಸ್ಟೈಲು, ಬಂಗಾಳಿ ಸ್ಟೈಲು, ನಾರ್ತ್ ಇಂಡಿಯನ್ ಸ್ಟೈಲು ಹೀಗೆ ನೂರಾರು ಇರ್ತವೆ. ಸೀರೆ ಹೋಗಿ ಸಲ್ವಾರ್ ಕಮೀಜ್ ಜಮಾನ ಬರ್ತಿದೆ. ಮೇಲೊಂದು ದುಪ್ಪಟ ಅಂತ ಇರ್ತದೆ. ಈ ದುಪ್ಪಟ ಅನ್ನೋದು ಎದೆ ಮುಚ್ಚುವುದಕ್ಕಿಂತ ಕೊರಳಿನ ಅಲಂಕಾರ ವಸ್ತ್ರ ಆಗಿರುವುದೇ ಹೆಚ್ಚು ಇನ್ನು ನೈಟಿ. ಯಾವ ಪುಣ್ಯಾತ್ಮ ಅದನ್ನ ನೈಟಿ ಅಂತ ಕರೆದ್ನೋ ಕಾಣೆ. ಇದು ಸರ್ವಋತು ಬಂದರಿನ ತರಹ ಸರ್ವ ಕಾಲದ ಉಡುಪು. ಒಂದು ರೀತೀಲಿ **ATM** ಇದ್ದಂಗೆ. ಇದು **ATD (All Time Dress)**. ಫ್ಯಾಷನ್ ಪ್ರಿಯರಿಗೆ ಇವೆಲ್ಲ **old model** ಗಳಾಗಿ ಕಾಣಹುದು, ಥ್ರಾಷ್ ಅಂತ ಉಗಿದು ಹೊರಗೆಸೆಯಬಹುದು. ಇಂಥೋರು ಜೀನ್ಸ್ ಪ್ಯಾಂಟಿನ ಮೊರೆಹೋಗ್ತಾರೆ. (ಸಮಾನತೆಯ ಸಂಕೇತವಾಗಿಯೂ ಇರಬಹುದೇನೋ!) ಇಲ್ಲ ಸ್ಕರ್ಟ್ ಹಾಕ್ತಾರೆ. ಈ ಸ್ಕರ್ಟ್ ಅನ್ನೋದು ಲಾಂಗ್‌ನಿಂದ ಹಿಡಿದು ಮಿನಿ, ಮಿನಿಮಿನಿವರೆಗೂ ಏರಿಳಿತ ಕಾಣಬಹುದು. ಒಟ್ಟಿನಲ್ಲಿ ಕಡಿಮೆ ತೊಡುಗೆ ಹೆಚ್ಚು ಪ್ರದರ್ಶನ ಫ್ಯಾಷನ್ ಆದಂತಿದೆ.

ಉಡುವ ಬಟ್ಟೆ ಬಿಟ್ಟು ತೊಡುವ ಒಡವೆ ಕಡೆಗೆ ಬಂದರೆ... ಪುರುಷರು ಕಿವಿಗೆ 'ಓಲೆ' ಅಥವಾ 'ಮುರುವು' ಹಾಕಿಕೊಳ್ಳುತ್ತಿದ್ದರು. ದಘೂತಿ ಕುಳ ಆದ್ರೆ ಕೈಗೆ ಕಪ್ಪ ತೊಡುತ್ತಿದ್ದರು. ಈಗ ಎರಡು ಕಿವಿಗಿರುತ್ತಿದ್ದ ಓಲೆ ಒಂದು ಕಿವಿಗೆ ಬಂದುಕೂತದೆ. ಕಪ್ಪದ ಜಾಗಾನ ಬ್ರೋಸ್‌ಲೆಟ್ ಆವರಿಸಿದೆ. ಕತ್ತಿಗೆ ಹಗ್ಗದ ಗಾತ್ರದ ಚೈನಾಕಿಕೊಳ್ಳೋದೆ ಫ್ಯಾಷನ್ ಆಗಿದೆ. ಹೆಣ್ಣುಮಕ್ಕಳಂತೂ ಕಾಲಿನಿಂದ ಹಿಡಿದು ನೆತ್ತಿಯವರೆವಿಗೆ ತರಾವರಿ ಒಡವೆ ಹಿಂದೇನೂ ಹಾಕ್ತಿದ್ರು ಈಗಲೂ ಹಾಕ್ತಿದಾರೆ. ಒಂದು ಬದಲಾವಣೆ ಅಂದರೆ ಈ ಚಿನ್ನದ ಒಡವೆಗಳ ಸ್ಟೈಲ್ ಇರುತ್ತಲ್ಲ ಅದು ಒಂದೇರೀತಿ ಇರೋಲ್ಲ, ಕ್ಷಣಕ್ಷಣಕ್ಕೂ ಬದಲಾವಣೆ ಆಗ್ತಾನೆ ಇರ್ತದೆ. ಅಕ್ಕಸಾಲಿಗನೂ ಬದುಕಬೇಕಲ್ಲ ಅಂತಿರಬಹುದು. ಇರಲಿ. ದುಡ್ಡು ಕೊಳೀತಾ ಬಿದ್ದಿರೋರು ಬದಲಾದ ಶೈಲಿಯ ಒಡವೆ ಕೊಳ್ಳುವುದನ್ನೇ ಹವ್ಯಾಸ ಮಾಡಿಕೊಂಡಿರ್ತಾರೆ. ಹಲವು ಫ್ಯಾಷನ್ ಪ್ರಿಯರಿಗೆ ಈ ಚೈತನ್ಯ ಇಲ್ಲ, ಹೊಸ ಮಾದರಿ ಒಡವೆ ಕೊಳ್ಳಲು ಆಸೆ. ಆದ್ರೆ ಹಣ ಇಲ್ಲ, ಅಂತಹವರು ಏನ್ಮಾಡ್ತಾರೆ ಅಂದ್ರೆ, ಇದ್ದಬದ್ದ ಚಿನ್ನದ ಒಡವೆಗಳನ್ನು ಕರಗಿಸಿ, ಸಾಲದೆ ಬಂದರೆ ಒಂದಿಷ್ಟು ಚಿನ್ನ ಖರೀದಿಸಿ, ಹೊಸ ರೀತಿಯ ಒಡವೆ ಮಾಡಿಸಿ ಜನ್ಮಾನ ಸಾರ್ಥಕ ಪಡಿಸಿಕೊಳ್ಳುತ್ತಾರೆ. ಹಣ, ಚಿನ್ನ ಎರಡೂ ನಷ್ಟ ಆಗಬಹುದು. ಆದರೆ ಫ್ಯಾಷನ್ ಅಂತ ಒಂದು ಇರುತ್ತಲ್ಲಾ...

ತಿರುಪತಿ ತಿಮ್ಮಪ್ಪನಿಗೂ ಇಂತಹ ಖಯಾಲಿ ಇರಬೇಕು. ಯಾಕೆಂದರೆ ಶ್ರೀಕೃಷ್ಣದೇವರಾಯ ಇದ್ದನಲ್ಲ ಅವನಿಗೆ ತಿಮ್ಮಪ್ಪನ ಮೇಲೆ ಅಪಾರ ಭಕ್ತಿ, ಯುದ್ಧಕ್ಕೆ ಹೊರಟಾಗ, ಜಯಶೀಲನಾದಾಗ ದರ್ಶನಕ್ಕೆ ಹೋಗುತ್ತಿದ್ದನಂತೆ. ಸೋತ ನಂತರವೂ ಹೋಗುತ್ತಿದ್ದನೇ ಎಂಬುದಕ್ಕೆ ಆಧಾರ ಸಿಕ್ಕಿಲ್ಲ, ಒಬ್ಬನೇ ದರ್ಶನಕ್ಕೆ ಹೋಗ್ತಿರಲಿಲ್ಲ, ತಿರುಪತಿ ತಿಮ್ಮಪ್ಪನಿಗೂ ಇಬ್ಬರು ಹೆಂಡಿರಲ್ವಾ. ಕೃಷ್ಣದೇವರಾಯನಿಗೂ ಇಬ್ಬರು ಹೆಂಡಿರು. ಅವರ್‍ನೂ ತಿಮ್ಮಪ್ಪನ ಮೇಲೆ ಭಕ್ತಿ ಸರಿ ಅವರ್‍ನೂ ಕರ್‍ಕೊಂಡೋಗ್ತಿದ್ದ. ರಾಜ ಆದೋನು ಅದೂ ಪತ್ನೀ ಸಮೇತನಾಗಿ ಸ್ವಾಮಿಯ ದರ್ಶನಕ್ಕೆ ಹೋದೋನು ಬರಿಕೈ ದಾಸಯ್ಯನ ರೀತಿ ಹೋದರೆ ಮರ್ಯಾದೆ ಇರುಲ್ವಲ್ಲಾ..... ಚಿನ್ನ ಬೆಳ್ಳಿ ವಜ್ರ ವೈಢೂರ್ಯಗಳ ಆಭರಣಗಳನ್ನ ಭಕ್ತಿಪೂರ್ವಕವಾಗಿ ಅರ್ಪಿಸುತ್ತಿದ್ದ. ಯಾರಿಗೆ ಅಂದರೆ ತಿಮ್ಮಪ್ಪನಿಗೆ. 1513 ರರಿಂದ 1521 ರವರೆಗೆ ಹಿಂಗೆ ಒಂದೆಂಟು ಸಲ ಹೋಗಿ ಆಭರಣ ಅರ್ಪಿಸಿ ಬಂದಿದ್ದ.

ಶ್ರೀಕೃಷ್ಣದೇವರಾಯನ ಐನೂರನೆ ವರ್ಧಂತಿ ಬಂತಲ್ಲಾ, ಆಗ ಆಹಾ ಆ ರಾಜ ದೇವರಿಗೆ ಅರ್ಪಿಸಿದ ಆಭರಣಗಳ ಪ್ರದರ್ಶನಕ್ಕಿಟ್ಟರೆ ಏನು ಪಸಂದಾಗಿರ್ತದೆ ಏನು ಕತೆ ಎಂದು ಅವನ ಭಕ್ತರು ಪ್ರದರ್ಶನ ಮಾಡಲು ಆಸೆಪಟ್ಟರು. ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿದರು. 'ಘನಕಾರ್ಯ ಮುಚ್ಚೆಯ್ಯಂಡಿ' ಅಂತ ತಾರೀಫು ಮಾಡಿದರು ಅವರು. 'ಆಭರಣಮು ಈಯಂಡಿ' ಅಂದರು ಇವರು! ಆದರೆ... 'ಘನಕಾರ್ಯಮು' ಮಾಡಲು 'ಈಯು'ವುದಕ್ಕೆ ಶ್ರೀಕೃಷ್ಣದೇವರಾಯ ಅರ್ಪಿಸಿದ್ದ ಒಡವೆಗಳೇ 'ಕೃಷ್ಣಾರ್ಪಣ ಮಸ್ತು' ಆಗಿತ್ತು!

ಮೊದಲೇ ತಿರುಪತಿ ತಿಮ್ಮಪ್ಪ ಬರಗೆಟ್ಟ ದೇವರು. ಎಷ್ಟು ಹಣ ನೀಡಿದರೂ 'ಇನ್ನೂ ತಾ, 'ಮತ್ತೂ ತಾ' ಅನ್ನೋನು. ಅವನ ಬರ ಹಿಂಗದೆ ಒಡವೆಗಳನ್ನ ಬಳಸಿಕೊಂಡು ನಿಂತವ್ನ ಅಥವಾ ತಿಮ್ಮಪ್ಪನ ಮೈಮೇಲೆ ಹೇರಬಾರದಂಗೆ ಒಡವೆ ಅವೆ, ಇನ್ನೂ ಬೇಕಾ ಇವ್ನಿಗೆ ಎಂದು 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂದು ಸನ್ಮಾನ್ಯ



ಯಡ್ಯೂರಪ್ಪನವರ ಮಾತನ್ನ ಜಾರಿಗೊಳಿಸಲು ಯಾವುದೋ ಮಹಿಳಾಮಣಿಯ ಪ್ರಚೋದನೆ ಒಡವೆ ಮಂಗಮಾಯ ಆಗಲು ಕಾರಣ ಆಯಿತಾ ಅಂದರೆ ಇಲ್ಲವಂತೆ. ಐದು ನೂರು ವರ್ಷಗಳ ಹಿಂದಿನವು ಎಂದಮೇಲೆ ಹಳೇ ಕಾಲದ ಸ್ಟೈಲಿನಲ್ಲಿದ್ದ ಒಡವೆಗಳು ಅಲ್ವಾ. ಲಾರ್ಡ್ ತಿರುಪತಿ ತಿಮ್ಮಪ್ಪನನ್ನು **old fashion** ಗೇ ನೇತು ಹಾಕುವುದು ಸರಿಯಲ್ಲ ಎಂದು ಭಾವಿಸಿ ಅವನ್ನ **ultra modern** ಮಾಡಲು ಐವತ್ತು ವರ್ಷದ ಹಿಂದೆಯೇ ಅವುಗಳನ್ನ ಕರಗಿಸಿ ನೂತನ ಶೈಲಿಯ ಒಡವೆಗಳನ್ನು ಮಾಡಿಸಿದ್ದರಂತೆ!

ಇದೂ ನ್ಯಾಯವೇಯ. ಭಕ್ತರೇ ಮೂರು ಮೂರು ದಿನಕ್ಕೂ ಫ್ಯಾಷನ್ ಬದಲಾಯಿಸುತ್ತಿರುವಾಗ ತಿಮ್ಮಪ್ಪನ ಐದುನೂರು ವರ್ಷದ ಹಿಂದೆ ಇದ್ದಂಗೇ ಇರು ಅನ್ನೋದು ತರವಲ್ಲ, ಒಡವೆ ಕರಗಿಸಿದ್ದಕ್ಕೆ ದಾಖಲೆಗಳು ಇರಬೇಕಲ್ಲ ಎಲ್ಲಿ ಅವು ಅಂತ ಕೆಲವರು ಕೇಳ್ತಾಬಿದ್ದವ್ರೆ. ಅಯ್ಯೋ ರಾಮನೆ. ಒಂದು ಎರಡು ಆದರೆ ಲೆಕ್ಕ ಇಡಬಹುದು. ಉಗ್ರಾಣದ ತುಂಬ ಚಿನ್ನದ ಒಡವೇನೆ ತುಂಬಿದ್ರೆ ಯಾವದರದ್ದು ಅಂತ ದಾಖಲೆ ಇಡುವುದು ಅವರು ತಾನೆ ಪಾಪ....

ಯಡ್ಯೂರಪ್ಪನವರ ಅಳು!

ಕರ್ನಾಟಕದ ಜನತೆಗೆ ಅತೀವ ನಿರಾಶೆ ಆಗಲಿದೆ. ವಿವಿಧ ಭಂಗಿಗಳಲ್ಲಿ ಯಡ್ಯೂರಪ್ಪನವರನ್ನು ನೋಡುವ ಭಾಗ್ಯದಿಂದ ವಂಚಿತಲಾಗಲಿದ್ದಾರೆ. ಇನ್ನು ಮುಂದೆ ಅವರು ಅಳುವ ಭಂಗಿಯ ದೃಶ್ಯವನ್ನು ಕಣ್ತುಂಬಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ, ಏಕೆಂದರೆ ಅವರು ಇನ್ನುಮುಂದೆ ಅಳುವುದೇ ಇಲ್ಲವಂತೆ!

ಆಹಾ, ಜನತೆಯ ದೌರ್ಭಾಗ್ಯಕೇನೆಂಬೆನು!

ಸನ್ಮಾನ್ಯರು ಯಾಕೆ ಇಂತಹ ಕಠಿಣ ನಿಲುವಿಗೆ ಬಂದರು?

ಸಾಧನಾ ಸಮಾವೇಶದ **after effect** ಇರಬಹುದು. ಅಲ್ಲಿ ಅವರು ಅತ್ತಿದ್ದರು, ಬಿಕ್ಕಳಿಸಿ ಬಿಕ್ಕಳಿಸಿ ಅತ್ತಿದ್ದರು. ವಿಪಕ್ಷಗಳ ಕುಟಿಲ ನೀತಿಯಿಂದಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲವಲ್ಲಾ ಎಂಬುದನ್ನು ಸಭಿಕರ ಮನದಾಳಕ್ಕೆ ಇಳಿಸಲು ಹೀಗೆ ಮಾಡಿದ್ದರು ಎಂಬುದನ್ನು ಬೇರೆಯವರು ಇರಲಿ ಭಾಜಪ ಮಂದಿಯೇ ನಂಬಲಿಲ್ಲ ಅಂದರೆ.... ಅತ್ತದ್ದೇ ವ್ಯಂಗ್ಯಕ್ಕೆ ವಸ್ತು ಆಯಿತು ಅಂದರೆ... ಅಳುವಾಗ ಕೆನ್ನೆ ಮೇಲೆ ಕಣ್ಣೀರು ಹರಿಯಲ್ವಾ, ಅದನ್ನು ಒರೆಸಿಕೊಳ್ಳಬೇಡ್ವಾ.... ಅದಕ್ಕೆ ಟವಲ್ ಬೇಡ್ವಾ.... ಕರ್ಚೀಫಿನಲ್ಲಿ ಒರೆಸಿಕೊಳ್ಳಲು ಅದೇನು ಒಸಿ ಕಣ್ಣೀರಾ.... ಹಿಂದೆ ನಿಂತಿದ್ದ ಸಿಬ್ಬಂದಿ ಚುರುಕಾದರು. ಇನ್ನೇನು ಕಣ್ಣೀರು ಹರಿದೇಬಿಡುತ್ತೆ ಅನ್ನೊ ಸಮಯಕ್ಕೆ ಸರಿಯಾಗಿ ಟವೆಲ್ ನೀಡಿದರು. ಯಾರಿಗೆ ಅಂದರೆ ಆಳಲಿರುವ ಮುಖ್ಯಮಂತ್ರಿಗಳಿಗೆ. ಯಡ್ಯೂರಪ್ಪನವರು ಅದರಿಂದ ಮುಖ ಒರೆಸಿಕೊಂಡರು. ಹೀಗೆ ಮಾಡಿಕೊಂಡ ಕೆಲವೇ ಕ್ಷಣಗಳಲ್ಲಿ ಕಣ್ಣೀರು ಹರೀತು. ಕೋಡಿ ಹರಿದಂಗೆ ಹರೀತು. ಬಡವರ ಬವಣೆಗೆ ಈ ಪಾಟಿ ಕಣ್ಣೀರು ಸುರಿಸಿದ್ರೆ... ಏನೆನ್ನಬೇಕು ಕೃತಘ್ನ ಜನ.... ಟವೆಲ್‌ನಲ್ಲಿ ಗ್ಲಿಸರೀನ್ ಇತ್ತು ಅಂತಾರಲ್ಲಾ... ಇಷ್ಟಕ್ಕೇ ಮುಗೀಲಿಲ್ಲ, ಟಿವಿ ಚಾನೆಲ್‌ಗಳಿಗೆ ಗೇಲಿವಸ್ತು ಆಯ್ತಲ್ಲ ಈ ಕಣ್ಣೀರು ಅನ್ನೋದು. ಯಾವ ರಾಜಕಾರಣಿ ಆಳ್ತಾನೆ ಅಂತಾವ ಮಿಮಿಕ್ರಿ ತೋರ್‍ಸಿ ಹಂಗ್ನೋ ಹಂಗಾಯಿತಲ್ಲಾ ಯಡಿಯೂರಪ್ಪನವರ ಕಣ್ಣೀರು.. ಅಂತಃಕರಣ ಕಲಕಬೇಕಾದ ಅಳು ಗೇಲಿಯ ವಸ್ತು ಆಯಿತಲ್ಲಾ... ಅದಕ್ಕೆ ಈ ಭೀಷ್ಮ ಪ್ರತಿಜ್ಞೆ ಮಾಡಿದ್ದಾರಂತೆ!

ಕರ್ನಾಟಕದ ಜನತೆಗೆ ಒಂದೇ ಸಮಾಧಾನ ಅಂದರೆ- ಇದು ರಾಜಕಾರಣಿಯ ಪ್ರತಿಜ್ಞೆ!

ಭೈರಪ್ಪ ಇಸ್ಲಾಮಿನ ಬಗ್ಗೆ ಏಕೆ ವೈರಪ್ಪ?

ಮಾತನಾಡುವ ಭರದಲ್ಲಿ ಭೈರಪ್ಪ ಖುರಾನಿನ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದು ಹಿಂಸೆ ಪ್ರಚೋದಿಸುತ್ತದೆ ಎಂದೂ... ಅದನ್ನು ಬದಲಾಯಿಸಿಕೊಳ್ಳಬೇಕೆಂದೂ ಸಲಹೆ ನೀಡಿದ್ದಾರೆ. ಎದ್ದೇಳು ಅರ್ಜುನ! ಹೂಡು ಬಾಣ!! ಸತ್ತರೆ ವೀರ ಸ್ವರ್ಗ... ಗೆದ್ದರೆ ರಾಜ್ಯ ಲಭಿಸುತ್ತದೆ ಎಂದು ಹೇಳುವ ಕೃಷ್ಣನ ಮಾತು ಆಧರಿಸಿ ಭಗವದ್ಗೀತೆಯನ್ನು ಯುದ್ಧ ಹಿಂಸೆ... ಕರಳು ಬಗೆದು ರಕ್ತವನ್ನು ಮುಡಿಗೆ ಸವರಿದ್ದು... ನೀರಿನಲ್ಲಿದ್ದರೂ ಬೆವರುವಂತೆ ಬೈದು ಹೊರಗೆಳೆದು ತೊಡೆ ಸೀಳಿ ಒಗೆದದ್ದನ್ನು ಓದಿ ಮಹಾಭಾರತವನ್ನೂ, ಲಂಕಾ ದಹನ, ರಾವಣನೊಂದಿಗೆ ಯುದ್ಧ ಹಿಂಸೆ ಪ್ರಚೋದಿಸುತ್ತದೆಯೆಂದು ರಾಮಾಯಣವನ್ನೂ ಬದಲಾಯಿಸಲು ಆಗುತ್ತದೆಯೇ? ಧರ್ಮಗ್ರಂಥದ ನೈಜ ಅಧ್ಯಯನದಿಂದ ಮಾನವೀಯತೆ ಬೆಳಗುತ್ತದೆಯೇ ಹೊರತು ಕೆಡಕು ಆಗದು... ನಮ್ಮ ಮುಖ ಚೆನ್ನಾಗಿಲ್ಲವೆಂದು ಕನ್ನಡಿಯನ್ನು ದ್ವೇಷಿಸುವುದು ಮೂರ್ಖತನದ ಪರಮಾವಧಿಯಲ್ಲವೇ?

- ಡಾ|| ಅಮೀರುದ್ದಿನ ಖಾಜಿ, ವಿಜಾಪೂರ



'ಲಂಕೇಶ್' ವಾರಪತ್ರಿಕೆಯ ಜುಲೈ 7, 2010 ಸಂಚಿಕೆಯಲ್ಲಿ ಪ್ರಕಟಗೊಂಡ 'ಮಾತು ಸೋತ ಕರ್ನಾಟಕ' ಎಂಬ ಜಿ.ರಾಜಶೇಖರ್‌ರವರ ಲೇಖನವನ್ನು ಓದಿದ ನಂತರ ನನ್ನಲ್ಲಿ ತುಂಬಾ ಗಂಭೀರವಾದ ಅನುಮಾನಗಳು ಮೂಡಿವೆ. ಅವುಗಳೆಂದರೆ:

1) ಬೆಂಗಳೂರಿನ ದೊಡ್ಡ ಮೋರಿಯಲ್ಲಿ ವಿರಾಜಿಸುತ್ತಿದ್ದ ಘನ ತ್ಯಾಜ್ಯ ವಸ್ತುಗಳ ಮಟ್ಟ ದಿಢೀರನೆ ಕಡಿಮೆಯಾಗಿದೆ. ಇದಕ್ಕೆ ಕಾರಣವನ್ನು ಮಾನ್ಯ ಲೋಕಾಯುಕ್ತರು ಆಗಸ್ಟ 31ಕ್ಕೆ ಮೊದಲು ಕಂಡುಹಿಡಿಯಬೇಕು. ನಮಗೆಲ್ಲಾ ವಿ.ಕ ಬಳಗದ ಮೇಲೆ ಗುಮಾನಿಯಿದೆ.

2) ಕನ್ನಡ ಜನತೆಯು ಇದುವರೆಗೂ, ಇನ್ನೂ ಸರಿಯಾಗಿ ತೊಳೆದುಕೊಳ್ಳಲೂ ಬಾರದಂಥ ಚೆತ್ತಲೆ-ಜಗತ್ಪ್ರತಾಪ ಸಿಂಹಗಳ, ಅದರಲ್ಲೂ ಸರಿಯಾಗಿ ಒಂದು ಲೇಖನ ಓದಲೂ ಬರದಂಥವರ ಊಳಿಡುವಿಕೆಗೆ ಕಿವಿಗೊಟ್ಟಿಲ್ಲ. ಆದರೂ, ಆ ಅಂಕಣವನ್ನು ಪ್ರಕಟಿಸುವ (ಅ)ನೈತಿಕ ಧೈರ್ಯ ವಿ.ಕ. ಸಂಪಾದಕರಿಗೆ ಎಲ್ಲಿಂದ ಬಂತು? ಎಂದು ಕಂಡುಹಿಡಿಯಬೇಕಾಗಿದೆ.

3) ಎದುರಾಳಿ ಚಡ್ಡಿ ಕಳಚಿ ನಿಂತರೆ, ಹೇಗೆ ಕುಸ್ತಿಯಾಡುವುದು? ಎಂದು ಯು.ಆರ್. ಅನಂತಮೂರ್ತಿ ಸರ್‌ಗೆ ಗೊತ್ತಾಗಿಲ್ಲವಂತೆ.

-ಸುಮಾ ಎಂಬಾರ್, ಮೈಸೂರು

ಪೆಟ್ರೋಲ್ ಬೆಲೆ ಏರಿಕೆಯ ಬಗ್ಗೆ ಹಲವಾರು ಪತ್ರಿಕೆಗಳು ಸಾಕಷ್ಟು ಬರೆದವು. ಹಾಗೆಯೇ ದೇಶದಾದ್ಯಂತ ಒಂದು ದಿನದ ಬಂದ್ ಕೂಡ ನಡೆಯಿತು. ಆದರೆ ಈ ತೈಲ ಬೆಲೆ ಏರಿಕೆಯ ಹಿಂದಿನ ರಾಜಕಾರಣ ಮತ್ತು ಪಿತೂರಿಯನ್ನು ಸೂಕ್ತವಾಗಿ ವಿವರಿಸಿದ್ದು ಮತ್ತು ತಾ ಮೂಲಕ ಜನರಲ್ಲಿ ಅರಿವನ್ನು ಮೂಡಿಸಿದ್ದು ಶಿವಸುಂದರ್ ಅವರ 'ಚಾರ್ವಾಕ' ಅಂಕಣ ಮಾತ್ರ. ಇದನ್ನು ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

- ರಮೇಶ್ ರೆಡ್ಡಿ, ಬೆಂಗಳೂರು

ಇತ್ತೀಚೆಗೆ ಚೆಸ್ ಚಾಂಪಿಯನ್ ಆನಂದ್ ವಿಶ್ವನಾಥನ್ ಅವರ ಯಶೋಗಾಥೆಯನ್ನು ಚಂದವಾಗಿ ವಿವರಿಸಿ ಬರೆದಿದ್ದ ಪಾರ್ವತೀಶ ಅವರು ಮತ್ತೆ ಕಳೆದ ಸಂಚಿಕೆಯಲ್ಲಿ ಸೈನಾ ನೆಹ್ವಾಳ್ ಎಂಬ ತರುಣಿಯು ಈ ಹಂತ ತಲುಪುವುದಕ್ಕೆ ಅನುಭವಿಸಿದ ಕಷ್ಟ ಮತ್ತು ಮಾಡಿದ ಸಾಧನೆಯನ್ನೂ ಚೆನ್ನಾಗಿ ಬಣ್ಣಿಸಿ ಬರೆದಿದ್ದಾರೆ.


- ನಿರಂಜನ್ ಪಾಟೀಲ್, ಹುಣಸಿನಹಳ್ಳಿ

ಅಳುಬುರುಕ ಮುಖ್ಯಮಂತ್ರಿ ಯಡಿಯೂರಪ್ಪ ಅವರು ತಾಯಿ ಕಾವೇರಿಯೇ ನಾಚಿಕೊಳ್ಳುವಂತೆ ಬಿಂಬಿಸಿ ದಿನೇಶ್ ಕುಕ್ಕುಜಡ್ಕ ಅವರು ಬಿಡಿಸಿದ್ದ ಕಾರ್ಟೂನ್ ಅದ್ಭುತವಾಗಿತ್ತು. ಪ್ರತಿ ವಾರ ಮಿಸ್ ಮಾಡದಂತೆ ಕುಕ್ಕುಜಡ್ಕ ಅವರ ಕಾರ್ಟೂನ್ ಪ್ರಕಟಿಸಬೇಕೆಂದು ಕೋರಿಕೆ.

- ಇಂದಿರಾ, ಶಿವಮೊಗ್ಗೆ


...ರದಲ್ಲಿ ಆರು ಸಿನಿಮಾ ಹಾರಿಹೋದವು!

...ದ ವಾರ ಕನ್ನಡ ಚಿತ್ರರಂಗದಲ್ಲಿ ಒಂದು ಅಪರೂಪದ ದಾಖಲೆ ...ಯಿತು. ಅದೇನೆಂದರೆ ಕಳೆದ ಶುಭ ಶುಕ್ರವಾರದಂದು ಬರೋಬ್ಬರಿ ...ಷ್ಟದ ಚಿತ್ರಗಳು ತೆರೆಕಂಡವು. ಈ ರೀತಿ ಅರ್ಧ ಡಜನ್ ಚಿತ್ರಗಳು ... ದಿನಗಳಲ್ಲಿ ಜೊತೆಜೊತೆಯಾಗಿ ಬಿಡುಗಡೆಯಾಗಿದ್ದೇ ಇಲ್ಲ. ಈ ...ಷ್ಟದ ಚಿತ್ರಗಳ ಜೊತೆಗೆ ಮೂರು ಪರಭಾಷಾ ... ತೆರೆಕಂಡವು. ಅಂದರೆ ರಾಜ್ಯದ ಸಿನಿಮಾ ... ಪಾಲಿಗೆ ಸುಗ್ಗಿಯೋ ಸುಗ್ಗಿ. ಆದರೆ ಒಂದೇ ...ಲ್ಲಿ ಒಂಬತ್ತು ಚಿತ್ರಗಳು ತೆರೆಕಂಡು ಪ್ರೇಕ್ಷಕರನ್ನು ...ಕ್ಕೀಡುಮಾಡಿದ್ದು ಮಾತ್ರ ನಿಜ.



...ವ್ಯಾದೃಷ್ಟಿಯಿಂದ ಈ ಘಟನೆಯನ್ನು "ಕನ್ನಡ ... ಪ್ರಗತಿಯ ಹಾದಿಯಲ್ಲಿದೆ" ಎಂದು ತರ್ಕಿಸಿ ...ವನ್ನು ನಾವೇ ತಟ್ಟಿಕೊಳ್ಳಬಹುದು. ಆದರೆ ...ಗಳ ಗತಿ ಏನಾಯಿತು ಎಂದು ನೋಡಿದರೆ ...ಗದೆ ಇರದು. ಸಾಧಾರಣವಾಗಿ ದೀಪಾವಳಿ ...ಸಂದರ್ಭದಲ್ಲಿ ಅಥವಾ ದಸರಾ ಸಂದರ್ಭದಲ್ಲಿ ಈ ರೀತಿ ನಾಲ್ಕೈದು ... ಒಟ್ಟೊಟ್ಟಿಗೆ ತೆರೆಕಾಣುತ್ತವೆ. ಅದಕ್ಕೊಂದು ಕಾರಣವೂ ಇದೆ. ...ಬೇಸಾಯ ಮುಗಿಸಿ, ಕುಯ್ಲು ಮಾಡಿ ಕೈಯಲ್ಲಿ ಒಂದಿಷ್ಟು ಹಣ ...ರುತ್ತಾರೆ. ಆಗಲೇ ಹಬ್ಬ, ಜಾತ್ರೆ, ಸಿನಿಮಾ ಬಗ್ಗೆ ಅವರೆಲ್ಲ ಆಸಕ್ತಿ ...ವುದು.

...ಗೆ ಮುಂಗಾರು ಮಳೆ ಬೀಸುತ್ತಿರುವ, ಮಕ್ಕಳನ್ನು ಶಾಲೆಗೆ ಸೇರಿಸುವ ...ಲ್ಲಿರುವ ಈ ಜೂನ್-ಜುಲೈ ತಿಂಗಳಲ್ಲಿ ಜನರ ಕೈಯಲ್ಲಿ ಹಣವಾಗಲಿ ...ವಾಗಲಿ ಎಲ್ಲಿರುತ್ತದೆ? ಇಂತಹ ಕಷ್ಟದ ಸಂದರ್ಭದಲ್ಲಿ ಆರು ಚಿತ್ರಗಳು ...ತೆರೆಕಂಡರೆ ಜನ ಹೇಗೆ ತಾನೇ ಥಿಯೇಟರ್‌ಗೆ ...ರೆ?



...ವಾಗಿ ಕಳೆದ ವಾರ ಬಿಡುಗಡೆಯಾದ ಆರೂ ...ನಿರ್ಮಾಪಕರು ಕೈಸುಟ್ಟುಕೊಂಡಿದ್ದಾರೆ. ಅದರಲ್ಲಿ ...ಹೃದಯ' ಎಂಬ ಚಿತ್ರವಂತೂ ಇನ್ನೊಂದು ...ದಾಖಲೆ'ಯನ್ನು ನಿರ್ಮಿಸಿದೆ. ಅದೇನೆಂದರೆ ...ವನ್ನು ಒಂದೇ ದಿನಕ್ಕೆ ಬದಲಾಯಿಸಲಾಗಿದೆ! ... ಚಿತ್ರಗಳು ನಮ್ಮ ಚಿತ್ರರಂಗಕ್ಕೆ ಅಗತ್ಯವೇ? ...ನ್ನು ಎಲ್ಲರೂ ಚಿಂತಿಸಬೇಕಾಗಿದೆ.

...ಡುಗಡೆಗೊಂಡ ಆರು ಚಿತ್ರಗಳಲ್ಲಿ ಸ್ವಲ್ಪಮಟ್ಟಿಗೆ ... ಮತ್ತು ಮೀನಾ ನಟಿಸಿರುವ 'ಹೆಂಡ್ತೀರಾ ...' ಚಿತ್ರದ ಬಗ್ಗೆ ಒಂದಿಷ್ಟು ಕುತೂಹಲವಿತ್ತು. ... ಹದಿನೈದು ವರ್ಷಗಳ ಹಿಂದೆ ತಮಿಳಿನಲ್ಲಿ ಇದೇ ಚಿತ್ರವನ್ನು ...ಸಿದ್ಧ ಶೇಖರ್ ಎಂಬುವವರು ಅದನ್ನೇ ಇಲ್ಲಿ ಮನಃ ನಿರ್ದೇಶಿಸಿದ್ದಾರೆ. ... ವರ್ಷಗಳ ಹಿಂದಿನ ಫ್ಯಾಮಿಲಿ ಮೆಲೋಡ್ರಾಮ ಕಥೆ ಈಗಿನ ಹೈಟೆಕ್ ಸಿಟಿಯ ಪ್ರೇಕ್ಷಕರಿಗೆ ಹೇಗೆ ತಾನೇ ಇಷ್ಟವಾಗುತ್ತದೆ? ಇದರ ಪರಿಣಾಮ 'ಹೆಂಡ್ತೀರ ದರ್ಬಾರ್' ಚಿತ್ರ ಕೂಡಾ ರಮೇಶ್ ಸೋಲಿನ ಚಿತ್ರಗಳಿಗೆ ಮತ್ತೊಂದು ಸೇರ್ಪಡೆಯಾಗಿದೆ.

ಹಿಂದಿಯ ಸುಂದರ ನಟ ಜಾಕಿ ಶ್ರಾಫ್ ನಟಿಸಿದ ಕನ್ನಡದ ಸಿನಿಮಾ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ 'ಜಮಾನ' ಚಿತ್ರದ ಕಥೆಯೇ ಬೇರೆ. ಈ ಚಿತ್ರದಲ್ಲಿ ಜಾಕಿ ಶ್ರಾಫ್ ಇದ್ದಾರೆ ಎಂಬ ಕಾರಣಕ್ಕೆ ಪ್ರೇಕ್ಷಕರು ಥಿಯೇಟರ್‌ಗೆ ಮುತ್ತಿಗೆ ಹಾಕಬಹುದು ಎಂದು ನಿರ್ಮಾಪಕರು ನಿರೀಕ್ಷಿಸಿದ್ದರು. ಆದರೆ ಮೊದಲ ದಿನವೇ 'ಜಮಾನ' ನೋಡಲು ಜನ ಬರಲೇ ಇಲ್ಲ. ಎರಡನೇ ಅಥವಾ ಮೂರನೇ ದಿನ ಜನ ಬರಬಹುದೆಂಬ ನಿರೀಕ್ಷೆಯೂ ಈಗ ಹುಸಿಯಾಗಿದೆ. ಹೀಗಾಗಿ ಎರಡನೇ ವಾರಕ್ಕೆ 'ಜಮಾನ'ವನ್ನು ಥಿಯೇಟರ್‌ನಿಂದ ಎತ್ತಂಗಡಿ ಮಾಡಲು ನಿರ್ಧರಿಸುತ್ತಿದ್ದಾರೆ. ಒಂದು ಮಾತಂತೂ ನಿಜ. ಈ ಚಿತ್ರ ತಾಂತ್ರಿಕವಾಗಿ ಅತ್ಯಂತ ಶ್ರೀಮಂತವಾಗಿ ಮೂಡಿಬಂದಿದೆ. ಆದರೆ ಎಡವಿದ್ದು ಕಥೆ ಮತ್ತು ಅದರ ನಿರೂಪಣೆಯಲ್ಲಿ. ಅಂತೂ ಜಾಕಿಶ್ರಾಫ್‌ನನ್ನು ಕನ್ನಡ ಪ್ರೇಕ್ಷಕರು ನಿಸ್ಸಂಕೋಚವಾಗಿ ನಿರ್ಲಕ್ಷಿಸಿದ್ದು ನಮ್ಮ ನಿರ್ಮಾಪಕರ ಪರಭಾಷಾ ನಟನಟಿಯರ ವ್ಯಾಮೋಹಕ್ಕೆ ದೊಡ್ಡ ಏಟು ನೀಡಿದಂತಾಗಿದೆ.



'ಪರೀಕ್ಷೆ' ಎಂಬ ಚಿತ್ರ ಯಾವಾಗ ಆರಂಭವಾಯಿತು? ಇದರಲ್ಲಿ ಯಾವ್ಯಾವ ನಟನಟಿಯರಿದ್ದಾರೆ? ಎಂಬಿತ್ಯಾದಿ ವಿವರಗಳು ನಮಗೇ ಗೊತ್ತಿಲ್ಲ. ಅಂದಮೇಲೆ ಪ್ರೇಕ್ಷಕನಿಗೆ ಈ ಚಿತ್ರದ ಬಗ್ಗೆ ಇನ್ನೇನು ಮಾಹಿತಿ ಗೊತ್ತಿರಲು ಸಾಧ್ಯ? ಹೀಗಾಗಿ ಈ ಚಿತ್ರ ಬಿಡುಗಡೆಯಾದ ಥಿಯೇಟರ್‌ಗಳಲ್ಲಿ ನೊಣಗಳು ಮಾತ್ರ ಪ್ರೇಕ್ಷಕನ ಯಾವುದೇ ಅಡೆತಡೆ ಎದುರಿಸದೇ ಚಿತ್ರವನ್ನು ನೋಡಿವೆ.

ಉತ್ತರ ಕರ್ನಾಟಕದ ನಿರ್ಮಾಪಕ ಮತ್ತು ನಿರ್ದೇಶಕರಾದ ಶಂಕರಲಿಂಗ ಸುಗ್ನನಹಳ್ಳಿ ಅವರು ನಿರ್ಮಿಸಿದ 'ಹೋಳಿ' ಚಿತ್ರ ಎರಡು ವರ್ಷಗಳ ಕಾಲದ ಸುದೀರ್ಘ ಪಯಣದ ನಂತರ ತೆರೆಕಂಡಿದೆ. ಈ ಚಿತ್ರದಲ್ಲಿ ಅವರ ಮಗನೇ ಹೀರೋ. ರಾಗಿಣಿ ನಾಯಕಿಯಾಗಿ ನಟಿಸಿದ ಮೊದಲ ಕನ್ನಡ ಚಿತ್ರವೆಂಬ ಹೆಗ್ಗಳಿಕೆ ಈ ಚಿತ್ರಕ್ಕಿದೆ. ಶಂಕರಲಿಂಗ ಸುಗ್ನನಹಳ್ಳಿ ಈಗಾಗಲೇ ಒಂದೆರಡು ಚಿತ್ರಗಳನ್ನು ನಿರ್ಮಿಸಿ-ನಿರ್ದೇಶಿಸಿದ ಅನುಭವ ಹೊಂದಿರುವವರು. ಆ ಕಾರಣಕ್ಕಾಗಿ ಉತ್ತರ ಕರ್ನಾಟಕದ ಜನತೆ 'ನಮ್ಮವನ ಚಿತ್ರ' ಎಂದು ಇವರ ಚಿತ್ರಗಳನ್ನು ನೋಡುತ್ತಿದ್ದರು. ಆದರೆ ಗಾಂಧಿನಗರದ ಕೆಂಪೇಗೌಡ ರಸ್ತೆಯಲ್ಲಿ ಅವರ ಚಿತ್ರ ಹೌಸ್‌ಫುಲ್ ಆಗಿದ್ದೇ ಇಲ್ಲ. ಈಗ ದೇವದಾಸಿ ಪದ್ಧತಿಯ ಬಗ್ಗೆ ಬೆಳಕು ಚೆಲ್ಲುವ 'ಹೋಳಿ' ಚಿತ್ರಕ್ಕೂ ಅದೇ ಗತಿಯಾಗಿದೆ. ರಾಗಿಣಿ ಎಂಬ ಮಾಯಾಂಗನೆಯ ಹೆಸರೂ ಪಡ್ಡೆ ಹುಡುಗರನ್ನು ಥಿಯೇಟರ್‌ಗೆ ಆಕರ್ಷಿಸುವಲ್ಲಿ ವಿಫಲವಾಗಿದೆ.

'ಪ್ರೀತಿ ಅಂದ್ರೆ ಇಷ್ಟೇನಾ?' ಎಂಬ ಪ್ರೇಮಕಥಾನಕ ಚಿತ್ರ ಕೂಡ ತೆರೆಕಂಡಿದೆ. ಈ ಚಿತ್ರವೂ ಅಷ್ಟೇ, ಆರರ ಜೊತೆ ಗೋವಿಂದಾ... ಎನಿಸಿಕೊಂಡಿದೆ. ಈ ಚಿತ್ರದ ಬಗ್ಗೆಯೂ ಗಾಂಧಿನಗರದವರಿಗಾಗಲಿ ಪ್ರೇಕ್ಷಕರಿಗಾಗಲಿ ಹೆಚ್ಚೇನೂ ಮಾಹಿತಿ ಸಿಕ್ಕಿರಲಿಲ್ಲ. ಒಂದು ರೀತಿಯಲ್ಲಿ ನಿಗೂಢವಾಗಿ ಆರಂಭವಾದ ಚಿತ್ರ ಅಷ್ಟೇ ನಿಗೂಢವಾಗಿ ತೆರೆಕಂಡು ಇದೀಗ ಅಷ್ಟೇ ನಿಗೂಢವಾಗಿ ಮತ್ತೆ ಡಬ್ಬ ಸೇರುವ ಸಾಧ್ಯತೆ ಕಾಣಿಸುತ್ತಿದೆ.

ಒಟ್ಟಾರೆ, ಈ ಆರು ಚಿತ್ರಗಳಲ್ಲಿ ಒಂದು ಚಿತ್ರವೂ ಗಟ್ಟಿಯಾಗಿ ನೆಲೆಯೂರುವ ಲಕ್ಷಣಗಳನ್ನು ತೋರಿಸಿಲ್ಲ. ಕನಿಷ್ಠ ಒಂದು ಸಿನಿಮಾವನ್ನಾದರೂ ನೋಡುವಂತಹ ವಾತಾವರಣವನ್ನು ಸೃಷ್ಟಿಸುವ ಜವಾಬ್ದಾರಿ ಫಿಲ್ಮ್ ಚೇಂಬರ್ ಮೇಲಿರುತ್ತದೆ. ಆರಾರು ಕನ್ನಡ ಚಿತ್ರಗಳು ಒಂದೇ ವಾರ ಬಿಡುಗಡೆ ಮಾಡಲು ಬಸಂತ್‌ಕುಮಾರ್ ಪಾಟೀಲರು ಹೇಗೆ ಅನುಮತಿ ನೀಡಿದ್ದಾರೆಂಬುದೇ ಆಶ್ಚರ್ಯ. ಕನ್ನಡ ಪ್ರೇಕ್ಷಕರು ಈಗಿನ ಕಾಲಘಟ್ಟದಲ್ಲಿ ಒಂದು ಕನ್ನಡ ಚಿತ್ರ ನೋಡುವುದೇ ಬಹಳ ಅಪರೂಪ. ಇಂತಹ ದುಸ್ಥಿತಿಯಲ್ಲಿ ನಾವಿರುವಾಗ ಒಂದು ದಿನಕ್ಕೆ ಎರಡು ದಿನಕ್ಕೆಲ್ಲ ಚಿತ್ರ ಎತ್ತಂಗಡಿಯಾದರೆ ಯಾರು ತಾನೆ ಕನ್ನಡ ಚಿತ್ರ ನೋಡಲು ಬರುತ್ತಾರೆ?

ಈ ಆರು ಚಿತ್ರಗಳ ಗತಿ ಹೀಗಾದರೆ ಈ ವಾರವೂ ಬಿಡುಗಡೆಗೊಳ್ಳಲು ಮತ್ತೆ ಮೂರು ಚಿತ್ರಗಳು ಕ್ಯೂನಲ್ಲಿ ನಿಂತಿವೆ. ಅವುಗಳಲ್ಲಿ ನಾಗೇಶ್ ಚೊಚ್ಚಲ ನಿರ್ದೇಶನದ 'ಒಲವೇ ವಿಸ್ಮಯ' ಒಂದು. ಖಳನಾಯಕ ಕೀರ್ತಿರಾಜ್ ಅವರ ಮಗ ನಾಯಕನಾಗಿ ನಟಿಸಿರುವ ಮೊದಲ ಚಿತ್ರವಿದು. ಮತ್ತೊಂದು ಥ್ರಿಲ್ಲರ್ ಮಂಜು ನಟಿಸಿರುವ 'ಜಯ ಹೇ' ಎಂಬ ಚಿತ್ರ. ಮತ್ತೊಂದು ದಿನೇಶ್ ಬಾಬು ನಿರ್ದೇಶನದ ಅನಂತ್‌ನಾಗ್ ಸುಹಾಸಿನಿ ಜೋಡಿಯ 'ಎರಡನೇ ಮದುವೆ'.

ಈ ಮೂರು ಚಿತ್ರಗಳ ನಡುವಿನ ಪೈಪೋಟಿಯಿಂದಾಗಿ ಎಲ್ಲಾ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸುವುದು ಗ್ಯಾರಂಟಿ. ಅಂದರೆ ರಾತ್ರಿ ನೋಡಿದ ಬಾವಿಗೆ ಹಗಲು ಬಿದ್ದಂತಾಗಿದೆ ಕನ್ನಡ ನಿರ್ಮಾಪಕರ ಪರಿಸ್ಥಿತಿ. ನಮ್ಮದೇ ಭಾಷೆಯ ಚಿತ್ರಗಳಿಗೆ ನಮ್ಮದೇ ಚಿತ್ರಗಳು ಪೈಪೋಟಿ ನೀಡುತ್ತಿರುವುದು ಅತ್ಯಂತ ದುರದೃಷ್ಟಕರ. ಇಂತಹ ಅನಾರೋಗ್ಯಕಾರಿ ಸ್ಪರ್ಧೆಯನ್ನು ನಮ್ಮ ಚೇಂಬರ್ ಮತ್ತು ನಿರ್ಮಾಪಕರ ಸಂಘ ಕೈಕಟ್ಟಿಕೊಂಡು ನೋಡುತ್ತಿರುವುದು ಇನ್ನೂ ದೊಡ್ಡ ದುರಂತ. ಹೀಗಿರುವಾಗ ಕನ್ನಡ ಚಿತ್ರರಂಗ ಉದ್ಧಾರವಾಗುವುದು ಹೇಗೆ? ಕನ್ನಡ ಚಿತ್ರಗಳು ಶತದಿನೋತ್ಸವ ಆಚರಿಸುವುದಂತೂ ಇನ್ನು ಮುಂದೆ ಮರೀಚಿಕೆಯೇ ಸರಿ.

ಪರಭಾಷಾ ಚಿತ್ರಗಳ ವಿರುದ್ಧ ಸಮರ ಸಾರಿರುವ ಬಸಂತ್‌ಕುಮಾರ್ ಪಾಟೀಲ್ ಸ್ವಲ್ಪ ಈ ಕಡೆ ಚಿತ್ತ ಹರಿಸಿದರೆ ಈ ಸಮಸ್ಯೆಗೆ ಪರಿಹಾರ ಸಿಗಬಹುದೇನೋ?

• ಸದಾಶಿವ ಶೆಣೈ
shenoylankesh@gmail.com

...ಮ್ಯಾ ಜೊತೆ ನನ್ನ ಮದುವೆ' ಅಂದ ಮೆಂಟ್ಲು ವೆಂಕಟ!

...ಂಧಿನಗರದಲ್ಲಿ ಎಂತೆಂಥದೋ ವಿಚಿತ್ರ ಸಂತಾನ ...ತ್ತನೆ ಜನ್ಮವೆತ್ತಿಬಿಡುತ್ತವೆ. ...ಥದ್ದೇ ವಿಲಕ್ಷಣ ಸಂತಾನವೊಂದರ ಹೆಸರು ...


...ಯಲ್ಲಿ ನಿರ್ದೇಶಕ. ಆದರೆ ಈತ ಹತ್ತಾರು ...ಗಳನ್ನೇನೂ ನಿರ್ದೇಶಿಸಿಲ್ಲ. ಈತನ ಅಮೋಘ ...ನಲ್ಲಿ ನಿರ್ಮಾಣವಾಗಿದ್ದು ಒನ್ ಅಂಡ್ ಓನ್ಲಿ ... ಅದರ ಹೆಸರು 'ಸ್ವತಂತ್ರ ಪಾಳ್ಯ'!!

... ಸಿನಿಮಾ ಸರಿಸುಮಾರು ಐದು ವರ್ಷಗಳ ...ಯಾರಾಗಿತ್ತಲ್ಲದೆ, ಕಡೆಗೊಂದು ದಿನ ಬಿಡುಗಡೆಯೂ ...ಆದರೆ ಮೊದಲನೇ ಶೋ ನಂತರ ಥಿಯೇಟರ್ ...ರು 'ಸ್ವತಂತ್ರ ಪಾಳ್ಯ'ದ ಬ್ಯಾನರು, ಪೋಸ್ಟರ್, ... ರೋಡಿಗೆಸೆದಿದ್ದರು.

...ಸ್ಟರ್ ಜ್ಯೂಬಿಲಿ ಸಿನಿಮಾ ಮಾಡಿಕೊಡ್ತೀನಿ. ಈ ...ಬಿಡುಗಡೆ ಆದ್ರೆ ಮಣಿರತ್ನಂ ಅವರೇ ಬಂದು ...ಪಾಳ್ಯ'ದ ರಿಮೇಕ್ ಹಕ್ಕು ಕೇಳ್ತಾರೆ. 'ಸ್ವತಂತ್ರ ... ಮುಂದೆ 'ಬಾಂಬೆ' ಸಿನಿಮಾನೂ ನಿಲ್ಲಲ್ಲ..." ... ಹೇಳಿ ನಿರ್ಮಾಪಕ ಹೇಮಂತ್ ಸುವರ್ಣ ...ನ ತಲೆ ನುಣ್ಣಗೆ ಮಾಡಿದ್ದ ಈ ವೆಂಕಟ್. ಈ ... ನಿರ್ಮಾಣಹಂತದಲ್ಲಿದ್ದಾಗಲೇ "ನಟ...ಳನ್ನು ನಾನು ಮದುವೆ ಆಗ್ತಿದೀನಿ" ಅಂತ ...ಹುಕಾರೆಬ್ಬಿಸಿದ್ದ. ಆಕೆಗೆ ಎಷ್ಟತ್ತು ಸಾವಿರ ಸಂಭಾವನೆ ...ಅದರಲ್ಲಿ ನಲವತ್ತು ಸಾವಿರ ರೂಪಾಯಿ ಕಮಿಷನ್ ...ಕಡೆಗೆ ದಾಮಿನಿ ಶೂಟಿಂಗ್‌ಗೆ ಬರುವುದನ್ನೇ ...ನಾಟಿಯೆಬ್ಬಿಸಿದ್ದನು. ಇದೆಲ್ಲದರ ನಡುವೆ ಅರ್ಜುನ್ ...ಹಸದ ನಟ ಪಡಬಾರದ ಕಷ್ಟ ಪಟ್ಟಿದ್ದ.

...ಗೆ 'ಸ್ವತಂತ್ರ ಪಾಳ್ಯ' ಸಿನಿಮಾವನ್ನು ನಿರ್ದೇಶಿಸಿ...ಟಂ ಸಾಂಗ್‌ನಲ್ಲೂ ನಟಿಸಿದ್ದ ಈ ವೆಂಕಟನ ...ನ ಪೂರ್ತಿ ಕೊಳೆತುಹೋಗಿದೆ.

...ನ್ನೆ ದಿನ ಸಿನಿಮಾ ಪಿಆರ್‌ಓ ಒಬ್ಬರಿಗೆ ಫೋನ್ ಮಾಡಿ "ನಾನು ರಮ್ಯಾಳನ್ನು ಮದ್ವೆ ಆಗ್ತಿದೀನಿ. ಸ್ವಲ್ಪ ಮೀಡಿಯಾದವರಿಗೆಲ್ಲಾ ತಿಳಿಸಿಬಿಡಿ" ಎಂದಿದ್ದಾನೆ. ಕೂಡಲೇ ಗಾಬರಿಗೊಂಡ ಪಿಆರ್‌ಓ ಈ ತಲೆಕೆಟ್ಟವನ ವಿಚಾರ ಮತ್ತು ಆತನ ಮೊಬೈಲ್ ನಂಬರನ್ನು 'ಲಂಕೇಶ್'ಗೆ ನೀಡಿದರು.



ತಕ್ಷಣ ಆತನಿಗೆ ಫೋನಾಯಿಸಿ "ಏನ್ ಗುರುವೇ, ಹೀರೋಯಿನ್ ರಮ್ಯಾಳನ್ನ ಮದ್ವೆ ಆಗ್ತಿದೀರಾ?" ಅಂತಾ ಕೇಳಿದರೆ "ಹೌದೌದು.. ಅದೇ ರಮ್ಯಾ ಜೊತೇನೇ ನಾನು ಮದ್ವೆ ಆಗ್ತಿರೋದು... ಮಂಗಳವಾರ ಬೆಳಗ್ಗೆ ಬನಶಂಕರಿ ದೇವಸ್ಥಾನದಲ್ಲಿ ಎಂಗೇಜ್‌ಮೆಂಟು" ಎಂದು ಉತ್ತರಿಸಿದ.

ಏಕಾಏಕಿ ವೆಂಕಟ್‌ನಂತಹ ಹುಚ್ಚ ರಮ್ಯಾಳಂತಹ ನಂಬರ್ ಒನ್ ನಟಿಯನ್ನು ಮದುವೆ ಆಗ್ತಿದೀನಿ ಎಂದರೆ ಯಾರಿಗಾದರೂ ಆಶ್ಚರ್ಯವಾಗುವುದಿಲ್ಲವೆ?

ಅಷ್ಟರಲ್ಲಾಗಲೇ ಈ ವೆಂಕಟ್ ತಲೆ ಕೆಟ್ಟ ಗಿರಾಕಿ ಅನ್ನೋದು ನಮಗೆ ಗ್ಯಾರಂಟಿಯಾಗಿಹೋಗಿತ್ತು... ಆದರೂ ವೆಂಕಟ್‌ನನ್ನೇ ಒಂದಷ್ಟು ಪ್ರಶ್ನೆ ಕೇಳಿ ಕಿಚಾಯಿಸಿದೆವು...

– "ನಿಮ್ದು ಲವ್ ಮ್ಯಾರೇಜಾ ಹೆಂಗೇ?"

"ಲವ್ ಕಮ್ ಅರೇಂಜ್ಡ್ ಮ್ಯಾರೇಜು. ಅದೆಲ್ಲೋ ನಾವಿಬ್ಬರೂ ಒಬ್ರನ್ನ ಒಬ್ರು ನೋಡಿದ್ವಿ. ಅವತ್ತಿಂದಾನೂ ಲವ್ ಶುರು ಆಗಿ ಈಗ ಮದ್ವೆ ಆಗ್ತಿದೀವಿ. ಇಷ್ಟೊತ್ತಿಗೆ ಎಂಗೇಜ್‌ಮೆಂಟ್ ನಡೀಬೇಕಿತ್ತು, ಆದರೆ ರಮ್ಯಾ ಸ್ವಲ್ಪ ಬ್ಯುಸಿ ಇರೋದರಿಂದ ಪೋಸ್ಟ್‌ಪೋನ್ ಆಯ್ತು..."

– "ಲೂಸ್ ಮಾದ ರಮ್ಯಾಳನ್ನು ತನ್ನ ಬೈಕ್ ಮೇಲೆ ಕೂರಿಸ್ಕೊಂಡು ಓಡಾಡ್ತಾನಂತೆ. ಅದರ ಬಗ್ಗೆ ನಿಮ್ಗೇನೂ ಅಭ್ಯಂತರವಿಲ್ವಾ?"

"ಯಾವ ಲೂಸ್ ನನ್ ಮಕ್ಳು ಬಂದ್ರೂ ನಮ್ ಮದ್ವೆ ತಡೆಯೋಕಾಗಲ್ಲ.. ಅವ್ನು ಬೈಕ್‌ನಲ್ಲಿ ಕರ್ಕೊಂಡೋದ್ರೆ... ನಾನು ಅವಳನ್ನು ಬರಿಗಾಲಲ್ಲೇ ಓಡಿಸ್ಕೊಂಡ್ ಹೋಗ್ಬಿಟ್ಟೀನಿ.."

– "ನಿಮ್ಮ ಮತ್ತು ರಮ್ಯಾಳ ಮದುವೆಗೆ ಅವರ ಮನೆಯವರ ಒಪ್ಗೆ ಇದ್ಯಾ?"

"ಒಪ್ಕಿಕೊಂಡಿರೋದಕ್ಕೇ ಮದ್ವೆ ಆಗ್ತಿರೋದು... ನಾವೂ ಗೌಡ್ರು, ರಮ್ಯಾನೂ ಗೌಡ್ರೂ... ಎಸ್.ಎಂ. ಕೃಷ್ಣಾನೂ ಗೌಡ್ರು... ನೀವೂ ಗೌಡ್ರಾ...?"– ಅಂತಾ ದಢನೆ ನಮಗೇ ಪ್ರಶ್ನೆ ಹಾಕಿದ ...



ಹೀಗೆ ಸ್ಟಾರ್ ನಟಿ ರಮ್ಯಾಳೊಂದಿಗೆ ಸಂಬಂಧ ಕಲ್ಪಿಸಿಕೊಂಡು ಓತಪ್ರೋತವಾಗಿ, ಮನಬಂದಂತೆ ಮಾತಾಡುತ್ತಿರುವ ವೆಂಕಟನ ತಲೆ ನಿಜಕ್ಕೂ ಕೆಟ್ಟಿದೆಯಾ? ಅಥವಾ ಗಾಂಧಿನಗರದಲ್ಲಿ ವಂಚಿಸಲು ಯಾರೂ ಸಿಗದೆ ಪ್ರಚಾರ ಗಿಟ್ಟಿಸಿಕೊಳ್ಳುವುದಕ್ಕೋಸ್ಕರ ಈತ ಹೀಗೆ ಆಡುತ್ತಿದ್ದಾನಾ ಅನ್ನೋದೇ ತಿಳಿಯುತ್ತಿಲ್ಲ.

ಒಂದು ವೇಳೆ ಈತನಿಗೆ ಮತಿಭ್ರಾಂತಿಯಾಗಿರುವುದು ನಿಜವಾದರೆ, ಆತನ ವಾರಸುದಾರರು ವೆಂಕಟನಿಗೆ ಸೂಕ್ತ ಚಿಕಿತ್ಸೆ ಕೊಡಿಸಬೇಕಿದೆ. ಅಥವಾ ಈತ ಪಬ್ಲಿಸಿಟಿ ಪಡೆಯುವ ಗಿಮಿಕ್ಕಿಗೆ ಹೀಗೆಲ್ಲಾ ಮಾತಾಡುತ್ತಿದ್ದರೆ, ಗಾಂಧಿನಗರದ ಜನ ವೆಂಕಟನಿಗೆ ಪಾಠ ಕಲಿಸಬೇಕಿದೆ...

• ಅರುಣ್.ಜಿ

R B P LANKESH, Kannada Weekly Price Rs. 12/- 21-07-2010 RNI No. KARKAN2005/14648
Regd.No.KA/RNP/BGS/2036/2008-10 Posted at : GPO, Bangalore-01.

ಸ್ಟಾರ್ ಸಂದೇಶ!



ಕನ್ನಡ ಚಿತ್ರರಂಗದಲ್ಲಿ ಒಂದು ಚಿತ್ರವನ್ನು ನಿರ್ಮಿಸುವುದೇ ಕಷ್ಟದ ಕೆಲಸ. ಹಾಗೆ ನಿರ್ಮಿಸಿದ ಚಿತ್ರವನ್ನು ಬಿಡುಗಡೆ ಮಾಡುವುದು ಅದಕ್ಕಿಂತಲೂ ಪ್ರಯಾಸದ ಕೆಲಸ. ಅಂತಹ ವಿಚಿತ್ರವಾದ ವಾತಾವರಣ ಗಾಂಧಿನಗರದಲ್ಲಿ ಈಗ ಇದೆ. ಹೀಗಾಗಿ ರಾಮು, ರಾಕ್‌ಲೈನ್ ವೆಂಕಟೇಶ್‌ರಂತಹ ದೊಡ್ಡ ನಿರ್ಮಾಪಕರೇ ಒಂದು ಚಿತ್ರ ಮುಗಿಸಿ ಅದನ್ನು ಬಿಡುಗಡೆ ಮಾಡಿದ ನಂತರವೇ ಮತ್ತೊಂದು ಚಿತ್ರಕ್ಕೆ ಕೈ ಹಾಕುತ್ತಾರೆ.

ಆದರೆ ಮೈಸೂರಿನ ಸಂದೇಶ್ ನಾಗರಾಜ್ ಈಗ ನಿರ್ಮಾಪಕರೆಲ್ಲ ಬೆಚ್ಚಿಬೀಳುವ ರೀತಿಯಲ್ಲಿ ಕಾರ್ಯವೆಸಗುತ್ತಿದ್ದಾರೆ. ಈ ಹಿಂದೆ ರವಿಚಂದ್ರನ್ ಚಿತ್ರಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದ ಸಂದೇಶ್ ನಾಗರಾಜ್ ಈಗ ಕ್ರೇಜಿಸ್ಟಾರ್ ಜೊತೆ ಟೂ ಬಿಟ್ಟು ನಿರುಮ್ಮಳವಾಗಿದ್ದಾರೆ. ಸಂದೇಶ ನಾಗರಾಜ್ ಈಗ ಏಕಕಾಲಕ್ಕೆ ಮೂರು ಅದ್ಧೂರಿ ಚಿತ್ರಗಳನ್ನು ನಿರ್ಮಿಸುತ್ತಿದ್ದಾರೆ. ಧ್ಯಾನ್ ಮತ್ತು ಸದಾ ಅಭಿನಯಿಸಿರುವ 'ತುಂಟ-ತುಂಟಿ', ದರ್ಶನ್ ಅಭಿನಯದ 'ಪ್ರಿನ್ಸ್' ಈಗಾಗಲೇ ಸೆಟ್ಟೇರಿವೆ. ಇವುಗಳ ಜೊತೆಜೊತೆಗೆ ಮುಂದಿನ ವಾರ ಎಸ್.ಮಹೇಂದರ್ ನಿರ್ದೇಶನದ 'ವೀರ ಬಾಹು' ಚಿತ್ರ ಕೂಡಾ ಆರಂಭವಾಗಲಿದೆ. ಈ ಚಿತ್ರದಲ್ಲಿ ವಿಜಯ್ ಮತ್ತು ನಿಧಿ ಸುಬ್ಬಯ್ಯ ಜೊತೆಯಾಗಿ ನಟಿಸಲಿದ್ದಾರೆ.

ಹೀಗೆ ಏಕಕಾಲಕ್ಕೆ ಮೂರು ಚಿತ್ರಗಳನ್ನು ಸದ್ಯದ ಪರಿಸ್ಥಿತಿಯಲ್ಲಿ ನಿರ್ಮಿಸುತ್ತಿರುವ ಸಂದೇಶ್ ನಾಗರಾಜ್ ಸ್ಟಾರ್ ನಿರ್ಮಾಪಕ ಎನಿಸಿಕೊಂಡಿದ್ದಾರೆ.

ಶ್ರುತಿ-ಮಹೇಂದರ್ ಮತ್ತೆ ಚಾಲ್ತಿಗೆ!

ಶ್ರುತಿ ಮುಖಕ್ಕೆ ಬಣ್ಣ ಹಚ್ಚಿ ಮತ್ತೆ ನಟಿಸುತ್ತಿರುವ ಸುದ್ದಿ ನಿಮಗೆ ಈಗಾಗಲೇ ತಿಳಿದಿದೆ. ಇದೀಗ ಆಕೆಯ ಮಾಜಿ ಪತಿ ಮಹೇಂದರ್ ಕೂಡಾ ನಿರ್ದೇಶನದ ಕೆಲಸವನ್ನು ಮತ್ತೆ ಕೈಗೆತ್ತಿಕೊಂಡಿರುವ ಸುದ್ದಿ ಬಂದಿದೆ. ಎಸ್.ಮಹೇಂದರ್ ನಿರ್ದೇಶನದ 'ವೀರಬಾಹು' ಚಿತ್ರ ಮುಂದಿನ ವಾರ ಮೈಸೂರಿನಲ್ಲಿ ಆರಂಭವಾಗಲಿದ್ದು ಇದಕ್ಕೆ ವಿಜಯ್ ಮತ್ತು ನಿಧಿ ಸುಬ್ಬಯ್ಯ ನಾಯಕ-ನಾಯಕಿಯಾಗಿ ಆಯ್ಕೆಯಾಗಿದ್ದಾರೆ.



ಶ್ರುತಿ ಮತ್ತು ಮಹೇಂದರ್ ದಂಪತಿಗಳ ವೈಯಕ್ತಿಕ ಜೀವನದಲ್ಲಿ ಬಿರುಕು ಉದ್ಭವಿಸಿದ ನಂತರ ಅವರಿಬ್ಬರು ಬೇರೆ ಬೇರೆಯಾಗಿದ್ದರು. ಅವರ ವೈಯಕ್ತಿಕ ಜೀವನದ ಈ ಘಟನೆಯಿಂದಾಗಿ ಇಬ್ಬರಿಗೂ ಸಾಕಷ್ಟು ಅವಕಾಶಗಳು ತಪ್ಪಿಹೋಗಿದ್ದಂತೂ ನಿಜ. ಅದರಲ್ಲೂ ಗಾಂಧಿನಗರದ ಪಂಡಿತರಂತೂ ಇವರಿಬ್ಬರ ವೃತ್ತಿಜೀವನದ ಬದುಕು ಮುಗಿದೇಹೋಯ್ತು ಎಂದು ಷರಾ ಬರೆದಿಟ್ಟಿದ್ದರು. ಆದರೆ ಈಗ ಇಬ್ಬರೂ ವೈಯಕ್ತಿಕ ನೆಲೆಯಲ್ಲಿ ತಮ್ಮ ತಮ್ಮ ಸ್ವಂತಕಾಲಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದ್ದಾರೆ.

'ಅಕ್ಕ-ತಂಗಿ' ಚಿತ್ರದ ಈ ಜೋಡಿ ಸುಮಾರು ಮೂರು ವರ್ಷಗಳ ಹಿಂದೆ ಜೊತೆಯಾಗಿ ನಟಿಸಿತ್ತು. ಅದರಲ್ಲಿ ಶ್ರುತಿ ಪುಣ್ಯಕೋಟಿಯ ಗೋವನ್ನು ನೆನಪಿಸುವ ರೀತಿಯಲ್ಲಿ ತ್ಯಾಗ ಮತ್ತು ಮಮತೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಮಹೇಂದರ್ ನಿರ್ದೇಶನದ ಈ ಚಿತ್ರದ ಬಗ್ಗೆ ವಿಮರ್ಶಕರೆಲ್ಲ ಮೆಚ್ಚುಗೆ ವ್ಯಕ್ತಪಡಿಸಿದ್ದರೂ ಚಿತ್ರ ಮಾತ್ರ ಮಾರುಕಟ್ಟೆಯಲ್ಲಿ ಕುಸಿದುಹೋಗಿತ್ತು. ಅದಾದ ನಂತರ ಅವರ ವೈಯಕ್ತಿಕ ಜೀವನದ ಆಶಾಗೋಪುರವೂ ಕುಸಿದು ಹೋಗಿದ್ದು ನಿಮಗೆ ಗೊತ್ತೇ ಇದೆ. ಈಗ ಮತ್ತೆ ಅವರಿಬ್ಬರು ಗೋಪುರ ಕಟ್ಟಲು ಹೊರಟಿದ್ದಾರೆ....

ಕರಿ ಚಿರತೆ ಮೇಲೆ ಅಟ್ಯಾಕ್!



ದುನಿಯಾ ವಿಜಯ್‌ನ ಹುಂಬತನಕ್ಕೆ ಕೊನೆಯೇ ಇಲ್ಲವೇ?!

ಹಲವಾರು ವರ್ಷಗಳ ಕಾಲ ಚಿಕ್ಕಪುಟ್ಟ ಪಾತ್ರಗಳಲ್ಲಿ ಕಷ್ಟ ಪಡುತ್ತಿದ್ದ, ಕೊನೆಗೂ ಹೀರೋ ಆಗಿ ಕನ್ನಡ ಚಿತ್ರರಂಗದಲ್ಲಿ ಈಗ ಮಿಂಚುತ್ತಿರುವ ದುನಿಯಾ ವಿಜಿ ತನ್ನ ಹುಂಬತನದಿಂದಲೇ ಮೇಲಿಂದಮೇಲೆ ಸುದ್ದಿ ಮಾಡುತ್ತಿರುತ್ತಾನೆ.

ಸ್ಯಾಂಡಲ್‌ವುಡ್‌ನಲ್ಲಿ ಈಗಿರುವ ಕೆಲವೇ ಕೆಲವು ನಾಯಕರಲ್ಲಿ ಪ್ರಭಾವಿ ನಟನೂ, ಬೇಡಿಕೆ ಹೊಂದಿರುವ ಹೀರೋ ಕೂಡ ಆಗಿರುವ ವಿಜಯ್ ಇತ್ತೀಚೆಗೆ ಮತ್ತೊಂದು ಎಡವಟ್ಟು ಮಾಡಿಕೊಂಡಿದ್ದಾನೆ.

ಕೆಲ ತಿಂಗಳ ಹಿಂದೆ ತನ್ನ ಅಕ್ಕನ ಮಗ ಲೂಸ್ ಮಾದ ತನ್ನನ್ನು ಗುರಾಯಿಸಿದ ಎಂಬ ಚಿಕ್ಕ ಕಾರಣಕ್ಕೆ ಆತನ ಕೆನ್ನೆಗೆ ಹೊಡೆದು ರಂಪ ಮಾಡಿಕೊಂಡಿದ್ದ ವಿಜಯ್ ಈಗ ತನ್ನ ಪುರಾತನ ಗೆಣೆಕಾರನಿಗೇ ಹೊಡೆದು ಸುದ್ದಿ ಮಾಡಿದ್ದಾನೆ.

ಬರ್ತ್‌ಡೇ ಪಾರ್ಟಿಯಲ್ಲಿ ಕಿತ್ತಾಟ!

ದಿವಂಗತ ನಟ ಲೋಕೇಶ್ ಮಗ ಸೃಜನ್‌ಗೆ ಪಾರ್ಟಿಗಳನ್ನು ಏರ್ಪಡಿಸುವ ಹುಚ್ಚು. ಯಾವುದಾದರೊಂದು ಕಾರಣವಿಟ್ಟುಕೊಂಡು ಪಾರ್ಟಿ ನಡೆಸಿ, ಆ ಪಾರ್ಟಿಗೆ ಸಿನಿಮಾ ನಟನಟಿಯರನ್ನು ಕರೆಸಿಕೊಂಡು, ರಾತ್ರಿಯಿಡೀ ಮಜಾ ಮಾಡುವುದು ಸೃಜನ್‌ನ ಹವ್ಯಾಸವಾಗಿಬಿಟ್ಟಿದೆ. ಈ ಕಾರಣಕ್ಕೆ, ಸೃಜನ್ ಪಾರ್ಟಿಗಳು ಪಾಪ್ಯುಲರ್ ಆಗಿ ಚಿಳ್ಳೆಪಿಳ್ಳೆ ನಟಿಯರಿಂದ ಹಿಡಿದು ಸ್ಟಾರ್‌ಗಳ ತನಕ ಎಲ್ಲರೂ ಸೃಜನ್ ಮನೆಯಲ್ಲಿ ಠಳಾಯಿಸುತ್ತಾರೆ.



ಜೂನ್ 27ರಂದು ಕೂಡಾ ಹಾಗೇ ಆಗಿದೆ. ಜೂನ್ 28ರ ತನ್ನ ಬರ್ತ್‌ಡೇಗೆಂದು ಪಾರ್ಟಿ ಏರ್ಪಡಿಸಿ ತನ್ನ ಸ್ನೇಹಿತರನ್ನು ಆಹ್ವಾನಿಸಿದ್ದ, ಹೀರೋ ವಿಜಯ್, ನಟಿ ನೀತೂ, ತಾರಾ, ಅನು ಪ್ರಭಾಕರ್, ಕೃಷ್ಣಕುಮಾರ್, ಡಾ. ಕಿರಣ್ ಎಂಬ ವೈದ್ಯ ಸೇರಿದಂತೆ ಬಹಳಷ್ಟು ಜನ ಅಲ್ಲಿ ಜಮಾಯಿಸಿದ್ದರು. ಕತ್ತರಿಗುಪ್ಪೆ ರಿಂಗ್‌ರಸ್ತೆಯ ಹತ್ತಿರವಿರುವ ಸೃಜನ್ ಮನೆ 'ಶಬರಿ' ಅಂದು ಸಿನಿಮಾದವರ ಉಪಸ್ಥಿತಿಯಲ್ಲಿ ರಂಗು ಪಡೆದಿತ್ತು. ರಾತ್ರಿ ಹನ್ನೊಂದು ಗಂಟೆ ಹೊತ್ತಿಗೆ ಮದನ್ ಮಲ್ಲು ಮಗ ಮಯೂರ್ ಮತ್ತು ನಿರ್ದೇಶಕ ಪ್ರಶಾಂತ್ ಕಾಳೇಗೌಡ ಸೃಜನ್ ಮನೆಗೆ ಎಂಟ್ರಿ ಕೊಟ್ಟಿದ್ದಾರೆ.

ಈ ಹಿಂದೆ ಸ್ನೇಹಿತರಾಗಿದ್ದ ಪ್ರಶಾಂತ್ ಮತ್ತು ವಿಜಯ್ ನಡುವೆ ಅದೇಕೋ ಜಗಳವಾಗಿ ಈಗ ಪರಸ್ಪರ 'ಟೂ' ಬಿಟ್ಟಿದ್ದಾರೆ. ಮಯೂರ್ ಮತ್ತು ಪ್ರಶಾಂತ್ ಆಗಮನಕ್ಕೆ ಮುನ್ನ ಬಂದು ಕುಡಿಯುತ್ತಾ ಕುಳಿತಿದ್ದ ವಿಜಿ ಪ್ರಶಾಂತ್‌ನನ್ನು ಗುರಾಯಿಸುವಂತೆ ನೋಡಿದ್ದಾನೆ.

ಇತ್ತೀಚೆಗೆ ಮಯೂರ್ ನಾಯಕನಾಗಿದ್ದ 'ಐಸ್ ಪೈಸ್' ಎಂಬ ಚಿತ್ರವನ್ನು ಪ್ರಶಾಂತ್ ನಿರ್ದೇಶಿಸಿದ್ದ. ಆದರೆ ಆ ಚಿತ್ರ ಬಾಕ್ಸ್ ಆಫೀಸಿನಲ್ಲಿ ತೋಪಾಯಿತು. ಅನಂತರ ಯೋಗರಾಜ್ ಭಟ್, ನಾಗೇಂದ್ರಪ್ರಸಾದ್ ಮುಂತಾದವರ ಬಳಿ ಪ್ರಶಾಂತ್ ಅಸೋಸಿಯೇಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಪ್ರಶಾಂತ್ ಸಹನಿರ್ದೇಶಕನಾಗಿದ್ದರೆ ಚಿತ್ರತಂಡಕ್ಕೆ ಸಿನಿಮಾ ಮಾಡೋದು ಸಲೀಸು ಅನ್ನೋದು ಬಹಳಷ್ಟು ಜನರ ಅನಿಸಿಕೆಯೂ ಆಗಿದೆ. ಆದರೆ ವಿಜಯ್ ಹೀರೋ ಆದಮೇಲೆ ಆತನ ಯಾವ ಚಿತ್ರದಲ್ಲೂ ಪ್ರಶಾಂತ್ ಕೆಲಸ ಮಾಡಿಲ್ಲ. ಮಾತ್ರವಲ್ಲ, ಜಗಳವಾದ ನಂತರ ಈ ನಾಲ್ಕೈದು ವರ್ಷಗಳಲ್ಲಿ ವಿಜಯ್ ಮತ್ತು ಪ್ರಶಾಂತ್ ಯಾವತ್ತೂ ಮುಖತಃ ಭೇಟಿ ಕೂಡಾ ಆಗಿರಲಿಲ್ಲ.



ಮತ್ತೆ ಎದುರಿಗೆ ಸಿಕ್ಕಿದ್ದೇ ಅವತ್ತು...

ಮೊದಲು ಮಾತಿಗಿಳಿದ ವಿಜಯ್ ಕುಡಿದ ಮತ್ತಿನಲ್ಲಿ ತಮ್ಮ ನಡುವೆ ಬಳಕೆಯಲ್ಲಿದ್ದ ಪುಂಡರ ಭಾಷೆಯಲ್ಲಿ ಪ್ರಶಾಂತನಿಗೆ ಬೈದಿದ್ದಾನೆ. ಅಷ್ಟು ಸಾಲದೆಂಬಂತೆ ಪ್ರಶಾಂತನ ಮುಖಕ್ಕೆ ಹೊಡೆದಿದ್ದಾನೆ. ಆಗ ಇವರಿಬ್ಬರ ಮಧ್ಯೆ ತಳ್ಳಾಟ ನೂಕಾಟಗಳೂ ನಡೆದಿವೆ. ಪಾರ್ಟಿಯಲ್ಲಿದ್ದ ಇತರರೆಲ್ಲ ಟನ್ ಆಗು ಕುಡಿದಿದ್ದರಿಂದ ಇವರಿಬ್ಬರು ಯಾಕೆ ಜಗಳವಾಡುತ್ತಿದ್ದಾರೆ ಎಂಬುದು ಯಾರಿಗೂ ಅರ್ಥವಾಗಿಲ್ಲ, ಆದರೂ ಇವರಿಬ್ಬರ ಜಗಳವನ್ನು ನಿಲ್ಲಿಸಲು ಯತ್ನಿಸಿದ್ದಾರೆ. ಕೊನೆಗೂ ರೇಗಾಟ ಗುದ್ದಾಟ, ತಿಕ್ಕಾಟ, ನೂಕಾಟಗಳ ನಡುವೆ ಪಾರ್ಟಿ ಅಂತ್ಯಗೊಂಡಿದೆ.

ಕೆಲವೇ ವರ್ಷಗಳ ಹಿಂದೆ ಯೋಗರಾಜ್ ಭಟ್, ಸೂರಿ, ಪ್ರಶಾಂತ್, ವಿಜಿ, ನಾಗಶೇಖರ್, ತುಷಾರ್ ರಂಗನಾಥ್‌ರಂಥವರು ಒಂದೇ ತಂಡದಲ್ಲಿದ್ದರು. ಎಲ್ಲ ಸೇರಿ ಕಷ್ಟ ಪಟ್ಟು 'ರಂಗ ಎಸ್ಸೆಸ್ಸೆಲ್ಸಿ', 'ಮಣಿ'ಯಂಥ ಚಿತ್ರಗಳನ್ನು ಮಾಡಿದ್ದರು. ಸಿನಿಮಾ ಛಾನ್ಸುಗಳಿಲ್ಲದಿದ್ದರೂ ಬೈಟು ಕಾಫಿ, ಸಿಂಗಲ್ ಇಡ್ಲಿಯನ್ನೇ ಹಂಚಿಕೊಂಡು ತಿಂದು, ಒಂದೇ ಸಿಗರೇಟಿನಲ್ಲಿ ಹೊಗೆ ಎಳೆಯುತ್ತಿದ್ದರು.

ಈಗ ಎಲ್ಲರಿಗೂ ವಿಪರೀತ ಅವಕಾಶಗಳಿವೆ, ದುಡ್ಡು ಕಾಸಿದೆ, ಸ್ಟಾರ್‌ಗಿರಿಗಳಿವೆ... ಇಂಥ ಸಮಯದಲ್ಲಿ ಇಂಥ ಹೊಡೆದಾಟಗಳು, ಮನಸ್ತಾಪಗಳು ಬೇಕಾ?

ವಿಜಿಯಂಥ ಮಾಸ್ ಹೀರೋ ತನ್ನ ಹುಂಬತನವನ್ನು ಬಿಟ್ಟು ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಯಾವಾಗ?

● ಅರುಣ್‌ಜಿ.
arunodayagc@gmail.com

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th M